# ಹಸ್ತಕ್ಷೇಪ

ಯತಿರಾಜ್ ವೀರಾಂಬುಧಿ



# ಹಸ್ತಕ್ಷೇಪ

(ಸಾಮಾಜಿಕ ಕಾದಂಬರಿ)

ಯತಿರಾಜ್ ವೀರಾಂಬುಧಿ

**ಹಸ್ತಕ್ಷೇಪ**

(ಸಾಮಾಜಿಕ ಕಾದಂಬರಿ)

ಪ್ರಥಮ ಮುದ್ರಣ : **2002**

ಹಕ್ಕುಗಳು : **ಶ್ರೀಮತಿ ಉಷಾ ಎಂ.ವೀರಾಂಬುಧಿ**

ಮುಖಚಿತ್ರ : **ಶ್ರೀ ಮೋನಪ್ಪ**

ಪ್ರಕಾಶಕರು : **ರಾಜೀವ್**, ಪ್ರಕಾಶಕರು, ನಂ.4, ಸೆಕ್ರೆಟರಿಯೆಟ್ ಕಾಲೋನಿ,
ವಿಜಯನಗರ, ಬೆಂಗಳೂರು- 560 040.

ಅಕ್ಷರ ಜೋಡಣೆ : **ಗೀತಾಂಜಲಿ ಗ್ರಾಫಿಕ್ಸ್**, ನಂ. 134, 8ನೇ ಕ್ರಾಸ್,
ಗೋವಿಂದರಾಜನಗರ, ಬೆಂಗಳೂರು-560 040.

ಮುದ್ರಕರು : VISHWAS PRINTS

ರೂ. **95.00**

---

***'HASTAKSHEPA'*** - A Social novel written by Sri. Yathiraj Veerambudi, No.89, "Chirasmitha", Pattanagere, Rajarajeshwarinagar, Bangalore - 560098. Published by Sri. Rajiv, No.4, Secretariat Colony, Vijayanagar, Bangalore - 560 040.

---

**First Edition : 2002** **Pages :180** **Rs.95.00**

---

## ಕಾದಂಬರಿಗೆ 'ಕೈ' ಹಾಕುವ ಮುನ್ನ...

ಕಥಾವಸ್ತುವಿಗಾಗಿ ನಾನು ವೃತ್ತಪತ್ರಿಕೆಗಳು, ವಾರ್ತಾಪತ್ರಿಕೆಗಳನ್ನು ಓದುತ್ತಿರುತ್ತೇನೆ. ನನ್ನ ಪ್ರಕಾರ ವಾಸ್ತವವು ಕಲ್ಪನೆಗಿಂತ ಹೆಚ್ಚು ಅಚ್ಚರಿಯುಳ್ಳದ್ದು!

ಆ ನಿಟ್ಟಿನಲ್ಲಿ ಏಷಿಯಾ ವೀಕ್‌ನಲ್ಲಿನ ಒಂದು ಪುಟದ ಸುದ್ದಿ ಓದಿ ಆಘಾತಕ್ಕೊಳಗಾದೆ. ಏಷ್ಯಾದ ದೇಶವೊಂದರಲ್ಲಿ ಮೂವರು ಪತ್ರಕರ್ತರು ಅಮಾನುಷವಾಗಿ ಕೊಲೆಗೀಡಾಗಿದ್ದರು. ಸರ್ಕಾರದ, ಸರ್ಕಾರೀ ಅಧಿಕಾರಿಗಳ ಭ್ರಷ್ಟಾಚಾರವನ್ನು ಬಯಲಿಗೆಳೆದದ್ದೇ ಅವರ 'ಅಪರಾಧ' ಎಂದು ತಿಳಿದು ದಿಗ್ಭ್ರಮೆಯಾಯಿತು. ಆದರೆ ಅದಕ್ಕಿಂತ ಹೆಚ್ಚಿನ ಖೇದ ಉಂಟುಮಾಡಿದ ವಿಷಯವೆಂದರೆ ಆ ದೇಶದ ಕಾನೂನು ರಕ್ಷಕರು ಆ ಮೂರು ಸಾವುಗಳಿಗೆ 'ಆಕಸ್ಮಿಕ'ವೆಂಬ ಹಣೆಪಟ್ಟಿ ನೀಡಿದ್ದು.

ಈ ವಾಸ್ತವಕ್ಕೆ ಕಲ್ಪನೆ ಬೆರೆಸಿ ರಚಿಸಿದ ಕಾದಂಬರಿ 'ಹಸ್ತಕ್ಷೇಪ'.

ಮೂವತ್ತಾರು ದಿನಗಳ ಕಾಲ ಜನಪ್ರಿಯ 'ಕನ್ನಡಪ್ರಭ' ದಲ್ಲಿ ಧಾರಾವಾಹಿಯಾಗಿ ಹರಿದು ಬಂದಿತು. ಪ್ರಕಟಣೆಗೆ ನೆರವಾದ ಸಂಪಾದಕ ಮಂಡಲಿಗೆ ನನ್ನ ನಮನಗಳು.

ಪುಸ್ತಕ ಸುಂದರವಾಗಿ ಮೂಡಿ ಬರುವುದಕ್ಕೆ ನೆರವಾದ ಪ್ರಕಾಶಕ ಶ್ರೀ ರಾಜೀವ್ ಅವರಿಗೂ, ಅತ್ಯಂತ ಅರ್ಥಪೂರ್ಣ ಮುಖಚಿತ್ರ ರಚಿಸಿರುವ ಶ್ರೀ ಮೋನಪ್ಪ ಅವರಿಗೂ ಅಂದವಾಗಿ ಮುದ್ರಿಸಿದ ಮುದ್ರಣಾಲಯದ ಬಳಗದವರಿಗೂ ನನ್ನ ಕೃತಜ್ಞತೆಗಳು. ಓದುಗರು ಈ ಕೃತಿಯಲ್ಲಿನ ಕಳಕಳಿಗೆ ಸ್ಪಂದಿಸಿದರೆ ನನ್ನ ಶ್ರಮ ಸಾರ್ಥಕವೆನಿಸುತ್ತದೆ.

**ಯತಿರಾಜ್ ವೀರಾಂಬುಧಿ**
89, 'ಚಿರಸ್ಮಿತ' ವೇರ್ ಹೌಸ್ ಹಿಂಭಾಗ,
ರಾಜರಾಜೇಶ್ವರಿನಗರ,
ಬೆಂಗಳೂರು- 560 098.

# ಸಮರ್ಪಣೆ

ಬಾಳಿನ ಬಿರುಸ್ತದಲ್ಲಿ ದಿಕ್ಕುಗಾಣದೇ ನಿಂತಾಗ ಅತ್ಯಂತ ಪ್ರೀತಿಯಿಂದ ಸಹಾಯಹಸ್ತ ನೀಡಿ, ಕೈಹಿಡಿದು ನಡೆಸಿದ ಸಹೋದರಿ ಚಿ॥ ಸೌ॥ ಚಂಪಾ ಅವರ ಮುದ್ದು ಮಕ್ಕಳು ಚಿ॥ ಶ್ರೀದೇವಿ, ಚಿ॥ಸಂಸ್ಕೃತಿ ಹಾಗೂ ಚಿ॥ ಶ್ರೀನಿವಾಸ್ ಇವರುಗಳಿಗೆ.

- ಪ್ರೀತಿಯಿಂದ.

- ರಾಜು

# ಹಸ್ತಕ್ಷೇಪ

## ಕಾದಂಬರಿ

ಯತಿರಾಜ್ ವೀರಾಂಬುಧಿ

# ಹಸ್ತಕ್ಷೇಪ 2

## 1

ಮಳೆ ಇನ್ನಷ್ಟು ಬಿರುಸಾಗುವ ಮೊದಲು ಛಾವಣಿಯೊಂದರ ಆಶ್ರಯ ಪಡೆದುಕೊಳ್ಳಲು ಅವನು ಅವಸರಿಸಿದ. ಆ ಆತುರದಲ್ಲಿ ಎದುರಿಗೆ ರಸ್ತೆಯ ನಡುವೆ ಎಸೆಯಲ್ಪಟ್ಟಿದ್ದ ಚೂಪಾದ ಕಲ್ಲನ್ನು ಅವನು ನೋಡಲಿಲ್ಲ. ಅವನ ಬೈಕಿನ ಮುಂದಿನ ಚಕ್ರ 'ಕಸ್ಸಸ್ಸಸ್ಸಸ್ಸಕ್' ಎಂದಿತ್ತು. ಮುಂದಕ್ಕೆ ಹೋಗಲಾಗಲಿಲ್ಲ ಅವನಿಗೆ. ಬೈಕನ್ನು ಒಂದು ಪಕ್ಕಕ್ಕೆ ನೂಕಿ ಒಂದು ಮರದಡಿ ನಿಂತು ತಾನೀಗ ಇದ್ದ ಜಾಗದ ಪರಿಶೀಲನೆ ನಡೆಸಿದ.

ಎತ್ತರದ ಗೋಡೆ. ಅದು ಒಂದು ಗುಡ್ಡದ ಮೇಲೆ ಇದ್ದುದು ಇನ್ನಷ್ಟು ವಿಶಿಷ್ಟ ಸಂಗತಿ. ಬಹಳ ಸಲ ಆ ಸ್ಥಳದ ಮುಂದೆ ಹಾದು ಹೋಗಿದ್ದರೂ ಎಂದೂ ಅದನ್ನು ಪರೀಕ್ಷಾದೃಷ್ಟಿಯಿಂದ ನೋಡಿರಲಿಲ್ಲ.

ಈ ಕೋಟೆಯಂತಹ ಭವನ, ಈ ಎತ್ತರದ ಗೋಡೆಯ ರಕ್ಷಣೆ ಯಾರ ವಾಸಕ್ಕೆ?

ಅವನೊಳಗಣ ಪತ್ರಕರ್ತನ ಕುತೂಹಲಕಾರೀ ಪ್ರಶ್ನೆಗಳಿಗೆ ಉತ್ತರಿಸಲಾಗದೇ ಕೊನೆಗೆ ಸ್ಥಳಪರೀಕ್ಷೆ ನಡೆಸಲು ನಿರ್ಧರಿಸಿದ.

ಸಾಮಾನ್ಯವಾಗಿಯೇ ಅವನು 'ಡೇರ್ ಡೆವಿಲ್'. ಈ ಪರಿಶೀಲನೆ ತೀರಾ ನಿರಪಾಯಕಾರಿಯಂತೆ ತೋರುತ್ತಿದೆ. ಯಾಕೆ ಪ್ರಯತ್ನಿಸಬಾರದು?

ಷೂಗಳನ್ನು ಕಾಲ್ಗಳಿಂದ ತೆಗೆದು ಕುತ್ತಿಗೆಯ ಮೇಲೆ ಹಾರದಂತೆ ಹಾಕಿಕೊಂಡ. ಮರದ ಸಹಾಯದಿಂದ ಗೋಡೆ ಹಾರಿದ. ನಂತರ ಆರಂಭವಾಗಿತ್ತು ಗುಡ್ಡ. ಕತ್ತಲಲ್ಲಿ ಮರಗಳು ಭೂತದಂತೆ ನರ್ತಿಸುತ್ತಿದ್ದವು. ಗುಡ್ಡ ಹತ್ತುವಾಗ ಹಿಡಿದ ಮೂರ್ನಾಲ್ಕು ಸಲ ಸಡಿಲಗೊಂಡಿತು. ಅದು ಅವನ ಉತ್ಸಾಹವನ್ನು ಭಂಗಿಸಲಿಲ್ಲ. ನೊರಜುಗಲ್ಲುಗಳ ಮೇಲೆ ಕಾಲಿಟ್ಟು ಹತ್ತಿದ. ಅಲ್ಲಲ್ಲಿ ಬೆಳೆದಿದ್ದ ಪುಟ್ಟ, ಗಟ್ಟಿ ಬೇರಿನ ಗಿಡಗಳು ಸಹಾಯ ಮಾಡಿದವು.

ಗುಡ್ಡದ ಸಮತಟ್ಟಾದ ಪ್ರದೇಶದಲ್ಲಿ ಮರಗಳ ನಡುವೆ ಸಣ್ಣ ಬೆಳಕು ಕಂಡಿತ್ತು.

ಓ! ದೊಡ್ಡ ಬಂಗಲೆಯಿಂದ ದೂರವಾಗಿರುವ ಚಿಕ್ಕ ಫಾರಂ ಹೌಸ್!

ಹತ್ತಿರ ನಡೆದಾಗ ಜೋರಾದ ಧ್ವನಿಗಳು ಕೇಳಿಸಿದವು. ಒಂದು ಗಂಡು, ಒಂದು ಹೆಣ್ಣು ಸ್ವರಗಳು!

ಕಿಟಕಿಯಿಂದ ಇಣುಕಿ ನೋಡಿದ.

ಒಳಗಿದ್ದ ಹೆಣ್ಣನ್ನು ನೋಡಿ ಆಘಾತಕ್ಕೊಳಗಾದ. ಆ ಗಂಡಸೂ ಪರಿಚಿತನಂತೆ ಕಂಡ. ಆದರೆ ಎಲ್ಲಿ ನೋಡಿದ್ದಾನೆ ತಾನವನನ್ನು? ಯಾವಾಗಲಾದರೂ ಮಾತಾಡಿಸಿರುವನೇ?

ಅವರುಗಳು ಬಹಳವೇ ಸಲಿಗೆಯಿಂದಿದ್ದರು!

ಮೆದುಳನ್ನು ಕೆದಕಿದ. ಉತ್ತರ ಸಿಗಲಿಲ್ಲ. ಮಳೆಯು ವಿಪರೀತವಾಗಿ ಹೆಚ್ಚಿದ್ದರಿಂದ ಅಲ್ಲಿಂದ ಹೊರಟುಬಿಟ್ಟ.

ಮತ್ತೊಮ್ಮೆ ಇಲ್ಲಿಗೆ ಬರಬೇಕು. ವಿವರ ಅರಿಯಬೇಕು.

ಹಠಾತ್ತನೆ ಏನೋ ಹೊಳೆಯಿತು. ಈ ಜಾಗಕ್ಕೆ ತಾನು ಬಂದ ದಾರಿಯಲ್ಲಿ ಎಲ್ಲರೂ ಬರಲು ಸಾಧ್ಯವಿಲ್ಲ. ಬೇರೊಂದು ದಾರಿ ಖಚಿತವಾಗಿ ಇರಲೇಬೇಕು.

ಆ ಫಾರಂ ಹೌಸನ್ನು ಸುತ್ತಿ ಬಂದ. ಆ ಮನೆಯ ಮುಂದೆ ಎರಡು ಕಾರುಗಳು ನಿಂತಿದ್ದವು.

ಏಕೋ ಚಿತ್ರ ತೆಗೆಯಬೇಕೆನ್ನಿಸಿ, ಬಗಲಲ್ಲಿದ್ದ ಪಾಲೀಥೀನ್ ಬ್ಯಾಗಿನಿಂದ ಕ್ಯಾಮೆರಾ ತೆಗೆದು ಕೆಲವು ಫೋಟೋಗಳನ್ನು ತೆಗೆದ. ಮಿಂಚುಗಳು ಆಗಾಗ ಆಗಸವನ್ನು ಬೆಳಗುತ್ತಾ ಇದ್ದಿದ್ದು ಅವನ ಫೋಟೋಗ್ರಫಿಗೆ ಸಹಾಯ ಮಾಡಿದವು.

‘ಯಾರದು?’ ಎಂದು ಯಾರೋ ಕೂಗಿದಂತಾದಾಗ ಅಲ್ಲಿಂದ ಕಾಲುಕಿತ್ತ. ಬಂದ ದಾರಿಯಲ್ಲೇ ವೇಗವಾಗಿ ಹಿಂದಿರುಗಿದ. ಈ ಶೋಧ ಅವನಿಗೆ ಮುಂದೆ ಸಹಾಯ ಮಾಡಬಹುದು.

ಅವನ ಮುಖ ಮೋಡ ಕವಿದ ಗಗನದಂತಾಗಿತ್ತು.

ಎಂತಹ ತಂದೆಗೆ ಎಂತಹ ಮಗಳು!

ಆಲೋಚಿಸುತ್ತಾ ಬೈಕನ್ನು ಗ್ಯಾರೇಜಿನೆಡೆಗೆ ತಳ್ಳುತ್ತಾ ನಡೆಯತೊಡಗಿದ. ದಿನದ ಕೊನೆಯನ್ನು ಮುಟ್ಟಿರುವನೆಂಬ ಭಾವನೆ ಅವನನ್ನು ಸುತ್ತುವರಿಯಿತು. ಆದರೆ ದಿನವಿನ್ನೂ ಉಳಿದಿತ್ತು!

ಬೈಕಿನ ದುರಸ್ತಿ ಸಾಕಷ್ಟು ಸಮಯ ತಿಂದಿತ್ತು. ಮಿತ್ರಾ ಸುಸ್ತು ಹೊಡೆದು ಮನೆ ತಲುಪಿದ.

ಹಠಾತ್ತನೆ ಅವನಿಗೆ ಮೈ ಮೇಲೆ ಝುರಿಗಳು ಓಡಾಡಿದಂತಾಗಿತ್ತು. ಯಾರೋ ಅವನ ಸಮಾಧಿಯ ಮೇಲೆ ನಡೆದಂತಾಗಿತ್ತು. ಬೆನ್ನುಹುರಿಯಲ್ಲಿ ಛಳಿ ಹುಟ್ಟಿತ್ತು.

ಬೀಗ ತೆರೆದು ಒಳ ಹೋಗಿ ಟಕ್ಕನೆ ಬೋಲ್ಟ್ ಹಾಕಿದ. ಕಾಲ್ಗಳ ಬಳಿ ಗಟ್ಟಿಯಾದ ಪದಾರ್ಥವೇನೋ ಇದ್ದಂತಿತ್ತು. ವಿದ್ಯುತ್ ಗುಂಡಿಗಾಗಿ ಗೋಡೆಯ ಮೇಲೆ ಕೈ ಆಡಿಸಿದ ಮಿತ್ರಾ. ಅದೇ ಕ್ಷಣದಲ್ಲಿ ಕರೆಂಟು ಹೋಗಿತ್ತು!

ಅವನ ಲೈಟರನ್ನು ಹೊತ್ತಿಸಿದ ಮಿತ್ರಾ. ನೆಲದ ಮೇಲೆಲ್ಲಾ ಹರಡಿದ್ದ ಕಾಗದಗಳನ್ನು ಜೋಡಿಸಿದ. ಅವು ಏನೆಂದು ಮೊದಲು ಅರ್ಥವಾಗಲಿಲ್ಲ. ಪುಟಸಂಖ್ಯೆಗಳು ಇದ್ದಿದ್ದನ್ನು ಗುರುತಿಸಿ ಜೋಡಿಸಿ ಓದಲಾರಂಭಿಸಿದ. ಮೋಂಬತ್ತಿಯ ಮಾಸಲು ಬೆಳಕು ಸಾಕಾಯಿತು ಅವನ್ನು ಓದಲು. ಒಟ್ಟು ಹನ್ನೊಂದು ಕಥೆಗಳಿದ್ದವು.

ಬರವಣಿಗೆ ಬಹಳ ಪರಿಚಿತವೆನ್ನಿಸಿತ್ತು. ಪತ್ರಕರ್ತನ ದಿನಚರಿಯಂತಿತ್ತು.

ಗಡಿಯಾರ ಓಡಲಾರಂಭಿಸಿತ್ತು. ಹನ್ನೆರಡು, ಒಂದು, ಎರಡು, ಮೂರು... ಗಡಿಯಾರ ನಾಲ್ಕು ಹೊಡೆದಾಗ ಕಾಗದಗಳನ್ನು ಪಕ್ಕಕ್ಕೆ ಸರಿಸಿ ಮಲಗಿದ.

ಹನ್ನೊಂದು ಕಥೆಗಳೂ ಅದ್ಭುತವಾಗಿದ್ದವು. ಕಲ್ಪನೆಯ ಲೇಪ ಹೊಂದಿದ್ದ ಸತ್ಯಘಟನೆಗಳು. ಅನೇಕ ಕಥೆಗಳಲ್ಲಿನ ಪಾತ್ರಗಳನ್ನು ಗುರುತಿಸಿದ್ದ. ಬದಲಿಸಲ್ಪಟ್ಟ ಹೆಸರುಗಳನ್ನು ಹೊಂದಿದ್ದ ನೈಜ ಮಾನವರು. ಕಷ್ಟಪಡುವ ಪತ್ರಕರ್ತ! ಆ ಲೇಖಕನನ್ನು ಮನದಲ್ಲಿಯೇ ಅಭಿನಂದಿಸದೇ ಇರಲಾರದಾದ ಮಿತ್ರಜೀತ್. ಮಲಗುವ ಮೊದಲು ಅವನಿಗೆ ಬಂದಿದ್ದ ಕೊನೆಯ ಯೋಚನೆ ಅದೇ ಆಗಿತ್ತು.

ಬೆಳಿಗ್ಗೆ ತಡವಾಗಿ ಎಚ್ಚರಗೊಂಡಿತ್ತು.

ಏನೋ ಕಳೆದುಹೋದ ಭಾವನೆ. ಹಾಸಿಗೆಯಿಂದ ಚಟಕ್ಕನೆದ್ದು ತನ್ನ ವಸ್ತುಗಳನ್ನು ತಡಕಾಡಿದ. ಖಂಡಿತವಾಗಿ ಯಾರೋ ಒಳಗೆ ಬಂದಿದ್ದಾರೆ! ತಾನು ಹೆಣದಂತೆ ಮಲಗಿದ್ದಿರಬೇಕು.

# ಹಸ್ತಕ್ಷೇಪ 5

ಪರಿಚಿತ ಪತ್ರಕರ್ತ ಆದರೆ ಅಪರಿಚಿತ ಲೇಖಕ ತನ್ನ ಮನೆಯ ಬಾಗಿಲ ಸಂದಿನಲ್ಲಿ ತೂರಿಸಿದ್ದ ಹನ್ನೊಂದು ಕಥೆಗಳ ಕಟ್ಟು ಮಾಯವಾಗಿತ್ತು!

ಮತ್ತೆ ಶೋಧ ನಡೆಸಿದ. ಆಗ ದೊರಕಿತ್ತು ಒಂದು ಪುಟ್ಟ ಚೀಟಿ. ನಂತರ ಮತ್ತೆರಡು ಚೀಟಿಗಳು! ಅವುಗಳ ಮೇಲಿನ ಬರವಣಿಗೆ ಓದಿದಾಗ ಅವನಿಗೆ ಏನೂ ಅರ್ಥವಾಗಲಿಲ್ಲ.

ಮಿತ್ರಜೀತ್ ಕುರ್ಚಿಯ ಮೇಲೆ ಕುಳಿತು ನಡೆದಿರಬಹುದಾದ ಘಟನೆಗಳನ್ನು ಮನದಲ್ಲಿಯೇ ಪುನರ್ನಿರ್ಮಾಣ ಮಾಡಿದ.

ಯಾರೋ ಒಬ್ಬರು, ಪ್ರಾಯಶಃ ಆ ಪತ್ರಕರ್ತನ ಗೆಳೆಯ (ಅಥವಾ ಆ ಪತ್ರಕರ್ತನೂ ಇರಬಹುದು) ಆ ಕಾಗದಗಳ ಕಟ್ಟನ್ನು ಒಂದು ಸುರಕ್ಷಿತ ಸ್ಥಳದಲ್ಲಿ (ಮಿತ್ರಜೀತ್‌ನ ಮನೆ) ಇಡಲು ಪ್ರಯತ್ನಿಸಿರಬೇಕು. ಅವನನ್ನು ಹಿಂಬಾಲಿಸಿದ ವ್ಯಕ್ತಿಗೆ ಈ ವಿಷಯ ತಿಳಿದು ಆ ಕಥೆಗಳ ಕಟ್ಟನ್ನು ಇಲ್ಲಿಂದ ಒಯ್ದಿರಬೇಕು. ಆದರೆ ಹೇಗೋ ಈ ಮೂರು ಚಿಕ್ಕ ಚೀಟಿಗಳು ಆ ವ್ಯಕ್ತಿಯ ಕಣ್ತಪ್ಪಿ ಇಲ್ಲಿ ಉಳಿದುಕೊಂಡಿವೆ. ಅಥವಾ ಆ ವ್ಯಕ್ತಿಗೆ ಆ ಚೀಟಿಗಳ ಪ್ರಾಮುಖ್ಯತೆ ತಿಳಿದಿರಲಿಕ್ಕಿಲ್ಲ. ಕಥೆಗಳು ಕನ್ನಡದಲ್ಲಿದ್ದರೂ ಈ ಮೂರು ಚೀಟಿಗಳು ಆಂಗ್ಲದಲ್ಲಿದ್ದವು. ಬಹಳ ಎಚ್ಚರಿಕೆಯಿಂದ ಅವನ್ನು ಓದಲಾರಂಭಿಸಿದ. ಒಂದೆಡೆ ಅವನ ಹೆಸರು ಉಲ್ಲೇಖಿಸಲ್ಪಟ್ಟಿತ್ತು - ಜೀತ್!

ಆ ಹೆಸರು ನೋಡಿದ ಕ್ಷಣವೇ ಅವನಿಗೆ ಆ ಲೇಖಕ ಯಾರಿರಬಹುದೆಂಬ ಅನುಮಾನ ಬಂದಿತ್ತು.

ಪಾಲ್! ಅಫ್ ಕೋರ್ಸ್ ಪಾಲ್!!

ತನ್ನ ಮೆದುಳಿಗೇನು ಮಂಕು ಕವಿದಿತ್ತು? ಇದು ಪಾಲ್‌ನ ಕೈ ಬರಹ. ಮೇಲೆ ಎದ್ದು ತನ್ನ ಟೇಬಲ್ ಡ್ರಾ ಹುಡುಕಿದ. ಟೆಲಿಫೋನ್ ನಂಬರುಗಳ ಪುಟ್ಟ ಪುಸ್ತಕದಲ್ಲಿ ಪಾಲ್ ತನ್ನ ಸ್ವಹಸ್ತದಲ್ಲಿ ಬರೆದ ಫೋನ್ ನಂಬರ್ ಇತ್ತು. ಹೋಲಿಸಿದಾಗ ತನ್ನ ಅನುಮಾನ ಸರಿ ಎಂದು ಅರ್ಥವಾಗಿತ್ತು.

ತಕ್ಷಣವೇ ಪಾಲ್‌ಗೆ ಫೋನ್ ಮಾಡಿದ. ಅವನೂ ಮಿತ್ರಜೀತ್‌ನಂತೆ ಒಬ್ಬೊಂಟಿಗ. ಫೋನ್ ರಿಂಗ್ ಆಗುತ್ತಲೇ ಇತ್ತು. ಪೇಜರ್‌ಗೆ ಸಂದೇಶ ಕಳಿಸಿದ. ಉತ್ತರ ಬರಲಿಲ್ಲ.

ಚೀಟಿಗಳನ್ನು ಮತ್ತೆ ನೋಡಿದ. ಅಲ್ಲಿದ್ದ ಗುಪ್ತ ಸಂಕೇತವನ್ನು ಬಿಡಿಸಲು ಯತ್ನಿಸಿದ. ಅದರಲ್ಲಿ ಎಲ್‌ಓಆರ್, ಎಸ್‌ವೈಎಲ್ ಎಂಬ ಹೆಸರುಗಳಿದ್ದವು.

# ಹಸ್ತಕ್ಷೇಪ 6

ಕೆಲವು ಕ್ಷಣಗಳ ಆಲೋಚನೆ ಅವನಿಗೆ ಪಾಲ್ ಹಿಂದೊಮ್ಮೆ ಹೇಳಿದ್ದ ಲೊರೆಟ್ಟ್ಯಾಳ ನೆನಪು ತಂದಿತು. ಅವಳು ಪಾಲ್‌ನನ್ನು ಆಗಾಗ ಭೇಟಿ ಮಾಡುತ್ತಿದ್ದ ವಿಷಯ ಪಾಲ್‌ನಿಂದಲೇ ಅರಿತಿದ್ದ. ಲೊರೆಟ್ಟ್ಯಾಳ ಪತಿ ಸಿಲ್ವೆಸ್ಟರ್. ಈ ಎರಡು ಸಂಕೇತಗಳು ಅವರಿಬ್ಬರ ಹೆಸರುಗಳೇ? ಅವನು ಸಂದೇಹದಿಂದ ಆಲೋಚಿಸಿದ.

ಮತ್ತಷ್ಟು ಆ ನಿಟ್ಟಿನಲ್ಲಿಯೇ ಯೋಚಿಸಿದರೂ ಬೇರೇನೂ ಹೊಳೆಯಲಿಲ್ಲ. ಚೀಟಿಗಳನ್ನು ಭದ್ರವಾಗಿರಿಸಿ, ಆ ಬಗ್ಗೆಯೇ ಚಿಂತಿಸುತ್ತಾ ಕಾಫಿ ತಯಾರಿಸಿಕೊಂಡ.

ಇಂದಿನ ವೃತ್ತಪತ್ರಿಕೆ ಎಲ್ಲಿ? ಬಂದಂತಿರಲಿಲ್ಲ. ಬಾಗಿಲನ್ನು ಭದ್ರ ಮಾಡಿ, ಬೀಗ ಹಾಕಿ ಹತ್ತಿರದ ಅಂಗಡಿಗೆ ನಡೆದ.

ಅಂಗಡಿಯಲ್ಲಿ ತನ್ನ ಪ್ರಿಯ ವೃತ್ತಪತ್ರಿಕೆ ಕೇಳಿದಾಗ ಅಂಗಡಿಯವ "ಕ್ಷಮಿಸಿ ಸಾರ್! ಈವತ್ತು ಪೇಪರ್ ಸೋಲ್ಡ್ ಔಟ್!" ಎಂದು ಹೇಳಿದ.

ಬೇರೇನೂ ಮಾಡಲಾಗದೇ ಮಿತ್ರಜೀತ್ ಬೇರೊಂದು ಪೇಪರ್ ಕೊಂಡುಕೊಂಡ. ಪೇಪರ್ನ ಆಯ್ಕೆ ಕೂಡಾ ಸಿಗರೇಟ್‌ನಂತೆ. ಬ್ರ್ಯಾಂಡ್ ಬದಲಾವಣೆ ಬಲು ಕಷ್ಟದ ಕೆಲಸ. ಅವರವರಿಗೆ ಅವರಿಗೆ ಅಭ್ಯಾಸವಾದದ್ದೇ ಸಹ್ಯ.

ಮಿತ್ರಜೀತ್ ಮನೆ ತಲುಪಿದ. ಅಂಗಡಿಯಾತನಿಗೆ ಗೊತ್ತಿಲ್ಲದೇ ಇದ್ದ ವಿಷಯವೆಂದರೆ ಆ ಪೇಪರ್ನ ಒಂದು ಪ್ರತಿ ಅಂಗಡಿ ಮುಂದಿನ ತಂತಿಯ ಮೇಲೆ ಆ ಕಡೆಗೆ ನೇತಾಡುತ್ತಿದ್ದುದು. ಮಿತ್ರಜೀತ್ ಕೂಡ ಅದನ್ನು ನೋಡಿರಲಿಲ್ಲ.

ಅದರಲ್ಲಿದ್ದ ತಲೆಬರಹ – ತಮ್ಮ ತಿಂಡಿ, ಊಟಗಳಿಗೆ ಬಡ ಜನರನ್ನು ತಿನ್ನುವ ರಾಕ್ಷಸರು

– ವಿಶೇಷ ವರದಿ- ನಮ್ಮ ಪ್ರತಿನಿಧಿ ಪಾಲ್‌ರಿಂದ.

# 2

ಮಿತ್ರಜೀತ್ ಆಯಾಸಗೊಂಡಿದ್ದ. ಫೋಟೋಗಳನ್ನು ತೊಳೆದು, ಪ್ರಿಂಟ್ ಹಾಕಿ ಡಾರ್ಕ್ ರೂಮಿನ ತಂತಿಗೆ ನೇತು ಹಾಕಿ ಹೊರಬಂದ. ಏಕೋ ಡಾರ್ಕ್‌ರೂಂ ಭದ್ರಗೊಳಿಸಬೇಕೆನ್ನಿಸಿ ಬೀಗ  ಜಡಿದ.

ನಂತರ ಪ್ರೆಸ್ ಕ್ಲಬ್ ತಲುಪಿದ. ಅದೊಂದು ವಿಶಿಷ್ಟ ಸ್ಥಳ. ಅನೇಕರಿಗೆ ಅಪರೂಪದ ಐಡಿಯಾಗಳು ಬರುವುದೇ ಅಲ್ಲಿ! ಕುಡಿತದ ನೆಪದಲ್ಲಿ ಯಾವುದೇ ಎಗ್ಗಿಲ್ಲದೇ ಶತ್ರುಗಳನ್ನು ಉಗಿಯುವ 'ಪವಿತ್ರ' ಸ್ಥಳ - ಪ್ರೆಸ್ ಕ್ಲಬ್!

ಮಿತ್ರಜೀತ್ ತನ್ನ ಲೋಟದಿಂದ ಸ್ಕಾಚ್ ಸವಿಯುತ್ತಾ ತನ್ನಲ್ಲೇ ನಕ್ಕ. ಕತ್ತಲಲ್ಲಿ ಕುಳಿತಿದ್ದ  ಅವನ ತುಟಿಗಳ ನಡುವೆ ಗೋಲ್ಡ್‌ಫ್ಲೇಕ್‌ನ ಕೆಂಪು ತುದಿ ಮಾತ್ರವೇ ಅವನಿರವನ್ನು ಸೂಚಿಸುತ್ತಿತ್ತು.

ಮತ್ತಿಬ್ಬರು ವ್ಯಕ್ತಿಗಳು ಅವನಿದ್ದ ಮೂಲೆ ತಲುಪಿ, "ಹಲೋ" ಎಂದು ಉದ್ಗರಿಸಿ ಕುರ್ಚಿಗಳಲ್ಲಿ ಆಸೀನರಾದರು.

"ಓ ಹಲೋ! ದ ಫೇಮಸ್ ಟ್ವಿನ್ಸ್! ಫಜಲ್ ಆಂಡ್ ಅಮರೇಶ್. ಹೇಗಿದ್ದೀರಿ? ಏನು ಸಮಾಚಾರ? ಡೇರ್ ಡೆವಿಲ್ ಜೋಡಿ. ಸರಿ ತಾನೇ?" ಎಂದು ನಕ್ಕ.

"ಓ ಕಮಾನ್ ಮಿತ್ರಜೀತ್! ಪಾಟ್ ಕಾಲಿಂಗ್ ದ ಕೆಟಲ್ ಬ್ಲ್ಯಾಕ್! ಕನ್ನಡಿ ನೋಡ್ತಿದ್ದೀಯಾ? ನೀನೇನು ಕಮ್ಮಿ?" ಫಜಲ್ ನಕ್ಕ. ಆ ಮೂವರಲ್ಲಿ ಅವನೇ ಹರಟೆಮಲ್ಲ.

ಅವರಿಬ್ಬರ ಲೇಖನಗಳಲ್ಲಿ ಬೆಂಕಿ ಇರುತ್ತಿತ್ತು. ಕೆಟ್ಟ ಜನರ ಮೇಲೆ ವಿಷವನ್ನೂ ಸುರಿಸುತ್ತಿದ್ದವು ಅವರ ರಚನೆಗಳು. ಅನೇಕರು ಅವರಿಗೆ ಫೋನು ಮಾಡಿ ತಮ್ಮ ಬಗ್ಗೆ ಕೆಟ್ಟ ಲೇಖನಗಳನ್ನು ಪ್ರಕಟಿಸಬೇಡಿರೆಂದು ಬೇಡಕೊಳ್ಳುತ್ತಿದ್ದರು. ಕೆಲವರು ಜೀವ ತೆಗೆಯುವ ಬೆದರಿಕೆ ಹಾಕುತ್ತಿದ್ದರು.

ಆದರೆ ಇವರು ಬೆದರುತ್ತಿರಲಿಲ್ಲ. ದುಷ್ಟರನ್ನು ದುಷ್ಟರೆನ್ನುತ್ತಿದ್ದರು. ಅಷ್ಟೇ!

ಅಮರೇಶ ವೈನ್ ಗ್ಲಾಸ್ ಎತ್ತಿದ. ಫಜಲ್ ಕೋಕ್ ಹಿಡಿದ.

"ಚಿಯರ್ಸ್!" ಎಂದರು ಮೂವರೂ.

“ಪಾಲ್‌ನ ನಾನು ಹುಡುಕಬೇಕು. ಅವನ ಗ್ರೇಟ್ ಲೇಖನಕ್ಕೆ ಅವನನ್ನು ಅಭಿನಂದಿಸಬೇಕು” ಎಂದ ಫಜಲ್.

ಫಜಲ್ ‘ಕ್ಯಾಸನೋವ’ ಟೈಪ್ ಮನುಷ್ಯ. ಅಮರೇಶ ವಿವಾಹಿತ.

“ಯಾವ ಆರ್ಟಿಕಲ್?” ಹಠಾತ್ತನೆ ಮಿತ್ರಜೀತ್‌ನ ಮೆದುಳಲ್ಲಿ ಅಪಾಯದ ಗಂಟೆ ಬಾರಿಸಿತು.

“ಅದೇ, ಈವತ್ತಿನ ಪೇಪರ್‌ನಲ್ಲಿ ಬಂದಿದ್ದು. ನೀನು ಓದ್ಲಿಲ್ವಾ?” ಅಚ್ಚರಿಯಿಂದ ಕೇಳಿದ ಫಜಲ್.

“ನನಗೆ ಆ ಪೇಪರ್ ಸಿಗಲಿಲ್ಲ.”

ಅಮರೇಶ ತನ್ನ ಚರ್ಮದ ಚೀಲ ತೆಗೆದು ಪೇಪರ್ ಒಂದನ್ನು ಎಳೆದು ಅದರಲ್ಲಿದ್ದ ಲೇಖನ ತೋರಿಸಿದ.

ಮಿತ್ರಜೀತ್ ಶೀರ್ಷಿಕೆ ನೋಡಿದ – ತಮ್ಮ ತಿಂಡಿ, ಊಟಗಳಿಗೆ ಬಡಜನರನ್ನು ತಿನ್ನುವ ರಾಕ್ಷಸರು. ಬಡಜನರ ಊಟವನ್ನೂ ಭಕ್ಷಿಸುವ ರಕ್ಕಸರು.

ಮಿತ್ರಜೀತ್‌ಗೆ ರೋಮಾಂಚನವಾಯಿತು.

ಇದು ನಿಜವಾದ ‘ಗಂಡು’ ಲೇಖನ. ಜನರ ವೈರಿಯ ವಿರುದ್ಧ ದನಿ ಎತ್ತಬಲ್ಲವನು. ಲೇಖನವನ್ನು ವೇಗದಿಂದೋದಿದ.

ಅವನೇ ಸ್ವತಃ ಪತ್ರಕರ್ತನಾಗಿದ್ದರೂ ಕ್ಷಣಕಾಲ ತಬ್ಬಿಬ್ಬುಗೊಂಡ. ಈ ‘ರಕ್ಕಸರು’ ಇಷ್ಟು ಕೆಟ್ಟವರಾಗಲು ಸಾಧ್ಯವೇ?

ಕೆಂಪು ಪಟ್ಟಿಯ ಬ್ಯೂರೋಕ್ರಸಿಯನ್ನು ಅಪ್ಪಿ ತಪ್ಪಿ ದಾಟಿ, ಸರ್ಕಾರ ಉಪಯೋಗೀ ಕೆಲಸಕ್ಕೆ ಹಣ ಕೊಡಲೊಪ್ಪಿದೆ. ಅದನ್ನು ‘ನಡು’ ಮನುಷ್ಯರು ನುಂಗಿದ್ದಾರೆ.

ಮಿತ್ರಜೀತ್‌ನ ಕಣ್ಣುಗಳು ವಿವರವನ್ನು ಓದಿ ವಿಶಾಲಗೊಂಡವು.

“ಎಲ್ಲಿ ಅವನು? ನಾನವನ ಹತ್ತಿರ ಮಾತಾಡ್ಬೇಕು. ಅರ್ಜೆಂಟಾಗಿ” ಅವನ ಸ್ವರದಲ್ಲಿ ಆತುರವಿತ್ತು.

“ಯಾಕೆ?” ಫಜಲ್ ಪ್ರಶ್ನಾರ್ಥಕವಾಗಿ ಕೇಳಿದ.

# ಹಸ್ತಕ್ಷೇಪ 9

ಮಿತ್ರಜೀತ್ ತನ್ನ ಧ್ವನಿ ತಗ್ಗಿಸಿ, "ಯಾಕೇಂದ್ರೆ ಪಾಲ್ ಉಲ್ಲೇಖಿಸಿರೋ ಮನುಷ್ಯರಲ್ಲಿ ಒಬ್ಬನಿಗೆ ಭೂಗತ ಪ್ರಪಂಚದೊಂದಿಗೆ ಸಂಪರ್ಕ ಇದೆ" ಎಂದು ಮೆಲ್ಲನುಸುರಿದ.

ಫಜಲ್ ಮತ್ತು ಅಮರೇಶ್ ಗಂಭೀರರಾದರು. ಚಿಂತಾಕ್ರಾಂತರೂ ಆದರು. ಪರಿಸ್ಥಿತಿಯ ಗಂಭೀರತೆಯನ್ನು ಅರಿತರು.

ಫಜಲ್ ಮೇಲೆದ್ದು ಪ್ರೆಸ್‌ಕ್ಲಬ್‌ನ ಫೋನಿನತ್ತ ಓಡಿದ. ಮಿತ್ರಜೀತ್, ಅಮರೇಶ್ ಹಿಂಬಾಲಿಸಿದರು.

ತನ್ನ ಡಿಜಿಟಲ್ ಡೈರಿಯಲ್ಲಿದ್ದ ಎಲ್ಲಾ ಸಂಖ್ಯೆಗಳನ್ನೂ ಡಯಲ್ ಮಾಡಿದ. ಯಾರಿಗೂ ಪಾಲ್‌ನ ಇರವಿನ ಬಗ್ಗೆ ತಿಳಿದಿರಲಿಲ್ಲ.

ಮಿತ್ರಜೀತ್ ಆಗ ಲೊರೆಟ್ಟಾಳ ಬಗ್ಗೆ ಜ್ಞಾಪಿಸಿಕೊಂಡು, ಅವಳ ನಂಬರ್ಗೆ ಡಯಲ್ ಮಾಡಿದ.

ಅದು ರಿಂಗ್ ಆಗುತ್ತಲೇ ಹೋಗಿತ್ತು. ಇನ್ನೇನು ಡಿಸ್ಕನೆಕ್ಟ್ ಮಾಡಬೇಕೆಂದುಕೊಂಡಾಗ ಯಾರೋ ಅತ್ತಕಡೆಯಿಂದ "ಹಲೋ" ಎಂದರು. ಆ ಕಡೆಯ ಧ್ವನಿ ನಿಜಕ್ಕೂ ಸುಸ್ತಾದಂತಿತ್ತು.

"ಮಿಸ್ ಲೊರೆಟ್ಟಾ?"

"ಮಿಸೆಸ್ ಲೊರೆಟ್ಟಾ" ಆಕೆ ಸರಿಪಡಿಸಿದಳು.

"ಅಯ್ ಆಮ್ ಸಾರಿ. ಮಿಸೆಸ್ ಲೊರೆಟ್ಟಾ ಸಿಲ್ವೆಸ್ಟರ್. ಸರೀನಾ?"

"ಹೌದು, ಏನು ಬೇಕು? ಒಬ್ಬ ಒಳ್ಳೆಯ ಗೆಳೆಯನನ್ನು ಕಳೆದುಕೊಂಡು ಈಗಾಗಲೇ ನಾನು ಸುಸ್ತಾಗಿದ್ದೀನಿ"

"ಕ್ಷಮಿಸಿ. ನಾನು ನಿಮ್ಮ ಹಳೆಯ ಗೆಳೆಯನನ್ನು ಹುಡುಕಲು ಪ್ರಯತ್ನ ಪಡ್ತಿದ್ದೀನಿ. ನಾನು ಮಿತ್ರಜೀತ್. ಪಾಲ್‌ನ ಗೆಳೆಯ"

"ನಾನೂ ಆತನ  ಬಗ್ಗೆಯೇ ಮಾತಾಡ್ತಿದ್ದೀನಿ ಮಿಸ್ಟರ್ ಮಿತ್ರಜೀತ್. ಪಾಲ್ ಈಜ್ ಸಿಂಕಿಂಗ್"

"ವ್ಹಾಟ್?" ಮಿತ್ರಜೀತ್‌ನ ಗಟ್ಟಿ ಧ್ವನಿ ಪ್ರೆಸ್‌ಕ್ಲಬ್‌ನ ಎಲ್ಲರೂ ಅವನತ್ತ ನೋಡುವಂತೆ ಮಾಡಿತ್ತು.

# ಹಸ್ತಕ್ಷೇಪ 10

"ಎಲ್ಲಿ? ಅಡ್ರೆಸ್ ಹೇಳಿ!" ಅವಸರ ಪಡಿಸಿದ.

ಅವಳು ವಿಳಾಸ ಹೇಳಿದಳು.

"ಥ್ಯಾಂಕ್ಸ್" ಹೇಳಿ ರಿಸೀವರ್ ಕ್ರೆಡಲ್ ಮಾಡಿದ

ಫಜಲ್, ಅಮರೇಶ್ ಮಿತ್ರಜೀತ್‌ನನ್ನೇ ದಿಟ್ಟಿಸುತ್ತಿದ್ದರು.

"ಬನ್ನಿ, ನಮಗೆ ಹೆಚ್ಚು ಸಮಯವಿಲ್ಲ"

ಅವರು ವೇಗವಾಗಿ ಹೊರಬಿದ್ದು ರಸ್ತೆಗೆ ಬಂದರು. ಫಜಲ್‌ನ ಮಾರುತಿ 800ರಲ್ಲಿ ಕುಳಿತರು. ಕಾರು ಬೆಂಗಳೂರಿನ ರಸ್ತೆಗಳಲ್ಲಿ ವೇಗದಿಂದೋಡಿತು.

ಮೂವರೂ ಬಹಳವೇ ಚಿಂತಿತರಾಗಿ, ಮುಳ್ಳುಗಳ ಮೇಲೆ ಕುಳಿತವರಂತೆ ಚಡಪಡಿಸುತ್ತಿದ್ದರು.

ಮಿತ್ರಜೀತ್ ಆಲೋಚನಾ ಸಾಗರದಲ್ಲಿ ಮುಳುಗಿದ್ದ.

ಲೊರೆಟ್ಟಾ ಹೇಳಿದ್ದೇನು? ಪಾಲ್ ಮರಣಶಯ್ಯೆಯಲ್ಲಿದ್ದಾನೆ. ಸರ್ಕಾರಿ ಆಸ್ಪತ್ರೆಯ ಐ.ಸಿ.ಯು.ನಲ್ಲಿದ್ದಾನೆ.

ಕಾರು ಆಸ್ಪತ್ರೆ ತಲುಪಿತು. ಕಾರು ನಿಂತೊಡನೆ ಮೂವರೂ ಒಳಗೆ ಓಡಿದರು. ಐ.ಸಿ.ಯೂ.ವನ್ನು ಪತ್ತೆ ಹಚ್ಚಲು ನಲವತ್ತೈದು ಸೆಕೆಂಡುಗಳನ್ನು ವ್ಯಯಿಸಿದ್ದರು. ಪಾಲ್ ಮಲಗಿದ್ದ ಬೆಡ್ ತಲುಪಲು ಇನ್ನೂ ಹದಿನೈದು ಸೆಕೆಂಡುಗಳು. ಹಣೆಯ ಮೇಲಿನ ಬೆವರೊರೆಸಿಕೊಳ್ಳುತ್ತಾ ಬಿಳಿಕೋಟಿನ ಡಾಕ್ಟರು ಹೊರಬಂದ. ಈ ಮೂವರ ಮುಖಗಳ ಮೇಲಿನ ಪ್ರಶ್ನೆಯನ್ನೋದಿದ. ಉತ್ತರ ನಕಾರಾತ್ಮಕ.

"ಪೇಷೆಂಟ್‌ನ ಪ್ರಾಣ..." ತನ್ನ ವಾಚ್ ನೋಡಿಕೊಂಡು "ಒಂದು ನಿಮಿಷದ ಹಿಂದೆ ಹೋಯ್ತು" ಎಂದ.

ಮೂವರೂ ದುಃಖದಿಂದ ಪರಸ್ಪರ ಮುಖ ನೋಡಿಕೊಂಡರು. ಪಾಲ್‌ನ ಶವದ ಹೊರತು ರೂಮು ಭಣಭಣವೆನ್ನುತ್ತಿತ್ತು.

ಅವನು ದಯನೀಯನಂತೆ ಕಂಡ. ಅವರೇಶನ ಕಣ್ಣಿಗೆ ಸ್ವಲ್ಪವೇ ಜಾರಿಹೋದ ಹೊದಿಕೆಯ ಸಂದಿನಿಂದ ಪಾಲ್‌ನ ಬಲಗೈ ಮಣಿಕಟ್ಟು ಕಂಡಿತ್ತು. ಫಜಲ್‌ಗೆ ಅದರತ್ತ ಬೆರಳು ತೋರಿದ.

# ಹಸ್ತಕ್ಷೇಪ 11

ಇನ್ನೂ ಕಾರಿಡಾರ್‌ನಲ್ಲಿ ಹೋಗುತ್ತಿದ್ದ ಡಾಕ್ಟರನತ್ತ ಮಿತ್ರಜೀತ್ ಓಡಿದ. ಡಾಕ್ಟರ್ ಯಾರನ್ನೋ ಮಾತಾಡಿಸಲು ನಿಂತಾಗ ಮಿತ್ರಜೀತ್ ಅವನನ್ನು ತಲುಪಿ "ಡಾಕ್ಟರ್!" ಎಂದ.

ಡಾಕ್ಟರ್ ತಿರುಗಿ ನೋಡಿದ.

"ಪಾಲ್... ಕೊನೆಯುಸಿರೆಳೆದಾಗ... ನೀವೇನಾ ಅಲ್ಲಿದ್ದವರು?" ಮಿತ್ರಜೀತ್ ಕೇಳಿದ.

ಡಾಕ್ಟರ್ ಹೌದೆಂಬಂತೆ ತಲೆದೂಗಿದ.

"ಪಾಲ್‌ಗೇನಾಯ್ತು ಡಾಕ್ಟರ್? ಅವನ ಸಾವಿಗೇನು ಕಾರಣ ಡಾಕ್ಟರ್?"

ಅವನ ಮನದೊಳಗಣ ಮನ ಉಸುರುತ್ತಿತ್ತು, ಪಾಲ್‌ನನ್ನು ಟಾರ್ಚರ್‌ಗೆ ಒಳಪಡಿಸಲಾಗಿದೆಯೆಂದು.

ಮಿತ್ರಜೀತ್ ಕ್ಷಣಕಾಲ ಭ್ರಮೆಗೊಂಡನೇ ಎಂದುಕೊಂಡ. ಡಾಕ್ಟರನ ಕಣ್ಗಳಲ್ಲಿ ಏನೋ ಹಿಂದೆಗೆತ. ಮಿತ್ರಜೀತ್‌ನ ಅತಿ ಸೂಕ್ಷ್ಮ ಕಣ್ಣುಗಳು ಆ ಹಿಂದೆಗೆತವನ್ನು ಗಮನಿಸಿದ್ದವು. ಸಾಮಾನ್ಯ ಮನುಷ್ಯರು ಆ ಸೂಕ್ಷ್ಮವನ್ನು ಖಂಡಿತ ಗಮನಿಸಿರುತ್ತಿರಲಿಲ್ಲ.

ಎರಡು ನಿಮಿಷಗಳ ಗಲಿಬಿಲಿಯ ಮೌನದ ನಂತರ "ಸ್ವಾಭಾವಿಕ ಸಾವಿನಂತಿತ್ತು" ಎಂದ ಡಾಕ್ಟರ್.

"ವ್ಹಾಟ್?" ಅನುಚಿತವಾಗಿ ಕಿರುಚಿದ ಮಿತ್ರಜೀತ್, ಕ್ಷಣಮಾತ್ರದಲ್ಲಿ ತನ್ನ ತಪ್ಪನ್ನರಿತು, ಡಾಕ್ಟರತ್ತ ಕ್ಷಮಾಪಣಾ ನೋಟ ಬೀರಿ, "ನೀವೇನು ಹೇಳುತ್ತಿರುವಿರಿ ಡಾಕ್ಟರ್?" ಎಂದು ಪ್ರಶ್ನಿಸಿದ.

ಅಷ್ಟರಲ್ಲಿ ತನ್ನ ಗಲಿಬಿಲಿಯಿಂದ ಎಚ್ಚೆತ್ತ ಡಾಕ್ಟರ್ ವಿಶಾಲ ನಗೆ ಬೀರಿದ, ತನ್ನ ತಪ್ಪನ್ನು ಮುಚ್ಚಿಡುವಂತೆ.

ಮಿತ್ರಜೀತ್ ವೇಗವಾಗಿ ಆಲೋಚಿಸಿದ. ಸಮಯ ಅನವಶ್ಯಕವಾಗಿ ನಷ್ಟವಾಗುತ್ತಿದೆ.

ಸಾಮಾನ್ಯವಾಗಿ ಡಾಕ್ಟರುಗಳು ಪೋಸ್ಟ್ ಮಾರ್ಟಂ ಮಾಡಿ, ಹಣ ಸಂಪಾದಿಸಲು ನೋಡುತ್ತಾರೆ (ಅವರು ಸರ್ಕಾರೀ ಆಸ್ಪತ್ರೆಯಲ್ಲಿ ಕೆಲಸ

ಮಾಡುತ್ತಿರುವರೆಂಬುದು ಬೇರೆ ವಿಷಯ). ಮಾಡಲೇಬೇಕೆನ್ನಿಸಿದಾಗ ಹೇಗಾದರೂ ಹಣ ಸಂಪಾದನೆಯನ್ನು, ಯಾವುದಾದರೂ ಮಾರ್ಗದಲ್ಲಿ ಮಾಡುತ್ತಾರೆ.

ಇಂತಹ ಸನ್ನಿವೇಶವಿದ್ದೂ ಈಗ ಪೋಸ್ಟ್ ಮಾರ್ಟಂ ಮಾಡಲು ಉತ್ಸುಕತೆ ತೋರುತ್ತಿಲ್ಲ ಎಂದರೆ ದಾಲ್ ಮೇ ಜರೂರ್ ಕುಛ್ ಕಾಲಾ ಹೈ. ಏನೋ ಲೋಪವಿದೆ ಈ ಕೇಸ್‌ನಲ್ಲಿ. ತಾನೀಗ ಶೀಘ್ರಗತಿಯಲ್ಲಿ ಕೆಲಸ ಮಾಡದಿದ್ದಲ್ಲಿ ಸತ್ಯವನ್ನು ಹೊರಗೆಳೆಯುವ ಅವಕಾಶವನ್ನು ಕಳೆದುಕೊಳ್ಳಲಿದ್ದಾನೆ.

ಹಠಾತ್ತನೆ ಡಾಕ್ಟರ್‌ಗೆ ತನ್ನ ಧನ್ಯವಾದ ಅರ್ಪಿಸುತ್ತಾ, ಆತನ ಕೈ ಹಿಡಿದು,

“ಡಾಕ್ಟರ್ ಶಶಿಭೂಷಣ್, ಒಂದು ಚಿಕ್ಕ ರಿಕ್ವೆಸ್ಟ್...” ಆ ಡಾಕ್ಟರನ ಕೋಟಿನ ಮೇಲಿದ್ದ ನಾಮಫಲಕ ಓದಿ ಹೆಸರು ತಿಳಿದುಕೊಂಡಿದ್ದ. “ನನಗಾಗಿ ಆ ಬಾಡಿಯನ್ನು ಪೋಸ್ಟ್‌ಮಾರ್ಟಂ ಮಾಡಿ” ಎಂದು ವಿನಂತಿಸಿಕೊಂಡಿದ್ದ.

“ಓಕೆ” ಶಶಿಭೂಷಣ್ ಒಪ್ಪಿದ.

ಆ ಒಪ್ಪಿಗೆಯ ವೇಗ ಮಿತ್ರಜೀತ್‌ನಲ್ಲಿ ಅನುಮಾನ ಹುಟ್ಟಿಸಿತು. ಡಾಕ್ಟರನ್ನು ಮತ್ತೊಮ್ಮೆ ಧನ್ಯವಾದಿಸಿ ಸ್ಟಾಫ್‌ರೂಮಿನತ್ತ ನಡೆದ ಮಿತ್ರಜೀತ್. ಆ ಆಸ್ಪತ್ರೆಯಲ್ಲಿ ತನಗೊಬ್ಬನ ಪರಿಚಯವಿದೆಯೆಂದು ನೆನಪಿಸಿಕೊಂಡ. ಎರಡು ನಿಮಿಷಗಳ ಕೆದಕುವಿಕೆ ಆ ವ್ಯಕ್ತಿಯ ಹೆಸರನ್ನು ನೆನಪಿಸಿತು.

ಸ್ಟಾಫ್‌ರೂಮಿನ ಒಳಗೆ ಹೋದ. ಅವನ ಅದೃಷ್ಟ ಅವನೊಂದಿಗೆ ಇನ್ನೂ ಇತ್ತು! ಆ ರೂಮಿನಲ್ಲಿದ್ದಾತ ಒಬ್ಬನೇ.

ಅವನೇ ಇವನಿಗೆ ತಿಳಿದಾತ! ಇದನ್ನಲ್ಲವೇ ಲಕ್ಕೀ ಬಂಪರ್ ಅನ್ನೋದು? ಮೆಲ್ಲನೆ ಅವನನ್ನು ಸಮೀಪಿಸಿ ಅವನ ಹೆಗಲ ಮೇಲೆ ಕೈಯಿಟ್ಟ. ಅವನು ಎಗರಿಬಿದ್ದು ನಂತರ ಮಿತ್ರಜೀತ್‌ನನ್ನು ಗಮನಿಸಿದ.

“ಯೂ ಡೆವಿಲ್! ನಿನ್ನ ಹಳೆಯ ತುಂಟಾಟ ಇನ್ನೂ ಮರೆತಿಲ್ವಾ?” ಎಂದು ಸಿಡುಕಿ ಕೇಳಿ, ನಂತರ ಮಿತ್ರಜೀತ್‌ನನ್ನು ದುರುಗುಟ್ಟಿ ನೋಡಿದ. ಆದರೆ ಅವನ ಕನ್ನಡಕದ ಹಿಂದಿನ ಕಣ್ಣುಗಳು ಮಿನುಗುತ್ತಿದ್ದವು.

“ಓ ಅಂಶುಮಂತ್! ನೀನು ಈಗಲೂ ಅದೇ ಅಂಶುಮಂತನೇ! ಅಥವಾ ನಿನ್ನನ್ನು ಡಾಕ್ಟರ್ ಅಂಶುಮಂತ್ ಅನ್ಬೇಕಾ?” ಮಿತ್ರಜೀತ್ ಅವನ ಭುಜ ತಟ್ಟಿ ಪಕ್ಕದ ಕುರ್ಚಿಯಲ್ಲಿ ಕೂತ.

ಎರಡು ವರ್ಷಗಳ ಪಿ.ಯೂ.ಸಿಯನ್ನು ಒಟ್ಟಿಗೆ ಓದಿದ್ದರು. ಬಹು ಸ್ನೇಹೀ ಮಿತ್ರಜೀತ್ ಎಲ್ಲರನ್ನೂ ಕೀಟಲೆ ಮಾಡುತ್ತಿದ್ದ. ಎಲ್ಲರೊಂದಿಗೆ ತುಂಟಾಟ ಮಾಡುತ್ತಿದ್ದ. ಆದರೆ ಯಾರಿಗೂ ನೋವಾಗದಂತೆ ಎಚ್ಚರಿಕೆಯಿಂದಿರುತ್ತಿದ್ದ. ಈ ಕಾರಣಕ್ಕಾಗಿಯೇ ಎಲ್ಲರೂ ಅವನನ್ನು ಇಷ್ಟ ಪಡುತ್ತಿದ್ದರು.

ಮಿತ್ರಜೀತ್ ಅವನ ಹೆಸರಿಗೆ ತಕ್ಕಂತಿದ್ದ – ಗೆಳೆಯರನ್ನು ಗೆಲ್ಲುತ್ತಿದ್ದ. ಅಂಶುಮಂತ್ ಬಹಳವೇ ಮೃದು ಮತ್ತು ನಾಚಿಕೆಯ ಸ್ವಭಾವದವ. ಅವನಿಗೆ ಮಿತ್ರಜೀತ್ ಎಂದರೆ ಹೀರೋ ವರ್ಷಿಪ್. ಎಷ್ಟೋ ವರ್ಷಗಳ ನಂತರ ಮಿತ್ರಜೀತ್‌ನನ್ನು ಕಾಣುತ್ತಿದ್ದಾನೆ.

“ಇಲ್ಲಿಗೆ ಬಂದ ಕಾರಣವೇನು ಮಿತ್ರಜೀತ್?” ಕೇಳಿದ ಅಂಶುಮಂತ್.

ಮಿತ್ರಜೀತ್‌ನ ವದನ ಮ್ಲಾನವಾಯಿತು.

“ಈ ಆಸ್ಪತ್ರೆಯಲ್ಲಿ ಏನು ನಡೀತಿದೆ ಅಂಶುಮಂತ್? ಸಾಮಾನ್ಯಜನರು ಇಲ್ಲಿಗೆ ಬಂದ ಮೇಲೆ ಬದುಕಿರೋಕ್ಕೆ, ಜೀವದೊಂದಿಗೆ ಹೊರಗೆ ಹೋಗೋಕ್ಕೆ ಸಾಧ್ಯವಾ?” ಸೀರಿಯಸ್ಸಾಗಿ ಕೇಳಿದ.

“ಇಲ್ಲ” ಎಂದು ಹೇಳಿದ ಅಂಶುಮಂತ್, ಮಿತ್ರಜೀತ್‌ನನ್ನು ಅಚ್ಚರಿಗೊಳಪಡಿಸಿ.

“ಯಾಕೆ ಹಾಗಂತೀ?” ಕೇಳಿದ ಮಿತ್ರಜೀತ್.

ಆ ಆಸ್ಪತ್ರೆಯಲ್ಲಿ ಲಂಚ ತಿನ್ನುವ ಜನರ ಲಿಸ್ಟನ್ನೇ ನೀಡಿದ ಅಂಶುಮಂತ್. ಜನರನ್ನು ಸೇರಿಸಿಕೊಳ್ಳುವ ಅಡ್ಮಿಷನ್ ಇಲಾಖೆಯಿಂದ ಹೆಣ ಕಾಯ್ದಿಡುವ ಶವಾಗಾರದವರೆಗೆ ಲಂಚದ ದೆವ್ವ ತಾಂಡವವಾಡುತ್ತಿತ್ತು.

ಪಾರ್ಲಿಮೆಂಟರಿ ಸರ್ಕಾರ ಆರಿಸಿದ ತಪ್ಪಿಗೆ ಸಾಮಾನ್ಯ ಪ್ರಜೆ ಅನುಭವಿಸುತ್ತಿರುವ ಶಿಕ್ಷೆ ಇದಾ? ಮಿತ್ರಜೀತ್ ಖಿನ್ನತೆಯಿಂದ ಅಂದುಕೊಂಡ. ಅವನು ಕಮ್ಯೂನಿಸ್ಟಲ್ಲ. ಜನರ ನಡುವಿನ ಈ ಅಸಮಾನತೆ ಅವನನ್ನು ‘ಶ್ರೀಮಂತರನ್ನು ದೋಚು, ದೀನರನ್ನು ಬಾಳಿಸು’ ಎಂದಾಲೋಚಿಸುವಂತೆ ಮಾಡಿತ್ತು. ರಾಬಿನ್‌ಹುಡ್ ಮಾಡಿದ ಕೆಲಸ ಅದೇ!

“ಈಗ ನನಗೆ ನಿನ್ನ ಸಹಾಯ ಬೇಕು” ಎಂದು ತಗ್ಗು ಸ್ವರದಲ್ಲಿ ತನಗೇನು ಸಹಾಯ ಬೇಕೆಂದು ವಿವರಿಸಿದ.

ಅಂಶುಮಂತನಿಗೆ ಬೆವರು ಕಿತ್ತುಕೊಂಡು ಬಂತು. ದೆವ್ವವನ್ನು ಕಂಡವನಂತೆ ಬೆದರಿದ. ಆದರೆ ಮಿತ್ರಜೀತ್ ಕಡೆಗೂ ಅವನನ್ನು ಒಪ್ಪಿಸಿ ಹೊರಟ.

ಹೊರಡುವ ಮೊದಲು, "ಪ್ಲೀಜ್! ನೀನಿದನ್ನು ಮಾಡಲೇಬೇಕು. ನನಗೋಸ್ಕರ ಅಲ್ಲದಿದ್ದರೂ ದೇಶಕ್ಕಾಗಿ ಮಾಡು!" ಎಂದ.

ಆ ಶಬ್ದಗಳು ಅವನಿಗೇ ಟೊಳ್ಳಾಗಿ ಕೇಳಿಸಿದ್ದವು. ಆದರೆ ನಿಜವಾಗಿ ಅದೇ ದಯನೀಯ ಪರಿಸ್ಥಿತಿ ಅಲ್ಲಿ ಆವರಿಸಿಕೊಂಡಿತ್ತು.

ಅವನು ಅಂಶುಮಂತನಿಂದ ಬೀಳ್ಕೊಂಡು ಫಜಲ್ ಅಮರೇಶರನ್ನು ಕೂಡಿಕೊಂಡ. ಅವರೇನೋ ಗಂಭೀರವಾಗಿ ಯೋಚಿಸುತ್ತಿದ್ದರು. ಇವನನ್ನು ನೋಡಿ, "ಮಿತ್ರಾ! ಇಲ್ಲೇನೋ ಗಡ್‌ಬಡ್ ಇದೆ. ಪಾಲ್‌ಗೆ ಹಿಂಸೆ ಕೊಟ್ಟಿರುವ ಹಾಗಿದೆ" ಎಂದ ಫಜಲ್.

ಮಿತ್ರಜೀತ್ ಹೌದೆಂಬಂತೆ ಗೋಣಾಡಿಸಿದ.

"ನಮ್ಮ ಜೊತೆಗಾರನಿಗೆ ಇಂತಾ ಟ್ರೀಟ್‌ಮೆಂಟ್ ಸಿಕ್ಕಿರೋದು ಸೀರಿಯಸ್ ವಿಷಯ. ಇವತ್ತು ಅವನ ಟರ್ನು. ನಾಳೆ ನನ್ನದಿರಬಹುದೇ?"

ಒಣನಗೆಯೊಂದು ಮಿತ್ರಜೀತ್‌ನ ತುಟಿಗಳ ಮೇಲೆ ಕಾಣಿಸಿಕೊಂಡಿತು.

"ಫಜಲ್! ನಾನೊಂದು ಉಪಾಯ ಹೇಳಲಾ?" ಅವರು ಆಸ್ಪತ್ರೆಯಿಂದ ಹೊರಗೆ ನಡೆಯಲಾರಂಭಿಸಿದ್ದರು.

"ಏನು?"

"ತುಂಬಾ ತೀವ್ರ ಬರವಣಿಗೇನ... ಅದೇ ಕೆಟ್ಟವರ ... ಅಯ್ ಮೀನ್... ದೊಡ್ಡವರ ಬಗ್ಗೆ ಬರೆಯೋದು ಬಿಟ್ಟುಬಿಡು"

ಮಿತ್ರಜೀತ್ ಸೀರಿಯಸ್ಸಾಗಿ ಹೇಳಿದ್ದರೂ ಅವನ ಮೊಗದ ಮೇಲೆ ಸುಹಾಸವಿತ್ತು.

"ಅದು ಸತ್ತರೂ ಸಾಧ್ಯವಿಲ್ಲ!" ಫಜಲ್ ಬಿರುಸಾಗಿ ಉಸುರಿದ. ನಂತರ ಮಿತ್ರಜೀತ್‌ನತ್ತ ತಿರುಗಿ "ನೀನು ಹಾಗೆ ಮಾಡಬಲ್ಲೆಯಾ ಮಿತ್ರಾ?" ಎಂದ ಕೆಣಕುವಂತೆ.

"ನೋ!" ಎಂದ ಮಿತ್ರಜೀತ್ ತಕ್ಷಣವೇ.

# ಹಸ್ತಕ್ಷೇಪ 15

"ನಿನ್ನ ಪ್ರಶ್ನೆಗೆ ನೀನೇ ಉತ್ತರ ನೀಡಿದ್ವೀ!" ನಕ್ಕ ಫಜಲ್.

ಆದರೆ ಅವನ ಮನದಲ್ಲಿ ಕೋಪದ ಜ್ವಾಲೆ ಭುಗಿಲೆದ್ದಿತು. ಈ ದೊಡ್ಡ ಮನುಷ್ಯರು ಏನೆಂದುಕೊಂಡಿದ್ದಾರೆ? ಹಣ ಇದ್ದ ಮಾತ್ರಕ್ಕೆ ಯಾರನ್ನು ಬೇಕಾದರೂ ಕೊಂಡುಕೊಳ್ಳಬೇಕೆಂದುಕೊಂಡಿದ್ದಾರಾ?

ಪಾಪ ಪಾಲ್! ಈ ರಾಕ್ಷಸರನ್ನೂ, ಅವರ ದುಷ್ಕೃತ್ಯಗಳನ್ನೂ ಹೊರಹಾಕಿ ಸರಿಯಾದ ಕೆಲಸ ಮಾಡಿದ್ದಾನೆ. ಬಡಜನರಿಗೆ ಮಧ್ಯಾಹ್ನದ ವೇಳೆ ಉಪ್ಪಿಟ್ಟು, ಹಾಲು ಹಂಚಲು ಸರ್ಕಾರ ನೀಡಿದ ಹಣವನ್ನು ತಿಂದು ಹಾಕಲು ಈ ಶ್ರೀಮಂತ ರಕ್ಕಸರಿಗೆ ಏನು ಅಧಿಕಾರವಿದೆ?

ಒಂದು ಸಣ್ಣದನಿ ಅವನ ಮೆದುಳಿನಲ್ಲಿ ಪಿಸುಗುಟ್ಟಿತು. 'ಈ ಬರವಣಿಗೆ ಅವನಿಗೆ ಯಾವ ಗತಿ ತಂದಿತು ನೋಡು!'

ಈ ಸಂಶೋಧನಾತ್ಮಕ ವರದಿ ತಯಾರಿಕೆಯಲ್ಲಿ ಯಾವ ಲಾಭವಿದೆ? ಯಾಕೆ ಜೀವಕ್ಕೆ ಸಂಚಕಾರ ತಂದುಕೊಳ್ಳಬೇಕು?

ಈ ಪ್ರಶ್ನೆ ಅವನ ತಲೆಯಲ್ಲಿ ಬಹು ಸಮಯ ಸುಳಿ ತಿರುಗುತ್ತಲಿತ್ತು.

ಅವನಿಗೆ ಈ ಪ್ರಶ್ನೆಯ ಉತ್ತರದಲ್ಲಿ ಆಸಕ್ತಿ ಹೆಚ್ಚಾಗಿದ್ದುದಕ್ಕೆ ಕಾರಣವಿತ್ತು. ಏಕೆಂದರೆ ಅವನೂ ದೊಡ್ಡ ಜಲಚರದ ಬೇಟೆಯಲ್ಲಿದ್ದ. ತಿಮಿಂಗಿಲವೆಂದೇ ಹೇಳಬಹುದೇನೋ. ಜನತೆ ನಂಬುವ ಮನುಷ್ಯ ಇಂತಹವನೇ ಎಂಬ ಆಘಾತ ಅವನಿಗೆ ಉಂಟಾಗಿತ್ತು. ಇದಕ್ಕೇ ಏನು ಚುನಾವಣೆಗಳಲ್ಲಿ ಹಣವನ್ನು ಯಥೇಚ್ಛವಾಗಿ ವೆಚ್ಚ ಮಾಡುವುದು? ಯಾರ ಹಣ? ಪ್ರಜೆಗಳ ಧನ! 2-3 ವರ್ಷಗಳಿಗೊಮ್ಮೆ ಚುನಾವಣೆಗೆ ಜನರನ್ನು ಗುರಿಪಡಿಸುವುದು. ಇದರ ಪರಿಣಾಮ? ಬೆಲೆ ಏರಿಕೆ! ಯಾರು ಇದಕ್ಕೆ ಬಲಿ? ಜನರು. ಅಫ್‌ಕೋರ್ಸ್!!

ಫಜಲ್ ತಲೆ ಒದರಿಕೊಂಡ. ಛೇ! ಇದೆಂತಹ ಬಾಳು! ಭಾರತದ ಶ್ರೀಮಂತ ಬ್ರೂಟ್‌ಗಳೆಲ್ಲಾ ಕೇವಲ 10 ಹಣವನ್ನು ಹೊರಹಾಕಿದರೆ ಪ್ರಾಯಶಃ ಐ.ಎಮ್.ಎಫ್. ಎದುರಿಗೆ ದೇಶವು ಭಿಕ್ಷೆಗೆ ಕೈಯೊಡ್ಡುವ ವೈಪರೀತ್ಯ ಉಂಟಾಗದು. ಆಸ್ತಿಯ ಸ್ವಯಂ ಘೋಷಣೆ ಇದನ್ನು ಸಾಬೀತು ಪಡಿಸಿದೆ. ಭಯಗೊಂಡ ಶ್ರೀಮಂತರು ಆಸ್ತಿ ವಿವರ ಘೋಷಿಸಿದರೆ ತೆರಿಗೆ ನೀಡಿದರೆ ಸಾಲದು.

ಶ್ರೀಮಂತ ಭಂಡರು ಎಷ್ಟು ಕಪ್ಪು ಹಣ ಹೊಂದಿದ್ದಿರಬಹುದು?

ತನ್ನದೇನಿದ್ದರೂ ಒಂದು ಚಿಕ್ಕ ತರಂಗ ಎಬ್ಬಿಸುವ ಕೆಲಸವಷ್ಟೇ. ದೊಡ್ಡ ದೊಡ್ಡ ಕಳೆ ಕಿತ್ತೆಸೆಯುವಾಗ ಕೆಲವು ಉಪಯೋಗೀ ಸಸ್ಯಗಳು ‘ತ್ಯಾಗಿ’ಗಳಾಗಲೇಬೇಕು.

ಪಾಲ್‌ನ ವಿಷಯದಲ್ಲಿ ಈ ಯಥಾರ್ಥ ನಡೆದಿದೆ.

ಪಾಪ! ತನ್ನ ಜೀವನವನ್ನೇ ಈ ಯಜ್ಞಕ್ಕೆ ಬಲಿನೀಡಿದ್ದಾನೆ ಪಾಲ್!

# 3

ಮಿತ್ರಜೀತ್ ಮನೆ ಸೇರಿ ಪಾಲ್‌ನ ಲೇಖನ ಓದಿದ. ಅವನ ಕುತ್ತಿಗೆಯ ಮೇಲಿನ ರೋಮಗಳು ನಿಮಿರಿ ನಿಂತವು. ಈ ಲೇಖನ ಪ್ರಕಟಿಸಲು ಮುಂದಾದ ಪತ್ರಿಕೆಯ ಧೈರ್ಯವನ್ನು ಮೆಚ್ಚದಿರದಾದ ಮಿತ್ರಜೀತ್. ಒಂದು ಲೇಖನ ಪ್ರಕಟಿಸಲು ಅನೇಕ ಅಡಚಣೆಗಳು ಎದುರಾಗುತ್ತವೆ. ಜನತೆಯ ನೆನಪಿನ ಶಕ್ತಿ ಬಹಳವೇ ಬೇಗ ಕ್ಷೀಣಿಸುವ ವಿಷಯ ಸರ್ವರಿಗೂ ತಿಳಿದಿದ್ದೇ. ಕೆಲವು ದಿನಗಳ ನಂತರ ಆ ಸ್ಮೃತಿ ನಿನ್ನೆಯ ಸುದ್ದಿಯಾಗಿಬಿಡುತ್ತದೆ. ಆದರೂ 'ದೊಡ್ಡ' ಮನುಷ್ಯರಿಗೆ ಪೇಪರ್‌ನವರ ಭಯವಿದೆ (ಗೌರವ ಎಂದು ಹೇಳಿಕೊಳ್ಳುತ್ತಾರೆ!) ಪ್ರಜೆಗಳ ಕಣ್ಣಲ್ಲಿ ಕೀಳಾಗುವ ಇಷ್ಟವಿಲ್ಲ.

ಪಾಲ್‌ನ ಪರಿಶೋಧ ಬೆಚ್ಚಿಸುವಂತಹದ್ದು. ರಾಜ್ಯದ ಮಂತ್ರಿಯೊಬ್ಬ ಉರುಳಿ ಬೀಳಬಹುದು. ಅವನು ಧರೆ ಮುಟ್ಟುವ ಮೊದಲು ಮತ್ತೆ ಕೆಲವರನ್ನು ತನ್ನೊಂದಿಗೆ ಎಳೆಯಬಹುದು.

ನಿಜ ಹೇಳಬೇಕೆಂದರೆ ಪಾಲ್‌ನ ರಚನೆಯಲ್ಲಿ ಯಾವುದೇ ಹೆಸರನ್ನು ಉಲ್ಲೇಖಿಸಿಲ್ಲ. ಬುದ್ಧಿವಂತ ಓದುಗರು ಸ್ವಲ್ಪ ಆಲೋಚಿಸಿದರೆ ಯಾರು 'ಕಳ್ಳ'ರೆಂದು ಸುಲಭವಾಗಿ ಊಹಿಸಬಲ್ಲರು.

ಲೇಖನದ ಕೊನೆಗೆ 'ಮತ್ತೊಂದು ವಿಸ್ಫೋಟಕಾರಿ ವರದಿ ಸಿದ್ಧವಾಗುತ್ತಿದೆ. ಅದರಿಂದ ಅನೇಕ ಲಂಚಕೋರರು ಉರುಳಲಿದ್ದಾರೆ' ಎಂದು ಪಾಲ್ ಬರೆದಿದ್ದ. ಆದರೆ ತಾನೇ ಹೆಣವಾಗಿ ಉರುಳಿಹೋಗಿದ್ದ.

ಯಾವುದಾದರೂ ಷಡ್ಯಂತ್ರದಿಂದ ಪಾಲ್ ಸತ್ತನೇ? ಈ ಘಟನೆಯ ಆಳ ಇನ್ನೂ ಹೆಚ್ಚಾಗಿದೆಯೇ? ಈ ಲೇಖನದಲ್ಲಿ ಬರುವ ಯಾರದಾದರೂ ಕೈವಾಡ ಇದೆಯೇ? ಅಥವಾ... ಮುಂದಕ್ಕೆ ಅವನಿಗೆ ಯೋಚಿಸಲಾಗಲಿಲ್ಲ. ಈಗ ಅವನ ಆಲೋಚನೆ ಬೇರೆ ದಿಕ್ಕಿನಲ್ಲಿ ಹರಿದಿತ್ತು...

ಪೋಸ್ಟ್ ಮಾರ್ಟಂ ಆಗಬೇಕಾದ ಪಾಲ್‌ನ ಹೆಣದಿಂದ ಡಾ.ಶಶಿಭೂಷಣ್‌ನನ್ನು ಹೇಗೆ ದೂರ ಇಡುವುದು? ಡಾ.ಅಂಶುಮಂತನಿಗೆ ಸ್ಪಷ್ಟವಾಗಿ ಹೇಳಿ ಆಗಿದೆ. ಏನು ಮಾಡಬೇಕೆಂದು. ಆದರೆ ಅವನು ತುಂಬಾ ಮೃದು ಮನುಷ್ಯ. ಅವನಿಗಿದು ಸಾಧ್ಯವಾಗುವುದೇ?

ಡಾ.ಅಂಶುಮಂತನ ಕರೆಗಾಗಿ ಮಿತ್ರಜೀತ್ ನಿರೀಕ್ಷಿಸಿದ. ಆದರೆ ಆ ಕರೆ ಬರಲಿಲ್ಲ. ಅದರರ್ಥ ಅವನಿಗೆ ಒಪ್ಪಿಸಿದ ಕೆಲಸವನ್ನು ಅಂಶುಮಂತ್ ಮಾಡಲಾಗದೇ ಹೋಗಿರುವನೇ?

ಮಿತ್ರಜೀತ್ ಚಡಪಡಿಸಿದ. ಅವನಿಗೆ ಅಲ್ಲಿಯೇ ಕುಳಿತು ಪ್ರತೀಕ್ಷೆ ಮಾಡುವುದರಲ್ಲಿ ಅರ್ಥ ಕಾಣಿಸಲಿಲ್ಲ. ಅಂಶುಮಂತನ ಬಳಿ ತನ್ನ ನಂಬರ್ ಇದೆ. ಅದಕ್ಕೆ ಸಂದೇಶ ನೀಡಲು ಅಂಶುಮಂತ ಕಷ್ಟವೇನೂ ಪಡಬೇಕಿಲ್ಲ.

ಆಸ್ಪತ್ರೆಗೆ ಬೈಕ್ ಓಡಿಸಿದ ಮಿತ್ರಜೀತ್. ಸಮಯದ ಘಳಿಗೆಗಳು ಕ್ಷಣಕ್ಷಣಕ್ಕೂ ಉರುಳಿ ಹೋಗುತ್ತಿದ್ದವು. ಬೈಕ್ ಪಾರ್ಕ್ ಮಾಡಿ ಸ್ಟಾಫ್ ರೂಮಿಗೆ ತೀವ್ರಗತಿಯಲ್ಲಿ ಓಡಿದ.

ಹಠಾತ್ತನೆ ಕಲ್ಲಿನಂತೆ ನಿಂತುಬಿಟ್ಟ! ಮೊಟ್ಟಮೊದಲು ಅವನ ಕಣ್ಣಿಗೆ ಬಿದ್ದವನು ಡಾ.ಶಶಿಭೂಷಣ್!

ಅವನ ಕಂಗಳು ಡಾ.ಅಂಶುಮಂತನ ದೃಷ್ಟಿಯನ್ನು ಸೇರಲೂ, ಆ ಮನುಷ್ಯ ಕಣ್ಣಳಲ್ಲಿನ ಭಾವವನ್ನು ಓದಲೂ ಯತ್ನಿಸಿದವು. ಅಂಶುಮಂತನ ನೋಟ ತಕ್ಷಣವೇ ಬೇರೆಡೆಗೆ ತಿರುಗಿತ್ತು.

ಶಶಿಭೂಷಣನ ವದನದ ಮೇಲೆ ವಿಜಯಗರ್ವದ ಕಳೆಯಿತ್ತು.

"ಹಲೋ ಮಿ. ಮಿತ್ರಜೀತ್!" ಎಂದ ಶಶಿಭೂಷಣ ಬಹಳವೇ ಮರ್ಯಾದಾಪೂರ್ವಕವಾಗಿ.

ಆ ಅತಿ ಮರ್ಯಾದೆ ಮಿತ್ರಜೀತ್‌ನ ಮೆದುಳಿನಲ್ಲಿ ಸಂಶಯದ ವೃಕ್ಷವನ್ನೇ ಹುಟ್ಟುಹಾಕಿತ್ತು. ಆದರೆ ಒಳಗೊಳಗೇ ಕುದಿಯುವ ಹೊರತಾಗಿ ಬೇರೇನೂ ಮಾಡಲಾಗಲಿಲ್ಲ ಅವನಿಗೆ.

"ಹಲೋ ಡಾಕ್ಟರ್. ಏನು ಸಮಾಚಾರ?" ಕೂಲಾಗಿ ಕೇಳಲು ಬಹಳವೇ ಕಷ್ಟಪಟ್ಟ ಮಿತ್ರಜೀತ್.

"ಸಮಾಚಾರಾ? ಹ್ಞಾಂ.. ನಿಮ್ಮ ಗೆಳೆಯ ಪಾಲ್ ಕೊಲೆಗೀಡಾಗಿದ್ದಾನೆ"

"ಏನೂ?"

ಆಟಾಪ್ಸಿ ವರದಿಯನ್ನು ಆ ರೀತಿಯಲ್ಲಿ ಆ ಡಾಕ್ಟರ್ ನೀಡುವನೆಂದು ಕನಸು ಮನಸಿನಲ್ಲಿಯೂ ಎಣಿಸಿರಲಿಲ್ಲ ಮಿತ್ರಜೀತ್. 'ಸ್ವಾಭಾವಿಕ ಮರಣ' ಎಂದೇ ಹೇಳುವನೆಂದು ಮಿತ್ರಜೀತ್ ನಂಬಿದ್ದ. ಡಾ.ಶಶಿಭೂಷಣ್ ಅವನ ನಂಬಿಕೆಯ ಬುಡವನ್ನು ತಲೆಕೆಳಗಾಗಿಸಿದ್ದ.

"ಯಾವ ಆಯುಧದ ಉಪಯೋಗವಾಗಿದೆ ಡಾಕ್ಟರ್?"

"ತಲೆಯ ಹಿಂಭಾಗದಲ್ಲಿ ಭಾರೀ ಪೆಟ್ಟು ಬಿದ್ದಿದೆ"

"ಆದರೆ... ಮಣಿಕಟ್ಟುಗಳ ಮೇಲಿನ ಗಾಯಗಳು, ಪಾದಗಳ ಅಡಿಯ ಸಿಗರೇಟಿನಿಂದ ಸುಟ್ಟ ಗುರುತುಗಳು...?" ಬಡಕ್ಕನೆ ಕೇಳಿದ್ದ ಮಿತ್ರಜೀತ್. ಅದೇಕೋ ಅವನಿಗಿದು ಬರಿಯ ಕೊಲೆ ಎಂದೆನಿಸಿರಲಿಲ್ಲ.

"ಮೈ ಡಿಯರ್ ಜರ್ನಲಿಸ್ಟ್! ನೀವು ನಿಮ್ಮ ಕಲ್ಪನೆಯನ್ನು ಎಷ್ಟು ದೂರ ಓಡಿಸ್ತೀರೆಂದರೆ ವಾಸ್ತವ ಮೈಲು ದೂರ ಓಡಿರುತ್ತೆ. ನಾನು ವಾಸ್ತವದ ಬಗ್ಗೆ ಹೇಳ್ತಿದ್ದೀನಿ. ಮೈ ಮೇಲೆ ಗಾಯವಾಗಲೀ, ಸುಟ್ಟ ಗುರುತಾಗಲೀ ಇಲ್ಲ. ಇದು 'ಬೀಟನ್ ಟು ಡೆತ್' ಕೇಸ್. ಯಾರೋ ಬಲವಾಗಿ ಹೊಡೆದಿದ್ದಾರೆ"

"ಯಾವುದರಿಂದ?"

"ಕಬ್ಬಿಣದ ರಾಡ್. ತೀರಾ ಹತ್ತಿರದಿಂದ ಹೊಡೆದಿದ್ದಾರೆ. ಬಲವಾಗಿಯೂ ಏಟು ಬಿದ್ದಿದೆ. ಆಸ್ಪತ್ರೆಗೆ ಆ ಏಟಿನೊಂದಿಗೆ ಬದುಕಿ ಬಂದಿರೋದೇ ವಿಶೇಷ ಮತ್ತು ಆಶ್ಚರ್ಯ"

"ಅಂದರೆ ಏಟು ಅವನಿಗೆ ಗೊತ್ತಿಲ್ಲದೇ ಬಿದ್ದಿದೆಯೇ?" ಮಿತ್ರಜೀತ್ ಕೇಳಿದ.

ಪಾಲ್‌ನ ಮುಖದ ಮೇಲಿನ ನೋವಿನ ಛಾಯೆಯ ನೆನಪು ಅವನಿಗೆ ನುಗ್ಗಿ ಬಂದಿತು.

"ನೋ! ನಾನು ಹಾಗೆ ಅಂದುಕೊಳ್ಳೋಲ್ಲ. ಯಾರೋ ತಿಳಿದವರು ಮಾಡಿರುವ ಕೆಲಸ"

"ಯಾರು ಮಾಡಿದ್ದಿರಬಹುದು?" ಅಪ್ರಯತ್ನವಾಗಿ ಅವನ ಬಾಯಿಯಿಂದ ಹೊರಬಿತ್ತು.

"ಅದು..." ಪೈಶಾಚಿಕ ನಗೆ ನಕ್ಕು ಶಶಿಭೂಷಣ್ ಮಿತ್ರಜೀತ್‌ನ ಹೆಗಲ ಮೇಲೆ ತಟ್ಟಿ, "ನಿಮ್ಮ ಕೆಲಸ. ನೀವು ಕಂಡುಹಿಡೀರಿ" ಎಂದು, ನಂತರ ಮನಸ್ಸು ಬದಲಾಯಿಸಿ, "ಪೊಲೀಸರಿಗೆ ಬಿಡಿ. ಅವರು ಕಂಡುಹಿಡೀತಾರೆ" ಎಂದ.

ಈ ಜಾರಿಕೆಯ ಮಾತಿನ ಮನುಷ್ಯನೊಂದಿಗೆ ಮಾತಾಡುವುದಿರಲಿ, ಮುಖ ನೋಡಲೂ ಅಸಹ್ಯವೆನಿಸಿತು ಮಿತ್ರಜೀತ್‌ಗೆ. ಆದರೆ ಪೋಸ್ಟ್‌ಮಾರ್ಟಂ ರಿಪೋರ್ಟ್ ಅವನಿಗೆ ಬೇಕಿತ್ತು. ಅದನ್ನೇ ಕೇಳಿದ.

"ಅದಾ! ಡಾ.ಅಂಶುಮಂತ್ ಕೊಡ್ತಾರೆ" ಎಂದು ಹೇಳಿ ಅಲ್ಲಿಂದ ನಿರ್ಗಮಿಸಿದ ಶಶಿಭೂಷಣ್.

ಅಂಶುಮಂತ್ ಇವನನ್ನು ನಗೆಮೊಗದೊಂದಿಗೆ ಸ್ವಾಗತಿಸಲೆತ್ನಿಸಿ, ಸೋತ. ಮಿತ್ರಜೀತ್ ಅವನನ್ನು ಅರ್ಥಮಾಡಿಕೊಂಡ. ಈ ಮನುಷ್ಯ ಬಹಳವೇ ಬಲಹೀನ. ಜೊತೆಗೆ ಇವನಿಗೆ ಅವನ ಕೆಲಸ ಮುಖ್ಯ. ಈ ಉದ್ಯೋಗ ಹೋದರೆ ಬೇರೆ ಕೆಲಸವಿಲ್ಲವೆಂದೂ ಅರಿತಿರುತ್ತಾನೆ. ಹಾಗೆ ಕೆಲಸವಿಲ್ಲದಿದ್ದಲ್ಲಿ ಹಸಿವೆಯಿಂದ ಸತ್ತು ಹೋಗುವನೆಂದೆಣಿಸಿರುತ್ತಾನೆ. ನೈಜತೆಯಲ್ಲಿ ಅದೃಷ್ಟ ಎಂದೂ ಧೈರ್ಯವಂತರನ್ನು ಇಷ್ಟಪಡುತ್ತದೆ.

ತೇ ನ ವಿನಾ ತೃಣಮಪಿ ನ ಚಲತಿ - ಹುಟ್ಟಿಸಿದ ದೇವರು ಹಲ್ಲು ಮೇಯಿಸಿಯಾನೇ.

ಈ ಎರಡೂ ವಾಕ್ಯಗಳಲ್ಲಿ 'ಹುಲ್ಲು' ಉಲ್ಲೇಖಗೊಂಡಿದೆ. ದೇವರು ಏನಾದರೂ ಹೇಳಲು ಇಚ್ಛಿಸಿರುವನೇ ಈ ಎರಡು ವಾಕ್ಯಗಳ ಮೂಲಕ? ಅರ್ಥ ಮಾಡಿಕೊಳ್ಳುವವರು ಅರ್ಥ ಮಾಡಿಕೊಳ್ಳುತ್ತಾರೆ. ಉಳಿದವರು ದಡ್ಡರು.

"ಪೋಸ್ಟ್ ಮಾರ್ಟಂ ಕಾಪಿ ಕೊಡಿ ಡಾ. ಅಂಶುಮಂತ್" ಎಂದ ನಿರ್ಭಾವದಿಂದ.

ವಾಸ್ತವವಾಗಿ ಈ ಗುಬ್ಬಚ್ಚಿಯನ್ನು ಬೆದರಿಸುವ ಇಷ್ಟವಾಗಲಿಲ್ಲ ಮಿತ್ರಜೀತ್‌ಗೆ.

"ಮಿತ್ರಜೀತ್! ನಿನಗೆ ನನ್ನ ಮೇಲೆ ಕೋಪ ಬಂದಿದೇಂತ ನನಗೆ ಗೊತ್ತು. ಆದರೆ ಏನು ಮಾಡಲಿ? ನನಗೆ ಬೇರೆ ದಾರಿ ಇರಲಿಲ್ಲ ಅವನಿಗೆ ಫೋನಿನಲ್ಲಿ ಅವನ ಸಂಸಾರಕ್ಕೆ ಏನೋ ತೊಂದರೆ ಆಗಿದೆ ಅಂತ ಸುಳ್ಳು ಹೇಳಿದ್ದರೂ ಅವನು ವಾಪಸ್ಸು ಬಂದುಬಿಟ್ಟ. ಅವನ ಸಂಸಾರ ಬೇರೆ ಊರಲ್ಲಿದೆ. ಅದಕ್ಕೇ ಈ ಉಪಾಯ ಮಾಡ್ದೆ. ಆದರೆ ಪ್ರಯೋಜನವಾಗಲಿಲ್ಲ"

ಮಿತ್ರಜೀತ್ ಆಲೋಚನಾಮಗ್ನನಾಗಿ "ಇದರರ್ಥ ಇವರುಗಳ ತೋಳು ಬಹಳವೇ ಉದ್ದ ಇದೆ ಅಂತಾಯ್ತು" ಎಂದ.

"ಇವರು ಎಂದರೆ ಯಾರು?" ಕೇಳಿದ ಅಂಶುಮಂತ.

'ನನಗೇ ಗೊತ್ತಿಲ್ಲದಿರುವಾಗ ನಿನಗೇನು ಹೇಳಲಿ?' ಎಂದು ಮನಸ್ಸಿನಲ್ಲಿ ಅಂದುಕೊಂಡ ಮಿತ್ರಜೀತ್, "ಡಾ.ಅಂಶುಮಂತ್! ಯಾವುದಾದರೂ ಟಾರ್ಚರ್ ಮಾರ್ಕುಗಳಿವೆಯಾ?" ಕೇಳಿದ.

ಅಂಶುಮಂತನ ಮುಖ ಕಪ್ಪಾಯಿತು. ಬಹಳವೇ ಹಿಂದೆಗೆತ ಕಂಡಿತು ಅವನ ಚರ್ಯೆಯಲ್ಲಿ.

ಮಿತ್ರಜೀತ್ ಅವನನ್ನು ಒಂದು ಮೂಲೆಗೆ ಕರೆದೊಯ್ದ. ಅಲ್ಲಿ ಕತ್ತಲಿತ್ತು. ಬಲ್ಬ್ ಹಾಳಾಗಿದ್ದರೂ ಅದನ್ನು ಬದಲಿಸಿರಲಿಲ್ಲ.

"ಹೇಳಿ ಡಾಕ್ಟರ್! ಇದು ಸಾವು ಬದುಕಿನ ಪ್ರಶ್ನೆ" ಎಂದ.

ಹಠಾತ್ತನೆ ಅಂಶುಮಂತ ಭೋರಿಟ್ಟು ಮಿತ್ರಜೀತ್‌ನನ್ನು ವಿಸ್ಮಯಕ್ಕೆ ಒಳಪಡಿಸಿದ.

"ಹೇ ಡಾಕ್ಟರ್, ಏನಾಯ್ತು? ಮರ್ಮಾಘಾತ ಆಯ್ತಾ?" ಮಿತ್ರಜೀತ್ ಬಹಳವೇ ಗಲಿಬಿಲಿಗೊಂಡಿದ್ದ ಈ ಭೋರಿಡುವಿಕೆಯಿಂದ.

ಕೆಲವು ಕ್ಷಣಗಳ ನಂತರ ಸ್ವಲ್ಪ ಚೇತರಿಸಿಕೊಂಡ ಅಂಶುಮಂತ ಮಿತ್ರಜೀತ್‌ನ ಕೈ ಹಿಡಿದು, "ನಿನಗೆ ಸಹಾಯ ಮಾಡೋ ಒಂದು ಅವಕಾಶ ಸಿಕ್ಕಿತ್ತು. ಅದನ್ನೂ ಉಪಯೋಗ ಮಾಡಿಕೊಳ್ಳಲಿಲ್ಲ ನಾನು" ಎಂದ ಬೇಸರದಿಂದ. ಅವನ ಮೇಲೆಯೇ ಅವನಿಗೆ ಮರುಕ ಉಂಟಾಗಿತ್ತು. "ಪರವಾಗಿಲ್ಲ ಬಿಡು. ವ್ಯವಸ್ಥೆಗೆ ವಿರುದ್ಧವಾಗಿ ಹೋರಾಡುವಾಗ ವಿಫಲತೆ ಜಾಸ್ತೀನೇ ಇರುತ್ತೆ. ಸೋ, ನಿನ್ನ ವೈಫಲ್ಯವು ಆಶ್ಚರ್ಯ ತರುವಂತಹದ್ದೇನೂ ಅಲ್ಲ" ಎಂದ ಮಿತ್ರಜೀತ್.

ಅಂಶುಮಂತ ಮೌನವಾಗಿರಲು ನಿರ್ಧರಿಸಿದಂತಿತ್ತು.

"ನಿಜ ಹೇಳು, ಹಿಂಸಾಚಾರದ ಗುರುತುಗಳಿವೆಯಾ?" ಕೇಳಿದ ಮಿತ್ರಜೀತ್.

"ಹೌದು" ಮೆಲ್ಲನುಸುರಿದ.

"ಇನ್ನೊಂದು ಪ್ರಶ್ನೆ"

ಅಂಶುಮಂತ ತಲೆ ಎತ್ತಿ ನೋಡಿದನಷ್ಟೇ.

"ನಾನು ಡೆಡ್ ಬಾಡೀನ ನೋಡಬಹುದಾ?"

"ಇಲ್ಲ"

"ಯಾಕೆ?"

"ತುಂಬಾ ಬುದ್ಧಿವಂತಿಕೆಯಿಂದ ತಲೆ ಗಾಯವನ್ನು ಬಿಟ್ಟು ಬೇರೆಲ್ಲವನ್ನೂ ಮುಚ್ಚಿಬಿಟ್ಟಿದ್ದಾರೆ"

"ನೀನು ಅದನ್ನು ಸಾಬೀತು ಮಾಡಬಲ್ಲೆಯಾ?"

"ಹೂಂ. ಆದರೆ..." ಅವನಲ್ಲಿ ಮತ್ತೆ ಹಿಂದೆಗೆತ. ಉಹೂಂ. ಅದು ಹಿಂದೆಗೆತವಲ್ಲ, ಭಯ!

ಡಾಕ್ಟರನ ಮೇಲೆ ಕರುಣೆ ಉಂಟಾಗಿತ್ತು. "ನೋಡು, ಡಾ.ಅಂಶುಮಂತ್! ಸತ್ಯ ಎಂದಿದ್ದರೂ ಜಯವನ್ನು ಪಡೆದೇ ತೀರುತ್ತದೆ. ನನಗೆ ಅವಕಾಶ ಸಿಕ್ಕರೆ ಬಾಡಿಯನ್ನು ಮತ್ತೆ ಹೊರತೆಗೆಸಬಲ್ಲೆ. ಸೋ, ನೀನು ನನಗೆ ಆ ಹಿಂಸೆಯ ಗುರುತುಗಳನ್ನು ತೋರಿಸು" ಮಿತ್ರಜೀತ್‌ನ ಸ್ವರದಲ್ಲಿ ಮೃದುತ್ವ, ಗೆಳೆತನದ ಛಾಯೆಗಳಿದ್ದವು.

"ತೋರಿಸ್ತೀನಿ. ಆದರೆ ಈ ವಿಷಯ ಯಾರಿಗೂ ತಿಳಿಯಬಾರದು. ನನ್ನನ್ನು ನಂಬಿಕೊಂಡಿರೋ ಸಂಸಾರ ಇದೆ ನನಗೆ"

ಅವನು ಒಪ್ಪಿದನೆಂಬಂತೆ ತಲೆದೂಗಿದ. ಅಲ್ಲಿ ಸಧ್ಯಕ್ಕೆ ಮಾಡಲು ಬೇರೇನೂ ಸಾಧ್ಯವಿಲ್ಲದ್ದರಿಂದ ಅಲ್ಲಿಂದ ಹೊರಬಿದ್ದ.

ಅದೇಕೋ ಅವನಿಗೆ ಆಗ ಲೊರೆಟ್ಟಾಳ ನೆನಪು ಬಂದಿತ್ತು. ಅವಳು ಪಾಲ್‌ನನ್ನು ಭೇಟಿ ಮಾಡಿದ ಕೊನೆಯ ವ್ಯಕ್ತಿ. ಅವಳೇನು ಹೇಳಿದ್ದಳು? 'ಪಾಲ್ ಈಸ್ ಸಿಂಕಿಂಗ್'.

ಅಂದರೆ ಅವನು ಬದುಕಿದ್ದಾಗ ಅವನನ್ನು ಅವಳು ಭೇಟಿಯಾಗಿದ್ದಿರಬೇಕು. ಇದು ಮೆದುಳನ್ನು ಹೊಕ್ಕೊಡನೆ ಲೊರೆಟ್ಟಾಳನ್ನು ಭೇಟಿ ಆಗಲು ವೇಗವಾಗಿ ಹೋದ. ಅಲ್ಲಿಗೆ ಹೋದ ಮೇಲೆ ಅವಳಲ್ಲಿ ಇಲ್ಲವೆಂದು ಅರಿವಾಯಿತು.

‘ಪೊಲೀಸ್ ಸ್ಟೇಷನ್‌ಗೆ ಹೋಗಿದ್ದಾರೆ’ ಎಂಬ ಸಂದೇಶ ಮಾತ್ರ ಮಿತ್ರಜೀತ್‌ಗೆ ಸಿಕ್ಕಿತ್ತು. ಯಾವ ಪೊಲೀಸ್‌ಠಾಣೆ ಎಂದು ತಿಳಿದುಕೊಂಡು ಅಲ್ಲಿಗೇ ಹೋದ.

ಅವಳಲ್ಲಿ ಇದ್ದಳು. ಸಂಪೂರ್ಣವಾಗಿ ಸೊರಗಿದಂತಾಗಿದ್ದಳು. ಮಿತ್ರಜೀತ್‌ನನ್ನು ಕಂಡೊಡನೆ ಅವನತ್ತ ಧಾವಿಸಿ ಬಂದು ಅವನ ಕೈ ಹಿಡಿದು ಬಳಬಳನೆ ಅತ್ತಳು.

“ಹೇಳಿ ಮಿತ್ರಜೀತ್! ಒಂದು ದಿನದಲ್ಲಿ ನಾನು ಅನುಭವಿಸಿರೋ ಟ್ರ್ಯಾಜಿಡಿಗಳ ಬಗ್ಗೆ ಊಹಿಸಬಲ್ಲಿರಾ?” ಕೇಳಿದಳು. ಅವಳ ಅಳು ನಿಯಂತ್ರಣಕ್ಕೆ ಬರಲೇ ಇಲ್ಲ. ಮಿತ್ರಜೀತ್ ಅವಳನ್ನು ಮೃದುವಾಗಿ, ಆದರೆ ಸುರಕ್ಷಿತವಾಗಿ ಹಿಡಿದುಕೊಂಡು ಪೊಲೀಸ್‌ಠಾಣೆಯ ಹೊರಕ್ಕೆ ಕರೆದೊಯ್ದ.

ಇನ್ನೂ ಕೆಲವು ಕ್ಷಣಗಳ ಕಾಲ ಅವಳಣ್ನು ರೋಧಿಸಲು ಬಿಟ್ಟು ನಂತರ ಕೇಳಿದ.

“ಈಗ ಹೇಳಿ, ಏನಾಯ್ತು?”

“ನನಗೀವತ್ತು ಡಬ್ಬಲ್ ಷಾಕ್. ಒಂದು ಕಡೆ ನನ್ನ ಆತ್ಮೀಯ ಸ್ನೇಹಿತ ಸತ್ತಿದ್ದಾನೆ. ಇನ್ನೊಂದು ಕಡೆ ನನ್ನ ಗಂಡನನ್ನು ಪೊಲೀಸರು ಕೊಲೆ ಆಪಾದನೆ ಮೇಲೆ ಅರೆಸ್ಟ್ ಮಾಡಿದ್ದಾರೆ”

ಮಿತ್ರಜೀತ್ ಸ್ತಂಭೀಭೂತನಾದ. “ಯಾರನ್ನು ಕೊಲೆ ಮಾಡಿದ್ದಾರೆ ನಿಮ್ಮ ಪತಿ?”

“ನಾನು ಹೇಳಿದರೂ ನೀವು ನಂಬೋಲ್ಲ. ನನ್ನ ಪತಿ ಸಿಲ್ವೆಸ್ಟರ್‌ನ್ನ ಪಾಲ್‌ನ ಕೊಲೆಗಾರ ಅಂತ ಅರೆಸ್ಟ್ ಮಾಡಿದ್ದಾರೆ”

“ಏನೂ?” ಮಿತ್ರಜೀತ್ ಬಾಯಿಯಿಂದ ಬೇರಾವ ಶಬ್ದವೂ ಬರಲು ಯತ್ನಿಸಲಿಲ್ಲ.

# 4

ತುಂಬಾ ಸಮಯದ ನಂತರ, ಅನೇಕ ಕಾನೂನಿನ ಕಟ್ಟಳೆಗಳ ಪಾಲನೆಯ ನಂತರ ಸಿಲ್ವೆಸ್ಟರ್‌ನನ್ನು ಮಿತ್ರಜೀತ್ ಭೇಟಿಯಾದ. ಈ ಆಪಾದನೆ ಸಿಲ್ವೆಸ್ಟರ್‌ನನ್ನು ಆಘಾತಕ್ಕೊಳಪಡಿಸಿತ್ತು. ಮಿತ್ರಜೀತ್‌ಗೆ ಏಕೋ ಸಿಲ್ವೆಸ್ಟರ್ ಪಾಲ್‌ನ ಕೊಲೆ ಮಾಡಿರುವನೆನ್ನಿಸಲಿಲ್ಲ.

ಅವನಿಗೆ ಸಿಲ್ವೆಸ್ಟರ್ ಬಹಳ ಕಾಲದಿಂದ ಪರಿಚಿತ. ಅವನೊಬ್ಬ ವಾಣಿಜ್ಯೋದ್ಯಮಿ. ನ್ಯೂಸ್‌ಪ್ರಿಂಟ್ ಬಿಜಿನೆಸ್‌ನಲ್ಲಿದ್ದಿದ್ದರಿಂದ ಪತ್ರಿಕಾರಂಗದ ಬಹಳ ಜನ ಅವನಿಗೆ ಗುರುತಿದ್ದರು.

ಪೊಲೀಸರು ಸಿಲ್ವೆಸ್ಟರ್‌ನನ್ನು ಬಹಳ ಹೊತ್ತು ಭೇಟಿ ಆಗಲು ಬಿಡಲಿಲ್ಲ. ಮಿತ್ರಜೀತ್ ಮನಸ್ಸಿನಲ್ಲಿಯೇ ಅಂದುಕೊಂಡ.- 'ಪೊಲೀಸ್ ಇಲಾಖೆಯ ಮೇಲಧಿಕಾರಿಗಳನ್ನು ಭೇಟಿಯಾಗಿ, ಸಿಲ್ವೆಸ್ಟರೊನ್ನಂದಿಗೆ ಪ್ರತ್ಯೇಕ ಖಾಸಗಿ ಇಂಟರ್ರ್ವ್ಯೂಗೆ ಪರವಾನಗಿ ಪಡೆಯಬೇಕು'

ಇನ್ನು ಇಪ್ಪತ್ತನಾಲ್ಕು ಗಂಟೆಗಳೊಳಗೆ ಸಿಲ್ವೆಸ್ಟರ್‌ನನ್ನು ನ್ಯಾಯಾಲಯದಲ್ಲಿ ಹಾಜರು ಪಡಿಸಬೇಕು. ಅಷ್ಟರಲ್ಲಿ ಅವನು ಪೊಲೀಸರ 'ವಿಶೇಷ ಆತಿಥ್ಯ'ಕ್ಕೆ ಒಳಗಾಗದಂತೆ ಬಂದೋಬಸ್ತ್ ಮಾಡಿದ ನಂತರವೇ ಮಿತ್ರಜೀತ್ ನಿಟ್ಟುಸಿರುಬಿಟ್ಟಿದ್ದು. ರಾತ್ರಿ ನೈಟ್‌ಡ್ಯೂಟಿಗೆ ಬರಲಿದ್ದ ಎಸ್.ಐ. ಮಿತ್ರಜೀತ್‌ನ ಪರಿಚಿತನಾಗಿದ್ದಿದ್ದರಿಂದ ಅನುಕೂಲವಾಗಿತ್ತು. ಚಿಕ್ಕ ವಿಷಯ ಕೂಡಾ ಅದೆಷ್ಟು ಸಹಕಾರಿ ಎಂದುಕೊಂಡ ಮಿತ್ರಜೀತ್.

ಕೊನೆಗೂ ಲೊರೆಟ್ಟಾಳೊಂದಿಗೆ ಅವಳ ಮನೆಯತ್ತ ಹೊರಟ ಮಿತ್ರಜೀತ್. ಬೈಕಿನಲ್ಲಿ ಅವನ ಹಿಂದೆ ಒಂದಿನಿತೂ ಆಲೋಚಿಸದೇ ಕುಳಿತಳು. ಅವಳ ಮನೆ ತಲುಪಿದಾಗ ಬೈಕಿನಿಂದಿಳಿದಳು. ಅವನು ಅವಳ ಪ್ರತಿಕ್ರಿಯೆ ನಿರೀಕ್ಷಿಸುತ್ತಾ ಬೈಕಿನ ಮೇಲೆಯೇ ಕುಳಿತಿದ್ದ.

ಈಗ ಅವಳು ತನ್ನನ್ನು ಮಾತುಕತೆಗೆ ಕರೆಯುವಳೇ?

ಅವಳೇನಾದರೂ ಆಹ್ವಾನವಿತ್ತರೆ ಅದು ಅವಳಿಗೆ, ಅವಳ ಪತಿ ಸಿಲ್ವೆಸ್ಟರ್‌ಗೆ, ಹಾಗೂ ಪಾಲ್‌ಗೆ ಕೂಡಾ ಒಳ್ಳೆಯದಾಗಬಹುದು. ಪಾಪ ಪಾಲ್! ಅವನೊಂದು ವಿಶೇಷ ಕಾರಣದಿಂದಾಗಿ ಜೀವ ತೆತ್ತ. ಈಗ ಅವನ ಗೆಳತಿ, ಅವಳ ಪತಿಗೆ ತೊಂದರೆ

ಆಗುತ್ತಿದೆ. ಆದರೆ ಅವನೇ ಈ ಕೃತ್ಯಕ್ಕೆ ಕಾರಣವೇ? ಇದನ್ನು ಕಂಡುಹಿಡಿಯಬೇಕು.

“ನೀವ್ಯಾಕೆ ಒಳಗೆ ಬಂದು ಒಂದು ಕಪ್ ಕಾಫಿ ಕುಡಿಯಬಾರದು? ನನಗಂತೂ ಅರ್ಜೆಂಟಾಗಿ ಕಾಫಿ ಬೇಕು. ಅಲ್ಲಿ ಆದ ತಾಪತ್ರಯ ನೋಡಿದ ಮೇಲೆ ಐ ಆಮ್ ಶ್ಯೂರ್, ನಿಮಗೂ ಒಂದು ಕಪ್ ಕಾಫಿ ಬೇಕೆನ್ನಿಸಿರಬೇಕು” ಪಟಪಟನೆ ಹೇಳಿದ್ದಳು ಲೊರೆಟ್ಟಾ.

ಅವನೂ ಒಡಂಬಡಿಸಿ ಬೈಕ್ ಪಾರ್ಕ್ ಮಾಡಿದ. ಅವಳು ಬೀಗ ತೆಗೆದು ಬಾಗಿಲು ನೂಕಿ ಒಳಗಿನ ಸ್ವಿಚ್ ಒತ್ತಿದಳು. ಬೆಳಕು ಮೂಡಿತು.

“ಬನ್ನಿ ಒಳಗೆ”

ಅವನು ಒಳನಡೆದ. ಹಾಲ್‌ನಲ್ಲಿದ್ದ ಸೋಫಾದ ಮೇಲೆ ಕುಳಿತ. ಬಹಳವೇ ಒಳ್ಳೆಯ ಅಭಿರುಚಿಯಿಂದ ಹಾಲ್ ಅಲಂಕರಿಸಲ್ಪಟ್ಟಿತ್ತು. ಅವನು ಅದನ್ನು ಮೆಚ್ಚಿಕೊಳ್ಳದಿರದಾದ.

“ಯೂ ಹ್ಯಾವ್ ಎ ಲವ್ಲೀ ಪ್ಲೇಸ್” ಮನಸಾರೆ ಹೇಳಿದ.

ಅವಳು ಫ್ರಿಜ್‌ನತ್ತ ಹೋಗುತ್ತಿದ್ದವಳು ಹಿಂದಕ್ಕೆ ತಿರುಗಿ, “ಥ್ಯಾಂಕ್ಸ್. ಆದರೆ ಇದರ ಅರ್ಧ ಕ್ರೆಡಿಟ್ ನನ್ನ ಪತಿ ಸಿಲ್ವೆಸ್ಟರ್‌ಗೆ ಸೇರಬೇಕು” ಎಂದು ಹೇಳಿ, ಫ್ರಿಜ್‌ನಿಂದ ಕಾಫಿ ಡಿಕಾಕ್ಷನ್ ತೆಗೆದುಕೊಂಡು, ಪಕ್ಕದ ಓಪನ್ ಕಿಚೆನ್ ಸೇರಿ, ಚಕಚಕನೆ ಕಾಫಿ ತಯಾರಿಸಿದಳು. ಟ್ರೇನಲ್ಲಿ ಎರಡು ಕಪ್ ಇಟ್ಟುಕೊಂಡು ಬಂದು, ಅವನಿಗೊಂದು ನೀಡಿ, ತಾನೊಂದು ತೆಗೆದುಕೊಂಡು, ಟ್ರೇಯನ್ನು ಟೀಪಾಯ್ ಮೇಲಿಟ್ಟು ಅವನೆದುರಿನ ಸೋಫಾದ ಮೇಲೆ ಆಸೀನಳಾದಳು.

ಕಾಫಿಯ ಹಬೆ, ರುಚಿ ಮೂಗು, ನಾಲಗೆ, ಗಂಟಲುಗಳನ್ನು ತಲುಪುತ್ತಿದ್ದಂತೆ ಒಂದು ರೀತಿಯ ಹಿತ ಅವರಿಬ್ಬರನ್ನೂ ಸುತ್ತುವರಿಯಿತು. ಲೊರೆಟ್ಟಾಳ ನಲುಗಿಹೋದ ದೇಹ, ಮನಗಳು ಈಗ ಮನಃಶ್ಶಾಂತಿ ಹೊಂದಿ ಕ್ರಮೇಣ ನಿದ್ರೆ ಮಾಡಲು ಉಪಕ್ರಮಿಸತೊಡಗಿದವು. ಅವಳು ನಿದ್ರೆಯೊಡನೆ ಹೋರಾಟ ನಡೆಸಿದಳು.

ಮಿತ್ರಜೀತ್ ಅವಳನ್ನೇ ಗಮನಿಸಹತ್ತಿದ. ಇವಳು ಪಾಲ್‌ನ ಪ್ರೇಮಿಯೇ? ಅವಳೆಷ್ಟು ಸಾಧಾರಣಳಾಗಿರುವಳೆಂದರೆ ಅವರಿಬ್ಬರ ನಡುವೆ ಯಾವುದೇ

ದೈಹಿಕ ಸಂಬಂಧ ಇದ್ದಂತೆ ಮಿತ್ರಜೀತ್‌ಗೆ ತೋಚಲಿಲ್ಲ. ಆದರೆ ಹಾಗೆ ನಿರ್ಧಾರಕ್ಕೆ ಬರಲು ಸಾಧ್ಯವಿಲ್ಲ.

ಯಾವ ಹುತ್ತದಲ್ಲಿ ಯಾವ ಹಾವೋ!

ಈ ಹಿನ್ನೆಲೆಯನ್ನು ಮನದಲ್ಲಿಟ್ಟುಕೊಂಡು ಅವಳನ್ನು ಕೆಲವು ನೇರ ಪ್ರಶ್ನೆಗಳನ್ನು ಕೇಳಲು ನಿರ್ಧರಿಸಿದ.

ಬಹಳವೇ ಸಾಮಾನ್ಯವಾಗಿ, "ಸಿಲ್ವೆಸ್ಟರ್ ಪಾಲ್‌ನ ಕೊಂದಿರಬಹುದೆಂದು ನಿಮಗನ್ನಿಸುತ್ತಿಲ್ಲವಾ?" ಎಂದ.

ಅವಳ ನಿದ್ರಾಮತ್ತು ಅವಳಿಂದ ಹಾರಿಹೋಗಿತ್ತು. ದಿಗ್ಭ್ರಮೆಯಿಂದ ಅವನತ್ತ ನೋಡಿದಳು.

ಮಿತ್ರಜೀತ್ ಅವಳನ್ನೇ ಗಮನಿಸುತ್ತಾ ನಿಡುಸುಯ್ದ. ಅವಳಿಗೆ ತಾನು ಶಾಕ್ ನೀಡಿರುವನೆಂದು ಅವನಿಗೆ ತಿಳಿದಿದೆ. ಆದರೆ ಅದು ಅವಶ್ಯಕ. ಅವಳಿಂದ ವಿವರವನ್ನು ತ್ವರಿತವಾಗಿ ತಿಳಿಯಬೇಕಿತ್ತವನು.

"ಮಿತ್ರಾ, ನನ್ನ ಸಿಲ್ವೆಸ್ಟರ್ ಒಂದು ಇರುವೆಗೂ ತೊಂದರೆ ಕೊಡಲಾರ!" ಆವೇಶಪೂರಿತಳಾಗಿ ಹೇಳಿದಳೂ.

"ಹಾಗಂತ ನೀವು ಹೇಳ್ತಿದ್ದೀರಿ"

"ವಾಟ್ ಡೂ ಯೂ ಮೀನ್?" ಅವಳು ಗಲಿಬಿಲಿ, ಉದ್ರೇಕಗಳೊಂದಿಗೆ ಹೇಳಿದಳು. ಕಾಫಿ ಕಪ್ ಅವಳ ಕೈಯಿಂದ ಬೀಳುವಂತಾಗಿ ತಕ್ಷಣವೇ ಸಾವರಿಸಿಕೊಂಡಳು.

"ಐ ಮೀನ್ ಕೆನ್ ಯೂ ಕನ್‌ವಿನ್ಸ್ ಕಡೇಪಕ್ಷ ಜಡ್ಜ್‌ಗೆ ಮನವರಿಕೆ ಮಾಡಿಕೊಡಬಲ್ಲೆಯಾ?" ಏಕವಚನ ಒಮ್ಮೆಗೇ ಹೊರಬಂದಿತ್ತು.

"ಏನಂತ?" ಅವನು ಏಕವಚನ ಉಪಯೋಗಿಸಿದ್ದಕ್ಕೆ ಅವಳಿಗೆ ಅಭ್ಯಂತರವಿದ್ದಂತಿರಲಿಲ್ಲ.

"ನಿನ್ನ ಪತಿ ನಿರಪರಾಧಿ ಅಂತ"

ಆ ಸತ್ಯದ ಬಿಸಿ ಅವಳನ್ನು ಸೋಕಿದೊಡನೆ ಅವಳು ಮಂಕಾದಳು. ಅವಳ ಮುಖ ನೋಡಿದ ಮಿತ್ರಜೀತ್‌ಗೆ ಅವಳ ಬಗ್ಗೆ ಮರುಕ ಉಂಟಾಯಿತು.

ಪತಿಯನ್ನು ಬಹಳವೇ ಪ್ರೇಮಿಸುವ ಯುವತಿಯ ಗೆಳೆಯನನ್ನು ಅವಳ ಪತಿಯೇ ಕೊಂದಿರುವನೆಂದು ಆಪಾದನೆ ಮಾಡಿದರೆ ಆ ಯುವತಿಯ ಗತಿಯೇನು? ಅವಳೂ ಪಾಲ್‌ನನ್ನು ಪ್ರೇಮಿಸುತ್ತಿದ್ದಳೇ? ಆ ಕಾರಣವೇ ಈ ಭೀಕರ ಕೊಲೆಗೆ ದಾರಿ ಮಾಡಿಕೊಟ್ಟಿತೇ?

"ನೀನು ಹೇಳಿದ್ದು ಸರಿ ಮಿತ್ರಾ! ಸಿಲ್ ನಿರಪರಾಧಿ ಅಂತ ಸಾಬೀತು ಮಾಡೋಕ್ಕೆ ನನಗೆ ಗೊತ್ತಿಲ್ಲ" ಎನ್ನುತ್ತಾ ತನ್ನ ತಲೆಯನ್ನು ತನ್ನೆರಡೂ ಕೈಗಳಿಂದ ಒತ್ತಿಕೊಂಡಳು.

ಸತ್ಯವನ್ನು ಹೊರಗೆಳೆಯುವ ಸಮಯ ಆಸನ್ನವಾಯಿತೆಂದರಿತ ಮಿತ್ರಜೀತ್ "ನನ್ನನ್ನು ತಪ್ಪು ತಿಳಿಯಬೇಡ. ನೀನು ಪಾಲ್‌ನನ್ನು ಪ್ರೇಮಿಸಿದ್ದೆಯಾ?" ಎಂದ.

"ಯಸ್!" ಎಂದವಳು ಮಿತ್ರಜೀತ್ ಪ್ರತಿಕ್ರಿಯಿಸುವುದಕ್ಕೆ ಮೊದಲು, ಅವಳ ತಲೆ ಎತ್ತಿ, ಮಾತಾಡಬೇಡವೆಂದು ಸನ್ನೆ ಮಾಡಿ, "ನಿನ್ನ ಗೆಳೆಯರನ್ನು ನೀನು ಪ್ರೀತಿಸುವುದಿಲ್ಲವೇ ಮಿತ್ರಾ? ನಿನ್ನ ಗೆಳೆಯನನ್ನು ಲವ್ ಮಾಡಕೂಡದೆಂದು ಯಾವುದಾದರೂ ಕಾನೂನಿದೆಯಾ ಮಿತ್ರಾ?" ಎಂದಳು ಗದ್ಗದಿತಳಾಗಿ.

ಮಿತ್ರಜೀತ್ ಅವಳ ದೃಷ್ಟಿಕೋನವನ್ನು ಅರ್ಥ ಮಾಡಿಕೊಂಡ.

"ಆದರೆ... ನೀನು ಅವನನ್ನು ಪ್ರೀತಿಸಿದ ರೀತಿಯಲ್ಲಿಯೇ ಅವನು ನಿನ್ನನ್ನು ಪ್ರೀತಿಸುತ್ತಿದ್ದನಾ?" ಮಿತ್ರಜೀತ್ ಮಾತು ನಿಲ್ಲಿಸಿ, ಉಗುಳು ನುಂಗಿ, ನಂತರ, "ನನ್ನನ್ನು ತಪ್ಪು ತಿಳಿಯಬೇಡ. ನಾನು ಹೇಳುತ್ತಿರುವುದು ಅವನ ಪ್ರೀತಿಯ ಗಾಢತೆಯ ಬಗ್ಗೆ" ಎಂದ.

ಲೊರೆಟ್ಟಾ ನಿಟ್ಟುಸಿರಿಟ್ಟಳು. "ಅಲ್ಲಿ ವ್ಯತ್ಯಾಸ ಇದೆ. ನನ್ನ ಬಗ್ಗೆ ಅವನಿಗೆ ಹುಚ್ಚು ಪ್ರೇಮವಿತ್ತು ಅಂತ ನನಗನ್ನಿಸ್ತಿತ್ತು. ಒಂದು ವಿಷಯ ಹೇಳು ಮಿತ್ರಾ! ನನಗೆ ಸೂಚನೆ ಕೊಡದೇ ನನ್ನನ್ನು ಯಾರಾದರೂ ಪ್ರೀತಿಸಿದರೆ ಅದರಲ್ಲಿ ನನ್ನದೇನಾದರೂ ತಪ್ಪಿದೆಯಾ?"

ಮಿತ್ರಜೀತ್ ನಕಾರಾತ್ಮಕವಾಗಿ ತಲೆಯಾಡಿಸಿದ.

"ಅವನು ನನ್ನ ಬಗ್ಗೆ ಹುಚ್ಚನಾಗಿದ್ದ ಅಂತ ನನಗೆ ತಿಳಿದಿತ್ತು"

"ಯಾರು ಈ ವಿಷಯ ಹೇಳಿದ್ದು?"

"ನನ್ನ ಗಂಡ ಸಿಲ್ವೆಸ್ಟರ್"

ಮಿತ್ರಜೀತ್ ನಿಜವಾಗಿಯೂ ಅಚ್ಚರಿಗೊಂಡ. ಇದು ಸತ್ಯವಾಗಿಯೂ ತಮಾಷೆಯಿಂದೊಡಗೂಡಿದ ಪ್ರೇಮಕಥೆ. ಪತಿ ತನ್ನ ಪತ್ನಿಗೆ ಬೇರೊಬ್ಬ ಅವಳನ್ನು ಪ್ರೇಮಿಸುವನೆಂಬ ವಿಷಯ ಅರುಹುವುದು!

"ಯಾವಾಗ? ಹೇಗೆ? ಎಲ್ಲಿ?" ಪ್ರಶ್ನೆಗಳು ಮಾತ್ರವೇ ಅವನಿಂದ ಹೊರಬಿದ್ದಿದ್ದು.

"ಅವರಿಬ್ಬರೂ ಬಹಳ ಫ್ರೆಂಡ್ಲೀ. ಬಾರ್ಗೆ ಒಟ್ಟಿಗೇ ಹೋಗುತ್ತಿದ್ದರು. ಒಂದು ದಿನ ಕುಡಿದ ಮತ್ತಿನಲ್ಲಿ ಹೀಗೆ ಒದರಿದ್ದನಂತೆ"

"ನೀನು ಅವನೊಂದಿಗೆ ಫ್ರೆಂಡ್ಲಿಯಾಗಿದ್ದೆಯಾ?"

"ಯಸ್, ಅಫ್‌ಕೋರ್ಸ್!" ಅವಳ ಕಂಗಳು ಬಹಳ ದುಃಖಿತವಾಗಿದ್ದವು.

"ನನ್ನ ಸಿಲ್ವೆಸ್ಟರ್ ನನ್ನ ಬಗ್ಗೆ ಆಸಕ್ತಿ ತೋರದಿದ್ದಾಗಲೆಲ್ಲಾ ನಾನು ಪಾಲ್‌ನ ಮೊರೆ ಹೋಗುತ್ತಿದ್ದೆ"

ಏನೋ ಆಲೋಚಿಸುತ್ತಿದ್ದ ಮಿತ್ರಜೀತ್ ಹಠಾತ್ತನೆ ಅವಳತ್ತ ಕೂಲಂಕಷವಾಗಿ ಗಮನ ಹರಿಸಿದ.

"ನನ್ನನ್ನು ಅಪಾರ್ಥ ಮಾಡಿಕೊಳ್ಳಬೇಡ ಮಿತ್ರಾ! ಸಿಲ್ವೆಸ್ಟರ್ ಹೊರತಾಗಿ ಬೇರಾರೊಂದಿಗೂ ಸೆಕ್ಸ್ ಹೊಂದುವ ಬಗ್ಗೆ ನನಗೆ ಕಲ್ಪಿಸಿಕೊಳ್ಳಲೂ ಸಾಧ್ಯವಿಲ್ಲ! ನನಗೆ ಪಾಲ್‌ನಿಂದ ಸಿಗುತ್ತಿದ್ದುದು, ಬೇಕಿದ್ದುದು ಕೇವಲ ಸಾಂತ್ವನ ಮಾತ್ರ" ಅವಳ ಸ್ವರ ಗಡಗಡನೆ ಕಂಪಿಸುತ್ತಿತ್ತು. "ಒಂದು ರೀತಿಯ ದುಃಸ್ವಪ್ನ ನನಗೆ. ನನ್ನ ಪತಿ ಸಿಲ್ವೆಸ್ಟರ್ ಸೇಲ್ಸ್‌ಲೈನ್‌ನ ಸೀರಿಯಸ್ಸಾಗಿ ತೆಗೆದುಕೊಂಡಿದ್ದರಿಂದ ಬಿಜಿನೆಸ್ ಬಗ್ಗೆ ತುಂಬಾ ಆಸ್ಥೆ ಇದ್ದಿದ್ದರಿಂದ ಲಾಂಗ್ ಟೂರ್ಗಳಿಗೆ ಹೋಗುತ್ತಾನೆ. ಸಂಜೆಗಳು ಉದ್ದವಾಗೂ, ರಾತ್ರಿಗಳು ಇನ್ನೂ ಉದ್ದವಾಗಿಯೂ ಇರುತ್ತವೆ. ಆದರೆ ಪಾಲ್ ನನ್ನೊಂದಿಗೆ ಇರುತ್ತಿದ್ದ. ನನ್ನ ಕರೆಗೆ ತಕ್ಷಣವೇ ಓಗೊಡುತ್ತಿದ್ದ" ಆಳವಾಗಿ ಉಸಿರೆಳೆದುಕೊಂಡು ಮಾತು ಮುಂದುವರೆಸಿದಳು. "ನಾನು ಮೆಸೇಜ್ ಕಳಿಸಿದ ತಕ್ಷಣ ಫೋನ್ ಮಾಡುತ್ತಿದ್ದ. ಅವನು ಊರಿಂದ ಆಚೆ ಹೋದಾಗಲೂ ಫೋನ್ ಮಾಡಿ ನನಗೆ ಹುರಿದುಂಬಿಸುತ್ತಿದ್ದ. ನನ್ನ ಒಬ್ಬೊಂಟಿತನವನ್ನು ಕೊಲ್ಲೋಕ್ಕೆ, ಬದುಕುವ ಆಸೆ ಹೆಚ್ಚಿಸೋಕ್ಕೆ ಆ ಕರೆಗಳು ಸಾಕಿದ್ದವು. ಜೀವನ ಎಂದರೆ ಕಳೆದು ಹೋದ

ಘಟನೆಗಳಿಗೆ ಕಣ್ಣೀರು ಸುರಿಸೋದು ಅಲ್ಲ ಅಂತ ಅರ್ಥ ಮಾಡಿಸಿದ್ದ. 'ನೋ ಪೋಸ್ಟ್ ಮಾರ್ಟಂ' ಎನ್ನುತ್ತಿದ್ದ ನನಗೆ ಕೇವಲ 'ಭವಿಷ್ಯದಲ್ಲಿ ಬಾಳೋದು ಹೇಗೆ?' ಅಂತ ಯೋಚಿಸು ಅನ್ನುತ್ತಿದ್ದ. ನನಗೆ ಅವನ ಮಾತುಗಳಿಂದ ಬಹಳವೇ ಸಾಂತ್ವನ ಸಿಗುತ್ತಿತ್ತು. ಇವತ್ತು ಅವನನ್ನು ಯಾರೋ ಕೊಂದರೂಂತ ದುಃಖವಾಗ್ತಿದೆ. ಗಾಯದ ಮೇಲೆ ಬರೆ ಎಳೆದ ಹಾಗೆ ನನ್ನ ಸಿಲ್‌ನ ಬಲಿಪಶು ಮಾಡ್ತಿದ್ದಾರೆ"

ಅವಳು ಎದ್ದು ಶತಪಥ ತಿರುಗಲಾರಂಭಿಸಿದಳು. ಮಿತ್ರಜೀತ್ ಅವಳ ವಾಕ್ಯಗಳನ್ನು ಒಗ್ಗೂಡಿಸಿ ಒಂದು ಚಿತ್ರರೂಪ ಕೊಡಲೆತ್ನಿಸುತ್ತಿದ್ದ. ಆದರೂ ಅವನಿಗೆ ಒಂದು ವಿಷಯ ಅರ್ಥವಾಗಲಿಲ್ಲ.

"ಲೊರೆಟ್ಟಾ, ನನ್ನನ್ನು ತಪ್ಪು ತಿಳಿಯಬೇಡ. ಆದರೆ ನನ್ನ ಪ್ರಕಾರ ಸಿಲ್ವೆಸ್ಟರ್‌ನಿಂದ ಕೊಲ್ಲಲ್ಪಡೋಕ್ಕೆ ಪಾಲ್‌ಗೆ ಕಾರಣ ಇದೆ"

ಲೊರೆಟ್ಟಾ ಸರಕ್ಕನೆ ಮಿತ್ರಜೀತ್‌ನತ್ತ ನೋಡಿದಳು.

"ಪ್ರಪಂಚದ ಅತಿ ಅಪಾಯಕಾರೀ ವಿಷಯ ಎಂದರೆ ಮತ್ಸರ ತುಂಬಿದ ಪತಿಯ ಸಿಟ್ಟು. ಬಹುಶಃ ಸಿಲ್ವೆಸ್ಟರ್ ಪಾಲ್‌ನ ಕೊಲ್ಲೋಕ್ಕೆ ಪ್ರಯತ್ನಿಸಿರಬಹುದು"

"ಇಲ್ಲ!" ಚೀರಿದಳು ಲೊರೆಟ್ಟಾ. "ನನಗೆ ಸಿಲ್ ಚೆನ್ನಾಗಿ ಗೊತ್ತು. ಒಂದು ನೊಣವನ್ನೂ ಕೊಲ್ಲಲಾರದ ಮನಸ್ಥತ್ವ ಸಿಲ್‌ನದು. ನೀನು ಹೇಳ್ತಿರೋದು ಕೇವಲ ಸುಳ್ಳಿನ ಕಂತೆ"

"ಆದರೆ ಈ ಘಟನೆ ಸರಳವಾಗಿಯೂ, ನೇರವಾಗಿಯೂ ಇದೆ. ಜಡ್ಜ್ ಕೂಡಾ ನಂಬೋಕ್ಕೆ ಇಷ್ಟ ಪಡುವ ಪ್ರೇಮ ತ್ರಿಕೋನ. ಹೆಂಡತಿ ಮತ್ತು ಪ್ರೇಮಿ ಸಿಕ್ಕಾಪಟ್ಟೆ ಪ್ರಣಯದಲ್ಲಿರುತ್ತಾರೆ. ಹೊಟ್ಟೆ ಉರಿದ ಗಂಡ ಕಾನೂನನ್ನು ಕೈಗೆ ತೆಗೆದುಕೊಳ್ತಾನೆ. ಅವರಿಬ್ಬರ ಪ್ರಣಯಲೀಲೆಯನ್ನು ಕೊನೆಗಾಣಿಸ್ತಾನೆ"

ಮಿತ್ರಜೀತ್ ಅದೆಷ್ಟು ನಾಟಕೀಯವಾಗಿ ಹೇಳಿದ್ದನೆಂದರೆ ಲೊರೆಟ್ಟಾ ಅದನ್ನು ಒಪ್ಪದಿರಲಾರದೇ ಹೋದಳು.

ಹೌದು! ಪ್ರತಿಯೊಂದೂ ಆ ದಿಕ್ಕಿಗೇ ಬೊಟ್ಟು ಮಾಡುತ್ತಿದೆ. ಅವನು ಕಲ್ಪಿಸಿ ಹೇಳಿದ್ದು ಸತ್ಯದ ಮೇಲೆ ಹೊಡೆದಂತಿದೆ. ಹಾಗಾದರೆ ತನ್ನ ಮುಗ್ಧ ಪತಿಯನ್ನು ಉಳಿಸೋದು ಹೇಗೆ?

ಅದನ್ನೇ ಅವಳು ಹೇಳಿದಳು. "ಮಿತ್ರಾ! ನಿನ್ನ ಮಾತು, ತರ್ಕ, ಥಿಯರಿಯನ್ನು ಒಪ್ಪುತ್ತೇನೆ. ಆದರೆ ನನಗೆ ನನ್ನ ಸಿಲ್ ಬಗ್ಗೆ ಚೆನ್ನಾಗಿ ಗೊತ್ತು. ಹೇಗೆ ಅವನನ್ನು ಉಳಿಸಿಕೊಳ್ಳೋದು?"

"ಈ ವಿಷಯ ಸರಿಯಾಗಿ ಅರ್ಥ ಮಾಡಿಕೊಳ್ಳೋಕ್ಕೆ ನಾನು ಸಿಲ್ವೆಸ್ಟರ್ ಬಳಿ ಒಮ್ಮೆ ಮಾತಾಡಬೇಕು. ನಿನ್ನನ್ನು ಮತ್ತೆ ಕಾಂಟ್ಯಾಕ್ಟ್ ಮಾಡ್ತೀನಿ" ಎಂದವನು ಎದ್ದು ನಿಂತು "ಯೋಚನೆ ಮಾಡ್ಬೇಡಾ. ಸತ್ಯವಿನ್ನೂ ಸತ್ತಿಲ್ಲ. ಧರ್ಮ ನ್ಯಾಯಗಳೂ ಇನ್ನೂ ಬದುಕಿವೆ. ಸೋ, ವಿ ಷಲ್ ಹೋಪ್ ಫಾರ್ ದ ಬೆಸ್ಟ್" ಎಂದು ಮನೆಯಿಂದ ಹೊರಬಿದ್ದ.

ತನ್ನ ಅವಿಶ್ರಾಂತ ಓಡಾಟದಲ್ಲಿ ಅವನು ಲೊರೆಟ್ಟಾಳನ್ನು ಒಂದು ಮುಖ್ಯವಾದ ಪ್ರಶ್ನೆ ಕೇಳಲು ಮರೆತುಬಿಟ್ಟ.

ಅದರಿಂದ ಏನೇನು ತಾಪತ್ರಯಗಳು ಉದ್ಭವವಾಗುವುವೋ!

# 5

ಸಿಲ್ವೆಸ್ಟರ್‌ನ ಭೇಟಿ ಅಷ್ಟು ಸುಲಭವಾಗಿರಲಿಲ್ಲ. ಅವನನ್ನು ಒಂದು ಪ್ರತ್ಯೇಕ ಕೊಠಡಿಯಲ್ಲಿಟ್ಟಿದ್ದರು. ಪಾಲ್‌ನನ್ನು ಅಮಾನುಷವಾಗಿ ಕೊಂದಿರುವನಾದ್ದರಿಂದ (!) ಅವನನ್ನು ಹಿಂಸಾಚಾರೀ ಕೊಲೆಗಡುಕನೆಂಬ ಹಣೆಪಟ್ಟಿಯೊಂದಿಗೆ ಈ ವಿಶೇಷ ಸೆಲ್‌ನಲ್ಲಿರಿಸಲ್ಪಟ್ಟಿದ್ದ.

ಇನ್‌ಸ್‌ಪೆಕ್ಟರ್ ಜನರಲ್‌ರಿಂದ ವಿಶೇಷ ಅನುಮತಿ ಪಡೆದು ಸಿಲ್ವೆಸ್ಟರ್‌ನ ಭೇಟಿಗೆ ಸಿದ್ಧನಾದ. ಐ.ಜಿ.ಗೆ ಹಿಂದೊಮ್ಮೆ ಇವನೊಂದು ಚಿಕ್ಕ ಸಹಾಯ ಮಾಡಿದ್ದ. ಆ ಸಹಾಯದ ಪ್ರತಿಫಲವೇ ಈ ಭೇಟಿಗೆ ಪರವಾನಗಿ! ಮಿತ್ರಜೀತ್ ಒಬ್ಬನೇ ಹೋಗಲಿಲ್ಲ; ತನ್ನ ಗೆಳೆಯ ಸ್ವರೂಪ್‌ನನ್ನು ಕರೆದೊಯ್ದ. ಅವನೊಬ್ಬ ಉತ್ಸಾಹೀ ಯುವ ಲಾಯರ್. ಬಹಳವೇ ಚುರುಕಾದ ಸ್ಮಾರ್ಟ್ ಲಾಯರ್.

ಸ್ವರೂಪ್, ಮಿತ್ರಜೀತ್ ಹೋದಾಗ ಸಿಲ್ವೆಸ್ಟರ್ ಒಂದು ಮೂಲೆಯಲ್ಲಿ ಕುಳಿತಿದ್ದ. ಮುಖದ ಮೇಲೆ ಈಗಲೂ ಶಾಕ್ ತುಂಬಿ ತುಳುಕುತ್ತಿತ್ತು! ಹೆಜ್ಜೆ ಸದ್ದಿಗೆ ತಲೆ ಎತ್ತಿ ನೋಡಿದ. ಬಾಗಿಲು ತೆರೆದ ಸೆಂಟ್ರಿ “ಹದಿನೈದು ನಿಮಿಷ” ಎಂದು ಹೇಳಿ ಅಲ್ಲಿಂದ ಹೊರಟುಹೋದ.

ಮಿತ್ರಜೀತ್ ಸಿಲ್ವೆಸ್ಟರ್‌ನತ್ತ ತನ್ನ ಮುಗುಳ್ನಗೆಯೊಂದನ್ನೆಸೆದ. ಆದರೆ ಸಿಲ್ ಅದನ್ನು ಹಿಂದಿರುಗಿಸಲಿಲ್ಲ.

ಅವನ ಬಗ್ಗೆ ಬೇಸರವೆನಿಸಲಿಲ್ಲ ಮಿತ್ರಜೀತ್‌ಗೆ. ಅಹಿಂಸಾವಾದಿ ಮನುಷ್ಯನಿಗೆ ಕೊಲೆಗಾರನೆಂಬ ಆಪಾದನೆ ಸಿಕ್ಕಾಪಟ್ಟೆ ಜಾಸ್ತಿ!

“ಹಲೋ ಸಿಲ್ವೆಸ್ಟರ್, ನಾನು ಮಿತ್ರಜೀತ್, ಪಾಲ್‌ನ ಗೆಳೆಯ”

ದ್ವೇಷಪೂರಿತ ನೋಟವನ್ನು ಮಿತ್ರಜೀತ್‌ನತ್ತ ಸಿಲ್ವೆಸ್ಟರ್ ಬೀರಿದ. ಲಾಯರ್ ಸ್ವರೂಪ್ ಸಿಲ್ವೆಸ್ಟರ್‌ನನ್ನು ಮನದಲ್ಲಿಯೇ ಅಳೆಯತೊಡಗಿದ. ಗ್ರಾಹಕನ ಕೇಸ್ ಎತ್ತಿಕೊಳ್ಳುವ ಮುಂದೆ ಅವನನ್ನು ಅಳೆದು, ಪರೀಕ್ಷಿಸುವ ಕೆಲಸ.

“ನಿನಗೆ ಕೋಪ ಯಾಕೇಂತ ನನಗ್ಗೊತ್ತು. ನಾನು ಲೊರೆಟ್ಟಾಳ ಕಡೆಯಿಂದ ಬಂದಿದ್ದೀನಿ”

ಈಗ ಅವನ ಮುಖಭಾವವೇ ಬದಲಾಗಿ ಹೋಯ್ತು. ಸ್ನೇಹಪೂರ್ಣ ನಗೆಯೊಂದನ್ನು ಬೀರಲು ಶತಪ್ರಯತ್ನ ಮಾಡಿದ.

ಆ ಪ್ರಯತ್ನ ಎಷ್ಟು ಕಷ್ಟದ್ದೆಂದು ಮಿತ್ರಜೀತ್ ಅರ್ಥೈಸಿಕೊಂಡ.

"ಹೇಗಿದ್ದಾಳೆ ಲೊರೆಟ್ಟಾ? ನನಗೆಷ್ಟು ಶಾಕ್ ಆಗಿತ್ತೆಂದರೆ ನನಗೆ ಅವಳ ಬಳಿ ಸರಿಯಾಗಿ ಮಾತಾಡೋಕ್ಕೆ ಆಗಲಿಲ್ಲ" ಅವನ ಸ್ವರದಲ್ಲಿನ ಕಾಳಜಿಯಲ್ಲಿ ನಿಯತ್ತು ತುಂಬಿ ತುಳುಕುತ್ತಿತ್ತು.

"ಶೀ ಈಜ್ ಓಕೆ. ಆದರೆ ಸಂತೋಷವಾಗಿರೋಕ್ಕೆ ಹೇಗೆ ಸಾಧ್ಯ? ಆಕೆಯ ಪ್ರೀತಿಯ ಪತಿ ಮಾಡದ ಕೊಲೆಗೆ ಬಂಧಿಸಲ್ಪಟ್ಟು ಜೈಲಿನಲ್ಲಿದ್ದಾಗ?"

ಒಂದು ರೀತಿ ಸಡಿಲವಾಗಿದ್ದ ಸಿಲ್ವೆಸ್ಟರ್ ಹಠಾತ್ತನೆ ನೆಟ್ಟಗಾದ. ಆ ಚರ್ಯೆ ನೋಡಿ ಮಿತ್ರಜೀತ್, ಸ್ವರೂಪ್ ಸನ್ನೆ ಮಾಡಿಕೊಂಡರು.

"ಹೇಗಿದ್ದಾಳೆ ಅವಳು ಮಿ. ಮಿತ್ರಜೀತ್?" ಸಿಲ್ವೆಸ್ಟರ್ ಕೇಳಿದ. "ಈಸ್ ಶೀ ಆಲ್‌ರೈಟ್?" ದನಿಯಲ್ಲಿ ಮತ್ತದೇ ಕಳಕಳಿ ತುಂಬಿದ ಆರ್ದ್ರತೆ.

"ಮಿ. ಸಿಲ್ವೆಸ್ಟರ್, ನಮಗೆ ಹೆಚ್ಚು ಸಮಯವಿಲ್ಲ. ನೇರವಾಗಿ ಪಾಯಿಂಟ್‌ಗೆ ಬರುತ್ತೇನೆ. ನೀವು ಪಾಲ್‌ನನ್ನು ಕೊಂದಿರಾ?"

"ನೋ!" ಉತ್ತರ ಶೀಘ್ರವಾಗಿ, ಖಡಾಖಂಡಿತವಾಗಿ ಹೊರಬಂತು. ಅನುಮಾನಕ್ಕೆ ತಾವೇ ಇರಲಿಲ್ಲ. ಆದರೂ ... "ನಿನಗೆ ಪಾಲ್‌ನಲ್ಲಿ ಮತ್ಸರ ಇರಲಿಲ್ಲವಾ?"

"ನನಗ್ಯಾಕೆ ಮತ್ಸರ?" ಅವನ ಧ್ವನಿ ಕರ್ಕಶವಾಗಿತ್ತು.

"ನಾವೀಗ ಮಾತಾಡ್ತಿರೋ ವಿಷಯ ಏನಂದ್ರೆ ಸತ್ತು ಹೋದಾತ ನಿಮ್ಮ ಹೆಂಡತಿಗೆ ತುಂಬಾ ಹತ್ತಿರದವನೂಂತ"

"ಅದರಲ್ಲೇನು ವಿಶೇಷ?"

"ನಾನು ಹೀಗೆ ಹೇಳ್ತೀನಿ. ನನ್ನ ಹೆಂಡತಿ ಯಾವುದಾದರೂ ಗಂಡಸಿನ ಜೊತೆಗೆ ಫ್ರೆಂಡ್ಲಿಯಾಗಿದ್ದರೆ ನಾನವನನ್ನು ಕೊಂದು ಬಿಡ್ತೀನಿ!" ಮಿತ್ರಜೀತ್‌ನ ಸ್ವರ ಅದೆಷ್ಟು ಕ್ರುದ್ಧವಾಗಿತ್ತೆಂದರೆ ಸ್ವರೂಪ್ ಕೂಡಾ ಗಲಿಬಿಲಿಯಿಂದ ನೋಡಿದ.

ಸಿಲ್ವೆಸ್ಟರ್ ಬಲು ವ್ಯಂಗ್ಯವಾಗಿ ನಕ್ಕ. "ಲುಕ್ ಮಿ. ಮಿತ್ರಜೀತ್! ನೀನೇನು ಹೇಳುತ್ತಿರುವೆಯೋ ನನಗರ್ಥವಾಗ್ತಿಲ್ಲ. ನಾನು ಹೇಳೋದು ನಿನಗೆ

ನಾಟಕೀಯವಾಗಿ ತೋರಬಹುದು. ನೀನು ನನ್ನ ಮಾತಿನಲ್ಲಿನ ಕ್ಲೀಷೆಯನ್ನು ಕ್ಷಮಿಸೋದಾದ್ರೆ ಮಾತ್ರ ಹೇಳ್ತೀನಿ. ಲೊರೆಟ್ಟಾ ಪಾಲ್‌ರ ಸಂಬಂಧ ಅಣ್ಣತಂಗಿಯರ ಸಂಬಂಧದ ಹಾಗಿತ್ತು" ಎಂದ.

"ಆರ್ ಯೂ ಷ್ಯೂರ್?" ಮಿತ್ರಜೀತ್ ಸೀರಿಯಸ್ಸಾಗಿ ಕೇಳಿದ.

"ಅಫ್‌ಕೋರ್ಸ್"

"ಆ ಸಮಯದಲ್ಲಿ ನೀನೆಲ್ಲಿದ್ದೇಂತ ಹೇಳಬಲ್ಲೆಯಾ?" ಸ್ವರೂಪ್ ಕೇಳಿದ.

ಪಾಲ್‌ನ ಮೇಲೆ ಆಕ್ರಮಣ ನಡೆದಾಗ ಸಿಲ್ವೆಸ್ಟರ್ ಎಲ್ಲಿದ್ದನೆಂದು ಸ್ವರೂಪ್ ಕೇಳುತ್ತಿರುವನೆಂದು ಮಿತ್ರಜೀತ್ ಅರ್ಥ ಮಾಡಿಕೊಂಡ. ಸಿಲ್ವೆಸ್ಟರ್‌ಗೂ ಅದು ಅರ್ಥವಾಗಿತ್ತು. ಅವನ ಮುಖ ಬಿಳಿಚಿಕೊಂಡಿತ್ತು.

"ಸಾರಿ, ನಾನು ಹೇಳಲಾರೆ" ಎಂದ ಬಹಳ ಉದ್ದವಾದ ಮೌನದ ನಂತರ. ಮತ್ತೆ ಹೇಳಿದ. "ನನಗೆ ನೆನಪಿಲ್ಲ"

ಅವರಿಬ್ಬರಿಗೂ ಆಲೋಚಿಸಲು ಸಮಯ ನೀಡದೇ "ನಾನೊಬ್ಬನೇ ಇದ್ದೆ" ಎಂದ.

ಮಿತ್ರಜೀತ್‌ಗೆ ಒಂದು ವಿಚಿತ್ರ ಫೀಲಿಂಗ್ ಉಂಟಾಯಿತು. ಬಹಳವೇ ಅಸಾಧಾರಣ ಒತ್ತಡಕ್ಕೆ ಸಿಲ್ವೆಸ್ಟರ್ ಒಳಗಾಗಿರುವನೆಂದು ಸ್ವರೂಪ್ ಅರ್ಥ ಮಾಡಿಕೊಂಡ.

"ಇಲ್ಲಿ ನೋಡು ಸಿಲ್ವೆಸ್ಟರ್!" ಮಿತ್ರಜೀತ್ ಕಟುವಾಗಿ ನುಡಿದ. "ನಾವಿಲ್ಲಿಗೆ ಬಂದಿರೋದು ನಿನಗೆ ಸಹಾಯ ಮಾಡೋಕ್ಕೆ. ನಿಜ ಹೇಳು. ಇಲ್ಲದಿದ್ರೆ ನೀನೊಬ್ನೇ ಅಲ್ಲ. ಉಳಿದವರನ್ನೂ ಜೀವಂತ ನರಕಕ್ಕೆ ಒಯ್ಯುತ್ತೀ. ವಿಶೇಷವಾಗಿ ನಿನ್ನ ಪ್ರೀತಿಪಾತ್ರರು ಬಹಳವೇ ತೊಂದರೆಗೆ ಒಳಗಾಗ್ತಾರೆ"

ನಂತರ ಹೊರಬಾಗಿಲಿನತ್ತ ನೋಡಿ, ಕೈ ಗಡಿಯಾರ ನೋಡಿಕೊಂಡ. "ಸಮಯ ಮುಗೀತು. ಸೆಂಟ್ರಿ ವಾಪ್ಸ ಬರ್ತಿದ್ದಾನೆ. ಬೇಗ ಹೇಳು! ಏನಾಯ್ತು?"

ಸಿಲ್ವೆಸ್ಟರ್ ನಿಟ್ಟುಸಿರಿಟ್ಟು ಮೆಲ್ಲನುಸುರಿದ. "ಒಂದು ದೊಡ್ಡ ರಾಜಕೀಯ ಮಾಫಿಯಾವನ್ನು ಕಾಪಾಡುವುದಕ್ಕೋಸ್ಕರ ನನ್ನನ್ನ ಬಲಿ ಕೊಡ್ತಾ ಇದ್ದಾರೆ".

ಅದೇ ಅವನು ಮಾತಾಡಿದ ಕೊನೆಯ ವಾಕ್ಯ.

ಸ್ವರೂಪ್, ಮಿತ್ರಜೀತ್ ಆ ಕೊಠಡಿಯಿಂದ ಹೊರಬಿದ್ದರು. ಅವರ ತಲೆಗಳು ಗಿರಗಿರನೆ ಸುತ್ತುತ್ತಿದ್ದವು. ಏನಾಗುತ್ತಿದೆ?

ಒಬ್ಬ ಮಾಮೂಲೀ ಉದ್ಯಮಿಯನ್ನು ಒಂದು ದೊಡ್ಡ ಪೊಲಿಟಿಕಲ್ ಮಾಫಿಯಾ ಬಲಿಪಶುವನ್ನಾಗಿ ಮಾಡಿದೆ! ಈ ದೇಶ ಯಾವ ದಿಕ್ಕಿಗೆ ಸಾಗುತ್ತಿದೆ? ಈ ದುರುಳರನ್ನು ನಂಬಿರುವ ಜನರ ಗತಿ ಏನು? ಇಂತಹ ಮಾಫಿಯಾಗಳ ದೆಸೆಯಿಂದ ದೇಶ ನಾಶವಾಗುತ್ತಿದೆ. ಮಿತ್ರಜೀತ್ ದುಃಖಭರಿತನಾಗಿ ಆಲೋಚಿಸಿದ.

ಸ್ವರೂಪ್ ಕೂಡಾ ಯೋಚನಾಭರಿತನಾಗಿದ್ದ.

ಇಬ್ಬರೂ ಸ್ವರೂಪನ ಕಾರು ಹತ್ತಿದರು. ಕಾರು ಸ್ವರೂಪನ ಆಫೀಸಿನತ್ತ ಭರ್ರನೆ ಓಡಿತು.

'ಇದು ವಾಟರ್‌ಟೈಟ್ ಕೇಸ್ ಇದ್ದ ಹಾಗಿದೆ. ಒಬ್ಬ ಜಾಣ ಸರ್ಕಾರಿ ವಕೀಲ ಸಿಲ್‌ನನ್ನು ಮರ ಉರುಳಿಸೋ ಹಾಗೆ ಬೀಳಿಸಿಬಿಡ್ತಾನೆ' ಸ್ವರೂಪ್ ಎಂದುಕೊಂಡ. ಮಿತ್ರಜೀತ್ ಅವನ ಯೋಚನೆಗೆ ಪುಷ್ಟಿ ಕೊಟ್ಟ.

"ಸ್ವರೂಪ್! ಈ ಸಿಲ್ವೆಸ್ಟರ್‌ನನ್ನು ಏನು ಮಾಡೋಣ? ಅವನು ಬಾಯಿ ಬಿಡೋಕ್ಕೆ ತಯಾರಿಲ್ಲ. ವರ್ಸ್ಟ್ ಪಾರ್ಟ್ ಅಂದ್ರೆ ಅವನೇನೋ ಮುಚ್ಚಿಡ್ತಿದ್ದಾನೆ"

"ಅಥವಾ ಯಾರನ್ನೋ ಮುಚ್ಚಿಡ್ತಿದ್ದಾನೆ, ಅಯ್ ಮೀನ್ ಯಾರನ್ನೋ ರಕ್ಷಿಸ್ತಾ ಇದ್ದಾನೆ"

"ರಕ್ಷಿಸೋದಾ? ಯಾರಾದರೂ ಅವನನ್ನು ಹೆದರಿಸುತ್ತಿರಬಹುದಾ?" ಮಿತ್ರಜೀತ್ ಕೇಳಿದೊಡನೆ ಸ್ವರೂಪ್ ಕಾನ್ನು ಸರ್ರನೆ ರಸ್ತೆಯ ಒಂದು ಪಕ್ಕಕ್ಕೆ ಚಾಲಿಸಿ ಚಕ್ಕನೆ ಬ್ರೇಕ್ ಹಾಕಿದ.

"ಏನಾಯ್ತು?" ಸ್ವರೂಪ್‌ನ ಈ ಹಠಾತ್ ಬ್ರೇಕ್‌ನಿಂದ ಅಚ್ಚರಿಗೊಂಡು ಕೇಳಿದ.

"ನನಗೂ ಅವನು ಯಾರಿಗೋ ಹೆದರುತ್ತಿದ್ದಾನೆಂಬ ಫೀಲಿಂಗ್ ಬಂತು!" ಎಂದು ಉದ್ವೇಗದಿಂದ ಹೇಳಿದ.

"ಈಗೇನು ಮಾಡೋಣ?" ಗಟ್ಟಿಯಾಗಿ ಉದ್ಗರಿಸಿದ ಮಿತ್ರಜೀತ್, ಇದ್ದಕ್ಕಿದ್ದಂತೆ ಚಿಟಿಕೆ ಹೊಡೆದ. "ಯಸ್! ಈಗ ನಾವು ಲೊರೆಟ್ಟಾಳನ್ನು ಭೇಟಿ ಆಗೋಣ. ಪಾಲ್ ಸಾಯುತ್ತಿರುವುದನ್ನು ಕಂಡೆ ಎಂದಿದ್ದಳು ಅವಳು. ಅವಳು ಪಾಲ್‌ನಿಂದ

ಏನಾದರೂ ಮುಖ್ಯವಾದ ವಿಷಯವನ್ನ ತಿಳಿದುಕೊಂಡಿರಬಹುದು. ಛೇ! ಈ ವಿಷಯ ಹೇಗೆ ಮರೆತೆ?" ಕೈ ಕೈ ಹಿಸುಕಿಕೊಂಡ.

ನಂತರ ಸ್ವರೂಪ್‌ನತ್ತ ತಿರುಗಿದ. "ನನ್ನನ್ನು ಲೊರೆಟ್ಟಾ ಮನೆಗೆ ಕರಕೊಂಡು ಹೋಗುವೆಯಾ? ಒಂದೊಂದು ಸಲ ಈ ಚಿಕ್ಕ ಮರೆವು ದೊಡ್ಡ ವಿಪತ್ತಿಗೆ ದಾರಿ ಮಾಡುತ್ತೆ" ಎಂದ ಮಿತ್ರಜೀತ್ ಪ್ರವರ್ತಕನಂತೆ.

"ಓಕೆ" ಎಂದ ಸ್ವರೂಪ್ ಇಂಜಿನ್ನಿಗೆ ಜೀವ ನೀಡಿದ. ಕಾರು ಲೊರೆಟ್ಟಾಳ ಮನೆಯತ್ತ ಧಾವಿಸಿತು. ಸ್ವರೂಪ್ ಇನ್ನೂ ತನ್ನ ಹಳೆಯ ಆಲೋಚನೆಯಲ್ಲಿದ್ದ.

"ಮಿತ್ರಾ, ಯಾರನ್ನ ಅವನು ಕಾಪಾಡ್ತಿರೋದು? ಅಥವಾ ಹೀಗೆ ಯೋಚಿಸೋದು ಬೆಟರ್ರ್. ಯಾರು ಅವನನ್ನು ಹೆದರಿಸ್ತಿರಬೋದು?"

"ಇದನ್ನು ಎಚ್ಚರಿಕೆಯಿಂದ ಕಂಡುಹಿಡೀಬೇಕು. ಆದರೆ ಒಂದು ವಿಷಯ ಸಿಲ್ವೆಸ್ಟರ್‌ಗೆ ಸರಿಯಾಗಿ ತಿಳಿಯದು ಅನ್ಸುತ್ತೆ"

"ಏನದು?" ಸ್ವರೂಪ್ ಕುತೂಹಲಿಯಾದ.

"ಸಿಲ್ವೆಸ್ಟರ್‌ಗೆ ತನ್ನನ್ನು ಯಾರಾದರೂ ಸಾಯಿಸುವರೆಂಬ ಭಯ ಬೇಕಾಗಿಲ್ಲ"

"ಯಾಕೆ ಹಾಗಂತೀ?"

"ನಿನಗೆ ಅರ್ಥವಾಗ್ತಿಲ್ವಾ? ಸಿಲ್ವೆಸ್ಟರ್‌ಗೆ ಬಲೆ ಬೀಸಿ ಹಿಡಿದಿದ್ದಾರೆ. ಅವನನ್ನು ಕೊಂದರೆ ಅವನನ್ನು ಜೈಲಿಗೆ ಹಾಕಿರೋ ಕಾರಣ ಗಾಳಿಗೆ ತೂರಿ ಹೋಗುತ್ತೆ ಅಂದರೆ…"

"ಯೂ ಆರ್ ರೈಟ್!" ಸ್ವರೂಪ್ ಉದ್ಗಾರ ತೆಗೆದ.

"ಅಂದರೆ…" ಮಿತ್ರಜೀತ್ ಮುಂದುವರೆಸಿದ. ತನ್ನ ಮಾತು ನಡುವೆ ನಿಂತಿದ್ದು ಗೊತ್ತೇ ಇಲ್ಲದವನಂತೆ "ಬೇರೆ ಯಾರೋ ಅಪಾಯಕ್ಕೆ ಸಿಲುಕುತ್ತಾರೇಂತ ಅವನಿಗೆ ಹೆದರಿಕೆ ಆಗಿದೆ"

"ಯಾರಿಗೋಸ್ಕರ ಈ ಹೆದರಿಕೆ?"

"ಲೊರೆಟ್ಟಾ ಎಂಬುದು ನನ್ನ ಊಹೆ"

"ಪಾಲ್ ಕೂಡಾ ಇರಬಹುದಾ?"

"ಇರಬಹುದು. ಆದರೆ ಪಾಲ್ ಈಗ ಇಲ್ಲ. ಆಪಾದನೆ ಸಿಲ್ವೆಸ್ಟರ್ ಮೇಲೆ ಬಂದಾಗಿದೆ"

"ಅಂದರೆ ಲೊರೆಟ್ಟಾಳೇ ಇರಬಹುದು"

ಅವಳ ಮನೆಯನ್ನೀಗ ಅವರು ಸಮೀಪಿಸಿದ್ದರು. ಮಿತ್ರಜೀತ್ ನಿಲ್ಲಿಸೆಂದೆಡೆ ಕಾರನ್ನು ನಿಲ್ಲಿಸಿದ ಸ್ವರೂಪ. ಮಿತ್ರಜೀತ್ ಅವಳ ಮನೆಯತ್ತ ನಡೆದ. ಏನೋ ಒಂದು ರೀತಿ ಅಪಾಯದ ಮುನ್ಸೂಚನೆ ದೊರೆತಿತ್ತು. ಅವನ ಮೈ ಒಮ್ಮೆ ಝುಮ್ ಎಂದಿತು. ಮೈ ಮೇಲಿನ ರೋಮಗಳು ನಿಮಿರಿ ನಿಂತವು. ಬಾಗಿಲಿನ ಬೀಗವನ್ನು ಒಡೆದು ಒಳಗೆ ಹೋದ ಮಿತ್ರಜೀತ್.

ಲೊರೆಟ್ಟಾ ಅಲ್ಲಿರಲಿಲ್ಲ! ಅಲ್ಲಿನ ಸನ್ನಿವೇಶದಿಂದ ಅವನಿಗೆ ಅರ್ಥವಾಗಿದ್ದೇನೆಂದರೆ ಅವಳನ್ನು ಯಾರೋ ಅಪಹರಣ ಮಾಡಿದ್ದಾರೆಂಬುದು!

# 6

ಪತ್ರಕರ್ತ ಅಮರೇಶ ವೇಗವಾಗಿ ಟೈಪ್ ಮಾಡುತ್ತಿದ್ದ. ಅವನ ಲಕ್ಷ್ಯ ಕಂಪ್ಯೂಟರ್ ಪರದೆಯ ಮೇಲಿತ್ತು. ತಪ್ಪು ತಿದ್ದುವುದರಲ್ಲಿಯೂ ನಿಪುಣನಾಗಿಬಿಟ್ಟಿದ್ದ. ಕೀಬೋರ್ಡ್ ನೋಡದೇ ಕರೆಕ್ಷನ್ ಮಾಡುವಷ್ಟು ಕಂಪ್ಯೂಟರ್ ಪಟುವಾಗಿಬಿಟ್ಟಿದ್ದ ಅಮರೇಶ!

ಅವನು ಸಿದ್ಧಪಡಿಸುತ್ತಿದ್ದ ಲೇಖನವೂ ಬಹಳವೇ ಬಿಸಿಯಾದದ್ದು! ಸರ್ಕಾರವನ್ನು ಉರುಳಿಸಬಲ್ಲಂತಹ ವಿಷಯ! ಪರದೆಯ ಮೇಲೆ ಮೂಡುತ್ತಿದ್ದ ಹೆಸರುಗಳು ಬಹಳವೇ ದೊಡ್ಡ ಮನುಷ್ಯರದ್ದು (ಸಮಾಜದ ಕಣ್ಣುಗಳಲ್ಲಿ)

ತನ್ನ ಕುಟುಂಬದ ಭವಿಷ್ಯದ ಬಗ್ಗೆ ಆಲೋಚಿಸಿದ. ಅವನ ಪತ್ನಿ ಸುನೀತಿ ಅವನಷ್ಟೇ ಧೈರ್ಯವಂತೆ. ಅವಳೆಷ್ಟು ಧೈರ್ಯವಂತಳೆಂದರೆ ಅಮರೇಶನಿಗೆ "ಅಮರ್! ನಾವು ಆರಿಸಿರೋ ದೊಡ್ಡ ಮನುಷ್ಯರ ಸಣ್ಣ ಬುದ್ಧೀನ ಜನರಿಗೆ ತೋರಿಸಿ ಒಳ್ಳೇದು ಮಾಡ್ತಿದ್ದೀರಿ. ಯಾರಾದರೂ ಕೆಲವರಾದರೂ ಝಾಡಮಾಲಿ ಕೆಲಸ ಮಾಡದಿದ್ದರೆ ಎಲ್ಲ ಕಡೆ ಕೊಳಕು ಸೇರಿಬಿಡುತ್ತೆ. ಹಂದಿಯ ಕೆಲಸಾನ ಯಾರಾದರೂ ತಗೊಂಡು ಕ್ಲೀನ್ ಮಾಡಲೇಬೇಕು. ಆ ಹಂದಿ ಯಾರಿಗಾದರೂ ಆಹಾರವಾಗಿಬಿಟ್ಟರೆ... ವೆಲ್! ಈ ತ್ಯಾಗ ಇನ್‌ಎವಿಟಬಲ್" ಎಂದಿದ್ದಳು.

ಈ ಹಿನ್ನೆಲೆಯಲ್ಲಿ ಅವನು ಬಹಳವೇ ಶ್ರದ್ಧೆಯಿಂದ ಬರೆಯಲಾರಂಭಿಸಿದ್ದ. ಬರವಣಿಗೆ ಎನ್ನುವುದಕ್ಕಿಂತ ಬಹಿರಂಗಗೊಳಿಸುವ ಕೆಲಸ ಎನ್ನಬಹುದಿತ್ತೇನೋ. ನಿಜ ಹೇಳಬೇಕೆಂದರೆ ಅಧಿಕಾರದಲ್ಲಿರುವ ಜನರು ಹೆದರುವುದು ಕೇವಲ ಒಂದೇ ವಿಷಯಕ್ಕೆ. ಅವರ ಕರಾಮತ್ತುಗಳು ಬಯಲಿಗೆಳೆಯಲ್ಪಡುವುದರ ಬಗೆಗೆ. ವಿಶೇಷವಾಗಿ ಪತ್ರಕರ್ತರ ಬಗ್ಗೆ ಅವರಿಗೆ ಭಯ!

ಒಮ್ಮೆ ಹೆಸರು ಕೆಟ್ಟರೆ ಜನರು ಹೇಗೋ ಆ ಘಟನೆಯನ್ನು ನೆನಪಿಟ್ಟುಕೊಂಡು ಚುನಾವಣೆಗಳಲ್ಲಿ ಅವರನ್ನು ಕೆಳಗೆ ತಳ್ಳಿ, ಮತ್ತೊಬ್ಬರಿಗೆ ಅವಕಾಶ ಕೊಟ್ಟು ನೋಡುತ್ತಾರೆ... ತಮಗೆ ಮೋಸ ಮಾಡಲು! ತಾವು ಮೋಸ ಹೋಗಲು!!

ಅಮರೇಶ ಅವನ ಕೆಲಸವನ್ನು ಬಹಳವೇ ಗಂಭೀರವಾಗಿ ಪರಿಗಣಿಸಿದ್ದ. 'ಅಯ್ಯೋ ಮೂಢರೇ, ನಾನು ಈ ದುಷ್ಟ ಜನರನ್ನು ಅವರ ನಗ್ನ ರೂಪದಲ್ಲಿ

ತೋರಿಸುತ್ತಿದ್ದೇನೆ. ಅವರೊಳಗೆ ಅಡಗಿರುವ ಕುರೂಪವನ್ನೆಲ್ಲಾ ನೀವು ಕಾಣುತ್ತಿದ್ದೀರಿ. ಈ ವಿಕಾರ ಅವರು ಖಾಕಿ, ಖಾದಿ, ಕಾವಿ ತೊಟ್ಟರೆ ನಿಮಗೆ ಕಾಣಿಸುವುದಿಲ್ಲ. ಈಗ ಸಮಾಜಘಾತುಕರು ಈ ಮೂರು ವೇಷಗಳನ್ನಲ್ಲದೇ ಮೃದುವಾದ ಸೂಟ್ ಧರಿಸಿಯೂ ಇದ್ದು ಬ್ಯಾಂಕುಗಳು, ಸ್ಟಾಕ್ ಮಾರ್ಕೆಟ್‌ಗಳನ್ನೂ ದೋಚಿ, ಬಡಪಾಯಿ ಇನ್ವೆಸ್ಟರ್‌ಗಳನ್ನು ಬೀದಿಗೆ ನೂಕುತ್ತಾರೆ'

ಮೊದಲೆಲ್ಲಾ ಜನ ಚಿಕ್ಕ ಅಪವಾದಕ್ಕೇ ಹೆದರುತ್ತಿದ್ದರು. ಈಗ ಕೈಗಳು ಎಷ್ಟು ಕಡಿಮೆ ಕೊಳೆಯಾದರೆ ಅದೇ ದಿಟ್ಟತನ! ಎಂತಹ ಹೀನಾಯ ಪರಿಸ್ಥಿತಿ!

ಅಮರೇಶ ಬಹಳವೇ ಕಷ್ಟಪಟ್ಟು ಜೀವನದಲ್ಲಿ ಮುಂದೆ ಬಂದಿದ್ದ. ಅವನಲ್ಲಿನ ಸ್ವಾತಂತ್ರ್ಯದ ಹುಚ್ಚು ಅವನನ್ನು ಯಾರ ಕೈ ಕೆಳಗೂ ಕೆಲಸ ಮಾಡಲು ಬಿಡಲಿಲ್ಲ. ಕೊನೆಗೊಮ್ಮೆ ಒಂದು ವೃತ್ತಪತ್ರಿಕೆ ಆರಂಭಿಸಿದ. ಆದರೆ ಬಂಡವಾಳ ಅವನ ಗೆಳೆಯನದು. ನಿಜವಾದ ಅರ್ಥದಲ್ಲಿ ಗೆಳೆಯ. ಯಾವ ಖರ್ಚಿಗೂ ಏನನ್ನೂ ಹೇಳುತ್ತಿರಲಿಲ್ಲ ಆ ಗೆಳೆಯ. ಆ ಗೆಳೆಯನೊಂದಿಗೆ ಎರಡೇ ಸಾಧ್ಯ. ಉಳಿಯುತ್ತೀರಿ ಇಲ್ಲವೇ ಅಳಿಯುತ್ತೀರಿ. ಅಂತಹವನು ಬೆಂಬಲ ನೀಡಿದರೆ ನಮ್ಮ ಜೀವನ ಧ್ಯೇಯ, ಸಾಧನೆ ಬಲು ಸುಲಭ.

ಕೆಟ್ಟ ಕೆಲಸ ಮಾಡುತ್ತಿದ್ದ ಪ್ರತಿಯೊಬ್ಬನನ್ನೂ ಬೆತ್ತಲೆಗೊಳಿಸುತ್ತಾ ಹೋದ ಅಮರೇಶ. ಭೂಗತ ಪ್ರಪಂಚದಲ್ಲಿ ಇದ್ದು ಅವರನ್ನೇ ಬಹಿರಂಗಗೊಳಿಸುತ್ತಿದ್ದ ಅಮರೇಶನ ಸಂಗತಿ ದೊಡ್ಡ ಸುದ್ದಿಯಾಯಿತು. ಅವರಾರೂ ಅಮರೇಶನ ಕೂದಲು ಕೊಂಕಿಸಲೂ ಸಾಧ್ಯವಾಗದಿದ್ದುದಕ್ಕೆ ಕಾರಣ – ಅವನಿಗಿದ್ದ ಅಜ್ಞಾತ ಗೆಳೆಯನ ಶ್ರೀರಕ್ಷೆ.

ಅಮರೇಶನನ್ನು ಹೆದರಿಸಿ ಸಾಕಾದ ನಂತರ ಅವನನ್ನು ಬೇಡಿಕೊಳ್ಳಲಾರಂಭಿಸಿದರು. ಅದು ಕೂಡಾ ಕೆಲಸ ಮಾಡಲಿಲ್ಲ! ಆಗ ಅವನ 'ರಕ್ಷಕ'ನನ್ನು ಕೆಡವಲು ನೋಡಿದರು.

ಆ ಮನುಷ್ಯನಿಗೆ ಭೂಗತ ಪ್ರಪಂಚದ ಜನರೆಂದರೆ ಒಂದು ರೀತಿ ಇಷ್ಟ. ಏಕೆಂದರೆ ಅವನೇ ಒಬ್ಬ ಭೂಗತ ಪ್ರಪಂಚದ 'ನಿವಾಸಿ'

ಅವನು ಅತ್ಯಂತ ಮೃದುವಾಗಿ, ಸ್ನೇಹಪೂರ್ವಕವಾಗಿ "ಅಮರ್, ನೀನು ಈ ಮನುಷ್ಯನ ಬಗ್ಗೆ ಬರೆಯೋದನ್ನ ನಿಲ್ಲಿಸು. ಇನ್ಮೇಲೆ ಸರಿಯಾಗಿರ್ತೀನೀಂತ ನನಗೆ ವಚನ ನೀಡಿದ್ದಾನೆ. ಎನಿ ವೇ, ನಿನ್ನ ಕರ್ತವ್ಯ ನೀನು ಮಾಡಿದ್ದೀ. ಒಂದು

ವೇಳೆ ಅವನು ಮತ್ತೆ ತಪ್ಪು ಮಾಡಿದರೆ ಜನ ಅವನಿಗೆ ಸರಿಯಾದ ಬುದ್ಧಿ ಕಲಿಸ್ತಾರೆ. ನೀನವವನನ್ನು ಮರೆತುಬಿಡು" ಎನ್ನುತ್ತಿದ್ದ.

ಆ ಮಾತು ಮಾತ್ರವೇ ಸ್ನೇಹಪೂರ್ವಕ. ಅಷ್ಟೇ!

ಆಗ ಅಮರೇಶ್ ನಿಟ್ಟುಸಿರಿಟ್ಟು ಹೊಸ ಮಿಕವನ್ನು ಬಯಲಿಗೆಳೆಯುತ್ತಿದ್ದ. ಅವನಿಗೆ ಅನ್ನಿಸುತ್ತಿತ್ತು. ಯಾರಿಗೆ ಸಿದ್ಧಾಂತಗಳಿದ್ದರೂ ಅವರದೇ ಆದ ಪರಿಧಿಯ ಒಳಗೇ ಕೆಲಸ ಮಾಡಬೇಕಾಗುತ್ತದೆ; ಅದರಿಂದ ಹೊರಬರುವುದು ಕಷ್ಟ ಎಂದು.

ಆದರೆ ಫಜಲ್ ಒಬ್ಬ ಫೈರ್ ಬ್ರ್ಯಾಂಡ್! ಅವನು ಒಬ್ಬೊಂಟಿಗ. ಯಾವ ಬೆದರಿಕೆಗೂ ಅವನು ಸೊಪ್ಪು ಹಾಕುವವನಲ್ಲ. ಒಂದೇ ರೀತಿ ಯೋಚಿಸುವ ಮನುಷ್ಯರು ಸಾಮಾನ್ಯವಾಗಿ ಒಬ್ಬರೊಂದಿಗೊಬ್ಬರು ಹೊಂದಿಕೊಳ್ಳುತ್ತಾರೆ. ಇದೇ ಅಮರೇಶ್ ಮತ್ತು ಫಜಲ್ ನಡುವೆ ಉಂಟಾಗಿತ್ತು.

ಅವರಿಬ್ಬರೂ ಒಬ್ಬರನ್ನೊಬ್ಬರು ಅತ್ಯಂತ ಅಪಾಯಕಾರೀ ಸನ್ನಿವೇಶದಲ್ಲಿ ಭೇಟಿಯಾಗಿದ್ದರು.

"ಈಗೇನು ಮಾಡೋಣ?" ಕೇಳಿದ ಸ್ವರೂಪ್. ಮಿತ್ರಜೀತ್ ದಿಗ್ಭ್ರಮೆಗೊಂಡಿದ್ದ. ಇಲ್ಲಿ ಏನಾಗಿದೆ? ತಾನು ತೀರಾ ತಡವಾಗಿ ಬಂದಿದ್ದಾನೆಯೇ? ಅವಳಿಗೆ ಫೋನ್ ಮಾಡಿದ್ದರೆ ಏನಾದರೂ ಉಪಯೋಗವಾಗಿರುತ್ತಿತ್ತಾ?

ಅವಳು ಅಪಾಯದಲ್ಲಿರಬಹುದೆಂದು ಮೊದಲೇ ಆಲೋಚಿಸದಿದ್ದುದಕ್ಕೆ ತನ್ನನ್ನೇ ತಾನು ಬೈದುಕೊಂಡ.

ಪಾಲ್‌ನ ಗೆಳತಿ ಅವಳೆಂದೂ, ಅವಳಿಗೆ ರಕ್ಷಣೆ ನೀಡಬೇಕಿತ್ತೆಂದೂ ತಾನು ಮೊದಲೇ ಯೋಚಿಸಬೇಕಿತ್ತು. ಪಾಲ್ ಸಾಯುವುದಕ್ಕೆ ಮೊದಲು ಅವಳು ಅವನೊಂದಿಗೆ ಮಾತನಾಡಿದ್ದಿರಬಹುದು. ಈಗ ತನ್ನ ದಡ್ಡತನಕ್ಕೆ ಮನದಲ್ಲೇ ಹಲುಬಿದ.

"ನನಗೇನೂ ತಿಳಿಯುತ್ತಿಲ್ಲ. ಆದರೆ ಯಾವುದಾದರೂ ಸುಳಿವು ಸಿಗುತ್ತಾ ಅಂತ ನೋಡೋಣ" ಎಂದು ಹೇಳಿದ ಮಿತ್ರಜೀತ್ ಒಂದೆಡೆಯಿಂದ ಹುಡುಕುತ್ತಾ ಬಂದ.

ಎಲ್ಲಿಯಾದರೂ ಒಂದು ಚಿಕ್ಕ ಸುಳಿವು ಸಿಕ್ಕಿ ಲೊರೆಟ್ಟಾಳ ಪತ್ತೆ ಆಗುವ ಸಾಧ್ಯತೆ ಇರಬಹುದು. ತಾನು ತಡಮಾಡಿರಬಹುದೇ ಎಂಬ ಯೋಚನೆ ಗುಂಗೀ

ಹುಳುವಿನಂತೆ ಅವನ ಮೆದುಳನ್ನು ಕೊರೆಯತೊಡಗಿತು. ಅವಳನ್ನು ಉಳಿಸಬೇಕೆಂಬ ಧ್ಯಾನ ಅವನ ತಲೆಯನ್ನು ರಿಮ್ಮನೆ ಬಾರಿಸಹತ್ತಿತು. ತಾನೇ ಅವಳ ಅಪಹರಣಕ್ಕೆ ಹೊಣೆ ಎಂಬ ಅಪರಾಧೀ ಭಾವ ಮೂಡಿತು.

ಅದನ್ನೇ ಸ್ವರೂಪ್‌ಗೆ ಅರುಹಿದ.

"ಅವಳು ಅಪಹರಿಸಲ್ಪಟ್ಟಿದ್ದಾಳೇಂತ ಹೇಗಂದುಕೊಳ್ತೀ?" ಕೇಳಿದ ಸ್ವರೂಪ. "ತರ್ಕಬದ್ಧವಾಗಿ ಯೋಚನೆ ಮಾಡು. ಅವಳು ಸತ್ತಿರುವ ಪಾಲ್‌ನ ಗೆಳತಿ. ಅಷ್ಟೇ ಅಲ್ಲ, ಆಪಾದಿತ ಸಿಲ್ವೆಸ್ಟರ್‌ನ ಹೆಂಡತಿ. ಸಿಲ್ವೆಸ್ಟರ್‌ನನ್ನು ಬಿಡುಗಡೆಗೊಳಿಸಬಲ್ಲ ಯಾವುದಾದರೂ ಸಂಗತಿ ಅವಳು ತಿಳಿದುಕೊಂಡಿರಬಹುದು. ಇದು ಅವಳನ್ನು ಕದ್ದೊಯ್ದಿರುವವರಿಗೆ ಬೇಡದ ವಿಷಯ"

"ಅವರಿಗೆ?"

"ಪೊಲಿಟಿಕಲ್ ಮಾಫಿಯಾ. ಇದು ನನ್ನ ಶಬ್ದಗಳಲ್ಲ. ಸಿಲ್ವೆಸ್ಟರ್ ಬಳಸಿದ್ದು"

"ಇದಲ್ಲದೇ ಬೇರಾವ ಸಂಗತಿ ನಿನಗೆ ಅವಳು ಕಿಡ್ನಾಪ್ ಆಗಿದೇಂತ ಹೇಳ್ತಿದೆ?"

"ಇಲ್ನೋಡು!" ಕೈ ತೋರಿದ ಮಿತ್ರಜೀತ್. "ಈ ಬ್ಯಾಗು ಇಲ್ಲಿ ಬಿದ್ದಿದೆ. ಇದು ಅವಳದೇ ಬ್ಯಾಗಿರಬೇಕು. ಇಲ್ಲಿ ಸ್ವಲ್ಪ ಚಿಲ್ಲರೆ ಚೆಲ್ಲಿದೆ. ಇದು ಅವಸರದಲ್ಲಿ ಬಿದ್ದಿರಬೇಕು ಅಥವಾ..."

"ಅಥವಾ ಇದನ್ನು ಬೇಕೆಂದೇ ಇಲ್ಲಿ ಬೀಳಿಸಿರಬಹುದು" ಎಂದ ಸ್ವರೂಪ್. ಮಿತ್ರಜೀತ್ ಬಾಗಿ ಏನನ್ನೋ ನೆಲದ ಮೇಲೆ ಹುಡುಕುತ್ತಿದ್ದವನು ಹಠಾತ್ತನೆ ಎದ್ದು ನಿಂತು, "ನೀನು ಹೇಳಿದ್ದರಲ್ಲಿ ಅರ್ಥ ಇದೆ!" ಎಂದ ಉದ್ವೇಗದಿಂದ. ನಂತರ "ನಾನು ಸಾಬೀತು ಮಾಡಬಲ್ಲೆ!" ಎಂದ.

ಸ್ವರೂಪ್ ಅವನನ್ನೇ ಪ್ರಶ್ನಾರ್ಥಕವಾಗಿ ನೋಡಿದ.

"ನಾನು ನಿನ್ನೆ ರಾತ್ರಿ ಬಂದಾಗ  ಈ ರೂಮು ಬಹಳ ಕ್ಲೀನ್ ಆಗಿತ್ತು. ಹಾಗೆ ಮನೇನ ನೀಟಾಗಿಡೋ ಲೊರೆಟ್ಟಾ ಹೀಗೆ ಅವಳ ಬ್ಯಾಗ್, ಚಿಲ್ಲರೆ ಎಸೀತಾಳೆ ಅಂದರೆ ನಂಬೋದು ಅಸಾಧ್ಯ!"

ಮಿತ್ರಜೀತ್ ಫೋನಿನ ಬಳಿಗೆ ನಡೆದ. ಇನ್ನೊಂದು ಹೊಸ ಸಂಗತಿ ಕಣ್ಣಿಗೆ ಬಿತ್ತು. ಫೋನ್ ಸರಿಯಾಗಿ ಇಟ್ಟಿರಲಿಲ್ಲ. ಸೊಟ್ಟಗೆ ಕುಳಿತಿತ್ತು ಫೋನು. ಇದಕ್ಕೆ

ಕಾರಣಗಳು ಎರಡಿರಬಹುದು. ಯಾರೋ ಬೇಕೆಂದೇ ಅದನ್ನು ಹಾಗಿಟ್ಟಿರಬೇಕು ಅಥವಾ ಅದು ಅವಸರದಲ್ಲಿ ಹಾಗಾಗಿರಬಹುದು.

ಅಲ್ಲೆಲ್ಲಾ ಕೂಲಂಕಷವಾಗಿ ಹುಡುಕಿದ. ಒಂದು ಚಿಕ್ಕ ಪೇಪರ್ ವೆಯ್ಟ್, ಒಂದು ಪೆನ್, ಟೆಲಿಫೋನ್ ಸ್ಟಾಂಡ್ ಮೇಲೆ, ಟೆಲಿಫೋನ್ ಪಕ್ಕದಲ್ಲಿದ್ದವು. ಕರವಸ್ತ್ರದ ಸಹಾಯದಿಂದ ಪೇಪರ್ ವೆಯ್ಟ್ ಎತ್ತಿದ. ಕಿರುನಗೆಯೊಂದು ಅವನ ತುಟಿಗಳ ಮೇಲೆ ಮಿಂಚಿ ಮಾಯವಾಯಿತು.

ಡೂಡ್‌ಲಿಂಗ್! ಲೊರೆಟ್ಟಾಳಿಗೆ ಡೂಡ್ಲಿಂಗ್ ಅಭ್ಯಾಸವಿದೆ! ಟೆಲಿಫೋನಿನಲ್ಲಿ ಯಾರೊಂದಿಗಾದರೂ ಮಾತಾಡುತ್ತಾ, ಪೆನ್ನಿನಿಂದ ಗೀಚುವ ಅಭ್ಯಾಸ!

ಸರಿಯಾದ ಪರಿಶೋಧ ನಡೆಸಿದರೆ ಡೂಡ್ಲಿಂಗ್ ಮೂಲಕ ಅವಳನ್ನು ಅಪಹರಿಸಿದವರು ಯಾರೆಂದೋ ಅಥವಾ ಯಾರೊಂದಿಗೆ ಅವಳು ಸಂಭಾಷಣೆ ನಡೆಸಿದ್ದಳೋ ತಿಳಿಯಬಹುದು.

ಐದು ನಂಬರ್‌ಗಳಿದ್ದವು. ಜೊತೆಗೆ ಐದು ಇಂಗ್ಲೀಷ್ ಅಕ್ಷರಗಳು. ಅದನ್ನು ತನ್ನ ಜೇಬಿನಿಂದ ನೋಟ್‌ಬುಕ್ ತೆಗೆದು ಅದರಲ್ಲಿ ಬರೆದುಕೊಂಡ. ಸ್ವರೂಪ್ ಅವನನ್ನೇ ಆಸಕ್ತಿಯಿಂದ ನೋಡತೊಡಗಿದ. ಫೋನನ್ನೇ ದಿಟ್ಟಿಸಿದ ಮಿತ್ರಜೀತ್ ಕರ್ಛೀಫಿನ ಸಹಾಯದಿಂದ ರಿಸೀವರ್ ಎತ್ತಿ ಅದನ್ನು ಮುಚ್ಚಿದ.

ಗ್ಯಾಸ್ ಏಜೆನ್ಸಿ ಮೊದಲನೆಯದು. ಎಲೆಕ್ಟ್ರಿಸಿಟಿ ಬೋರ್ಡ್ ಎರಡನೆಯದು. ಟೆಲಿಫೋನ್ಸ್ ಮೂರನೆಯದು. ನಾಲ್ಕನೆಯ ಕಾಲ್ ಒಬ್ಬ ಹೆಂಗಸು ರಿಸೀವ್ ಮಾಡಿ 'ಪ್ರಾವಿಷನ್ ಸ್ಟೋರ್' ಎಂದಳು.

ನಿರಾಶೆಯಿಂದ ಐದನೆಯ ನಂಬರ್ ಡಯಲ್ ಮಾಡಿದ. ಅದು ಸುಮ್ಮನೆ ರಿಂಗಾಗುತ್ತಲೇ ಇತ್ತು.

ಆ ನಂಬರಿನ ಅಡ್ರೆಸ್ ಅನ್ನು ಪತ್ತೆ ಹಚ್ಚಲು ಟೆಲಿಫೋನ್ ಡಿಪಾರ್ಟ್‌ಮೆಂಟ್‌ನಲ್ಲಿದ್ದ ತನ್ನ ಪರಿಚಿತಳಿಗೆ ಫೋನ್ ಮಾಡಿದ.

ಮತ್ತಷ್ಟು ಸುಳಿವುಗಳಿಗಾಗಿ ಹುಡುಕಾಡಿದರು. ಏನೂ ಸಿಗಲಿಲ್ಲ.

ಮನೆಯ ಬೀಗವೂ ಹಾಳಾಗಿಲ್ಲ. ಅಂದರೆ ಅವಳಿಗೋ, ಅವಳ ಪತಿಗೋ ತಿಳಿದವರೇ ಮನೆಗೆ ಬಂದಿದ್ದರಿಂದ ಬಾಗಿಲು ತೆರೆದಿದ್ದಾಳೆ. ಆದರೆ ತನ್ನತ್ತ ಗುರಿಯಿಡಲ್ಪಟ್ಟ ಗನ್‌ನ ನಳಿಕೆಯನ್ನು ನೋಡುತ್ತಲೇ ಪ್ಯಾಕಿಂಗ್ ಮಾಡಿ ಮನೆಗೆ ಬೀಗ ಹಾಕಿದ್ದಾಳೆ.

“ಓಹೋ, ಇದೇ ಇಲ್ಲಿ ನಡೆದಿರುವುದರ ವಿವರಣೆ!” ಎಂದು ಗಟ್ಟಿಯಾಗಿಯೇ ಉದ್ಗರಿಸಿದ ಮಿತ್ರಜೀತ್. ಸ್ವರೂಪ್ ಹುಬ್ಬು ಮೇಲೆತ್ತಿದ.

ಮಿತ್ರಜೀತ್ ತನ್ನ ಆಲೋಚನಾಸರಣಿಯನ್ನು ವಿವರಿಸಿದ. ಸ್ವರೂಪ್ ಅವನ ವಾದವನ್ನು ಒಪ್ಪುವಂತೆ ತಲೆದೂಗಿ, “ಇದರರ್ಥ ಅವಳು ಬೇಕೆಂದೇ ಚಿಲ್ಲರೆಯನ್ನು ಬಿಸಾಡಿದ್ದಾಳೆ” ಎಂದು ಹೇಳಿ, ನೆಲಕ್ಕೆ ಹಾಸಿದ್ದ ಕಾರ್ಪೆಟ್‌ನತ್ತ ನೋಡಿ, “ಕಾರ್ಪೆಟ್ ಇದ್ದಿದ್ದರಿಂದ ಚಿಲ್ಲರೆ ಬಿದ್ದ ಸದ್ದು ಉಂಟಾಗಿಲ್ಲ” ಎಂದ.

“ಈಗ ಮುಂದಿನ ಪ್ರಶ್ನೆ ಎಂದರೆ...” ಅವಳ ಮನೆಯಿಂದ ಹೊರಬಂದು ಬಾಗಿಲು ಭದ್ರ ಮಾಡುತ್ತಾ ಮಿತ್ರಜೀತ್ ಹೇಳಿದ. “ಎಲ್ಲಿದ್ದಾಳೆ ಅವಳು..?”

# 7

ಫಜಲ್ ಫೈರ್ ಬ್ರ್ಯಾಂಡ್ ಮನುಷ್ಯ.

ಅಮರೇಶ್ ಅವನ ಲೇಖನಿಗೆ (ಕಂಪ್ಯೂಟರ್ಗೆ!) ಹೆಚ್ಚು ಕೆಲಸ ಕೊಟ್ಟರೆ, ಫಜಲ್ ತನ್ನ ಬಾಯಿಗೆ ಕೆಲಸ ಕೊಡುತ್ತಿದ್ದ. ಅವನೊಬ್ಬ ಮಾತುಗಾರ. ಅವನ ತಂದೆ ಸ್ವಾತಂತ್ರ್ಯ ಹೋರಾಟಗಾರರಾಗಿದ್ದರು. ಜಾತಿಯ ಬಗ್ಗೆ ಅವರಿಗೆ ಯಾವುದೇ ವಿಶೇಷ ಆಸಕ್ತಿ ಇರಲಿಲ್ಲ. ಅವನ ತಂದೆ, ತಾತ, ಮುತ್ತಾತ, ಅವರ ತಂದೆ ಎಲ್ಲರೂ ಶ್ರೀರಂಗಪಟ್ಟಣಕ್ಕೆ ಸೇರಿದವರು. ಅಂದರೆ ಅವರು ಭಾರತೀಯರು. ಬ್ರಿಟಿಷರನ್ನು ಒಂದು ರೀತಿಯ ಕಿರುಕುಳ ಕೊಡುತ್ತಾ ಗೋಳು ಹುಯ್ದುಕೊಂಡರು. ಗುಂಡುಪಿನ್‌ನಂತೆ ಚುಚ್ಚುತ್ತಾ ಹೋದರು. ಅನೇಕ ಬ್ರಿಟಿಷರನ್ನು ಕಾವೇರಿಯಲ್ಲಿ ಮುಳುಗಿಸಿ ಕೊಂದರು. ಅದಕ್ಕೆ ಎಂದೂ ಪಶ್ಚಾತ್ತಾಪ ಪಡಲಿಲ್ಲ. ಇದು ನಮ್ಮ ದೇಶ. ದೇವರು ನಮಗೆ ನೀಡಿರುವ ನೆಲ. ಇದರ ಮೇಲೆ ಯಾರೋ ಬಂದು ಏಕೆ ಆಳಬೇಕು? ಫಜಲ್‌ನ ತಂದೆ ಹತ್ತನೆಯ ತರಗತಿವರೆಗೆ ಮಾತ್ರ ಓದಿದ್ದರು. ಆದರೆ ಮಗನನ್ನು ಜರ್ನಲಿಜಂ ಓದಲು ಹುರಿದುಂಬಿಸಿದರು. ಫಜಲ್ ಈ ಭಾವನೆಗಳನ್ನು ಅರೆದು ಕುಡಿಯುತ್ತಲೇ ಬೆಳೆದ. ಶಾಲೆಗೆ ಹೋಗಲು ಆರಂಭಿಸಿದಾಗಿನಿಂದ ಅವನ ಯೋಚನೆ ಶ್ರೀಮಂತ ಮತ್ತು ಬಡವರ ನಡುವಿನ ವ್ಯತ್ಯಾಸದೆಡೆಗೇ ಹೊರಳುತ್ತಿತ್ತು. ಯಾಕೆ ನಮ್ಮನ್ನು ಸರ್ಕಾರವು ಬೇರೆ ರೀತಿಯಲ್ಲಿ ಕಾಣುತ್ತಿದೆ? ನಾವೂ ಮನುಷ್ಯರೇ ತಾನೇ? ಮಾಡಲು ಬೇರೆ ಒಳ್ಳೆಯ ಕೆಲಸವಿಲ್ಲದಿದ್ದಾಗಲಾಗಲೀ, ಬೇರಾವುದಾದರೂ ದೊಡ್ಡ ಹೊಲಸಿನ ಕೆಲಸವನ್ನು ಮುಚ್ಚಿಡಬೇಕಾದರಾಗಲೀ ಬಡಜನರನ್ನು ಕೆರಳಿಸುತ್ತಾರೆ? ಇತ್ಯಾದಿ ಆಲೋಚನೆಗಳು ಅವನನ್ನು 'ಮೂಡೀ'ಯನ್ನಾಗಿ ಮಾಡುತ್ತಿದ್ದವು.

ಶಾಲೆಯ ಮ್ಯಾಗಝೀನ್‌ಗಾಗಿ ಅನೇಕ ಲೇಖನಗಳನ್ನು ಬರೆದಿದ್ದ. ಪ್ರಿನ್ಸಿಪಾಲರೇ ಅದನ್ನು ಓದಿ ಫಜಲ್‌ನನ್ನು ಕರೆಸುತ್ತಿದ್ದರು.

"ನೋಡು ಫಜಲ್, ಇದನ್ನು ನೀನು ಜೋಕ್‌ನಂತೆ ಬರೆದಿದ್ದೀ. ಜನ ಅದನ್ನ ಹೇಗೆ ಸ್ವೀಕರಿಸುವರೆಂದು ಆಲೋಚಿಸಿರುವೆಯಾ?" ಎಂದು ಮೃದುವಾಗಿ ಕೇಳುತ್ತಿದ್ದರು.

“ಜೋಕ್‌ನ ಜೋಕ್‌ನಂತೆಯೇ ನೋಡ್ತಾರೆ ಸರ್ ಎಲ್ಲರೂ” ಫಜಲ್ ಮುಗ್ಧನಂತೆ ಉತ್ತರಿಸುತ್ತಿದ್ದ.

“ಇಲ್ಲ ಮಗೂ, ಈ ಜೋಕ್ ಅನೇಕ ಜಾತಿಯವರಿಗೆ ನೋವುಂಟು ಮಾಡಬಲ್ಲದು” ಪ್ರಿನ್ಸಿಪಾಲ್ ತಿಳಿಯಹೇಳಿದ್ದರು.

“ನಮ್ಮಲ್ಲಿ ಯಾಕೆ ಅಷ್ಟು ಜಾತಿಗಳಿವೆ ಸರ್?” ಪ್ರಶ್ನೆ ಬಹಳವೇ ಮೆಲ್ಲಗೆ, ಆದರೆ ದೃಢವಾಗಿ ಬರುತ್ತಿತ್ತು. ಪ್ರಿನ್ಸಿಪಾಲ್‌ರದು ಕೇವಲ ಮೌನದ ಉತ್ತರ!

ಕಾಲೇಜಿನ ದಿನಗಳನ್ನು ಬಹಳವೇ ಆನಂದಿಸಿದ್ದ ಫಜಲ್. ಅಲ್ಲಿ ಜಾತಿ ಹಿಂದಿನ ಸೀಟು ಸೇರಿತ್ತು. ರೋಟರಾಕ್ಟ್ ಕ್ಲಬ್‌ನಲ್ಲಿ ಸದಸ್ಯನಾಗಿದ್ದ ಫಜಲ್. ಅನೇಕ ದಲಿತ, ಬಲಹೀನ, ದೀನ ಜನರನ್ನು ಭೇಟಿಯಾಗಿ ಮಾತಾಡಿಸುತ್ತಿದ್ದ. ಅವರ ಕಷ್ಟಗಳನ್ನು ಕೇಳಿಸಿಕೊಳ್ಳುತ್ತಿದ್ದ.

ಪ್ರಾಯಶಃ ಇದು ಜರ್ನಲಿಜಂ ಪದವಿ ಪಡೆಯುವಾಗ, ಮುಂದೆ ಜನಪ್ರಿಯ ಪತ್ರಿಕೆಗೆ ಕೆಲಸ ಮಾಡುವಾಗ ಉಪಯೋಗಕ್ಕೆ ಬಂದಿತ್ತು.

ಮುಕ್ಕಾಲು ಪಾಲು ಜನರಿಗೆ ಕೇಳಿಸಿಕೊಳ್ಳುವ ಸಹನೆ, ತಾಳ್ಮೆಯ ಅಗತ್ಯವಿದೆ. ಸಾಮಾನ್ಯರ (ಕಾಲ್ಪನಿಕ)ಸಮಸ್ಯೆಗಳನ್ನು ಕೇಳಿಸಿಕೊಳ್ಳುವ ಸಹಾನುಭೂತಿ ತೋರಿದರೆ ಸಾಕು, ಅವರ ಬಹ್ವಂಶ ಸಮಸ್ಯೆಗಳು ಪುರ್ರೆಂದು ಹಾರಿಹೋಗುತ್ತವೆ. ತನ್ನ ಬರವಣಿಗೆಗಳಲ್ಲೂ ಅದನ್ನು ಅಳವಡಿಸಿಕೊಂಡ.

ಅವನ ಮೊದಲ ಕಥೆ ಸ್ಪರ್ಧೆಯೊಂದರಲ್ಲಿ ಆಯ್ಕೆಯಾಗಿತ್ತು. ಆ ಚಿಕ್ಕ ವಯಸ್ಸಿಗೇ ಬಹಳವೇ ಪ್ರೌಢ ಬರವಣಿಗೆ. ಗೆಳೆಯರ ಪ್ರತಿಕ್ರಿಯೆಗಳಿಂದ ಅವನು ಮೂಕನಾದ. ಕಥೆಯನ್ನು ಹೊಗಳಿ, ‘ಯೋಚಿಸುವಂತೆ ಮಾಡುತ್ತದೆ’ ಎಂದಿದ್ದರು.

ಅದೇ ಅವನ ಬರವಣಿಗೆಯ ಧ್ಯೇಯವಾಗಿಬಿಟ್ಟಿತು. ಪ್ರತಿ ಕಥೆ, ಲೇಖನ, ಆಲೋಚಿಸವಂತೆ ಮಾಡಬೇಕು. ಇದು ಅವನನ್ನು ಬಡವರ ಬಗ್ಗೆ, ದೀನರ ಬಗ್ಗೆ ಬರೆಯಲು ಪ್ರಚೋದಿಸಿತು.

ಒಂದು ದಿನ ಅವನು ವಿಶಿಷ್ಟ ವ್ಯಕ್ತಿಯನ್ನು ಭೇಟಿ ಮಾಡಿದ.

ಆ ಭೇಟಿ ಒಂದು ಸಾಹಸವೇ ಆಗಿತ್ತು. ಆ ವ್ಯಕ್ತಿ ಇವನ ಗೆಳೆಯನಾದ...

ಆ ದಿನ ಫಜಲ್ ಅವಸರವಾಗಿ ಹೊರಟಿದ್ದ.

ಬೈಕಿನ ಮೇಲೆ ರಸ್ತೆಗಳಲ್ಲಿ ವೇಗವಾಗಿ ಹೋದ. ಬಜೆಟ್ ಬಗ್ಗೆ ಮಾತಾಡಲು ಕರೆದಿದ್ದ ದೊಡ್ಡ ವಾಣಿಜ್ಯೋದ್ಯಮಿಯನ್ನು ಭೇಟಿ ಮಾಡಲು ಕೆಲವು ಕ್ಷಣಗಳು ಉಳಿದಿದ್ದವು. ಸಾಧಾರಣವಾಗಿ ಅವನು ಎಂದೂ ತಡಮಾಡುವವನಲ್ಲ. ಇಂದು ವಿದ್ಯುಚ್ಚಕ್ತಿ ಮಂಡಲಿಯವರ (ಅವ)ಕೃಪೆ ಅವನಿಗೆ ತೊಂದರೆ ಮಾಡಿ ಎಲ್ಲವೂ ನಿಧಾನವಾಗಿತ್ತು.

ಟ್ರಾಫಿಕ್ ಸಿಗ್ನಲ್ ಹಸಿರಾಗಲು ಕಾದಿದ್ದ. ಇನ್ನೇನು ದೀಪ ಬರಬೇಕು ಮುಂದೆ ಹೋಗಬೇಕು ಎನ್ನುವಷ್ಟರಲ್ಲಿ ಯಾರೋ 'ಎಲ್ಲಿಂದಲೋ' ವೇಗವಾಗಿ ಬಂದು ಅವನ ಹಿಂದೆ ಕುಳಿತುಬಿಟ್ಟ.

ಫಜಲ್ ಅಚ್ಚರಿಗೊಂಡ. ಗಾಡಿ ನಿಲ್ಲಿಸಲು ನೋಡಿದ. ಹಿಂದೆ ಕುಳಿತಿದ್ದವ ಗಟ್ಟಿಯಾದ ವಸ್ತುವೊಂದನ್ನು ಅವನ ಬೆನ್ನಿಗೆ ಚುಚ್ಚಿ ಕರ್ಕಶವಾಗಿ "ಸುಮ್ಮನೆ ಮುಂದೆ ಹೋಗಿ ರಸ್ತೆಯ ಕೊನೆಯಲ್ಲಿ ಬಲಗಡೆಗೆ ತಿರುಗಿ" ಎಂದ.

ಫಜಲ್ ಎಡಗಡೆಗೆ ತಿರುಗಿ ವಾಣಿಜ್ಯೋದ್ಯಮಿಯನ್ನು ಭೇಟಿಯಾಗಬೇಕಿತ್ತು. ಕೈಗಡಿಯಾರ ನೋಡಿಕೊಂಡ. ಆಗಲೇ ಹತ್ತು ನಿಮಿಷಗಳ ವಿಳಂಬ ಆಗಿತ್ತು. ನಿಟ್ಟುಸಿರಿಟ್ಟು ಹಿಂದೆ ಕುಳಿತಿದ್ದವನ ಮಾತು ಕೇಳಲು ನಿರ್ಧರಿಸಿ, ರಸ್ತೆಯ ಕೊನೆಯಲ್ಲಿ ಬಲಗಡೆಗೆ ತಿರುಗಿದ.

ಆ ವ್ಯಕ್ತಿ ಬಹಳವೇ ಆರಾಮವಾಗಿದ್ದಂತಿದ್ದ. ಈಗ ಬೆನ್ನಿನ ಹಿಂದೆ ಚುಚ್ಚಲ್ಪಟ್ಟಿದ್ದ ಆ ವಸ್ತು (ಗನ್?) ಸ್ವಲ್ಪ ಸಡಿಲಗೊಂಡಂತಿತ್ತು. ಆದರೂ ಆ ವ್ಯಕ್ತಿಯ ಮೇಲೆ ಆಕ್ರಮಣ ಮಾಡುವುದಾಗಲೀ, ಓಡಿ ಹೋಗುವುದಾಗಲೀ ಮಾಡಬಾರದೆಂದು ನಿರ್ಣಯಿಸಿದ.

ಈ ಘಟನೆಯ ಬುಡವನ್ನು ತಲುಪಬೇಕು. ನಂತರ ಇದರ ಬಗ್ಗೆ ಬರೆದರೆ ಆಸಕ್ತಿಪೂರ್ಣ ಸ್ಟೋರಿ ಆಗಬಹುದು!

ಬರವಣಿಗೆಯ ಆಲೋಚನೆ ಬಂದೊಡನೆ ಅವನ ತುಟಿಗಳ ಮೇಲೆ ತುಂಟನಗೆ ಲಾಸ್ಯವಾಡಿತು. ಈಗೆಲ್ಲಾ ಏನು ಗಮನಿಸಿದರೆ ಅದರ ಬಗ್ಗೆ ಬರೆಯಬೇಕೆಂಬ ಚಪಲ ಉಂಟಾಗುತ್ತಿತ್ತು!

ಹಿಂದೆ ಕುಳಿತವನು ಹೇಳಿದ ದಿಕ್ಕು, ರಸ್ತೆಗಳಲ್ಲಿ ಹೋಗುವುದರಲ್ಲಿ ತನ್ನ ಮೆದುಳನ್ನು ಕೇಂದ್ರೀಕರಿಸಿದ. ಬೆಳಕು ಮಂಕಾಗುತ್ತಾ, ಕತ್ತಲೆ ಶಕ್ತಿಯುತವಾಗುತ್ತಾ ಬಂದಿದ್ದವು. ಪಿಲಿಯನ್ ರೈಡರ್ ತೋರುತ್ತಿದ್ದ ದಾರಿ ಊರಿನ ಸರಹದ್ದನ್ನು ದಾಟಿತ್ತು.

"ಇನ್ನೂ ಎಷ್ಟು ದೂರ ಹೋಗಬೇಕು?" ಎಂದ ಸ್ವಲ್ಪವೇ ಪಕ್ಕಕ್ಕೆ ತಿರುಗಿ. ಹಾಗೆಯೇ ಆ ವ್ಯಕ್ತಿಯ ಮುಖವನ್ನೂ ನೋಡಬೇಕೆಂಬ ಆಸೆಯಿತ್ತು. ಬೆನ್ನಿಗೆ ತಾಕುತ್ತಿದ್ದ ನಳಿಕೆ ಈಗ ಮತ್ತಷ್ಟು ಒತ್ತಿತು.

"ಏಯ್! ತಲೆಹರಟೆ ಮಾಡ್ಬೇಡಾ! ಸುಮ್ನೆ ಹೋಗ್ತಿರು!" ಗದರಿದ ಆ ವ್ಯಕ್ತಿ.

ಫಜಲ್‌ಗೆ ಕಿರಿಕಿರಿ ಉಂಟಾಯಿತು. "ಹೇ, ಲುಕ್! ಪೆಟ್ರೋಲ್ ಕಡಿಮೆ ಇದೆ. ನಿನ್ನ ಕೈಲೇ ತಳ್ಳಿಸಬೇಕಾಗುತ್ತೆ" ಎಂದ ಗಟ್ಟಿಯಾಗಿ.

ಆಗ ಆ ವ್ಯಕ್ತಿ "ಇನ್ನು ಸ್ವಲ್ಪ ದೂರ ಮಾತ್ರ" ಎಂದ. ಬೆನ್ನಿಗೆ ಚುಚ್ಚಿದ ನಳಿಕೆಯ ಒತ್ತಡ ಮತ್ತೆ ಕಡಿಮೆ ಆಗಿತ್ತು.

ರಸ್ತೆಯ ಇಕ್ಕೆಲಗಳಲ್ಲಿ ಗಿಡಮರಗಳು ಒತ್ತೊತ್ತಾಗಿರುವುದು ಕಂಡಿತು.

"ಆರಡಿ ದೂರದಲ್ಲಿರೋ ಎಡಗಡೆ ಕಾಣೋ ಆ ಕಾಲುದಾರೀಲಿ ತಿರುಗು" ಎಂದ ಆ ವ್ಯಕ್ತಿ.

ಫಜಲ್‌ಗೆ ಆ ಕಾಲುದಾರಿ ಕಂಡಿದ್ದು ಹೆಚ್ಚೇ! ಅಬ್ಬಾ... ಎಂತಹ ರಹಸ್ಯ ಸ್ಥಳ! ಎಂದುಕೊಳ್ಳದಿರದಾದ ಫಜಲ್.

ಬೈಕಿನ ದೀಪದ ಬೆಳಕಿನಲ್ಲಿ ನೇರವಾಗಿ ಪಯಣಿಸಿದ. ಎರಡು ಮೈಲುಗಳ ದೂರದ ನಂತರ ಒಂದು ಮಿಣುಕು ದೀಪ ಕಂಡಿತ್ತು. ಹತ್ತಿರ ಹೋದಾಗ ಅದೊಂದು ಹೆಂಚಿನ ಮನೆಯೆಂದು ತಿಳಿದುಬಂದಿತ್ತು.

"ಬೈಕು ನಿಲ್ಸು" ಎಂದ ಆ ವ್ಯಕ್ತಿ.

ಫಜಲ್ ಬ್ರೇಕ್ ಒತ್ತಿದೊಡನೆ ಆ ವ್ಯಕ್ತಿ ಸರಕ್ಕನೆ ಇಳಿದು ಫಜಲ್‌ನ ಎದುರಿಗೆ ನಿಂತ. ಕೈಯಲ್ಲಿ ಪಿಸ್ತೂಲಿತ್ತು. ಫಜಲ್‌ಗೆ ಗುರಿಯಿಟ್ಟು "ಹೂಂ ನಡಿ" ಎಂದ.

ಫಜಲ್ ಆ ವ್ಯಕ್ತಿಯನ್ನು ನೋಡಿದ. ಸುಮಾರು ಮೂವತ್ತರ ಆಜುಬಾಜು ವಯಸ್ಸು. ಆರಡಿ ಎತ್ತರದ ಆಜಾನುಬಾಹು. ದಷ್ಟಪುಷ್ಟವಾದ ದೇಹ. ಬಾಗಿಲ ಮೇಲೆ ಮೆಲ್ಲನೆ ಕುಟ್ಟಿದ. ಯಾರೋ ತೀರಾ ಎಚ್ಚರಿಕೆಯಿಂದ ಬಾಗಿಲು ತೆರೆದರು.

"ಹೂಂ!" ಎಂದ ಬಾಗಿಲ ಕಡೆ ಗನ್ ಇರುವ ಕೈಯನ್ನೇ ಅಲುಗಾಡಿಸಿ ತೋರಿಸಿ. ಇವನನ್ನು ಪಟ್ಟು ಹಾಕಿ ಹಿಡಿಯಲೇ ಎಂದುಕೊಂಡ ಫಜಲ್. ಆದರೆ ಅವನ ಕುತೂಹಲ ಅವನನ್ನು ಜಯಿಸಿತ್ತು.

ಇಲ್ಲೇನೋ ನಡೀತಿದೆ. ಕಾನೂನುಬಾಹಿರವಾದ ಕೆಲಸವೇ ಆಗಿರುತ್ತದೆ. ಇದರ ಬುಡ ತಲುಪಬೇಕಾದರೆ ತಾನೀಗ ತೆಪ್ಪಗೆ ಇದ್ದರೇನೇ ಸರಿ ಎಂದುಕೊಂಡು ಒಳನಡೆದ.

ಒಳಗಿನ ಮಂಕು ಬೆಳಕಿಗೆ ಹೊಂದಿಕೊಳ್ಳಲು ಸ್ವಲ್ಪ ಸಮಯ ಹಿಡಿದಿತ್ತವನಿಗೆ. ಕಣ್ಣು ಆ ಬೆಳಕಿಗೆ ಸರಿಹೊಂದಿದಾಗ ಅಲ್ಲಿ ಕಂಡ ದೃಶ್ಯ ಅವನಿಗೆ ಗಾಬರಿ ತಂದಿತ್ತು. ಒಂದು ದೇವಾಲಯದ ಸೆಟ್‌ನಂತಿತ್ತು ಆ ಹಾಲ್.

ಒಂದು ಗೋಡೆಯ ಎತ್ತರಕ್ಕೂ ದೊಡ್ಡ ವಿಗ್ರಹ. ಅದ್ಯಾವುದೋ ಕ್ಷುದ್ರದೇವತೆಯದೆಂದು ಫಜಲ್ ಸುಲಭವಾಗಿಯೇ ಗುರುತಿಸಿದ. ಇಲ್ಲಿಗೆ ತನ್ನನ್ನೇಕೆ ಕರೆ ತಂದಿದ್ದಾರೆ? ಎಂದಾಲೋಚಿಸುವಷ್ಟರಲ್ಲಿ ಒಂದು ಚಿಕ್ಕ ಶಬ್ದ ಕೇಳಿಸಿತು.

ಆ ಶಬ್ದ ಬಂದೆಡೆ ನೋಡಿ ಅವಾಕ್ಕಾದ. ಅಲ್ಲಿದ್ದ ಮನುಷ್ಯನನ್ನು ನೋಡಿ ಅಲ್ಲ ಅವನು ಮೂಕನಾಗಿದ್ದು. ಆ ಮನುಷ್ಯ ಇದ್ದ ಭಂಗಿ. ನಾಲ್ಕೈದು ಶತಮಾನಗಳ ಹಿಂದೆ ಫ್ರಾನ್ಸ್‌ನಲ್ಲಿ ಕ್ರಾಂತಿಕಾರಿಗಳನ್ನು ಮಟ್ಟ ಹಾಕಲು, ಅವರನ್ನು ಭೂಲೋಕದಿಂದ ಅಟ್ಟಲು ಗಿಲೋಟಿನ್ ಎನ್ನುವ ಭಯಾನಕ ಅಟ್ಟಣೆಯನ್ನು ಬಳಸುತ್ತಿದ್ದರು.

ಮನುಷ್ಯನನ್ನು ಮೊಣಕಾಲ್ಗಳ ಮೇಲೆ ಕೂರಿಸಿ, ಅವನ ಬೆನ್ನು ಭೂಮಿಗೆ ಸಮಾನಾಂತರವಾಗಿರವಂತೆ ಮಾಡಿ, ಅವನ ತಲೆಯನ್ನು ಹಲಗೆಯೊಂದರ ನಡುವಿನ ಅರೆವೃತ್ತಾಕಾರದಲ್ಲಿ ಕುತ್ತಿಗೆಯನ್ನು ಒರಗುವಂತೆ ಮಾಡಿ, ಆ ಮರದ ಹಲಗೆಯನ್ನು ಮೇಲ್ಭಾಗದಿಂದ ಮುಚ್ಚಿದಾಗ, ಮೇಲುಭಾಗದ ಹಲಗೆಯ ಅರೆವೃತ್ತಾಕಾರಕ್ಕೆ ಸೇರಿ ಒಂದು ವರ್ತುಲ ಸೃಷ್ಟಿಯಾಗುತ್ತಿತ್ತು.

ಫಜಲ್‌ಗೆ ಕಂಡಿದ್ದು ಒಬ್ಬ ಮನುಷ್ಯನ ತಲೆ ಮಾತ್ರ. ಅವನ ದೇಹ ಹಲಗೆಯ ಆ ಕಡೆ ಮಂಡಿಯೂರಿ ಕೂತಿರಬೇಕು. ಇನ್ನೂ ಸತ್ತಿಲ್ಲ ಎನ್ನುವುದಕ್ಕೆ ಸಾಕ್ಷಿ- ಅವನ ಮೂಲುಗು.

"ಯಾರೋ ಇವನು ಶಿಷ್ಯಾ?" ಎಂಬ ಮಾತು ಕೇಳಿಸಿದಾಗ ಟಕ್ಕನೆ ಅತ್ತ ನೋಡಿದ ಫಜಲ್.

"ಗುರುವೇ, ಇನ್ನೊಬ್ಬ ಬೇಕು ಅಂದ್ರಲ್ಲಾ ಕರಕೊಂಡು ಬಂದಿದ್ದೀನಿ" ಎಂದಿದ್ದ ತನ್ನನ್ನು ಪಿಸ್ತೂಲು ತೋರಿಸಿ ಕರಕೊಂಡು ಬಂದಿದ್ದಾತ.

ಫಜಲ್ ಈಗ ಮೊದಲು ಮಾತಾಡಿದ 'ಗುರು'ವನ್ನು ಪರಿಶೀಲಿಸಿದ.

ಸುಮಾರು ನಲವತ್ತೈದರ ವಯಸ್ಸು. ಕಾವಿ ಧರಿಸಿದ್ದ. ಮೇಲ್ಭಾಗ ನಗ್ನವಾಗಿತ್ತು. ಅವನ ಹೊಟ್ಟೆ ಘಟದ ನೆನಪು ತರುತ್ತಿತ್ತು. ಕೈಯಲ್ಲಿ ದೊಡ್ಡ ಕತ್ತಿ. ಭೂಗತ ಪ್ರಪಂಚದಲ್ಲಿ 'ಲಾಂಗ್' ಎಂದು ಇದನ್ನು ಕರೆಯುವರಲ್ಲವೇ ಎಂದುಕೊಂಡ ಫಜಲ್.

"ಹೇ ಏನು ನಡೀತಿದೆ ಇಲ್ಲಿ? ಲುಕ್ಸ್ ಲೈಕ್ ಸಮ್ ರಬ್ಬಿಷ್ ಈಸ್ ಗೋಯಿಂಗ್ ಆನ್"

"ಹೇ ವಾಟ್ ಆರ್ ಯೂ ಟಾಕಿಂಗ್? ಡಸ್ ದಿಸ್ ಲುಕ್ ರಬ್ಬಿಷ್ ಟು ಯೂ?" ಗದರುವ ಸ್ವರ ಆ ಕಾವಿಯವನಿಂದ ಬಂದಿತ್ತು.

'ಓಹೋ, ಇವನ್ಯಾರೋ 'ವಿದ್ಯಾವಂತ' ಮೂರ್ಖ' ಎಂದು ತಕ್ಷಣವೇ ನಿರ್ಧರಿಸಿದ ಫಜಲ್. ನಂತರ ತಾನೇನು ಮಾಡಬೇಕೆಂದು ಎರಡು ಕ್ಷಣ ಆಲೋಚಿಸಿದ. ತನಗೀಗ ಎರಡು ಕೆಲಸಗಳಿವೆ. ಗಿಲೋಟಿನ್‌ನಲ್ಲಿ ಬಲಿಪಶುವಾಗಿರುವವನನ್ನು ರಕ್ಷಿಸಬೇಕು. ಈ ಕಳ್ಳ ಸಂನ್ಯಾಸಿ ಮಾತುಗಾರನಂತಿದ್ದಾನೆ. ಇವನನ್ನು ಮಾತಿನಲ್ಲಿಯೇ ಮರುಳು ಮಾಡಲು ಸಾಧ್ಯವೇ? ಪ್ರಯತ್ನಿಸುತ್ತೇನೆ!

"ಇದು ರಬ್ಬಿಷ್ ಅಲ್ಲದೇ ಮತ್ತೇನು? ಇಂತಾ ಸಿಲ್ಲಿ ಕೆಲಸಗಳನ್ನು ಈಗಿನ ಕಾಲದಲ್ಲಿ ಯಾರು ಮಾಡ್ತಾರೆ? ಕೇವಲ ಮೂರ್ಖನ ಕೆಲಸ ಇದು" ಎಂದ ಫಜಲ್. ಮೂರ್ಖರು ಕೋಪಗೊಂಡಲ್ಲಿ ಕುರುಡರಂತಾಡುತ್ತಾರೆ. ಹುಚ್ಚರಂತಾಗುತ್ತಾರೆ. ಸ್ವಲ್ಪ ಎಚ್ಚರಿಕೆಯಿಂದ ತಲೆ ಉಪಯೋಗಿಸಿದರೂ ಸಾಕು, ಅವರನ್ನು ಬಗ್ಗು ಬಡಿಯಬಹುದು. ಈಗ ಅವನು ಮಾಡಲಾರಂಭಿಸಿದ್ದುದು ಅದೇ!

"ಏನಂದೇ? ಇದು ಮೂರ್ಖತನದ ಕೆಲಸಾನಾ? ಶಿಷ್ಯಾ! ಆ ಗನ್ ಇಲ್ಲಿ ಕೊಡು. ಇವನ ಗತಿ ಮುಗಿಸಿಬಿಡ್ತೀನಿ" ಚೀರಿದ ಆ ಸಂನ್ಯಾಸಿ.

"ಲುಕ್! ನಿನ್ನ ಹೆಸರೇನೋ ನನಗೆ ತಿಳಿಯದು" ಎಂದ ತಕ್ಷಣವೇ ಫಜಲ್.

"ಮಹದಾನಂದಜೀ" ಎಂದ ಅಪ್ರಯತ್ನಪೂರ್ವಕವಾಗಿ ಆ ಸಂನ್ಯಾಸಿ.

"ನಿನ್ನ ಹೆಸರು ಮಾತ್ರವೇ ಮಹದಾನಂದ. ಆದರೆ ಇದು ನಿನ್ನಂಥಾ ಎಜುಕೇಟೆಡ್‌ಗಳಿಗೆ ಶೋಭೆ ತರೋಲ್ಲ. ಏನು ಸಾಧಿಸ್ತೀ ಈ ಬಲಿಯಿಂದ?" ಫಜಲ್ ಅವನ ಕ್ರೋಧಕ್ಕೆ ಆಜ್ಯ ಸುರಿದಿದ್ದ.

"ಏನು ಸಾಧಿಸ್ತೀನಾ? ಏಕೆ ನಿನಗದು ತಿಳೀಬೇಕು?" ಮಹದಾನಂದಜೀ ಕೇಳಿದ.

"ಏನೋ! ವಿದ್ಯಾವಂತರು ಮಾಮೂಲಿಗಿಂತ ಭಿನ್ನವಾಗಿ ನಡಕೊಂಡ್ರೆ ಅದನ್ನ ತಿಳಕೊಳ್ಳೋದು ನನಗಿಷ್ಟ! ಇಂತಹ ವಿಷಯಕ್ಕೆ ನಾನು ಪಬ್ಲಿಸಿಟಿ ಕೊಡ್ತೀನಿ. ನಾನೊಬ್ಬ ಪತ್ರಕರ್ತ!"

"ಹಾಗಾದ್ರೆ ಕೇಳು. ನನಗೆ ಪಬ್ಲಿಸಿಟಿ ಬೇಕು. ನೀನು ಹೇಗೆ ಬರೀತಿ? ನೀನು ಕೂಡಾ ಈ ರಾತ್ರಿ ಸಾಯಬೇಕಲ್ಲಾ?" ಎಂದ ಮಹದಾನಂದಜೀ.

"ಗುರೂ, ನೀವು ಅವನ ಹತ್ತಿರ ಬರೆಸಿಬಿಡಿ. ಆಮೇಲೆ ಸಾಯಿಸೋಣ. ಏನಂತೀರಿ?" ಎಂದ ಶಿಷ್ಯ.

ಇದು ಯಾವುದೋ ಹುಚ್ಚರ ಜೋಡಿ ಎಂದುಕೊಂಡ ಫಜಲ್. ಇವರನ್ನು ಹೀಗೇ ಮಾತಾಡಿಸುತ್ತಾ ಇವರ ಗಮನವನ್ನು ಬೇರೆಡೆಗೆ ಸೆಳೆಯಬೇಕೆಂದು ನಿರ್ಧರಿಸಿ, "ನೀನು ಈ ಗಿಲೋಟಿನ್ ಐಡಿಯಾ ಎಲ್ಲಿ ಕಲಿತೆ?" ಎಂದು ಕೇಳಿದ ಫಜಲ್.

"ಫ್ರೆಂಚ್ ಕ್ರಾಂತಿಯ ಬಗ್ಗೆ ಒಂದು ಸಿನಿಮಾ ಬಂದಿತ್ತು. ಅದರ ವೀಡಿಯೋ ಕ್ಯಾಸೆಟ್ಟನ್ನು ನೂರು ಸಲವಾದರೂ ನೋಡಿದ್ದೀನಿ. ಪುಸ್ತಕಗಳನ್ನು ಓದಿ ಒಂದು ಸ್ಕೆಚ್ ತಯಾರು ಮಾಡಿ, ಈ ಗಿಲೋಟಿನ್ ಮಾಡಿಸ್ದೆ" ಹೆಮ್ಮೆ ತುಂಬಿತ್ತು ಅವನ ಮಾತಿನಲ್ಲಿ.

ಅಯ್ಯೋ! ಇದೆಂತಹ ವಿಪರ್ಯಾಸ! ಒಂದು ಕೆಟ್ಟ ಕೆಲಸ ಮಾಡಲು ನಡೆಸಿರುವ ತಯಾರಿ ಒಂದು ಒಳ್ಳೆಯ ಕೆಲಸ ಮಾಡಲು ಉಪಯೋಗಿಸಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು!

"ಗುಡ್!" ಬೇಕೆಂದೇ ಹೊಗಳಿದ. ನಂತರ "ಅದು ಸರಿ ಮಹದಾನಂದಜೀ, ಈ ಬಲಿ ಯಾಕೆ?" ಎಂದು ಕೇಳಿದ.

ಅವನ ಕಂಗಳು ಸುತ್ತಲೂ ನೋಡುತ್ತಿದ್ದವು. ತಪ್ಪಿಸಿಕೊಳ್ಳಲು ದಾರಿ ಯಾವುದು?

"ಸಹಸ್ರ ಶಿರಚ್ಛೇದ ಅಪೂರ್ವ ಚಿಂತಾಮಣಿ ಓದಿದ್ದೀಯಾ?" ಎಂದು ಕೇಳಿದ ಮಹದಾನಂದಜೀ.

"ವ್ವಾಟ್?" ಗಲಿಬಿಲಿಯಿಂದ ಕೇಳಿದ. ಇವನೇನು ಹೇಳುತ್ತಿರುವನೋ ಸ್ವಲ್ಪಸ್ವಲ್ಪವೇ ಅರ್ಥವಾಗತೊಡಗಿತು. ಇದು ಈ ಕಾಲದಲ್ಲಿ ಯಾರಾದರೂ ನಂಬುವಂತಹ ವಿಷಯವೇ?

"ವಿಕ್ರಮಾದಿತ್ಯನ ಕಥೆ ಗೊತ್ತಲ್ವಾ? ಅವನು ಒಬ್ಬ ಸಂನ್ಯಾಸಿಗೆ ಬಲಿ ಆಗೋದ್ರಲ್ಲಿದ್ದ. ಆ ಸಂನ್ಯಾಸಿ ಒಂಬೈನೂರಾ ತೊಂಬತ್ತೊಂಬತ್ತು ರಾಜರನ್ನು ಕೊಂದಿದ್ದ. ಕೊನೆಯವನಾಗಿ ವಿಕ್ರಮಾದಿತ್ಯ ಬಂದ. ಸಂನ್ಯಾಸಿ ಸತ್ತ. ಆದರೆ ನಾನು ಅಂತಾ ದಡ್ಡ ಸಂನ್ಯಾಸಿ ಅಲ್ಲ" ಎಂದ. ಫಜಲ್‌ನ ತಲೆ ಗಿರ್ರನೆ ತಿರುಗಲಾರಂಭಿಸಿತು.

ಈ ಮೂಢ ನಂಬಿಕೆಯ ಭೂತ ಎಂದು ಸಾಯಲಿದೆ? ಆಗಾಗ ಪತ್ರಿಕೆಗಳಿಗೆ ಬರೆಯುತ್ತಿದ್ದ 'ಹಸುಗೂಸಿನ ಬಲಿ'ಗಳು ಅವನಿಗೆ ದುಃಖ ತರುತ್ತಿದ್ದವು. 'ಪ್ರಾಣಿಬಲಿ'ಯೇ ಅಮಾನುಷ. ಇದು ಇನ್ನೂ ಕ್ರೂರ. ಇಂತಹ ವಿಷಯಗಳಲ್ಲಿ ನಂಬಿಕೆ ಇಡುವುದು ಮೂರ್ಖತನವಲ್ಲದೇ ಮತ್ತೇನು?

"ಅಂದರೆ ನೀನು ಏನನ್ನೋ ಸಾಧಿಸೋಕ್ಕೆ ಬಲಿ ಕೊಡ್ತಿದ್ದೀಯಾ?"

"ಹೌದು"

"ಯಾರು ಯಾರು ಈಗ ಬಲಿ?"

"ನನಗೆ ಇನ್ನೂ ಮೂರು ಜನ ಬೇಕು"

ಫಜಲ್ ವೇಗವಾಗಿ ಆಲೋಚಿಸಿದ. ಇಲ್ಲಿ ಈ ಹುಚ್ಚ ಸ್ವಾಮಿಯನ್ನು ಬಿಟ್ಟರೆ ಮೂವರಿದ್ದೇವೆ. ತಾನೀಗ ಎರಡು ರೀತಿಯ ಆಕ್ರಮಣ ಮಾಡುವುದು. ಒಂದು- ತನ್ನ ಬಗ್ಗೆ ಹೇಳುವುದು. ಎರಡು- ಗುರು ಶಿಷ್ಯರ ನಡುವೆ ಜಗಳ ತರುವುದು.

ತಾನು ತನ್ನ ಪ್ರಯತ್ನದಲ್ಲಿ ಯಶಸ್ವಿಯಾಗುವನೇ? ಎಂಬ ಆತಂಕ ಅವನಲ್ಲಿರಲಿಲ್ಲ. ಪ್ರಯತ್ನ ನಮ್ಮದು. ಫಲ ದೇವರದು ಎನ್ನು ಸಿದ್ಧಾಂತದವನು. ಭಗವದ್ಗೀತೆಯನ್ನು ಬಾಯಿಪಾಠ ಮಾಡಿದ್ದ ಫಜಲ್.

"ನೀನೇ!" ಎಂದ ಶಿಷ್ಯ ಗಹಗಹಿಸುತ್ತಾ.

# 8

“ಶಿಷ್ಯಾ!” ಗದರಿದ ಗುರು. ಶಿಷ್ಯ ಟಕ್ಕನೆ ಬಾಯ್ಮುಚ್ಚಿಕೊಂಡ.

“ಮೊದಲು ಈ ಗಿಲೋಟಿನ್‌ನಲ್ಲಿ ಮಲಗಿಸಿರುವವನ ಬಲಿ. ಆಮೇಲೆ ನಿನ್ನ ಬಲಿ. ನನ್ನ ದೇವತೆಯು ತೃಪ್ತಳಾಗುತ್ತಾಳೆ. ನನಗೆ ವರ ನೀಡುತ್ತಾಳೆ. ಇವತ್ತೇ ನಡೀಬೇಕು ಕೆಲಸ. ಇದು ಶ್ರೇಷ್ಠ ಅಮಾವಾಸ್ಯೆ” ಭೀಕರವಾಗಿ ನಕ್ಕ ಮಹದಾನಂದಜೀ.

“ನಿನ್ನ ಕೆಲಸ ಅಷ್ಟು ಸುಲಭ ಅಲ್ಲ. ನಿನ್ನ ಮೂರು ಬಲಿಗಳು ಯಾವ ರೀತಿಯವರಾಗಿರಬೇಕು?” ಫಜಲ್ ಚಕಚಕನೆ ಆಲೋಚಿಸುತ್ತಾ ಕೇಳಿದ. ಹೇಗಾದರೂ ಈ ಹುಚ್ಚನನ್ನು ಮಾತಾಡಿಸುತ್ತಲೇ ಸೋಲಿಸಬೇಕು.

“ಈ ಮೊದಲನೇ ಬಲಿ...”ಎನ್ನುತ್ತಾ ಗಿಲೋಟಿನ್ ಕೈ ಕಡೆ ಕೈ ತೋರಿ “ರಾಮ” ಎಂದ. ನಂತರ “ನಿನ್ನ ಹೆಸರು?” ಎಂದು ಫಜಲ್‌ನನ್ನು ಕೇಳಿದ. ಫಜಲ್ ಹೇಳಿದ.

“ಫಜಲ್!” ಉದ್ಗರಿಸಿದ ಮಹದಾನಂದಜೀ. “ಈಗ ನಿನ್ನ ಬದಲು ಬೇರೆಯವರನ್ನು ಹುಡುಕಬೇಕು” ಎಂದ ಬೇಸರದ ಸ್ವರದಲ್ಲಿ.

“ಶಿಷ್ಯಾ, ನೀನೇ ನನ್ನ ಬದಲಿನ ಬಲಿ!” ಎಂದ ಫಜಲ್.

ಶಿಷ್ಯನಿಗೆ ಫಜಲ್‌ನ ಮಾತಿನಿಂದ ಆಗ ಮರ್ಮಾಘಾತವಾಗಿತ್ತು. ಈಗ ಗುರುವನ್ನು ಪ್ರಶ್ನಿಸಿದ.

“ಗುರೂ! ಇವನು ಹೇಳಿದ್ದು ನಿಜಾನಾ? ನಾನೇ ಇನ್ನೊಂದು ಬಲೀನಾ?”

ಫಜಲ್ ನಕ್ಕ.

“ಮತ್ತೆ ನನ್ನ ಸಂಸಾರದ ಗತಿ? ನನಗೆ ಹಣ ಕೊಡ್ತೀನಿ ಅಂದಿದ್ರಿ?” ಚೀರಿದ ಶಿಷ್ಯ.

ಗುರು ಬಾಯಿ ಬಿಡಲಿಲ್ಲ. ಶಿಷ್ಯ ತಪ್ಪು ಮನುಷ್ಯನನ್ನು ಹಿಡಿದುಕೊಂಡು ಬಂದಿರುವನೆಂಬ ಸಿಟ್ಟಿನಲ್ಲಿಯೇ ಇರುವನೆಂದು ಫಜಲ್ ಅರ್ಥ ಮಾಡಿಕೊಂಡ. ಕಬ್ಬಿಣ ಕಾದಿರುವಾಗಲೇ ಬಗ್ಗು ಬಡಿಯಬೇಕೆಂದು ನಿರ್ಧರಿಸಿ, “ಗುರು

ಎನಿಸಿಕೊಂಡ ನೀನು ಶಿಷ್ಯನಿಗಿಂತ ವಿದ್ಯೆಯಲ್ಲಿ ಮುಂದಿದ್ದೀ. ಹಾಗಿರುವಾಗ ಈ ಮೂಢ ನಂಬಿಕೆಯಲ್ಲಿ ಮುಳುಗಿರೋದು ವ್ಯಥೆ ತರ್ತಿದೆ. ಇನ್ನು ಶಿಷ್ಯಾ...!" ಎಂದು ಅವನತ್ತ ತಿರುಗಿ, "ಗನ್ ಜೇಬಿನಲ್ಲಿದೆ ತಾನೇ? ಇಲ್ಲಿ ಕೊಡು, ಹೂಂ!" ಎಂದ.

ದಡ್ಡ ಶಿಷ್ಯ ತನ್ನ ಮೋಸದ ಗುರುವಿನ ಬಗ್ಗೆ ಸಿಟ್ಟು ಮಾಡಿಕೊಂಡಿದ್ದರಿಂದ ಕೀಲುಗೊಂಬೆಯಂತೆ ಗನ್ ತೆಗೆದು ಫಜಲ್‌ಗಿತ್ತ.

ಗುರು ಗಾಬರಿಯಿಂದ, "ಶಿಷ್ಯಾ! ಬೇಡಾ!" ಎಂದು ಸ್ವಲ್ಪ ತಡವಾಗಿ ಚೀರಿದ್ದ.

ಫಜಲ್ ಗನ್‌ನಿಂದ ಇಬ್ಬರನ್ನೂ ಕವರ್ ಮಾಡಿ "ಹೂಂ! ಕೈಗಳನ್ನು ಎತ್ತಿ ಆ ಮೂಲೆಗೆ ನಡೆಯಿರಿ" ಎಂದು ಆಜ್ಞಾಪಿಸಿದ.

"ಆ ಗನ್‌ನಲ್ಲಿ ಗುಂಡೇ ಇಲ್ಲ ಗುರೂ!" ಎಂದ ಶಿಷ್ಯ ಅದು ಖಾಲಿ ಗನ್ ಎಂದು ನೆನಪಾಗಿ.

ಆ ಮಾತು ಗುರುವಿಗಿಂತ ಮೊದಲು ಫಜಲ್‌ನ ಮೇಲೆ ಪರಿಣಾಮ ಬೀರಿತ್ತು. ತನ್ನ ಕರಾಟೆ ಪಾಠವನ್ನು ನೆನೆದು, ಬ್ರೂಸ್‌ಲೀಯಂತೆ ಒಮ್ಮೆ ಚೀರಿ ಕಾಲೆತ್ತಿ ಗುರುವಿನ ಘಟದಂತಹ ಹೊಟ್ಟೆಯ ಮೇಲೆ ಒದ್ದ. ಗುರು ನೋವಿನಿಂದ ಮೂಲುಗುತ್ತಾ ಕೆಳಗೆ ಬಿದ್ದ.

ಶಿಷ್ಯನನ್ನು ಒದೆಯಲು ಹೋಗುವ ವೇಳೆಗೆ ಅವನು ಹಾರಿ ಬಂದು ಇವನ ಕಾಲುಗಳನ್ನು ಹಿಡಿದಿದ್ದ. ಅದಲ್ಲ ಫಜಲ್‌ಗೆ ಆಶ್ಚರ್ಯ ಉಂಟು ಮಾಡಿದ್ದು. ಆ ಶಿಷ್ಯ ಇವನ ಶರಣಾಗತಿಗೆ ಬಂದಿದ್ದು!

"ಈ ಕಳ್ಳಗುರುವಿನ ಕೈಕಾಲು ಕಟ್ಟಿ ಹಾಕು!" ಎಂದು ಹೇಳಿ ರಾಮನ ಬಳಿಗೆ ಓಡಿದ. ಆ ಮನುಷ್ಯ ಟೆನ್ಷನ್‌ನಿಂದ ಮೂರ್ಛೆ ಹೋಗಿದ್ದ.

ಅವನ ಕುತ್ತಿಗೆಯಿಂದ ಗಿಲೋಟಿನ್‌ನ ಮೇಲ್ಭಾಗ ತೆಗೆದು, ಅವನ ಕಟ್ಟಿದ ಕೈಗಳನ್ನು ಬಿಚ್ಚಿ ಅವನನ್ನು ಸರಿಯಾಗಿ ಮಲಗಿಸಿ, ಅಲ್ಲಿಯೇ ಬಿಂದಿಗೆಯಲ್ಲಿದ್ದ ನೀರನ್ನು ಚುಮುಕಿಸಿದ.

ರಾಮ ಮೂಲುಗುತ್ತಾ ಎಚ್ಚರಗೊಂಡ. "ಹೆದರಬೇಡಿ. ನೀವೀಗ ಸುರಕ್ಷಿತವಾಗಿದ್ದೀರಿ" ಎಂದ ಫಜಲ್.

"ನನಗೆ ಹೆದರಿಕೇನಾ? ನೆವ್ವರ್! ಈ ವಿಲಕ್ಷಣ ಭಂಗಿಯಿಂದ ದೇಹಕ್ಕೆ ದಣಿವಾಗಿದೆ ಅಷ್ಟೇ" ಎಂದ ಮೇಲೆದ್ದು ಕೂರುತ್ತಾ.

ಫಜಲ್‌ಗೆ ಅವನ ಮಾತಿನಿಂದ ಮುಚ್ಚಟೆ ಎನಿಸಿತು. ಸಾವಿನ ಸಮೀಪಕ್ಕೆ ಹೋಗ ವಾಪಸ್ಸು ಬಂದವನ ಮಾತು ಇದೆಂದರೆ ಏಕೋ ಮೆಚ್ಚದಿರದಾದ. ಅವನನ್ನು ಹೊರಗೆ ನಡೆಸಿಕೊಂಡು ಬಂದ.

ಗುರುವಿನ ಬಾಯಿಯಿಂದ ಅವಾಚ್ಯ ಶಬ್ದಗಳು ಹೊರಬೀಳುತ್ತಿದ್ದವು. ಶಿಷ್ಯ ತನ್ನ ಜೇಬಿನಿಂದ ಕರವಸ್ತ್ರ ತೆಗೆದು ಗುರುವಿನ ಬಾಯಿಯಲ್ಲಿ ತುರುಕಿದಾಗ ಫಜಲ್‌ನೊಂದಿಗೆ ರಾಮ ಕೂಡಾ ನಕ್ಕ.

"ಶಿಷ್ಯ! ನಾನು ಇವರನ್ನು ಕರಕೊಂಡು ಹೋಗ್ತೀನಿ. ಪೊಲೀಸರನ್ನು ಕಳಿಸ್ತೀನಿ. ನೀನು ಅವರ ಅಪ್ರೂವರ್ ಆಗಿಬಿಟ್ಟರೆ ನಿಂಗೆ ಶಿಕ್ಷೆ ಕಡಿಮೆ ಆಗಬಹುದು. ಇಲ್ಲದಿದ್ದರೆ ಕಳ್ಳಸ್ವಾಮಿಯ ಶಿಷ್ಯ ಅಂತ ನಿನಗೂ ನೇಣಿನ ಶಿಕ್ಷೆ ಆದೀತು!" ಎಂದ ಫಜಲ್.

ಶಿಷ್ಯ ಬೆದರಿ ತನ್ನ ಒಪ್ಪಿಗೆ ಸೂಚಿಸಿದ.

ಬೈಕಿನ ಮೇಲೆ ಹತ್ತಿ ಕುಳಿತ ಫಜಲ್. ಕಿಕ್ ಸ್ಟಾರ್ಟ್ ಮಾಡಿ ರಾಮನನ್ನು ಹತ್ತಿಸಿಕೊಂಡ. ಬೈಕು ತಣ್ಣಗಿನ ಗಾಳಿಯಲ್ಲಿ ನಗರವನ್ನು ಪ್ರವೇಶಿಸಿತು.

"ನಿಮ್ಮನೆ ಎಲ್ಲಿ?" ಕೇಳಿದ ಫಜಲ್.

ರಾಮ ಹೇಳಿದ. ಬೈಕ್ ರಾಮನ ಮನೆಯ ಮುಂದೆ ನಿಂತಾಗ, ಬೈಕ್ ಇಳಿದ ರಾಮ, ಫಜಲ್‌ನನ್ನು ಒಳಕ್ಕೆ ಆಹ್ವಾನಿಸಿದ.

"ಬನ್ನಿ! ನನ್ನ ಪುಟ್ಟ ಆತಿಥ್ಯ ಸ್ವೀಕರಿಸಿ" ಎಂದ ರಾಜ.

ರಾಮನ ಮನೆ ಒಂದು ರೂಮು. ಅಟ್ಯಾಚ್ಡ್ ಬಾತ್ ಅಷ್ಟೇ. ರೂಮಿನ ಮೂಲೆಯಲ್ಲಿ ಒಂದು ಚಿಕ್ಕ ಅಡುಗೆ ಮನೆ. ರಾಮ ಸ್ಟವ್ ಹೊತ್ತಿಸಿ 'ಟೀ' ಮಾಡಿದ. ಇಬ್ಬರೂ ಟೀ ಕುಡಿಯುತ್ತಿದ್ದಾಗ ಫಜಲ್‌ಗೆ ರೂಮಿನ ಮತ್ತೊಂದು ಮೂಲೆಯಲ್ಲಿದ್ದ ಬುಕ್ ಷೆಲ್ಫ್ ಕಾಣಿಸಿತ್ತು. ಕುತೂಹಲದಿಂದ ಎದ್ದು ಹೋಗಿ ಪುಸ್ತಕಗಳ ಶೀರ್ಷಿಕೆಗಳನ್ನು ಓದಿದ. ದಿಗ್ಭ್ರಾಂತನಾದ.

ಅರೆ! ಇದೇನಿದು? ತನ್ನ ಕಣ್ಣುಗಳನ್ನು ತಾನೇ ನಂಬಲಾಗುತ್ತಿಲ್ಲ!

"ಯಾಕೆ? ಬುಕ್ಸ್ ನೋಡಿ ಆಶ್ಚರ್ಯ ಪಡ್ತಿರೋ ಹಾಗಿದೆ?" ರಾಮ ಕೇಳಿದ.

"ಈ ಎಲ್ಲ ಪುಸ್ತಕಗಳೂ ನನ್ನ ಬಳಿ ಇವೆ" ಎಂದ ಫಜಲ್.

"ಅಂದರೆ?"

"ನನ್ನ ನಿಮ್ಮ ಅಭಿರುಚಿ ಒಂದೇ ಹೇಗೆ ಅಂತ ಅಚ್ಚರಿ ಅಷ್ಟೇ" ಎಂದ.

"ಅರೆ! ನಿಮ್ಮ ಹೆಸರೇ ಕೇಳಲಿಲ್ಲ ನಾನು!" ಎಂದ ರಾಮ.

"ನನ್ನ ಹೆಸರು ಫಜಲ್, ಮಿ.ರಾಮ" ಎಂದ ತನ್ನ ಟೀಲೋಟವನ್ನು ಕೆಳಗಿಟ್ಟು ಬಲಹಸ್ತವನ್ನು ಚಾಚಿ.

ಆ ಹಸ್ತವನ್ನು ಭದ್ರವಾಗಿ ಲಾಘಿಸಿ "ನೈಸ್ ಟು ನೋ ಯೂ ಮಿ. ಫಜಲ್. ಅಯ್ ಆಮ್ ಅಮರ್" ಎಂದ.

"ಮತ್ತೆ ರಾಮ?" ಗಲಿಬಿಲಿಯಾಗಿತ್ತು ಫಜಲ್‌ಗೆ.

"ಇಂಗ್ಲೀಷ್‌ನಲ್ಲಿ ಆರ್ ಎ ಎಮ್ ಎ ಉಲ್ಟಾ ತಿರುಗಿಸಿದರೆ ಎ ಎಮ್ ಎ ಆರ್!" ಎಂದು ಹಲ್ಲು ಕಿರಿದ.

"ಓ! ಯೂ ಆರ್ ವೆರಿ ಇಂಟೆಲಿಜೆಂಟ್!" ಫಜಲ್ ನಕ್ಕು "ಏನು ಕೆಲಸ ಮಾಡ್ತಿದ್ದೀರಿ?" ಎಂದು ಕೇಳಿದ.

"ನಾನೊಬ್ಬ ಚಿಕ್ಕ ಪತ್ರಕರ್ತ" ಎಂದ ಅಮರ್.

"ಓಹ್!"

"ಯಾಕೆ ಈ ಉದ್ಗಾರ?" ಕೇಳಿದ ಅಮರ್.

"ನಾನೂ ಒಬ್ಬ ಪುಟ್ಟ ಪತ್ರಕರ್ತ" ಎಂದು ತಾನು ಕೆಲಸ ಮಾಡುತ್ತಿದ್ದ ಪೇಪರಿನ ಹೆಸರು ಹೇಳಿದ ಫಜಲ್.

ಈಗ ಅಚ್ಚರಿ ಪಡುವ ಸರದಿ ಅಮರ್‌ನದಾಯಿತು. "ಏನೂ? ಇತ್ತೀಚೆಗೆ ಬಂದ ಸ್ಫೋಟಕ ಲೇಖನ ಬರೆದ ಫಜಲ್ ನೀವೇನಾ?" ಸಂಭ್ರಮಾಶ್ಚರ್ಯಗಳಿಂದ ಕೇಳಿದ.

"ಜೀ ಹುಜೂರ್" ಎಂದು ಬಾಗಿ ಖುರ್ನೀಸಾತ್ (ನಮಸ್ಕಾರ) ಮಾಡಿ.

“ವಾವ್, ದಿ ಗ್ರೇಟ್ ಫಜಲ್, ನನ್ನ ರಕ್ಷಕ!” ಎಂದು ಚಪ್ಪಾಳೆ ಹೊಡೆದ.

“ಈ ಚಿಕ್ಕ ಪತ್ರಕರ್ತ ಕೆಲಸ ಮಾಡ್ತೋದೆಲ್ಲಿ?” ತಾನು ಕೆಲಸ ಮಾಡೋ ಪೇಪರ್ ಹೆಸರು ಹೇಳಿದ ಅಮರ್.

“ಆ ಪೇಪರ್ನಲ್ಲಿ ಅಮರೇಶ್ ಅಂತ ಒಬ್ಬ ವಿಶಿಷ್ಟ ಪತ್ರಕರ್ತ ಇದ್ದಾರೇಂತ ನನ್ನ ಗೆಳೆಯನಿಂದ ಸುದ್ದಿ ಬಂದಿತ್ತು...” ಫಜಲ್ ಹೇಳಿದಾಗ “ಹೋಲ್ಡಾನ್!” ಎಂದ ಅಮರ್.

ಫಜಲ್ ಅವನತ್ತ ನೋಡಿದಾಗ “ವಿಶಿಷ್ಟದ ಬಗ್ಗೆ ಗೊತ್ತಿಲ್ಲ... ಆದರೆ ಅಮರೇಶ ಅಂದರೆ ನಾನೇ!” ಎಂದ ಅಮರೇಶ.

“ಲಂಕಾದಲ್ಲಿ ಸೀತೆ ಇರಬಹುದು. ಆದರೆ ನೂರು ಯೋಜನ ಹಾರಲು ಯಾರಿಗೆ ಸಾಧ್ಯ ಅಂತ ಯೋಚಿಸ್ತಿದ್ದಾಗ ಜಾಂಬುವಂತ ಹನುಮಂತನನ್ನು ನೀನು ಮಾತ್ರ ಹಾರಬಲ್ಲೆ ನೀನು ತುಂಬಾ ಶಕ್ತಿವಂತ” ಎಂದನಂತೆ. ಆಮೇಲೆ ರಾವಣನ ಹತ್ತಿರ ಹೇಳಿದನಂತೆ ಹನುಮಂತ. ಎನಗಿಂತ ಕಿರಿಯರಿಲ್ಲ ಅಂತ. ನೀವು ಕೂಡಾ ನಿಮ್ಮನ್ನು ನೀವು ಚಿಕ್ಕ ಪತ್ರಕರ್ತ ಅಂದ್ಕೊಂಡ್ರಿ. ಆದರೆ ನೀವು ತುಂಬಾ ಮಾಡೆಸ್ಟ್” ಹೊಗಳಿದ ಫಜಲ್. ಅಲ್ಲ, ಸತ್ಯ ಹೇಳಿದ್ದ.

“ಸ್ವಾಮೀ ಫಜಲ್! ನಾನೀಗ ಎರಡು ವಿಷಯ ತಿಳ್ಕೊಂಡೆ. ಒಂದು ನೀವು ರಾಮಾಯಣವನ್ನು ಚೆನ್ನಾಗಿ ಸ್ಟಡೀ ಮಾಡಿದ್ದೀರಿ. ಎರಡು ಒಳ್ಳೇ ಮಾತಲ್ಲಿ ನನ್ನನ್ನ ಕೋತಿ ಅಂದ್ರಿ” ಎಂದು ಹಲ್ಲು ಕಿರಿದ.

ಫಜಲ್ ನಕ್ಕು ಅವನ ಬಲಗೈಯನ್ನೆತ್ತಿ ಅವನೆಡೆಗೆ ಬಂದ ಅಮರೇಶನ ಬಲಗೈಗೆ ಹೊಡೆದ. ಒಂದು ರೀತಿಯ ಇನ್‌ಸ್ಟೆಂಟ್ ವಾತ್ಸಲ್ಯ ಇಬ್ಬರಲ್ಲೂ ಒಬ್ಬರ ಮೇಲೊಬ್ಬರಿಗೆ ಉಂಟಾಯಿತು.

“ಅದು ಸರಿ ಅಮರ್! ಅದು ಹೇಗೆ ಆ ಖದೀಮ ಸಂನ್ಯಾಸಿ ಹತ್ತಿರ ಸಿಕ್ಕಿಕೊಂಡೆ?” ಕೇಳಿದ ಫಜಲ್. ಆತ್ಮೀಯತೆಯು ಏಕವಚನಕ್ಕೆ ದಾರಿ ಮಾಡಿಕೊಟ್ಟಿತ್ತು.

“ಹೋ! ದಟ್ ವಾಸ್ ಎ ಸಿಲ್ಲೀ ಮಿಸ್ಟೇಕ್. ಮೂಢನಂಬಿಕೆ ಮೇಲೆ ಲೇಖನ ಬರೀತಿದ್ದೆ. ಆ ಕಳ್ಳ ಸಂನ್ಯಾಸಿ ಇದ್ದಕ್ಕಿದ್ದ ಹಾಗೆ ಬಂದು ಸರ್ಪ್ರೈಸ್ ಅಟ್ಯಾಕ್ ಮಾಡಿ ಹಿಡಿದುಬಿಟ್ಟ...” ಮೈಯನ್ನು ಒಮ್ಮೆ ಒದರಿ, “ಒಂದು ವಿಷಯ ನಿಜ ಫಜಲ್! ಒಂದು ದಿನ ನಿನ್ನ ಈ ಪ್ರಾಣದಾನವನ್ನ ಬಡ್ಡಿ ಸಮೇತ ಹಿಂದಿರುಗಿಸುತ್ತೇನೆ” ಎಂದ ಭಾವುಕತೆಯಿಂದ.

ಫಜಲ್ ಮಾತಾಡದೇ ಕಿರುನಕ್ಕು ಅವನ ಕೈ ತಟ್ಟಿ, “ಬರ್ತೀನಿ. ತುಂಬಾ ಹೊತ್ತಾಯ್ತು” ಎಂದ.

“ವಿಳಾಸ ಕೊಡು” ಎಂದು ಕೇಳಿ ಪಡೆದುಕೊಂಡ. ಅಲ್ಲಿಂದ ಹೊರಬಿದ್ದ. ರಸ್ತೆಯಲ್ಲಿ ಬೈಕ್ ಓಡಿಸುತ್ತಿದ್ದ ಫಜಲ್. ಹಾಸಿಗೆಯ ಮೇಲೆ ಪವಡಿಸಿದ್ದ ಅಮರೇಶ್ ಇಬ್ಬರ ಮನಸ್ಸುಗಳಲ್ಲಿಯೂ ಒಂದೇ ಭಾವ! ಇವತ್ತು ಒಬ್ಬ ಜೀವದ ಗೆಳೆಯನನ್ನು ಸಂಪಾದಿಸಿದೆ!

ಜೀವಜೀವದ ಗೆಳೆತನವೂ ಅಗ್ನಿಪರೀಕ್ಷೆಗೆ ಒಳಗಾಗದಿದ್ದರೆ ಅದು ಒಳ್ಳೆಯ ಗೆಳೆತನ ಹೇಗಾದೀತು?

# 9

ಮಿತ್ರಜೀತ್, ಸ್ವರೂಪ್ ನೇರವಾಗಿ ಪೊಲೀಸ್‌ಠಾಣೆಗೆ ಹೋದರು. ಆದರೆ ಸಿಲ್ವೆಸ್ಟರ್ ಇದ್ದ ಠಾಣೆ ಅಲ್ಲ, ಮಿತ್ರಜೀತ್‌ನ ಖಾಸಾ ಗೆಳೆಯ ಉಮಾಶಂಕರ್ ಎಸ್.ಐ. ಆಗಿದ್ದ ಠಾಣೆ.

“ಹಾಯ್ ಉಮಾ!” ಎಂದ ತಲೆ ತಗ್ಗಿಸಿ ಏನೋ ಬರೆಯುತ್ತಿದ್ದ ಉಮಾಶಂಕರನನ್ನು ಕಂಡು.

“ನನ್ನನ್ನು ಹುಡುಗಿ ಹೇಗೂ ಮಾಡಿಬಿಟ್ಟೆ. ಆದರೆ ನನ್ನ ಕೊಲೀಗ್‌ಗಳ ಎದುರಿಗಾದರೂ ಪೂರ್ತಿ ಹೆಸರು ಕರೆಯೋ ಮಿತ್ರಾ!” ಎಂದ ತಲೆ ಎತ್ತಿ ಕೈ ಜೋಡಿಸಿ.

ಆ ನಾಟಕೀಯ ಭಂಗಿಗೆ ಸ್ವರೂಪ್ ಕೂಡಾ ಮಿತ್ರಜೀತ್‌ನೊಂದಿಗೆ ನಕ್ಕ.

“ಏಯ್! ಫೋರ್ ಟ್ವೆಂಟಿ ಒನ್!” ಕೂಗಿದ ಉಮಾ.

“ಯಸ್ಸಾ!” ಎಂದು ಸೆಲ್ಯೂಟ್ ಹೊಡೆದ ಪೇದೆಯೊಬ್ಬ.

“ಮೂರು ಕೂಲ್‌ಡ್ರಿಂಕ್ ತಗೊಂಬಾ” ಎಂದ ಉಮಾ.

“ಗುರುವೇ! ಈಗ ಈ ಛಳೀಲಿ ಕೂಲ್ ಡ್ರಿಂಕಾ?” ಕೇಳಿದ ಮಿತ್ರಜೀತ್.

“ಹಾಗಾದರೆ ಮೂರು ಕಾಫಿ” ಎಂದ. ಪೇದೆ ಹೊರಹೊರಟ.

ಹೊರಗಡೆ ಕಾವಲಿಗೆ ಮೂವರು ಪೇದೆಗಳು. ಒಳಗೊಬ್ಬ ರೈಟರ್.

“ಏನು ಸಮಾಚಾರ? ಹೀಗೆ ನೀನು ರಾತ್ರೋರಾತ್ರಿ ಸಂದೇಶ ಕೊಡದೇ ಬರಬೇಕಾದ್ರೆ ಏನೋ ವಿಶೇಷ ಇದೆ. ಸರೀನಾ?” ಉಮಾ ಕೇಳಿದ.

“ನಿನ್ನ ಗೆಸ್ ಕರೆಕ್ಟ್. ಇವನು ಗೊತ್ತಾ?” ಕೇಳಿದ ಮಿತ್ರಜೀತ್, ಸ್ವರೂಪ್‌ನನ್ನು ತೋರಿಸುತ್ತಾ.

“ಗೊತ್ತು ಗೊತ್ತು ಚಿನಕುರಳಿ ಲಾಯರ್ ಸ್ವರೂಪ್!” ಎಂದ ಉಮಾ ನಗುತ್ತಾ. ಸ್ವರೂಪ್‌ಗೆ ನಾಚಿಕೆ, ಹೆಮ್ಮೆ ಉಂಟಾಗಿದ್ದವು.

“ಸಿಲ್ವೆಸ್ಟರ್ ಕೇಸ್ ಬಗ್ಗೆ ತಿಳಿದಿರಬೇಕಲ್ವಾ?” ಮಿತ್ರಜೀತ್ ಪೀಠಿಕೆ ಹಾಕಿದ.

“ಅದೇ ಫೇಮಸ್ ಜರ್ನಲಿಸ್ಟ ಪಾಲ್ ಮರ್ಡರ್?” ಸ್ವರೂಪ್ ನಾಂದಿ ಹಾಡಿದ.

“ಹೂಂ. ವಿಷಯ ಗೊತ್ತಾಯ್ತು” ಎಂದ ಉಮಾ.

“ನಾವು ಬಂದಿರೋದು ಯಾಕೇಂದ್ರೆ...” ಮಿತ್ರಜೀತ್ ಆರಂಭಿಸಿದವನು ಅದೇನೆನ್ನಿಸಿತೋ ಕ್ಷಣಕಾಲ ಹಿಂದಕ್ಕೆ ತಿರುಗಿದ. ಯಾರೋ ಟಕ್ಕನೆ ವೇಗವಾಗಿ ಹೋದಂತಾಯಿತು. ತ್ವರಿತಗತಿಯಲ್ಲಿ ಬಾಗಿಲು ತಲುಪಿ ಬಾಗಿ ನೋಡಿದ. ಯಾರೂ ಕಾಣಿಸಲಿಲ್ಲ!

ಆದರೆ ಅವನ ಆರನೆಯ ಇಂದ್ರಿಯ ಯಾರೋ ಇದ್ದರೆಂಬ ವಿಷಯ ತಿಳಿಸಿತ್ತು.

ಯಾರದು? ಯಾರೂ ಇಲ್ಲವಲ್ಲಾ!

ಮಿತ್ರಜೀತ್ ಒಳಗೆ ಬಂದಾಗ ಸ್ವರೂಪ್ ಹುಬ್ಬೇರಿಸಿದ. ಆದರೆ ಉಮಾಶಂಕರ್ ತನ್ನ ಡೈರಿಯನ್ನು ಆಸಕ್ತಿಯಿಂದ ಓದುತ್ತಿದ್ದ. ಅಷ್ಟರಲ್ಲಿ ಸದ್ದಾಗಿತ್ತು.

ಪೇದೆ ಫೋರ್ ಟ್ವೆಂಟಿ ಒನ್ ಕಾಫಿ ಫ್ಲಾಸ್ಕ ಮತ್ತು ಸ್ಟೀಲ್ ಲೋಟಾಗಳನ್ನು ತಂದಿದ್ದ.

ಅವನು ಕಾಫಿ ನೀಡುವಾಗಿನ ಮುಖಭಾವ ಮಿತ್ರಜೀತ್‌ನಿಗೆ ಉರಿ ಹೊತ್ತಿಸಿತ್ತು.

ಸ್ವರೂಪ್, “ಸಬಿನ್ಸ್‌ಪೆಕ್ಟ್ರೇ, ಸಿಲ್ವೆಸ್ಟರ್ ಹೆಂಡತಿ ಲೊರೆಟ್ಟಾ...” ಎಂದಾರಂಭಿಸಿದಾಗ ಮಿತ್ರಜೀತ್ ಕಣ್ಸನ್ನೆಯಲ್ಲಿ ಅವನ ಮಾತನ್ನು ತಡೆದ. ಸ್ವರೂಪ ಆಶ್ಚರ್ಯ ಪಟ್ಟರೂ ತಕ್ಷಣ ಸುಮ್ಮನಾದ.

ಕಾಫಿ ಕುಡಿದೊಡನೆ “ಬೈ ಉಮಾ! ಅರ್ಜೆಂಟ್ ಕೆಲಸ ಇದೆ. ಸಡನ್ನಾಗಿ ಜ್ಞಾಪ್ಕ ಬಂತು” ಎಂದು ಹೇಳಿ, ಸ್ವರೂಪ್‌ನನ್ನು ಕರೆದುಕೊಂಡು ಹೊರಟುಬಿಟ್ಟ.

ಉಮಾಶಂಕರ್ನ ಕಂಗಳಲ್ಲಿ ಕಂಡ ಭಾವನೆ ಮಿತ್ರಜೀತ್‌ನಲ್ಲಿ ಜಿಗುಪ್ಸೆ ಹುಟ್ಟಿಸಿತ್ತು.

“ರಾತ್ರಿ ಹನ್ನೊಂದು ದಾಟ್ತು. ನಾಳೆ ಬೆಳಿಗ್ಗೆ ನೋಡೋಣ ಸ್ವರೂಪ್” ಎಂದ ಹೇಳಿ ಸ್ವರೂಪ್‌ನನ್ನು ಬೀಳ್ಕೊಟ್ಟ.

ಮನೆಯೊಳಗೆ ಹೋಗಿ ಬಾಗಿಲು ಹಾಕಿಕೊಂಡ ಮೂರೇ ನಿಮಿಷಗಳಲ್ಲಿ ಬಾಗಿಲ ಮೇಲೆ ಯಾರೋ ಕುಟ್ಟಿದ್ದರು. ಅದೊಂದು ಬಲು ಎಚ್ಚರಿಕೆಯ ಸಂಕೇತದಂತಿತ್ತು! ಮಿತ್ರಜೀತ್ ಆಶ್ಚರ್ಯಗೊಳ್ಳುತ್ತಲೇ ಬಾಗಿಲ ಸಂದಿನಿಂದ ನೋಡಿದ.

ಎಲ್ಲಿಯೋ ನೋಡಿದ ಮುಖ! ಯಾರದು? ಮೂರು ಸೆಕೆಂಡುಗಳಲ್ಲಿ ಅವನಾರೆಂದು ಅರಿತು ಬಾಗಿಲು ತೆರೆದ.

“ಬನ್ನಿ ಸಾರ್!” ಅತಿ ಮರ್ಯಾದಾಪೂರ್ವಕವಾಗಿ ಒಳಗೆ ಆಹ್ವಾನಿಸಿದ.

“ನಿನ್ನ ವ್ಯಂಗ್ಯ ನನಗರ್ಥ ಆಗುತ್ತೆ ಮಿತ್ರಜೀತ್. ಆದರೆ ನನ್ನ ಪರಿಸ್ಥಿತಿಯನ್ನು ನೀನು ಅರ್ಥ ಮಾಡಿಕೊಳ್ಳುವೆ ಅಂತ ನಂಬಿದ್ದೇನೆ” ದೈನ್ಯತೆಯೇ ಮೂರ್ತಿವೆತ್ತಂತೆ ಹೇಳಿದ.

“ನಿನ್ನನ್ನು ಸಾಮಾನ್ಯವಾಗಿ ಸಮವಸ್ತ್ರದಲ್ಲಿಯೇ ನೋಡಿ ರೂಢಿ ಇದ್ದಿದ್ದರಿಂದ ಈ ಸಿವಿಲ್ ಉಡುಗೆಯಲ್ಲಿ ಕಂಡು ಹಿಡಿಯೋಕ್ಕೆ ಕಷ್ಟ ಆಯ್ತು ಉಮಾಶಂಕರ್”

ಉಮಾಶಂಕರ್ ತಾನೇ ಬಾಗಿಲ ಚಿಲಕ ಹಾಕಿ ದೀಪವನ್ನು ಆರಿಸಿಬಿಟ್ಟ.

“ಹೇ ಯಾಕೆ?” ಮಿತ್ರಜೀತ್ ಚಕಿತನಾದ.

“ಶ್! ಸೋಫಾದ ಮೇಲೆ ಕೂತ್ಕೋ” ಎಂದು ಹೇಳಿ ತಾನು ಕುಳಿತು ಸಿಗರೇಟ್ ಲೈಟರ್ ಹೊತ್ತಿಸಿದ.

ಅವನ ಪಕ್ಕದಲ್ಲಿ ಕೂಡ ಮಿತ್ರಜೀತ್.

ಉಮಾಶಂಕರ್ ಅವನ ಕೈ ಹಿಡಿದು ಅದುಮಿ, “ಸಾರಿ, ನಾನು ತುಂಬಾ ರೂಡ್ ಆಗಿ ಬಿಹೇವ್ ಮಾಡ್ದೆ ಇವತ್ತು ಸ್ಟೇಷನ್ನಲ್ಲಿ” ಎಂದ.

“ಅದನ್ನ ಹೇಳೋಕ್ಕೆ ನೀನು ರೀತಿ ಬಂದಿದ್ದೀ ಅಂತ ನಾನಂದ್ಕೊಂಡಿಲ್ಲ ಹೌದಾ?” ಕೇಳಿದ ಮಿತ್ರಜೀತ್. “ಇಲ್ಲ” ಕ್ಲುಪ್ತವಾಗಿ ಅಂದ ಉಮಾಶಂಕರ್.

“ಮತ್ತೆ?” ಮಿತ್ರಜೀತ್‌ಗೆ ನಿದ್ರೆ ಮುನ್ನುಗ್ಗಿ ಬರುತ್ತಿತ್ತು. ಆದರೇನು ಮಾಡಿಯಾನು? ಈ ಉಮಾಶಂಕರ್ ಸದಾ ಇವನಿಗೆ ಸಹಾಯವನ್ನೇ ಮಾಡಿರುವಾತ. ಇಂದೇ ಅವನು ಇಷ್ಟು ವಿಚಿತ್ರವಾಗಿ ವರ್ತಿಸಿದ್ದುದು. ಆ ಕಾರಣವಾಗಿ ಹಾಗೆ ಆಡಿರಲಾರನೆಂದು ಮಿತ್ರಜೀತ್‌ನ ಮೆದುಳು ಹೇಳುತ್ತಲೇ ಇತ್ತು.

"ಸಿಲ್ವೆಸ್ಟರ್ ವಿಷಯ ಮಾತಾಡುವುದು ನನಗೆ ಬೇಡವಾಗಿತ್ತು" ಎಂದ ಉಮಾ.

"ಒಗಟು ಬೇಡ ಉಮಾಶಂಕರ್. ಬಿಡಿಸಿ ಹೇಳು" ಎಂದು ಹೇಳಿದ. ಎಷ್ಟು ತಡೆದುಕೊಂಡರೂ ಆಕಳಿಕೆ ಜೋರಾಗಿಯೇ ಬಂದುಬಿಟ್ಟಿತು.

"ನಾನು ಹೇಳುವ ವಿಷಯ ಕೇಳಿದರೆ ನಿನ್ನ ನಿದ್ರೆ ಹಾರಿ ಹೋದೀತು" ಎಂದ ಉಮಾಶಂಕರ್ ವಿಷಯವನ್ನು ಹೇಳಲಾರಂಭಿಸಿದ...

ನಿಜವಾಗಿಯೂ ಮಿತ್ರಜೀತ್‌ನ ನಿದ್ರೆ ಅವನನ್ನು ಬಿಟ್ಟು ಹೊರಟುಹೋಗಿತ್ತು. ಉಮಾಶಂಕರ್ ಹೊರಟುಹೋದ ಮೇಲೂ ಅವನ ಮಂಚದ ಮೇಲೆ ಪವಡಿಸಿ ಛಾವಣಿಯನ್ನೇ ನೋಡಲೆತ್ನಿಸಿದ. ನಿದ್ರಾದೇವಿ ಅವನ ಹತ್ತಿರವೂ ಸುಳಿಯಲಿಲ್ಲ.

ಪಾಲ್‌ನ ಸಾವಿನ ಹಿಂದೆ ಇಷ್ಟು ದೊಡ್ಡ ಜಾಲವಿದೆ ಎಂದು ಮಿತ್ರಜೀತ್ ಊಹಿಸಿರಲಿಲ್ಲ. ಕಾನೂನು ಶ್ರೀಸಾಮಾನ್ಯರ ರಕ್ಷಣೆಗಾಗಿ ಇದೆ ಎಂಬ ಮಾತೇ ಸುಳ್ಳಾದಂತಿದೆಯಲ್ಲಾ!

ಬೆಳಿಗ್ಗೆವರೆಗೆ ಸ್ವರೂಪ್‌ನಿಗೆ ಫೋನ್ ಮಾಡದೇ ಇರಲು ಅವನು ಬಹಳವೇ ಕಷ್ಟಪಟ್ಟಿದ್ದ. ಆರು ಗಂಟೆಗೆ ಫೋನ್ ರಿಂಗಾದಾಗ ಸ್ವರೂಪ್ ಸಿದ್ಧನಾಗಿಯೇ ಇದ್ದ. ಅವನ ಕಾರು ಮಿತ್ರಜೀತ್‌ನ ಮನೆಗೆ ಬಂದಾಗ ಮಿತ್ರಜೀತ್ ಮನೆಯ ಮೂಲೆ ಮೂಲೆ ಹುಡುಕುತ್ತಿದ್ದ.

"ಏನು?" ಎಂದು ಸ್ವರೂಪ್ ಅಚ್ಚರಿ ವ್ಯಕ್ತಪಡಿಸಿದಾಗ ತನ್ನ ತೋರುಬೆರಳನ್ನು ತುಟಿಗಳ ಮೇಲಿಟ್ಟುಕೊಂಡು ಸುಮ್ಮನಾಗಿಸಿದ್ದ. ಹದಿನೈದು ನಿಮಿಷಗಳ ಶೋಧದ ನಂತರ, ಹೊರಗಿನ ಬಟ್ಟೆ ಧರಿಸಿ ಮನೆಯಿಂದ ಹೊರಟು ಸ್ವರೂಪನ ಕಾರಲ್ಲಿ ಕುಳಿತ.

"ನನ್ನ ವರ್ತನೆ ನಿನಗೆ ವಿಚಿತ್ರ ಅನ್ನಿಸಿರಬೇಕಲ್ವಾ?" ಈಗ ಬಾಯಿಬಿಟ್ಟ ಮಿತ್ರಜೀತ್.

"ನೆನ್ನೆ ರಾತ್ರಿ ನನ್ನ ಮನೆಗೆ ಯಾರು ಬಂದಿದ್ರೂಂತ ಗೆಸ್ ಮಾಡ್ತೀಯಾ?" ಕೇಳಿದ ಮಿತ್ರಜೀತ್.

"ಸಿಲ್ವೆಸ್ಟರ್?" ಅನುಮಾನದಿಂದ ಅಂದ ಸ್ವರೂಪ್.

"ಲಾಯರ್ ನೀನು. ಆ ಗೆಸ್ ಹೇಗೆ ಮಾಡೋಕ್ಕೆ ಸಾಧ್ಯ?" ನಕ್ಕ ಮಿತ್ರಜೀತ್ "ಉಮಾಶಂಕರ್ ಬಂದಿದ್ದ" ಎಂದ.

"ಏನಂತೆ? ಸ್ಟೇಷನ್ನಿನಲ್ಲಿ ಫನ್ನಿಯಾಗಿ ಆಡ್ತಿದ್ದ?" ಕೇಳಿದ ಸ್ವರೂಪ್.

"ಅದಕ್ಕೇ ನಾನು ಮನೇಲಿ ಹುಡುಕ್ತಾ ಇದ್ದೆ" ಎಂದ ಮಿತ್ರಜೀತ್.

"ಏನನ್ನ?"

"ರಾತ್ರಿ ಮನೆಗೆ ಬಂದು ಲೈಟ್ ಆರಿಸಿ ಮಾತಾಡ್ದ. ಅದಕ್ಕೇ ಎಲ್ಲಾದ್ರೂ ಮೈಕ್ರೋಫೋನ್ ಬಚ್ಚಿಟ್ಟಿದ್ದಾನಾ ಅಂತ ಪರೀಕ್ಷೆ ಮಾಡ್ತಿದ್ದೆ" ಎಂದ.

"ಏನು ಮಾತಾಡ್ದ?"

"ಅದೇ ನನಗೂ ಅರ್ಥವಾಗದೇ ಇರೋ ವಿಷಯ. ಈಗ ನನಗೆ ಯಾರನ್ನ ನಂಬೋದೋ ಯಾರನ್ನ ಬಿಡೋದೋ ತಿಳೀತಿಲ್ಲ" ಎಂದ.

ಸ್ವರೂಪ್ ಕಾರನ್ನು ಹತ್ತಿರದಲ್ಲೇ ಕಂಡ ಗಾರ್ಡನ್ ರೆಸ್ಟೋರೆಂಟಿಗೆ ಓಡಿಸಿ ನಿಲ್ಲಿಸಿದ.

ಇಬ್ಬರೂ ಕಾರಿಂದಿಳಿದು ಒಂದು ನಿರ್ಜನವಾಗಿದ್ದ ಟೇಬಲ್ ಹುಡುಕಿದರು. ಆ ಹೊಟೇಲ್‌ನ ಮಾಲೀಕನಿಗೆ ಇಷ್ಟು ಬೇಗ ಜನ ಬಂದಿದ್ದು ಕಸಿವಿಸಿ ಉಂಟುಮಾಡಿತ್ತು. ಇನ್ನೂ ಅಡುಗೆಯವರೇ ಬಂದಿರಲಿಲ್ಲ!

"ನಮಗೆ ಏನೂ ಬೇಡ. ನಾವೇ ತಗೋತೀವಿ" ಎಂದ ಸ್ವರೂಪ್.

"ಏನು ಸರ್?" ಕೇಳಿದ ಆ ಹೊಟೇಲ್ ಮಾಲೀಕ ಅನುಮಾನದಿಂದ.

"ರೆಸ್ಟು!" ನಕ್ಕ ಸ್ವರೂಪ್.

ಆ ಮನುಷ್ಯ ನಗೆಮೊಗದಿಂದ ಒಳಗೆ ಹೋದ. ಅತಿಥಿಗಳಿಗೆ ಏನಾದರೂ ಉಪಚಾರ ಮಾಡಬೇಕೆಂಬ ಹಂಬಲದವನು ಆತ.

ವಿಷಯಕ್ಕೆ ನೇರವಾಗಿ ಬಂದ ಮಿತ್ರಜೀತ್.

"ಸಿಲ್ವೆಸ್ಟರ್ ಹೇಳಿದ ಪೊಲಿಟಿಕಲ್ ಮಾಫಿಯಾದ ತೋಳು ಬಹಳವೇ ಉದ್ದವಿದ್ದ ಹಾಗಿದೆ. ಉಮಾಶಂಕರ್ ಪ್ರಕಾರ ಅವರ ಎಂಜಲು ತಿನ್ನೋ ಜನ ಎಲ್ಲಾ ಪೊಲೀಸ್ ಸ್ಟೇಷನ್ನುಗಳಲ್ಲಿದ್ದಾರೆ. ತಾನು ಮಾತಾಡಿದರೆ ತನ್ನ ಕೆಲಸಕ್ಕೇ

ಸಂಚಕಾರ ಬರುವುದೆಂಬ ಭಯ ಉಮಾಶಂಕರ್ರಿಗಿದೆ. ಅವನಿಗೇ ಏಕೆ? ಸಂಸಾರದ ಹೊಣೆ ಇರುವ ಪ್ರತಿಯೊಬ್ಬರೂ ತಿಂಗಳ ಖರ್ಚಿಗೆ ಹಣ ಹೇಗೆ ಹೊಂದಿಸಬೇಕೆಂಬ ಯೋಚನೇಲೇ ಇರ್ತಾರೆ. ಇದು ಸಹಜ ಕೂಡಾ”

ಸ್ವರೂಪ್ ತಲೆದೂಗಿದ. ಅವನೂ ಇನ್ನೂ ಮದುವೆ ಆಗದವ. ತನ್ನ ವೃತ್ತಿಯಲ್ಲಿನ ಹೆಣ್ಣನ್ನು ಮೆಚ್ಚಿದ್ದಾನೆ. ಅವಳ ಮೆಚ್ಚುಗೆಯನ್ನು ಪಡೆಯಲು ನಾನಾ ರೀತಿಯ ಸರ್ಕಸ್ ಮಾಡುತ್ತಿದ್ದಾನೆ. ಆದರೆ ಅದು ವಿರಾಮದ ವೇಳೆಯಲ್ಲಿ. ಕೆಲಸದಲ್ಲಿಯೂ ಒಳ್ಳೆಯ ಹೆಸರನ್ನು ಬೇಗ ಸಾಧಿಸಬೇಕೆಂಬ ಮಹದಾಶೆ ಇದೆ.

“ಉಮಾಶಂಕರ್ ಈ ವರ್ತನೆಗೆ ಅತೀತನಲ್ಲ. ಹಾಗಿರುವಾಗ ಪೊಲಿಟಿಕಲ್ ಮಾಫಿಯಾದ ರಹಸ್ಯ ಬಯಲು ಮಾಡುವವನಂತೆ ಬಂದು, ಅವರ ಆಜ್ಞೆಯ ಪ್ರಕಾರ ನನ್ನ ಮನೆಯಲ್ಲಿ ಮೈಕ್ರೋಫೋನ್ ಯಾಕೆ ಬಚ್ಚಿಟ್ಟಿರಬಾರದು?” ಮಿತ್ರಜೀತ್ ಪ್ರಶ್ನಿಸಿದ. ನಂತರ ತಾನೇ ಉತ್ತರ ನೀಡುತ್ತಾ, “ಯಾಕೋ ನನ್ನ ಮನಸ್ಸು ಇದನ್ನು ಒಪ್ತಿಲ್ಲ. ತಾನಾಗಿಯೇ ಬಂದ ಉಮಾಶಂಕರನ ಮಾತಿನಲ್ಲಿ ನಿನ್ನೆ ರಾತ್ರಿ ನಿಯತ್ತು ಕಾಣುತ್ತಿತ್ತು” ಎಂದ.

ಹಠಾತ್ತನೆ ಯಾರೋ ಬಂದ ಸದ್ದಾಗಿದ್ದಿದ್ದರಿಂದ ಮಾತು ನಿಲ್ಲಿಸಿದ ಮಿತ್ರಜೀತ್. ಬಂದಿದ್ದವನು ಹೊಟೇಲ್‌ನ ಮಾಲೀಕ.

“ನಾನೇ ಕಾಫಿ ತಯಾರಿಸಿ ಬಹಳ ದಿನಗಳಾಗಿವೆ. ಹೇಗಿದೆಯೋ ಏನೋ” ಎಂದು ಒಂದು ರೀತಿಯ ಸಂಕೋಚದಿಂದ ನಗುತ್ತಾ.

“ಪರವಾಗಿಲ್ಲ. ಅಡ್ಜೆಸ್ಟ್ ಮಾಡ್ಕೋತೀವಿ” ಎಂದು ನಕ್ಕ ಮಿತ್ರಜೀತ್ ಒಂದು ಗುಟುಕು ಹೀರಿ, “ಚೆನ್ನಾಗೇ ಇದೆ. ಇನ್ ಫ್ಯಾಕ್ಟ್ ಫಸ್ಟ್ ಕ್ಲಾಸ್!” ಎಂದ ಮೆಚ್ಚಿ.

ಸ್ವರೂಪನೂ ಕಾಫಿ ಸಿಪ್ ಮಾಡಿ “ಏ ಒನ್!” ಎಂದ.

“ನೀವೊಂದು ಕೆಲಸ ಮಾಡಬಹುದು” ಎಂದ ಮಿತ್ರಜೀತ್ ಗಂಭೀರವಾಗಿ.

“ಏನು?” ಎಂದ ಆತ.

“ಗಿರಾಕಿಗಳಿಗೆ ನಿಮ್ಮ ಕುಕ್ ಕಾಫಿ ಕೊಟ್ಟು, ನೀವು ಈ ರೀತಿ ಒಳ್ಳೇ ಕಾಫಿ ಮಾಡಿಕೊಂಡು ಕುಡಿಯಬಹುದು” ಎಂದ.

“ಸಾರ್, ನನ್ನ ಕುಕ್ ಕೂಡಾ ಚೆನ್ನಾಗೇ ಕಾಫಿ ಮಾಡ್ತಾನೆ!” ಹೆಮ್ಮೆಯಿಂದ ಹೇಳಿ ಅಲ್ಲಿಂದ ಹೋದ ಹೊಟೇಲ್ ಮಾಲೀಕ.

ಕಾಫಿ ಕುಡಿಯುತ್ತಾ ಕೆಲವು ನಿಮಿಷಗಳ ಕಾಲ ಮೌನವಾಗಿದ್ದರು. ಕಾಫಿಯಲ್ಲಿನ ಕೆಫೀನ್ ಮೆದುಳಿನ ಕಣಗಳನ್ನು ಎಬ್ಬಿಸಿ ಉತ್ತೇಜಿಸುತ್ತದಂತೆ. ಅದಕ್ಕೇ ಕಾಫಿಯನ್ನು ಮಡಿ, ಮೈಲಿಗೆ ಇಲ್ಲದೇ ಎಲ್ಲರೂ ಎಲ್ಲ ಕಾಲದಲ್ಲಿಯೂ ಸವಿ ನೋಡುತ್ತಾರೆ!

“ನಿನಗೆ ಉಮಾಶಂಕರ್ ಎಷ್ಟು ವರ್ಷಗಳಿಂದ ಗೊತ್ತು?” ಕೇಳಿದ ಸ್ವರೂಪ್.

“ನಾಲ್ಕೈದು ವರ್ಷ ಅಂದ್ಕೋತೀನಿ. ಪ್ರತಿ ಸಲ ನನಗೆ ಸಹಾಯ ಮಾಡಿಯೇ ಇದ್ದಾನೆ. ಈ ಸಲವೇ ಈ ರೀತಿ ವರ್ತಿಸಿರೋದು”

“ಬಟ್, ರಾತ್ರಿ ಬಂದು ನಿನಗೆ ವಿವರ ಕೊಟ್ಟ ಅಂದ್ಯಲ್ಲಾ?”

“ನಿಜಾನೇ!” ಮಿತ್ರಜೀತ್ ಯೋಚಿಸುತ್ತಾ ನುಡಿದ. “ಪೊಲೀಸರಲ್ಲಿಯೇ ಮಾಫಿಯಾದ ಜನರಿದ್ದಾರೆ ಅನ್ನೋ ವಿಷಯ ಗೊತ್ತಿರೋದೇ. ಆದರೂ ಅದನ್ನ ಪೊಲೀಸರೇ ಹೇಳಿರೋದು ವಿಶೇಷವೇ. ಇನ್ನೂ ಒಂದು ವಿಷಯ ಹೇಳಿದ...”

“ಏನು?”

“ಸದ್ಯದಲ್ಲಿಯೇ ಮತ್ತೆ ಕಾಂಟ್ಯಾಕ್ಟ್ ಮಾಡ್ತಾನಂತೆ. ಇನ್ನೂ ಸ್ವಲ್ಪ ವಿವರ ಸಿಕ್ಕೋ ಅವಕಾಶ ಇದ್ಯಂತೆ. ಮಾಫಿಯಾದ ಬೇಹುಗಾರರಿಗೆ ತಾನು ನಮಗೆ ಸಹಾಯ ಮಾಡ್ತಿರೋದು ತಿಳಿಯಬಾರದೂಂತ ಹಾಗೆ ವಿಚಿತ್ರವಾಗಿ ಬಿಹೇವ್ ಮಾಡಿದ್ನಂತೆ”

“ಇರಬಹುದೂಂತ ನನಗೆ ನೆನ್ನೆ ಅನ್ನಿಸ್ತು”

“ನನಗೆ ಒಂದೇ ಯೋಚನೆ. ಲೊರೆಟ್ಟಾಳಿಗೆ ಏನೂ ಅಪಾಯ ಆಗೋಲ್ವಾ ಅಂತ” ಚಿಂತಿತನಾಗಿ ಅಂದ ಮಿತ್ರಜೀತ್.

“ತಾರ್ಕಿಕವಾಗಿ ಯೋಚಿಸಿದರೆ ಅವಳಿಗೇನೂ ಅಪಾಯ ಉಂಟಾಗುವ ಸಾಧ್ಯತೆ ಇಲ್ಲ ಅನ್ನಿಸುತ್ತೆ” ಎಂದ ಸ್ವರೂಪ್.

“ಯಾವ ತರ್ಕ?” ಕೇಳಿದ ಮಿತ್ರಜೀತ್. ಅವನಿಗೂ ಹಾಗೆಯೇ ಅನ್ನಿಸಿತ್ತು. ಆದರೂ ಸ್ವರೂಪನ ತರ್ಕ ಕೇಳಲು ಉತ್ಸುಕತೆ ತೋರಿದ.

"ನಾವು ಸಿಲ್ವೆಸ್ಟರ್‌ನನ್ನು ಭೇಟಿ ಆಗಿರೋ ವಿಷಯ ಅವರಿಗೆ ಗೊತ್ತೇ ಆಗಿರುತ್ತೆ. ಆ ಪೊಲೀಸ್ ಸ್ಟೇಷನ್ನಿನಲ್ಲೂ ಅವರ ಕಡೆಯವರಿದ್ದೇ ಇರುತ್ತಾರೆ. ನಿನ್ನ ಬಗ್ಗೆ ಅವರಿಗೆ ತಿಳಿದಿರುತ್ತೆ. ನನ್ನ ಬಗ್ಗೆಯೂ ಅರಿತಿರುತ್ತಾರೆ. ಒಂದು ವೇಳೆ ಸಿಲ್ವೆಸ್ಟರ್ ಅವರ ಬಗ್ಗೆ ನಮಗೆ ಹೇಳಿಬಿಟ್ಟರೆ? ಅವರ ಗುಟ್ಟು ಭದ್ರವಾಗಿರಬೇಕೆಂದರೆ ಅವನ ಜುಟ್ಟು ಅವರ ಕೈಲಿರಬೇಕು. ಅವನ ಜುಟ್ಟು ಎಂದರೆ ಅವನ ಪ್ರೀತಿಪಾತ್ರರು. ಅಂದ್ರೆ ಲೊರೆಟ್ಟಾ! ಅವಳ ಸೇಫ್ಟಿ ಮುಖ್ಯ. ಅವಳಿಗೆ ಅಪಾಯ ಉಂಟಾದರೆ ಸಿಲ್ವೆಸ್ಟರ್ ಅವರು ಹೇಳಿದ್ದು ಯಾಕೆ ಕೇಳ್ತಾನೆ? ಸೋ, ಅವಳಿಗೆ ಅಪಾಯ ಉಂಟಾಗಿರುವುದಿಲ್ಲ"

ಅವರು ಕುಳಿತ ಕಾರು ಮಿತ್ರಜೀತ್‌ನ ಮನೆಯತ್ತ ಹೊರಟಿತ್ತು. ಮಿತ್ರಜೀತ್ ಸ್ವರೂಪನ ತರ್ಕವನ್ನು ಒಪ್ಪದಿರದಾದ. ಕಾರು ಅವನ ಮನೆ ತಲುಪಿದಾಗ ಫೋನು ಹೊಡೆದುಕೊಳ್ಳುತ್ತಿತ್ತು. ಬೇಗ ಬೀಗ ತೆರೆದು ಓಡಿದ. ರಿಂಗ್ ನಿಂತುಹೋಯಿತು.

ನಿರಾಶೆಯಿಂದ ಫೋನಿಗೆ ಬೆನ್ನು ಮಾಡುತ್ತಿದ್ದಂತೆ ಮತ್ತೆ ರಿಂಗಾಯಿತು.

"ಹಲೋ" ಎಂದ ರಿಸೀವರೆತ್ತಿ.

"ಮಿತ್ರಜೀತ್!" ಸ್ವರ ಪಿಸುಗುಡುವಿಕೆಯಲ್ಲಿತ್ತು.

"ಹೌದು" ಕುತೂಹಲ ಏರಿತ್ತು ಮಿತ್ರಜೀತ್‌ನಲ್ಲಿ.

"ಲೊರೆಟ್ಟಾ ಎಲ್ಲಿದ್ದಾಳೆ ಅಂತ ಹೇಳ್ತೀನಿ. ನನಗೇನು ಕೊಡ್ತೀ?" ಅದೇ ಪಿಸುಪಿಸು ಸ್ವರ.

"ಹಲೋ ಯಾರು ನೀನು?" ಎಂದು ಕೇಳಿದ. ಗಂಡೋ ಹೆಣ್ಣೋ ತಿಳಿಯುತ್ತಿಲ್ಲ.

"ಮತ್ತೆ ಫೋನ್ ಮಾಡ್ತೀನಿ"ಟಕ್ ಎಂದು ಲೈನ್ ಕಟ್ ಆಯಿತು.

"ಹಲೋ..." ಅತ್ತ ಕಡೆ ಯಾರೋ ಬಂದಿದ್ದರಿಂದ ಡಿಸ್ಕನೆಕ್ಟ್ ಆಯಿತು ಎಂದುಕೊಂಡ ಮಿತ್ರಜೀತ್.

ತನ್ನನ್ನೇ ನೋಡುತ್ತಿದ್ದ ಸ್ವರೂಪ್‌ಗೆ ಉದ್ವೇಗದಿಂದ ಹೇಳಿದ "ಲೊರೆಟ್ಟಾ ಬಗ್ಗೆ ಸುಳಿವು ಸಿಗಲಿದೆ!"

# 10

“ಅಮರ್! ಯಾರು ಆ ಲಕ್ಕೀ ಗರ್ಲ್?” ಕೇಳಿದ ಫಜಲ್ ಆನಂದದಿಂದ.

ಅಮರೇಶ್ ನಾಚಿದ. ಫಜಲ್‌ಗೆ ಬಹಳವೇ ಅಚ್ಚರಿ ಎನ್ನಿಸಿತ್ತು.

“ಅರೆ, ಬೀಟ್‌ರೂಟ್ ತರ ಆಗಿಬಿಟ್ಯಲ್ಲೋ ಮಾರಾಯಾ? ನಾಚಿಕೊಳ್ಳೋದೂ ಬರತ್ತೆ ನಿಂಗೆ!” ಫಜಲ್ ಅವನ ಬೆನ್ನು ತಟ್ಟಿದ.

ಕಳ್ಳ ಸಂನ್ಯಾಸಿಯ ಘಟನೆ ಆದ ಮೇಲೆ ಫಜಲ್, ಅಮರೇಶ್ ಆಗಾಗ ಭೇಟಿ ಮಾಡುತ್ತಿದ್ದರು.

ಕೆಲವೇ ದಿನಗಳಲ್ಲಿ ಆ ಸ್ನೇಹ ಗಾಢವಾಯಿತು. ದಿವಸಕ್ಕೊಮ್ಮೆ ಎರಡು ನಿಮಷಗಳ ಕಾಲವಾದರೂ ಭೇಟಿ ಆಗಬೇಕು, ಹಾಗಾಗಿಬಿಟ್ಟರು. ಒಂದು ವೇಳೆ ಕೆಲಸ ಮೇಲೆ ಬೇರೆ ಊರಿಗೆ ಹೋದರೂ ಅಲ್ಲಿಂದಲೇ ಒಂದು ನಿಮಿಷವಾದರೂ ಫೋನಿನಲ್ಲಿ ಮಾತಾಡಬೇಕು. ಒಂದು ಪ್ರಾಣ ಎರಡು ದೇಹಗಳಂತಾದರು.

ಎಲ್ಲ ಅಭಿರುಚಿಗಳಲ್ಲಿ ಸಮಾನತೆ ಇದ್ದರೂ ಎರಡು ವಿಷಯಗಳಲ್ಲಿ ಅಜಗಜ ಅಂತರವಿತ್ತು. ಒಂದು ಮದ್ಯ. ಎರಡು ಮದುವೆ.

ಸ್ಕಾಚ್ ಆನ್ ದ ರಾಕ್ಸ್, ರಮ್, ವೋಡ್ಕಾ – ಅದು ಇದು ಎಂದಲ್ಲ ಪ್ರತಿ ಮಾದಕ ಪೇಯವೂ ಅಮರೇಶನಿಗೆ ಇಷ್ಟ ಮದ್ಯ! ಫಜಲ್ ಟೀಟೋಟಲರ್. ಯಾವ ಮದ್ಯವನ್ನೂ ಮುಟ್ಟಲಾರ. ಅಮರೇಶನ ಎರಡು ವರ್ಷಗಳ ಒಡನಾಟದಲ್ಲಿ ಒಮ್ಮೆಯೂ ಅಪ್ಪಿ ತಪ್ಪಿ ಅಮರೇಶನಿಗೆ ಕುಡಿತ ಬಿಡೆಂದಾಗಲೀ, ಕಡಿಮೆ ಮಾಡೆಂದಾಗಲೀ ಸಲಹೆ ನೀಡಲಿಲ್ಲ. ಇದು ಅಮರೇಶನ ಹೃದಯ ತಟ್ಟಿದ ಸಂಗತಿ. ಆದರೆ ಫಜಲ್‌ನ ಮುಖಭಾವ ಕೆಲವೊಮ್ಮೆ ಹೇಳಿಬಿಡುತ್ತಿತ್ತು ಅಮರೇಶನಿಗೆ – ಇವನಿಗೆ ತನ್ನ ಕುಡಿತ ಇಷ್ಟವಿಲ್ಲವೆಂದು! ಅದಕ್ಕೇ ಎರಡು ಮೂರು ತಿಂಗಳಿಂದ ಕುಡಿಯುವ ಪಾನೀಯದ ಅಳತೆಯನ್ನು ಕಡಿಮೆ ಮಾಡಿದ್ದ. ಅದೊಂದೇ ಕಾರಣವಲ್ಲ ಕುಡಿತವನ್ನು ಕಡಿಮೆ ಮಾಡಲು.

ಮತ್ತೊಂದು ಕಾರಣ ಸುನೀತಿ!

ಹೌದು! ಮೂರು ತಿಂಗಳ ಹಿಂದೆ ಅವನಿಗೆ ಪರಿಚಯವಾದವಳು. ಇಂಡಸ್ಟ್ರೀ ಒಂದರ ಛೇರ್ಮನ್ ಭೇಟಿಗೆ ಹೋದಾಗ ಆ ವ್ಯಕ್ತಿಯ ಪರ್ಸನಲ್ ಸೆಕ್ರೆಟರಿಯನ್ನು ಭೇಟಿಯಾಗಬೇಕಿತ್ತು. ಆಕೆಯೇ ಸುನೀತಿ.

ಅವಳ ನಡೆ, ನುಡಿ, ಸ್ವಭಾವ ವರ್ತನೆಗಳು ಅಮರೇಶನನ್ನು ಆಕರ್ಷಿಸಿದ್ದವು. ಅವಳಲ್ಲಿಯೂ ಅಮರೇಶ ಒಂದಿಷ್ಟು ಆಸಕ್ತಿಯನ್ನು ಮೂಡಿಸಿದ್ದ. ಅವನು ಸಂಜೆ ಟೀಗೆ ಕರೆದಾಗ ಸಂಕೋಚವಿಲ್ಲದೇ ಬಂದಳು. ತಂದೆ ತಾಯಿ ಇಲ್ಲದ ಒಬ್ಬೊಂಟಿಗಳು. ಅವನೂ ಅದೇ. ಒಂದು ರೀತಿಯ ಕೆಮಿಕಲ್ ರಿಯಾಕ್ಷನ್ ಇಬ್ಬರಲ್ಲಿಯೂ ಉಂಟಾಯಿತು.

ಮರುದಿನ ಮತ್ತೊಂದು ಬಾರ್ ಆಂಡ್ ರೆಸ್ಟುರಾಗೆ ಹೋದರು. ಇವನ ಸಿಗರೇಟ್ ಸೇವನೆ, ಮದ್ಯಪಾನ ಅವಳಿಗೆ ಹಿಡಿಸಲಿಲ್ಲ. ಅವಳು ಹಾಗೆಂದು ಹೇಳಲಿಲ್ಲ. ಫಜಲ್ ಸಹಿಸಿಕೊಂಡಂತೆಯೇ ಅವನ ಖಾಸಗಿ ಅಭ್ಯಾಸಗಳನ್ನು ಸಹಿಸಿಕೊಳ್ಳಲು ಇವಳೂ ನಿರ್ಧರಿಸಿದಳು. ಮನುಷ್ಯ ಒಳ್ಳೆಯವನು. ಪ್ರೇಮವೆಂದರೆ ಪ್ರೇಮಿಸುವ ವ್ಯಕ್ತಿಯ ದೌರ್ಬಲ್ಯಗಳನ್ನು ಸಹಿಸಿಕೊಳ್ಳುವುದು ಎಂಬ ನುಡಿಯನ್ನು ಅವಳು ಅಕ್ಷರಶಃ ಪಾಲಿಸಿದಳು. ಅವಳ ಈ 'ಸನ್ನಡತೆ' ಅವನಿಗೇ ಮುಜುಗರ ಹುಟ್ಟಿಸಿತು. ಅದಕ್ಕೇ ಅವನು ಅವಳೆದುರಿಗೆ ಸಿಗರೇಟ್, ಮದ್ಯ ತಪ್ಪಿಸಿದ.

ಫಜಲ್ ಈಚೆಗೆ ಅಮರೇಶ ಸಿಗುತ್ತಿರಲಿಲ್ಲ. ಫಜಲ್ ಕೂಡಾ ಯಾವುದೋ ರಾಕೆಟ್ ವಿಸ್ಫೋಟನೆಯಲ್ಲಿ ಬಿಜಿಯಾಗಿದ್ದುದರಿಂದ ಅಮರೇಶ್ ಹೆಚ್ಚು ಸಿಗದಿದ್ದುದು, ಫೋನಿನಲ್ಲಿ ಕೂಡಾ ಹೆಚ್ಚಾಗಿ ಮಾತಾಡದಿದ್ದುದನ್ನು ಗಮನಿಸಿರಲಿಲ್ಲ. ಅದೊಂದು ದಿನ ಏಕೋ ಒಂದು 'ಬ್ರೇಕ್' ತೆಗೆದುಕೊಳ್ಳಬೇಕನ್ನಿಸಿತು. ಸ್ವಲ್ಪ 'ಫ್ರೀ' ಎಂದೊಡನೆ ಅಮರೇಶನ ನೆನಪು ಟಕ್ಕನೆ ಬಂದಿತ್ತು. ಬಹಳ ದಿನಗಳಿಂದ ಅವನೊಡನೆ ಸರಿಯಾಗಿ ಹರಟಿಲ್ಲವೆಂದೂ ಅನಿಸಿತ್ತು. ಸರಿ, ಅವನಿಗೆ ಫೋನ್ ಮಾಡಿದ. ಸರಿ, ಅವನಿಗೆ ಫೋನ್ ಮಾಡಿದ. ಫೋನ್ ರಿಂಗಾಗುತ್ತಲೇ ಇತ್ತು. ಬೇಸರಗೊಂಡು ಅಮರೇಶನ ಪೇಜರ್ಗೆ ಸಂದೇಶ ನೀಡಿದ. ಉಹೂಂ. ಉತ್ತರವಿಲ್ಲ.

ಏಕೋ ಮನಸ್ಸಿಗೆ ಬೇಜಾರಾಯಿತು. ಯಾವುದಾದರೂ ಚಲನಚಿತ್ರಕ್ಕೆ ಹೋಗೋಣವೆಂದುಕೊಂಡ. ಅದೂ ಹಿಡಿಸಲಿಲ್ಲ. ಕಾರಿನಲ್ಲಿ ಊರಾಚೆಗೆ ಡ್ರೈವ್ ಹೋಗಲು ನಿರ್ಧರಿಸಿ ಹೊರಟ.

ಇತ್ತ ಅಮರೇಶನಿಗೆ ಫಜಲ್ ಪೇಜರ್ ಸಂದೇಶ ದೊರೆತಿತ್ತು.

“ಯಾರದು ಪೇಜರ್ ಮೆಸೇಜ್?” ಕೇಳಿದಳು ಸುನೀತ.

ಅಂದು ಅವಳು ಕೆಲಸಕ್ಕೆ ರಜಾ ಹಾಕಿ ಅವನೊಂದಿಗೆ ಬೈಕ್‌ನಲ್ಲಿ ಬಂದಿದ್ದಳು. ಅವನನ್ನು ಜೀವನಸಂಗಾತಿಯನ್ನಾಗಿ ಮಾಡಿಕೊಳ್ಳದೇ ತನ್ನ ಬಾಳು ಅರ್ಥಪೂರ್ಣವಾಗದೆಂಬ ನಿರ್ಧಾರಕ್ಕೆ ಬಂದಿದ್ದಳು. ಅಂದು ಅವನ ಮನೆ, ಮನೆಯವರು, ಗೆಳೆಯರು, ಅಭಿರುಚಿಗಳ ಬಗ್ಗೆ ತಿಳಿದುಕೊಳ್ಳಬೇಕೆಂದು ನಿರ್ಧರಿಸಿದ್ದಳು.

ಇಬ್ಬರೂ ಊರಾಚೆಯ ಸೇರಿ ನಾರ್ಥ್ ಇಂಡಿಯನ್ ಸ್ಪೆಷಲ್ ಥಾಲಿಯನ್ನು ಆರ್ಡರ್ ಮಾಡಿದ್ದರು. ಸೂಪ್ ಕುಡಿದು ಊಟಕ್ಕೆ ಕಾದಿದ್ದಾಗ ಸಂದೇಶ ಬಂದಿತ್ತು.

ಓಹ್ ಫಜಲ್! ಎಂದುಕೊಂಡ. ಒಂದು ರೀತಿಯ ಅಪರಾಧೀ ಮನೋಭಾವ ಅವನನ್ನು ಆವರಿಸಿತು. ಸುನೀತಿಯನ್ನು ಭೇಟಿಯಾಗಬೇಕೆಂದು ನಿರ್ಧರಿಸಿದಾಗಿನಿಂದ, ಅವಳ ಒಡನಾಟ ಆರಂಭವಾಗಿನಿಂದ ಫಜಲ್‌ನನ್ನು ಭೇಟಿಯಾಗಲು ಸಮಯ ಸಾಲದೇ ಹೋಗಿತ್ತು. ಹಾಗೆಂದು ಫಜಲ್‌ನನ್ನಾಗಲೀ, ಅವನ ಸ್ನೇಹವನ್ನಾಗಲೀ ಮರೆತಿರಲಿಲ್ಲ.

‘ಈಗ ಅವನ ಸಂದೇಶಕ್ಕೆ ಏನೆಂದು ಉತ್ತರಿಸುವುದು? ಒಂದು ಕೆಲಸ ಮಾಡ್ತೀನಿ. ಸುನೀತಿಯನ್ನು ಮನೆಗೆ ಬಿಟ್ಟು ನಂತರ ಫಜಲ್‌ನನ್ನು ಮುಖತಃ ಭೇಟಿ ಆಗ್ತೀನಿ. ಸುನೀತಿಯ ವಿಷಯ ಹೇಳ್ತೀನಿ. ಆಗಲೇ ಮನಸ್ಸು ಹಗುರವಾಗುವುದು’ ಎಂದುಕೊಂಡ.

ಆ ಸಮಯದಲ್ಲಿಯೇ ಸುನೀತಿ ಅವನನ್ನು ‘ಯಾರದು ಮೆಸೇಜ್?’ ಎಂದಿದ್ದಳು. ಇದೇ ಸರಿಯಾದ ಸಮಯವೆಂದರಿತು “ನನ್ನ ಕ್ಲೋಜ್ ಫ್ರೆಂಡ್ ಫಜಲ್” ಎಂದು ಶುರುವಿಟ್ಟುಕೊಂಡ. ಅವಳಿಗೂ ಅದೇ ಸರಿಯಾದ ಆರಂಭವೆನಿಸಿತು. ತಾನು ಈಗ ತಾನೇ ಅವನ ಬಾಳಲ್ಲಿ ಹೆಜ್ಜೆ ಇರಿಸುತ್ತಿರುವವಳು. ಅಮರೇಶ್ ಯಾರೊಂದಿಗೆ ತನ್ನ ಭಾವನೆಗಳನ್ನು ಹಂಚಿಕೊಳ್ಳುತ್ತಿದ್ದ ಇದುವರೆಗೆ? ಆ ವ್ಯಕ್ತಿಯನ್ನು ತಾನು ಹೇಗೆ ಸ್ವಾಗತಿಸಬೇಕು ಎಂದು ಯೋಚಿಸುತ್ತಿದ್ದವಳ ಕಾಲಿಗೆ ಹುಡುಕುತ್ತಿದ್ದ ಬಳ್ಳಿ ತೊಡರಿದಂತಾಗಿತ್ತು.

“ಫಜಲ್ ಬಗ್ಗೆ ಎಷ್ಟು ಹೇಳಿದ್ರೂ ಸಾಲದು ಸುನೀ. ನನ್ನ ಜೀವದ ಗೆಳೆಯ ಅವನು. ಯಾಕೇಂದ್ರೆ ‘ನನ್ನ ಜೀವ ಉಳಿಸಿದ್ದಾನೆ’” ಎಂದ ಫಜಲ್ ಬಗ್ಗೆ ಹೇಳಿ ಮುಗಿಸಿ.

“ಜೀವ? ಏನಾಯ್ತು ಹೇಳಿ” ಎಂದಳು.

ಆ ಕಪಟ ಸಾಧುವಿನ ಘಟನೆ ಹೇಳಿದ. ಫಜಲ್‌ನ ಬಗ್ಗೆ ಒಂದು ವಿಲಕ್ಷಣ ಧನ್ಯತಾಭಾವ ಉಂಟಾಯಿತು. ಫಜಲ್ ಅಮರ್‌ನನ್ನು ಉಳಿಸಿರದಿದ್ದರೆ ತನಗೆಲ್ಲಿ ಅಮರೇಶ್ ಸಿಗುತ್ತಿದ್ದ? ಎನ್ನಿಸಿ ಮನದಲ್ಲೇ ಫಜಲ್‌ಗೆ ಕೃತಜ್ಞತೆ ವ್ಯಕ್ತಪಡಿಸಿದಳು. ಅವನನ್ನು ಭೇಟಿಯಾಗುವ ಆಶಯ ತೋರಿದಳು.

“ಖಂಡಿತ” ಎಂದ ಅಮರ್ “ಓ ಮೈ ಗಾಡ್!” ಎಂದು ಉದ್ಗರಿಸಿದ.

“ಏನಾಯ್ತು?” ಎಂದಳು ಸುನೀತಿ ಅವನ ಉದ್ಗಾರದಿಂದ ಚಕಿತಳಾಗಿ.

“ಮಾತಾಡ್ತಾ ಮಾತಾಡ್ತಾ ಅದೇನು ತಿಂದೆವೋ ತಿಳೀಲಿಲ್ಲ. ಸ್ಪೆಷಲ್ ಮೀಲ್ಸ್ ಅಂತ ಹೊಟೇಲ್‌ನವರು ಹುಲ್ಲು ಕೊಟ್ಟಿದ್ದರೂ ತಿಂದುಬಿಟ್ಟಿರ್ತಿದ್ವಿ ಅಲ್ವಾ?” ಎಂದು ನಕ್ಕ.

ಸದಾ ಹೀಗೇ ಇದ್ದರೆ ಈ ಮನುಷ್ಯನೊಂದಿಗೆ ಬಾಳು ಸವೆಸಬೇಕಾಗಿಲ್ಲ, ಸಾಗಿಸಬಹುದು ಎಂದುಕೊಂಡಳು ಸುನೀತಿ ಸಂತಸದಿಂದ.

“ಅದಕ್ಕೆ ಕಾರಣ ನಾವು ಇರುವ ಜಾಗವಾ? ಊಟವಾ? ಇಲ್ಲಾ ಕಂಪೆನಿಯಾ?” ಎಂದು ನಸುನಕ್ಕ ಅಮರ್. ಆ ವಾಕ್ಯದ ಹಿಂದಿನ ಮರ್ಮಾರ್ಥ ಸುನೀತಿಗೆ ಮುದ ತಂದಿತ್ತು. ಇನ್ನೂ ಏನೇನು ಮಾತಾಡಲಿದ್ದರೋ, ಅಷ್ಟರಲ್ಲಿ ಸುನೀತಿಯ ಮೊಬೈಲ್ ಕೂಗಿಕೊಂಡಿತ್ತು. ಕ್ಷಮಾಪಣಾ ದೃಷ್ಟಿಯನ್ನು ಅಮರೇಶನ ಬೀರುತ್ತಾ, ಎಲ್ಲಿಂದ ಕಾಲ್ ಬಂದಿದೆ ಎಂದು ನೋಡಿದಳು. ಕಾಲ್ ರಿಜೆಕ್ಟ್ ಮಾಡಲೆಣಿಸಿದಾಗ, “ಬೇಡ ಸುನೀತಿ. ತುಂಬಾ ಮುಖ್ಯವಾದ ಕರೆ ಇರಬಹುದು. ಮೊಬೈಲ್ ಇಟ್ಟುಕೊಂಡು ಆಫ್ ಮಾಡಿದ್ರೆ ಮೊಬೈಲ್ ಇಟ್ಕೊಳ್ಳೋದರ ಅರ್ಥವೇ ಕಳೆದುಹೋಗತ್ತೆ” ಎಂದ.

ಸುನೀತಿ ಕಾಲ್ ಪಡೆದು “ಹಲೋ ಸರ್!” ಎಂದಳು. ಅತ್ತ ಕಡೆಯಿಂದ ಬಂದ ಸಂದೇಶ ಅವಳ ಮುಖದ ಮೇಲೆ ದುಃಖಪೂರ್ಣ ಗಾಂಭೀರ್ಯವನ್ನು ತಂದಿತ್ತು. “ಓಕೆ ಸರ್!. ಈಗ್ಲೇ ಹೊರಡ್ತೀನಿ. ಹಾಫ್ ಆನ್ ಅವರ್?” ಎಂದು ಹೇಳಿ ಕಾಲ್ ಡಿಸ್ಕನೆಕ್ಟ್ ಮಾಡಿದಳು

ಅವಳು ಬ್ಯಾಗ್ ಕೈಗೆತ್ತಿಕೊಳ್ಳುವ ವೇಳೆಗೆ ಅಮರೇಶ ಎದ್ದು ನಿಂತಿದ್ದ. ನೇರವಾಗಿ ಗಲ್ಲಾಗೆ ನಡೆದು ಊಟದ ಬಿಲ್ ನೀಡಿ, ತಮಗೆ ಸೇವೆ ಮಾಡಿದ್ದ ಸರ್ವರ್‌ಗೆ ಟಿಪ್ಸ್ ಕೊಟ್ಟ. ಬೈಕ್ ಸ್ಟಾರ್ಟ್ ಮಾಡಿದ.

ಸುನೀತಿ ಓಡಿ ಬಂದು ಬೈಕ್ ಹತ್ತಿದಳು. "ನಮ್ಮ ಬಾಸ್ ತಾಯಿಗೆ ಸಕತ್ ಸೀರಿಯಸ್ ಅಂತೆ. ಅವರು ಈಗ ಡೆಲ್ಲಿಗೆ ಹೋಗ್ಬೇಕಂತೆ. ನಾನು ಆಫೀಸಿಗೆ ಹೋಗ್ಬೇಕು" ಎಂದಳು ವಿವರಣೆ ನೀಡುತ್ತಾ.

"ಅಫ್ ಕೋರ್ಸ್! ನಮ್ಮನ್ನು ನಂಬಿರೋರನ್ನ ಚೆನ್ನಾಗಿ ನೋಡಿಕೋಬೇಕು. ಬಾ ಹೋಗೋಣ" ಎಂದು ಬೈಕ್ ಓಡಿಸಿದ. ಸುನೀತಿಯ ಪರೀಕ್ಷೆಯಲ್ಲಿ ಮತ್ತೊಂದು ಅಂಕ ಗಳಿಸಿದ್ದ ಅಮರೇಶ!

ಇವರ ಬೈಕ್ ಹೊಟೇಲ್‌ನಿಂದ ಹೊರಗೆ ಹೋಗುವುದಕ್ಕೂ ಫಜಲ್‌ನ ಕಾರು ಒಳಗೆ ಬರುವುದಕ್ಕೂ ಕೇವಲ ಐದು ಸೆಕೆಂಡುಗಳ ವ್ಯತ್ಯಾಸ. ಅಷ್ಟೇ! ಫಜಲ್ ಕಾರನ್ನು ಬೈಕಿನ ಹಿಂದೆ ಓಡಿಸಲಾರಂಭಿಸಿದ. ಅಮರೇಶನ ಹಿಂದೆ ಯಾರೋ ಹುಡುಗಿ!

ಇದು ಹೊಸ ಬೆಳವಣಿಗೆ. ತನಗೆ ತಿಳಿಯದೇ ಇರುವ ಸಂಗತಿ!

ಕುತೂಹಲ ಅವನ ಬುದ್ಧಿಯನ್ನು ಗೆದ್ದಾಗ ಅಮರೇಶನ ಬೈಕನ್ನು ಬೆನ್ನಟ್ಟುವ ಕೆಲಸ ಮಾಡಿದ. ಊರೊಳಗೆ ಬಂದ ಬೈಕು ದೊಡ್ಡ ಆಫೀಸೊಂದರ ಮುಂದೆ ನಿಂತಿತು.

ಬೈಕಿಳಿದ ಸುನೀತಿ ಅಮರೇಶನ ಕೈ ಮೇಲೆ ಕೈಯಿಟ್ಟು ಅವನ ಕಂಗಳೊಳಗೆ ಕಣ್ಣಿಟ್ಟು 'ಬೈ' ಎಂದಳು. ನಂತರ ವೇಗವಾಗಿ ಆಫೀಸಿನೊಳಗೆ ಹೊರಟುಹೋದಳು.

ಫಜಲ್ ಈ ಸನ್ನಿವೇಶವನ್ನು ವೀಕ್ಷಿಸಿ, ಕಾರಿನಿಂದಿಳಿದು ಅದನ್ನು ಪಾರ್ಕ್ ಮಾಡಿ ಅಮರೇಶನ ಬೆನ್ನಿನ ಮೇಲೆ ಕೈಯಿಡುವವರೆಗೂ ಅವನು ಸುನೀತಿ ಹೋದ ದಾರಿಯನ್ನೇ ನೋಡುತ್ತಿದ್ದ.

ಬೆನ್ನಿನ ಮೇಲೆ ಬಿದ್ದ ಕೈ ಅಮರೇಶನನ್ನು ಬೆಚ್ಚಿಸಿ ಹಿಂದಕ್ಕೆ ತಿರುಗುವಂತೆ ಮಾಡಿತು.

"ನೀನಾರಿಸಿರುವ ಹುಡುಗಿ ತಾನೇ ಅವಳು?" ಕೇಳಿದ ಫಜಲ್.

ಅಮರೇಶ ನಾಚಿಕೆ, ಆನಂದಗಳಿಂದ ತಲೆದೂಗಿದ.

"ಅಮರ್, ಯಾರು ಆ ಲಕ್ಕೀ ಗರ್ಲ್?" ಕೇಳಿದ ಫಜಲ್ ಸಂತಸದಿಂದ.

"ಸುನೀತಿ ಅಂತ. ಈ ಬಿಲ್ಡಿಂಗ್ ಥರ್ಡ್ ಫ್ಲೋರ್‌ನಲ್ಲಿರೋ ಆಫೀಸ್ ಛೇರ್ಮನ್‌ಗೆ ಪರ್ಸನಲ್ ಸೆಕ್ರೆಟರಿ" ಅಮರೇಶ ವಿವರಿಸಿದ.

"ಲೈಫ್ ಪಾರ್ಟ್‌ನರ್?" ಪ್ರಶ್ನಿಸಿದ.

"ಹೌದು" ನಾಚಿದ.

"ಕಂಗ್ರಾಟ್ಸ್!" ಕೈ ಚಾಚಿದ ಫಜಲ್.

"ಥ್ಯಾಂಕ್ಸ್!" ಆತ್ಮೀಯತೆಯಿಂದ ಅವನ ಹಸ್ತ ಅದುಮಿದ ಅಮರೇಶ್.

"ಮದ್ವೆ ಆದ್ಮೇಲೆ ಈ ಬಡಗೆಳೆಯನನ್ನು ಮರೆತುಬಿಡಬೇಡಪ್ಪಾ" ಹಾಸ್ಯ ಮಾಡಿದ ಫಜಲ್.

"ಛೇ, ಎಲ್ಲಾದ್ರೂ ಉಂಟಾ? ನೀನು ನನ್ನ ಜೀವದ ಗೆಳೆಯ!" ಗಾಬರಿಯಿಂದ ಹೇಳಿದ ಅಮರೇಶ್. ಫಜಲ್ ನಕ್ಕು, "ಗಾಡಿ ಪಾರ್ಕ್ ಮಾಡು. ಸಿಹಿ ತಿನ್ಬೇಕು ನಾನು" ಎಂದು ಅಮರೇಶನ ಬೆನ್ನ ಮೇಲೆ ಹೊಡೆದು. ಹೊಟೇಲ್‌ನಲ್ಲಿ ಬಾಸುಂದಿ ತಿನ್ನುತ್ತಾ, "ಈಗ ಹೇಳು ಪುವರ... ಅಲ್ಲ ಹುಡುಗಿ ವಿವರ!" ಎಂದು ಉತ್ತೇಜಿಸಿದ.

ಅಷ್ಟು ಉತ್ತೇಜನ ಸಾಕಿತ್ತು ಅಮರೇಶ್‌ನಿಗೆ. ಬಡಬಡನೆ ಎಲ್ಲವನ್ನೂ ಹೇಳಿದ ನಂತರ, "ಅದಕ್ಕೇ ನಿನ್ನನ್ನು ಕೂಡಾ ಸರಿಯಾಗಿ ಮಾತಾಡಿಸೋಕ್ಕೇ ಆಗಲಿಲ್ಲ. ಇನ್ಮೇಲೆ ಹಾಗಾಗೊಲ್ಲ" ವಚನ ನೀಡುವವನಂತೆ ಹೇಳಿದ.

"ಹೇ ಹೇ ಹೋಲ್ಡಿಟ್! ಗಿಲ್ಟೀ ಫೀಲಿಂಗ್ ಬೇಕಿಲ್ಲ" ಎಂದು ನಕ್ಕ ಫಜಲ್.

"ಹಾಗಲ್ಲ ಫಜಲ್, ಇವತ್ತು ನಾನು ಸುನೀತಿಗೆ ನಿನ್ನ ವಿಷ್ಯಾನೇ ಹೇಳ್ತಿದ್ದೆ" ಎಂದ ಅಮರೇಶ್ ಸಮಜಾಯಿಷಿ ನೀಡುವಂತೆ.

"ಅಲ್ಲಯ್ಯಾ ಅಮರೇಶ್! ಲವರ್ಸ್‌ಗೆ ಬೇರೆ ಮಾತುಗಳಿರತ್ವೆ ಅಂದುಕೊಂಡಿದ್ದೆ. ನೀವುಗಳು ನೋಡಿದ್ರೆ ನನ್ನ ವಿಷ್ಯ ಮಾತಾಡಿದ್ರಿ ಅಂತಿದ್ದೀ" ಫಜಲ್ ಮುಜುಗರದಿಂದ ಹೇಳಿದ.

"ಹೌದು ಫಜಲ್! ಅವಳೀಗ ನನ್ನ ಲೈಫ್‌ನಲ್ಲಿ ಬರ್ತಿದ್ದಾಳೆ. ನೀನು ನನಗೆ ಬಹಳ ದಿನಗಳಿಂದ ಗೆಳೆಯನಾಗಿದ್ದೀ" ಭಾವುಕನಾಗಿ ನುಡಿದ.

ಫಜಲ್ ನಕ್ಕು, “ಹೇ.. ಡೋಂಟ್ ಬೀ ಸೋ ಎಮೋಷನಲ್!” ಎಂದು ಹೇಳಿ ಅಮರೇಶ್‌ನ ಕೈ ತಟ್ಟಿದ.

ನಂತರ ಸೀರಿಯಸ್ಸಾಗಿ “ನಿನಗೆ ಗೊತ್ತಿಲ್ಲದೇ ಇರೋ ವಿಷಯ ಏನಲ್ಲ ಇದು. ಆದರೆ ಸ್ವಂತ ವಿಷಯಕ್ಕೆ ಬಂದಾಗ ಎಲ್ಲರೂ ಸ್ವಲ್ಪ ಕುರುಡಾಗ್ತಾರೆ. ಜೀವನದ ಬಗ್ಗೆ ನಮಗೆ ಲ್ಯಾಟೆರಲ್ ಥಿಂಕಿಂಗ್ ಇರಬೇಕು. ನಮ್ಮನ್ನು ಬೇರೆ ಬೇರೆ ಭಾವನೆ, ಚರ್ಯೆಗಳ ಡಬ್ಬಗಳಲ್ಲಿ ಹಾಕಿಕೊಳ್ಳಬೇಕು. ಒಂದು ರೀತಿ ರೈಲುಗಾಡಿಯ ಬೇರೆಬೇರೆ ಬೋಗಿಗಳ ಹಾಗೆ ಮನೆ, ಮನೆಯ ವಿವಿಧ ವ್ಯಕ್ತಿಗಳು, ಮನೆಗೆ ಬರುವ ವ್ಯಕ್ತಿಗಳು, ಆಫೀಸ್, ಆಫೀಸಿನ ಉದ್ಯೋಗಿಗಳು, ಅವರಲ್ಲಿ ನಾವಾರಿಸಿಕೊಳ್ಳುವ ಕೆಲವು ಗೆಳೆಯರು ಎಲ್ಲರನ್ನೂ ಬೇರೆಬೇರೆ ಕಂಪಾರ್ಟ್‌ಮೆಂಟ್‌ಗಳಲ್ಲಿ ನಿಭಾಯಿಸಬೇಕು. ಆಯಾ ವ್ಯಕ್ತಿಯ ಹತ್ತಿರ ಆಯಾ ಮಟ್ಟದಲ್ಲಿಯೇ ವ್ಯವಹರಿಸಬೇಕು. ಹೀಗೆ ಮಾಡಿದರೆ ಬಾಳು ಸುಗಮ. ಯಾಕೇಂದ್ರೆ...” ಮಾತು ನಿಲ್ಲಿಸಿ, ಅವನನ್ನೇ ನೋಡಿ ನಗುತ್ತಿದ್ದ ಅಮರೇಶನನ್ನು ನಸುಗೋಪದಿಂದ ನೋಡಿ, “ಲೆಕ್ಚರ್ ಥರಾ ಅನ್ನಿಸ್ತಿದೆಯಾ? ಆದರೆ ಒಂದು ಸಲ ಆಲೋಚನೆ ಮಾಡು ಅಮರ್. ಗೆಳೆಯ ಬೇರೆ. ಹೆಂಡತಿ ಬೇರೆ. ನಾನಿಲ್ಲಿ ಹೇಳ್ತಿರೋದು ಪ್ಲೆಟೋನಿಕ್ ರಿಲೇಷನ್ ಬಗ್ಗೆ. ಗಂಡ ಯಾ ಹೆಂಡತಿಯ ಆಯ್ಕೆ ನಮ್ಮ ಕೈಯಲ್ಲಿಲ್ಲದಿದ್ದಾಗ, ಎಷ್ಟೇ ಹೊಂದಾಣಿಕೆ ಮಾಡಿಕೊಂಡ್ರೂ ಕಂಪ್ಯಾಟಿಬಿಲಿಟಿ ಕ್ರಿಯೇಟ್ ಆಗದೇ ಹೋದಾಗ, ಆಪೋಜಿಟ್ ಸೆಕ್ಸ್ ವ್ಯಕ್ತಿಯನ್ನು ಮಾತಿನಲ್ಲಿನ ಆರ್ಗ್ಯಾಸಮ್‌ಗೋಸ್ಕರ ಬಹಳ ಜನ ಹುಡುಕಿಕೊಳ್ತಾರೆ. ಅದು ಕೇವಲ ಪ್ಲೆಟಾನಿಕ್ ಆಗಿ ಉಳಿದರೆ. ಆ ರಿಲೇಷನ್ ಅನ್ನು ಆ ವ್ಯಕ್ತಿಗಳ ಜೀವನಸಂಗಾತಿಗಳು ಒಪ್ಪಿಕೊಂಡರೆ ಜೀವನ ಸುಗಮ. ಇಲ್ಲದಿದ್ದಲ್ಲಿ...” ಅವನ ಮಾತು ತಡೆದು ಅಮರೇಶ, “ಜೀವನ ದುರ್ಗಮ!” ಎಂದ.

“ಅರ್ಥ ಮಾಡ್ಕೊಂಡೆ ನೀನು. ಅಷ್ಟು ಸಾಕು. ಸುನೀತಿ, ಫಜಲ್ ಇಬ್ರೂ ಇರಲಿ ನಿನ್ನ ಲೈಫಲ್ಲಿ. ಆದರೆ ಬೇರೆ ಬೇರೆ ಲೆವೆಲ್ಲಿನಲ್ಲಿ” ಎಂದು ಹೇಳಿ, “ಹೋಗೋಣ್ವಾ?” ಎಂದ.

“ನಿನ್ನ ಬಾಳಗೆಳತಿ ಯಾವಾಗ ಬರ್ತಾಳೋ?” ಕೇಳಿದ ಅಮರೇಶ್ ಎದ್ದು ನಿಂತು.

“ಸದ್ಯಕ್ಕಿಲ್ಲ ಅಮರ್. ನಿನಗೇ ಗೊತ್ತು ನನ್ನ ಕೆಲಸ ಎಂಥದ್ದೆಂದು. ನೀನೂ ಆ ದೋಣಿಯಲ್ಲಿಯೇ ಇದ್ದೀ. ಒಂದೇ ದೋಣಿಯ ಪಯಣಿಗರು ನಾವು. ಸಮುದ್ರದ ಅಲೆ ಯಾವಾಗ ಮೇಲೆದ್ದು ನಮ್ಮನ್ನು ನುಂಗಿ ಹಾಕುತ್ತೋ” ಎಂದವನು ಚಕ್ಕನೆ ನಾಲಗೆ ಕಚ್ಚಿಕೊಂಡು, “ಅಯ್ ಆಂ ಸಾರೀ ಮೈ ಗೆಳೆಯಾ! ದಯವಿಟ್ಟು

ತಪ್ಪರ್ಥ ಮಾಡಿಕೋಬೇಡ. ಈಗ ತಾನೇ ಹಂಸಘರ್ನ್ನ ಆರಿಸಿಕೊಂಡಿರೋ ನಿನ್ನ ಬಗ್ಗೆ ಕೆಟ್ಟ ಅಪಶಕುನ ಯಾಕೆ?" ಎಂದ ಫಜಲ್ ಕಸಿವಿಸಿಯಿಂದ.

"ಹೇ ಕಮಾನ್, ಚೀರ್ ಅಪ್! ನೀನು ಸತ್ಯವನ್ನೇ ಹೇಳಿದ್ದೀ" ಎಂದ ಅಮರೇಶ್.

"ನಿನ್ನ ಮದುವೆ ಡೇಟ್ ಫಿಕ್ಸ್ ಆಯ್ತಾ?" ಕೇಳಿದ ಫಜಲ್.

"ಸದ್ಯದಲ್ಲೇ ತಿಳಿಸ್ತೀನಿ. ಪ್ರಾಬಬಲಿ ಒಂದು ತಿಂಗಳು" ಎಂದ ಅಮರೇಶ್.

ಹೇಳಿದ ಮಾತಿನಂತೆಯೇ ಕೇವಲ ಒಂದು ತಿಂಗಳಿನಲ್ಲಿಯೇ ಅಮರೇಶ ಸುನೀತಿಯರ ವಿವಾಹ ನಡೆದಿತ್ತು.

ಅದಕ್ಕೆ ಮೊದಲು ಸುನೀತಿ ಫಜಲ್‌ರ ಭೇಟಿ ನಡೆದಿತ್ತು.

"ಅಮರ್ ಒಳ್ಳೆಯ ಗೆಳತಿಯನ್ನು ಹೆಂಡತಿಯನ್ನಾಗಿ ಪಡೀತಿದ್ದಾನೆ. ನಾನಂದುಕೊಂಡಿದ್ದೆ ಅಮರನಂತಾ ಗಂಡ ಸಿಗೋದಕ್ಕೆ ನೀವು ಲಕ್ಕಿ ಅಂತ. ಆದರೆ ಈಗನ್ನಿಸ್ತಿದೆ. ಅಮರನೇ ಲಕ್ಕಿ ನಿಮ್ಮಂತಾ ಬಾಳ ಗೆಳತಿ ಸಿಗ್ತಿರೋದಕ್ಕೆ. ಹೀ ಈಜ್ ರಿಯಲೀ ಲಕ್ಕೀ ಭಾಭೀ" ಎಂದ. ಸುನೀತಿ ಮೋಹಕವಾಗಿ ನಕ್ಕಳು.

ಅವರು ನಗರದ ಪ್ರತಿಷ್ಠಿತ ನಕ್ಷತ್ರ ಹೊಟೇಲ್‌ನಲ್ಲಿ ಊಟ ಮಾಡುತ್ತಿದ್ದರು. ಝಗಮಗಿಸುವ ಷಾಂಡ್ಲಿಯರ್, ಕಚ್ಚೆ ಪಂಚೆ, ಜುಬ್ಬಾ ಧರಿಸಿದ ವೆಯಿಟರ್‌ಗಳು. ಒಂದು ಮೂಲೆಯಲ್ಲಿನ ವೇದಿಕೆಯ ಮೇಲೆ ಒಬ್ಬ ಕೊಳಲುವಾದಕ, ಒಬ್ಬ ಮೃದಂಗವಾದಕ. ಮಂದ್ರಸ್ವರದಲ್ಲಿ ಕರ್ನಾಟಕ ಶಾಸ್ತ್ರೀಯ ಸಂಗೀತ, ಮುರಳಿಯಿಂದ ಹರಿದು ಕೇಳುಗರ ಮನ, ಕಿವಿಗಳನ್ನು ಮುದಗೊಳಿಸುತ್ತಿತ್ತು.

"ಥ್ಯಾಂಕ್ಸ್ ಫಜಲ್! ನನ್ನನ್ನು ನೀವು ಭಾಭಿ ಅನ್ನೋ ಸಂಬಂಧದೊಂದಿಗೆ ಕರೆಯೋದಕ್ಕಿಂತ ಸುನೀತಿ ಎಂದರೆ ಸಂತೋಷ ಆಗತ್ತೆ. ನೀವು ಬದಲು ನೀನು ಅಂದ್ರೆ ಆನಂದ ಆಗತ್ತೆ" ಎಂದಳು.

ಫಜಲ್‌ಗಿಂತ ಹೆಚ್ಚು ಆನಂದಿಸಿದವನು ಅಮರೇಶ್. ತನ್ನ ಸುನೀತಿ ತನ್ನ ಫಜಲ್‌ನನ್ನು ಆದರಿಸುತ್ತಾಳೆ. ಅಷ್ಟು ಸಾಕು!

ಮದುವೆಯು ಸರಳವಾಗಿ ಗುಡಿಯಲ್ಲಿ ನಡೆದಿತ್ತು. ಆ ಮದುವೆಯಲ್ಲಿಯೇ ಸುನೀತಿಯ ಗೆಳತಿಯೊಬ್ಬಳ ಬಂಧುವಾದ ಪಾಲ್ ಪರಿಚಯವಾಗಿದ್ದ. ಬಂಧುವೆಂದರೆ ಯಾವುದೋ ದೂರದ ಸಂಬಂಧ.

ಪಾಲ್ ಕೂಡಾ ಅಮರೇಶ್, ಫಜಲ್‌ಗೆ ಬಹಳವೇ ಹತ್ತಿರವಾದ. ಒಟ್ಟಿಗೇ ಕ್ಲಬ್‌ಗಳಲ್ಲಿ ಭೇಟಿ ಮಾಡುವ ಪರಿಪಾಠವಿಟ್ಟುಕೊಂಡರು ಮೂವರೂ. ಪಾಲ್, ಅಮರೇಶ್ ಮಾದಕ ದ್ರವ್ಯ ಸೇವಿಸಿದರೆ ಫಜಲ್ ಅವನ ಎಂದಿನ ಕೋಕ್ ಅಥವಾ ಹಣ್ಣಿನ ರಸ. ಮೂವರದೂ ಒಂದೇ ಧ್ಯೇಯ. ತಮ್ಮಲ್ಲಿ ಬರೆಯುವ ಶಕ್ತಿ ಇದೆ. ಓದುಗರಲ್ಲಿ ಜಾಗೃತಿ ಮೂಡಿಸಬೇಕು. ಅವರು ದೇಶದ ಅಭಿವೃದ್ಧಿ ಕಾರ್ಯದಲ್ಲಿ ಭಾಗಿಗಳಾಗಬೇಕು.

"ನೀನು ಏನೇ ಹೇಳು ಅಮರ್! ನನ್ನ ಪ್ರಕಾರ ಶೇಕಡಾ ಅರವತ್ತು ವಿದ್ಯಾವಂತರು ದೇಶದ ಆಗುಹೋಗುಗಳ ಬಗ್ಗೆ ತಲೆ ಕೆಡಿಸಿಕೊಳ್ಳೋಲ್ಲ" ಎಂದ ಪಾಲ್.

ಪ್ರೆಸ್‌ಕ್ಲಬ್‌ನ ಎಂದಿನ ಸಂಜೆಯ ವಾತಾವರಣ. ಮಂಡೆ ಬಿಸಿಯಾದವರು, ಅದನ್ನು ತಣ್ಣಗೆ ಮಾಡಿಕೊಳ್ಳಲು 'ಹಾಟ್ ಡ್ರಿಂಕ್ಸ್' ಹೊಟ್ಟೆಗಿಳಿಸುತ್ತಿದ್ದರು. ಟೇಬಲ್ ಮೇಲಿದ್ದ ತಟ್ಟೆಯಿಂದ ಕಡಲೇಕಾಯಿ – ಈರುಳ್ಳಿ ಮಿಕ್ಸ್‌ಚರ್ ಅನ್ನು ಒಂದು ಸ್ಪೂನಿನಿಂದ ಬಾಯಿಗೆ ಹಾಕಿಕೊಂಡ ಫಜಲ್, "ಯೂ ಆರ್ ರೈಟ್ ಪಾಲ್. ಈ ದೇಶದ ಮಿಡ್ಲ್ ಕ್ಲಾಸ್ ಜನರೇ ಶೇಕಡಾವಾರು ಲೆಕ್ಕದಲ್ಲಿ ವಿದ್ಯಾವಂತರು. ಅವರಿಗೆ ಅವರದೇ ಆದ ವರ್ತುಲ ಇದೆ. ಅದರ ಹೊರಗೆ ಅವರು ಬರೋಲ್ಲ. ದೇಶದಲ್ಲಿ ಯಾವ ಸರ್ಕಾರ ಬಂದರೂ ಅವರು ತಲೆ ಕೆಡಿಸಿಕೊಳ್ಳೋಲ್ಲ. ಯಾಕೇಂದ್ರೆ..." ಎಂದಾಗ ಫಜಲ್ "ಹೋಲ್ಡಾನ್!" ಎಂದ ನಗುತ್ತಾ. "ನಾನಿದನ್ನು ತಪ್ಪೂಂತ ಸಾಬೀತು ಪಡಿಸ್ತೀನಿ" ಎಂದ ಇನ್ನೂ ನಗುತ್ತಲೇ.

"ಹೇಗೆ?" ಎಂದು ಕೇಳಿದರು ಇಬ್ಬರೂ.

"ಬಜೆಡ್‌ಗಳ ಮಂಡನೆ ಆದಾಗ" ಎಂದ ಮಿಸ್ಟೀರಿಯಸ್ಸಾಗಿ.

ನಂತರ ನಗುತ್ತಲೇ, "ಇನ್‌ಕಂ ಟ್ಯಾಕ್ಸ್, ಪ್ರೊಫೆಷನಲ್ ಟ್ಯಾಕ್ಸ್ ಇವುಗಳು ಜಾಸ್ತಿ ಆಯ್ತು..." ಎನ್ನುತ್ತಿದ್ದಂತೆ ಮಿಕ್ಕ ಇಬ್ಬರೂ ನಕ್ಕರು.

"ಏನಪ್ಪಾ ಜೋಕು? ನಂಗೂ ಹೇಳಿ ನಾನೂ ನಗ್ತೀನಿ" ಎಂಬ ಧ್ವನಿ ಕೇಳಿ ಮೂವರೂ ತಿರುಗಿ ನೋಡಿದರು.

ಮಿತ್ರಜೀತ್ ಅಲ್ಲಿ ನಿಂತಿದ್ದ.

“ಏ ಜೀತ್!” “ಮಿತ್ರಾ!” “ಮಿತ್ರಜೀತ್!” ಉದ್ಗಾರಗಳನ್ನು ಒಮ್ಮೆಗೇ ಮೂವರೂ ಹೊರಹಾಕಿದ್ದರು. ಕುರ್ಚಿ ಎಳೆದುಕೊಂಡು ಮಿತ್ರಜೀತ್ ಕುಳಿತ. ಮೂವರೂ ತಮ್ಮ ಮಾತುಗಳ ಬಗ್ಗೆ ವಿವರಿಸಿದರು.

ಮಿತ್ರಜೀತ್ ಗಂಭೀರವಾಗಿ ಹೇಳಿದ. “ನಿಜ ನಿಮ್ಮ ಮಾತು. ಸರ್ಕಾರದಲ್ಲಿ ಹೆಚ್ಚಿನ ಜನ ಜೈಲು ಕಂಡವರು. ಅಂತಹವರು ನಮ್ಮನ್ನಾಳಬಾರದೆಂದಲ್ಲ. ಅವರು ಒಳ್ಳೇ ಪ್ರಜೆಗಳಾಗಿ ಪರಿವರ್ತಿತರಾಗಿದ್ರೆ ಸರಿ. ಇಲ್ಲದಿದ್ದರೆ... ದೇಶದ ಗತಿ?”

“ನಾನೆಲ್ಲೋ ಓದಿದ್ದೆ ಒಬ್ಬ ಲೇಖಕರ ಐಡಿಯಾನ. ಈ ಸಂವಿಧಾನದಲ್ಲಿ ಎಲೆಕ್ಷನ್‌ಗೆ ನಿಲ್ಲೋ ವ್ಯಕ್ತಿ ಕನಿಷ್ಠಪಕ್ಷ ಪದವೀಧರನಾಗಿರಬೇಕು. ಒಮ್ಮೆಯೂ ಜೈಲಿಗೆ ಹೋಗಿರಬಾರದು. ತನ್ನ ಮನೆಯ ಸದಸ್ಯರನ್ನು ರಾಜಕೀಯಕ್ಕೆ ತರಲೇಬಾರದು – ಎಂಬ ಚಿಕ್ಕ ತಿದ್ದುಪಡಿ ಮಾಡಿದ್ರೆ ದೇಶದಲ್ಲಿ ಒಳ್ಳೇ ಸರ್ಕಾರ ಅಸ್ತಿತ್ವಕ್ಕೆ ಬರುತ್ತೆ” ಎಂದ ಅಮರೇಶ್.

“ಈ ಬಿಲ್ ಪಾಸಾಗೋದೇ ಇಲ್ಲ. ಏಕೆಂದ್ರೆ ನಮ್ಮನ್ನಾಳೋ ಜನರಲ್ಲಿ ಈ ಮೂರು ರೂಲ್‌ಗಳಿಗೆ ಅಪವಾದಗಳೇ ಜಾಸ್ತಿ!” ಎಂದು ನಕ್ಕ ಮಿತ್ರಜೀತ್. ನಂತರ ಅಲ್ಲಿ ಒಂದು ರೀತಿಯ ಅಸಮಾಧಾನಕರ ಮೌನ ಉಂಟಾಯಿತು.

“ನಮ್ಮೆಲ್ಲರ ಆಲೋಚನೆಗಳು ಬೇರೆಬೇರೆ ಇದ್ರೂ ಸಿದ್ಧಾಂತ ಒಂದೇ ಅನ್ನಿಸೋಲ್ವಾ?” ಎಂದ ಮಿತ್ರಜೀತ್ ಮೌನ ಭಂಗಿಸಿ.

ಉಳಿದವರು ಮಾತಾಡದಿದ್ದರೂ ಅವನ ಮಾತಿಗೆ ಅವರ ಮನಗಳು ಅನುಮೋದನೆ ನೀಡಿದ್ದವು.

ನಂತರ ಇತ್ತೀಚೆಗೆ ನಡೆಸಿರುವ ಪರಿಶೋಧನಾತ್ಮಕ ಕೇಸುಗಳು ಚರ್ಚೆಗೆ ಬಂದವು. ಆ ಮಾತು ಆರಂಭವಾದ ಕೂಡಲೇ ಒಂದು ರೀತಿಯ ಚಡಪಡಿಕೆ ಅವರ ನಡುವೆ ಕಂಡು ಬಂದಿತು.

ಒಂದು ವೈಶಿಷ್ಟ್ಯವೆಂದರೆ ನಾಲ್ವರೂ ಮಾದರಿ ಪತ್ರಕರ್ತರು. ಒಬ್ಬರ ಹಾದಿಯನ್ನು ಮತ್ತೊಬ್ಬರು ವಕ್ರರೀತಿಯಲ್ಲಿ ತುಳಿಯುತ್ತಿರಲಿಲ್ಲ. ಸಾಧ್ಯವಾದರೆ ಒಬ್ಬರಿಗೊಬ್ಬರು ಸಹಾಯ ಹಸ್ತ ಚಾಚುತ್ತಿದ್ದರು.

ಮಿತ್ರಜೀತ್ ಒಂದು ವಿಷಯ ಕಂಡುಹಿಡಿದ.

ಪಾಲ್ -ಅಮರೇಶ್ -ಫಜಲ್ ಮೂವರೂ ಅಪಾಯಕಾರೀ ಶೋಧಗಳಲ್ಲಿ ತೊಡಗಿದ್ದಾರೆ. ಇವರುಗಳು ಗೆದ್ದರೆ ಇವರಿಂದ ಬಯಲಿಗೆ ಬರುವ 'ದೊಡ್ಡ' ವ್ಯಕ್ತಿಗಳಿಗೆ ಅಪಾಯ! ಇವರುಗಳು ಸೋತರೆ ಇವರ ಪ್ರಾಣಕ್ಕೇ ಅಪಾಯ!

ಮಿತ್ರಜೀತ್‌ನ ಮೈ ಒಮ್ಮೆ ಝುಂ ಎಂದಿತ್ತು.

# 11

“ಯಾರು ಫೋನ್ ಮಾಡಿದ್ದು ಮಿತ್ರಜೀತ್?” ಕೇಳಿದ ಸ್ವರೂಪ್.

“ಲೊರೆಟ್ಟಾಳ ಬಗ್ಗೆ ಸುಳಿವು ಕೊಟ್ಟರೆ ಏನು ಕೊಡ್ತೀರಿ ಅಂತ ಕೇಳಿದ” ಎಂದವನು “ಕೇಳಿದಳು?” ಪ್ರಶ್ನಾರ್ಥಕವಾಗಿ ಹೇಳಿದ.

“ಯಾಕೆ? ಆ ಫೋನ್ ಮಾಡಿದ ವ್ಯಕ್ತಿ ಗಂಡೋ ಹೆಣ್ಣೋ ತಿಳಿಯಲಿಲ್ವಾ?” ಕೇಳಿದ ಸ್ವರೂಪ್.

“ಪಿಸುಗುಟ್ಟಿದ್ದರಿಂದ ತಿಳೀಲಿಲ್ಲ. ವೈಲ್ಡ್ ಗೆಸ್ ಮಾಡಲಾರೆ. ಆದರೆ ಫೋನ್ ಯಾಕೆ ಇಟ್ಟುಬಿಟ್ಟಳು?” ಚಿಂತಿತನಾಗಿ ಸ್ವಗತವಾಡಿದ.

“ಯಾರೋ ಅಲ್ಲಿಗೆ ಬಂದಿದ್ದಿರಬೇಕು. ಆ ವ್ಯಕ್ತಿಗೆ ನೀನು ಲೊರೆಟ್ಟಾಳನ್ನು ಹುಡುಕ್ತಿರೋ ವಿಷಯ ತಿಳಿದಿರಬೇಕು. ನಾವು ಕಾಯೋಣ. ಅಯ್ ಆಂ ಷ್ಯೂರ್ ಇನ್ನೊಂದ್ಸಲ ಕಾಲ್ ಬರತ್ತೇಂತ” ಎಂದ ಸ್ವರೂಪ್. ಅವನ ಮೊಬೈಲ್ ಶಬ್ದಿಸಿತು.

ಮಾತಾಡಿ, ನಂತರ ಎದ್ದು ನಿಂತು, “ನನ್ನ ಸೀನಿಯರ್ ಕರೀತಿದ್ದಾರೆ. ನಾನು ತಕ್ಷಣ ಹೋಗ್ಬೇಕು. ನಿಂಗೆ ಆಮೇಲೆ ಸಂದೇಶ ಕೊಡ್ತೀನಿ. ಹೇ... ನೀನು ಯಾಕೆ...”ಎಂದು ಏನೋ ಹೇಳಿ ಹೊರಟು, ಮತ್ತೇನೋ ಹೊಳೆದು ತನ್ನಲ್ಲೇ ನಕ್ಕು “ಬೈ” ಎಂದ ಸ್ವರೂಪ್.

ಅವನ ಯಾವ ಚರ್ಯೆಯೂ ಮಿತ್ರಜೀತ್‌ನ ದೃಷ್ಟಿ ದಾಟಿ ಹೋಗಲಿಲ್ಲ. ಸ್ವರೂಪ್ ಏನೋ ಹೇಳಲಿಚ್ಚಿಸಿದ. ನಂತರ ಬ್ರೇಕ್ ಹಾಕಿದ. ಅದೇನೋ ನಿರಪಾಯಕಾರೀ ಸಂಗತಿಯೇ. ಇಲ್ಲದಿದ್ದರೆ ಅವನ ತುಟಿಗಳ ಮೇಲೆ ಆ ಕಿರುನಗೆ ಕಾಣಿಸುತ್ತಿರಲಿಲ್ಲ. ಏನಿರಬಹುದು ಆ ನಗೆಯ ಗೂಢಾರ್ಥ?

ಸ್ವರೂಪ್ ಹೊರಹೋದವನು ಮತ್ತೆ ಒಳಗೆ ಬಂದ. “ಹೇ ಮಿತ್ರಜೀತ್! ಹೆಲ್ಪ್ ಮೀ. ನನ್ನ ಗಾಡಿಯ ಬ್ಯಾಕ್ ಟಯರ್ ಫ್ಲ್ಯಾಟ್ ಆಗಿದೆ. ಎಲ್ಲೋ ಗಾಳಿ ಕಮ್ಮಿ ಆಗಿರಬೇಕು. ನನ್ನನ್ನು ನಮ್ಮ ಸೀನಿಯರ್ ಆಫೀಸ್ ಹತ್ತಿರ ಡ್ರಾಪ್ ಮಾಡ್ತೀಯಾ?” ಎಂದ.

ಮಿತ್ರಜೀತ್ ಸಿದ್ಧನಾದ. ಬೇಗ ಹಾಕಿ ಬೈಕ್ ಸ್ಟಾರ್ಟ್ ಮಾಡಿದ. ಸ್ವರೂಪ್ ಹಿಂದೆ ಕುಳಿತ ಮೇಲೆ ಮುಂದಕ್ಕೆ ಚಾಲಿಸಿದ. ದಾರಿಯಲ್ಲಿದ್ದ ತನ್ನ ಮಾಮೂಲೀ ಗ್ಯಾರೇಜ್ ಮೆಕ್ಯಾನಿಕ್‌ಗೆ ಕಾರಿನ ದುರಸ್ತಿಯ ಬಗ್ಗೆ ಹೇಳಿ ಸ್ವರೂಪ್ ಕಛೇರಿಯ ಕಡೆಗೆ ಹೊರಟ.

ಅವನನ್ನು ಹಿಂಬಾಲಿಸುತ್ತಿತ್ತು ಒಂದು ಬೈಕ್. ಅದರ ಮೇಲೆ ಕುಳಿತಿದ್ದ ವ್ಯಕ್ತಿಯ ದಿರಿಸಿನಿಂದ ಗಂಡೋ ಹೆಣ್ಣೋ ತಿಳಿಯುವಂತಿರಲಿಲ್ಲ! ಇದರ ಪರಿವೆ ಇಲ್ಲದ ಮಿತ್ರಜೀತ್, ಸ್ವರೂಪ್ ಹೈಕೋರ್ಟ್ ಬಳಿ ತಲುಪಿದ್ದರು.

“ಇಲ್ಲಿ ನೋಡಿ ಬರ್ತೀನಿ. ಇಲ್ಲಿಲ್ಲದಿದ್ರೆ ನಮ್ಮ ಸೀನಿಯರ್ ಆಫೀಸ್ ಹತ್ರ ಬಿಡಬೇಕು” ಎಂದ ಸ್ವರೂಪ ಷರತ್ತು ಹಾಕುವವನಂತೆ.

“ಆಯ್ತು ಮಾರಾಯಾ. ನೀನು ಟಿಂಬಕ್ಟೂಗೆ ಹೋಗಬೇಕಾದ್ರೂ ಡ್ರಾಪ್ ಮಾಡ್ತೀನಿ. ಗಾಡ್ ಪ್ರಾಮಿಸ್!” ಎಂದು ತನ್ನ ಉಬ್ಬಿದ ಗಂಟಲಲ್ಲಿದ್ದ ಆಡಂ ಆಪಲ್ ಮುಟ್ಟಿಕೊಂಡ, ಕುಹಕ ಗಾಂಭೀರ್ಯದಲ್ಲಿ.

ಸ್ವರೂಪ್ ನಕ್ಕು ಅವನ ಬೆನ್ನಿಗೆ ಸ್ನೇಹಪೂರ್ವಕವಾಗಿ ಹೊಡೆದು ಒಳನಡೆದ.

ಅವನು ಹೋಗುವುದನ್ನೇ ನಿರೀಕ್ಷಿಸುತ್ತಿದ್ದನೋ ಎಂಬಂತೆ ಒಬ್ಬ ಪುಟ್ಟ ಹುಡುಗ ಇವನ ಮೊಣಕಾಲು ಮುಟ್ಟಿ “ಸಾರ್!” ಎಂದ.

ಸ್ವರೂಪನ ಆಗಮನವನ್ನು ನಿರೀಕ್ಷಿಸುತ್ತಿದ್ದ ಮಿತ್ರಜೀತ್ ಬೆಚ್ಚಿ ಆ ಹುಡುಗನತ್ತ ಏನೆಂಬಂತೆ ನೋಡಿದ. ಆ ಹುಡುಗನ ಕೈಯಲ್ಲೊಂದು ಚೀಟಿ ಇತ್ತು. ಅದನ್ನು ಮಿತ್ರಜೀತ್‌ನಿಗಿತ್ತ ಹುಡುಗ “ಅವರು ಕೊಟ್ರು!” ಎಂದು ರಸ್ತೆಯ ಆಚೆಬದಿಗೆ ಬೆರಳು ತೋರಿದ. ಅಲ್ಲಿ ಕಂಡಿತ್ತು ಕಪ್ಪು ಚರ್ಮದ ಬಟ್ಟೆ ತೊಟ್ಟಿದ್ದ ವ್ಯಕ್ತಿ!

ಮಿತ್ರಜೀತ್ ನೋಡಿದೊಡನೆ ಬೈಕ್ ಸ್ಟಾರ್ಟ್ ಮಾಡಿಕೊಂಡು ಹೊರಟೇಹೋಯಿತು ಆ ವ್ಯಕ್ತಿ. ಈ ವ್ಯಕ್ತಿಯೇನಾ ತನಗೆ ಸಹಾಯ ಮಾಡುವುದು? ಎಂದುಕೊಳ್ಳುತ್ತಾ ಚೀಟಿ ತೆರೆದ.

‘ಇನ್ನು ಹತ್ತು ನಿಮಿಷಗಳಲ್ಲಿ ಅಂಕಲ್ ಆಂಟಿ ಷೋರೂಮ್‌ಗೆ ಬಂದರೆ ಮುಖ್ಯ ವಿಷಯ ಮಾತಾಡಬಹುದು’

ಓಹೋ! ಇವನೇ/ಇವಳೇನಾ ಫೋನ್ ಮಾಡಿದ್ದು? ಎಂದುಕೊಳ್ಳುವ ವೇಳೆಗೆ ಸ್ವರೂಪ್ ಬೈಕಿನ ಹತ್ತಿರ ಬರುತ್ತಿದ್ದ.

ಹತ್ತು ನಿಮಿಷ! ಸ್ವರೂಪ್‌ನನ್ನು ಬಿಟ್ಟು ಹತ್ತು ನಿಮಿಷಗಳಲ್ಲಿ ಆ ವ್ಯಕ್ತಿ ಹೇಳಿದ ಜಾಗ ತಲುಪಲು ಸಾಧ್ಯವೇ?

"ಮಿತ್ರಜೀತ್! ಕ್ಯಾರಿ ಆನ್. ಸೀನಿಯರ್ ಇಲ್ಲೇ ಇದ್ದಾರೆ" ಎಂದಾಗ ಮಿತ್ರಜೀತ್ ಆನಂದತುಂದಿಲನಾದ. ಸ್ವರೂಪ್‌ಗೆ ಹೇಳಲೇ ಎಂದುಕೊಂಡ. ಬೇಡ, ಆಮೇಲೆ ಹೇಳಿದರಾಯ್ತು ಎಂದುಕೊಂಡ. ಅವನ ಮೆದುಳು ಅವನನ್ನು ಎಚ್ಚರಿಸಿತು. ಒಂದು ವೇಳೆ ತಾನು ಅಪಾಯಕ್ಕೆ ಸಿಲುಕಿಕೊಂಡರೆ? ತನ್ನಿರವು ಯಾರಿಗಾದರೂ ತಿಳಿದಿರಬೇಕಲ್ಲವೇ?

ಗಡಿಯಾರ ತನ್ನ ಪಾಡಿಗೆ ಮುಳ್ಳುಗಳನ್ನು ಮುಂದಕ್ಕೆ ತಳ್ಳುತ್ತಿತ್ತು. ಸ್ವರೂಪನಿಗೆ 'ಬೈ' ಹೇಳಿ 'ಅಂಕಲ್ ಆಂಟಿ ಷೋರೂಮ್' ಕಡೆಗೆ ಬೈಕ್ ಓಡಿಸಿದ.

ಮನಸ್ಸಿನಲ್ಲಿ ಮುಂದಿನ ದೃಶ್ಯವನ್ನು ಮನನ ಮಾಡಿಕೊಂಡ. ಆ ವ್ಯಕ್ತಿ ತನಗೇನು ಹೇಳುತ್ತಾನೆ?(ಅವಳು ಎಂದು ಒಳಗೆಲ್ಲೋ  ಅನ್ನಿಸಿತ್ತು) ಲೊರೆಟ್ಟಾಳ ಬಗ್ಗೆ ಏನಾದರೂ ಸುಳಿವು ಸಿಗಬಹುದೇ? ಲೊರೆಟ್ಟಾಳ ಗತಿ ಏನಾಗಿದೆಯೋ?

ಬೈಕ್ 'ಅಂಕಲ್ ಆಂಟಿ ಷೋರೂಮ್' ಮುಂದೆ ನಿಂತಿತು. ಅದೊಂದು ತಾತ್ಕಾಲಿಕವಾಗಿ ಕಟ್ಟಲ್ಪಟ್ಟ ಸರ್ವೆಮರ, ಟಾರ್ಪಾಲಿನ್‌ಗಳನ್ನು ಬಳಸಿದ್ದ ದೊಡ್ಡ ಮಳಿಗೆ. ಆ ಸ್ಥಳವನ್ನು ಭೇಟಿಗಾಗಿ ಆ ವ್ಯಕ್ತಿ ಆರಿಸಿರುವುದು ಏಕೆಂದು ಅರ್ಥವಾಗಿತ್ತು ಮಿತ್ರಜೀತ್‌ಗೆ.

ಅದೊಂದು ಕ್ಯೂರಿಯೋ ಷಾಪ್. ಬಟ್ಟೆ, ಆಟಿಕೆಗಳು, ಅಲಂಕಾರ ಸಾಧನಗಳು, ಅಡುಗೆ ಮನೆ ಸಲಕರಣೆಗಳು, ಎಲೆಕ್ಟ್ರಿಕ್ ಉಪಕರಣಗಳು ಇತ್ಯಾದಿ ಆ ಹಾಲ್‌ನಲ್ಲಿ ಜೋಡಿಸಲ್ಪಟ್ಟಿದ್ದವು.

ಜನ ಮರುಳೋ ಜಾತ್ರೆ ಮರುಳೋ ಎಂಬ ಗಾದೆಗೆ ಅಲ್ಲಿ ಜೀವ ಬಂದಿತ್ತು. ಜನಸಂದಣಿ ತುಂಬಾ ದಟ್ಟವಾಗಿತ್ತು. ಈ ಊರಲ್ಲಿ ಒಂದು ಹೆಣವನ್ನು ತುಂಡು ಮಾಡಿ ಇಟ್ಟು 'ಅಂಗಡಿ' ಎಂಬ ಫಲಕ ಇಟ್ಟರೂ ಜನ ಬರೋದ್ರಲ್ಲಿ ಅನುಮಾನವಿಲ್ಲ ಎಂದುಕೊಂಡ ಮಿತ್ರಜೀತ್, ಮನದಲ್ಲೇ ನಕ್ಕು.

ಆ ಲೆದರ್ ಡ್ರೆಸ್ ವ್ಯಕ್ತಿ ಎಲ್ಲಿ? ಎಂದುಕೊಳ್ಳುತ್ತಾ ಸುತ್ತಲೂ ನೋಡಿ, ಮುಂದಿದ್ದ ಆಫ್ಟರ್ ಶೇವ್ ಲೋಷನ್ನಿನ ಬಾಟಲನ್ನು ಕೈಗೆತ್ತಿಕೊಂಡ.

"ಹಾಗೇ ಅದನ್ನ ನೋಡ್ತಿರು. ನನ್ನ ಕಡೆ ನೋಡ್ಬೇಡ. ನಿನ್ನ ಪಕ್ಕದಲ್ಲೇ ಈ ಬಾಚಣಿಗೇನ ನಾನು ಪರೀಕ್ಷೆ ಮಾಡ್ತಾ ಇರ್ತೀನಿ. ಹಾಗೇ ಮಾತಾಡೋಣ"

ಎಂಬ ಸ್ವರ ಕೇಳಿಸಿತು. ಪಕ್ಕಕ್ಕೆ ತಿರುಗಿ ನೋಡುವುದನ್ನು ಕಷ್ಟಪಟ್ಟು ತಡೆದುಕೊಂಡ.

ಕಣ್ಣಂಚಿನಲ್ಲಿ ಕಂಡಿತ್ತು ಆ ವ್ಯಕ್ತಿಯ ತುಂಬುತೋಳಿನ ಚರ್ಮದ ಜಾಕೆಟ್‌ನ ಅಂಚು. ಓ ಇವನು ಗಂಡಸು!

“ಲೊರೆಟ್ಟಾ ಎಲ್ಲಿ?” ಕೇಳಿದ ಮಿತ್ರಜೀತ್ ಆ ಬಾಟಲನ್ನು ಮೇಲೆತ್ತಿ ಅದರ ತಳವನ್ನು ಪರೀಕ್ಷಿಸುತ್ತಾ.

“ನಿಧಾನ ನಿಧಾನ... ಅಷ್ಟೊಂದು ಅರ್ಜೆಂಟಾದ್ರೆ ಹೆಂಗೆ? ಸ್ವಲ್ಪ ತಡಕೊಳ್ಳಿ ಯಜಮಾನ್ರೆ” ಎಂದು ನಕ್ಕ. ಅವನ ಮೇಲೆ ಸಿಟ್ಟುಂಟಾದರೂ ಅವನ ನಗೆಯಿಂದ  ಏಕೋ ಅಸಹ್ಯವಾಗಿತ್ತು.

“ಮತ್ತೆ ನನ್ನನ್ಯಾಕೆ ಇಲ್ಲಿಗೆ ಬರಹೇಳ್ದೆ?” ಎಂದ ಸಹನೆಯನ್ನು ಕೊಂಡುಕೊಂಡವನಂತೆ.

“ನಾನೀಗ ಇಲ್ಲಿಂದ ಹೋಗ್ತೀನಿ. ಆಗ ನನ್ನ ಜೇಬಿನಿಂದ ಒಂದು ಚೀಟಿ ಬೀಳತ್ತೆ. ಅದನ್ನ ತಗೊಂಡು ಅದರಲ್ಲಿ ಎಲ್ಲಿಗೆ ಬಾ ಎಂದಿದೆಯೋ ಅಲ್ಲಿಗೆ ಬಾ” ಎಂದ.

“ಒಳ್ಳೇ ಸಿನಿಮಾ ಪ್ರಭಾವದ ಥರಾ ಇದೆಯಲ್ಲಾ?”

“ಚೀಟಿ ನೋಡು. ನಿನಗೇ ತಿಳ್ಯುತ್ತೆ!” ನಕ್ಕು ಮಿತ್ರಜೀತ್ ಪ್ರತಿಕ್ರಿಯಿಸೋ ಮುನ್ನ ಅಲ್ಲಿಂದ ಹೊರಟುಹೋದ. ಅವನು ಹೇಳಿದಂತೆಯೇ ಒಂದು ಚೀಟಿ ಕೆಳಗೆ ಬಿತ್ತು. ಥಟ್ಟನೆ ಅದನ್ನು ಎತ್ತಿಕೊಳ್ಳುತ್ತಾ, ‘ಛೇ, ಇದೆಂತಾ ಚೀಟಿ ವ್ಯವಹಾರ!’ ಎಂದು ನಕ್ಕ. ಆ ಚೀಟಿಯನ್ನು ನೋಡಿ ತಬ್ಬಿಬ್ಬಾದ. ಅದೊಂದು ಸಿನಿಮಾ ಟಿಕೆಟ್!

ಮಿತ್ರಜೀತ್‌ಗೆ ತಲೆ ಓಡದಂತಾಯಿತು. ಯಾರೋ ಹುಚ್ಚನ ಸಹವಾಸ ಮಾಡಿದಂತಾಯ್ತು... ಎಂದು ಬೈದುಕೊಳ್ಳುತ್ತಾ ಮತ್ತೆ ಟಿಕೆಟ್ ಕಡೆ ನೋಡಿದ. ಅಂದಿನದೇ ಟಿಕೆಟ್. ಕೌಂಟರ್ ಫಾಯಿಲ್ ಹರಿಯಲ್ಪಟ್ಟಿಲ್ಲ. ನಾಲ್ಕೂವರೆ ಷೋ. ಊರಾಚೆಯ ಥಿಯೇಟರ್.

ಏನಿದರ ಒಳಮರ್ಮ? ಈ ಮನುಷ್ಯ ಸಿನಿಮಾ ಪ್ರಭಾವದಿಂದ ಹೀಗಾಡುತ್ತಿರುವನೋ ಅಥವಾ ನಿಜವಾಗಿಯೂ ಇಷ್ಟೊಂದು ಎಚ್ಚರಿಕೆ ವಹಿಸುವ ಆವಶ್ಯಕತೆ ಇದೆಯೋ ಎಂದು ತಿಳಿಯದೇ, ಕೊನೆಗೆ ಚಿತ್ರಮಂದಿರಕ್ಕೆ ಹೋಗಲು ನಿರ್ಧರಿಸಿದ.

ಮೂರೂವರೆ ದಾಟಿತ್ತು. ಬೈಕಿಗೆ ಪೆಟ್ರೋಲ್ ತುಂಬಿಸಿಕೊಂಡ. ಹೇಗೇ ಇರಲಿ, ಒಮ್ಮೆ ಸ್ವರೂಪ್‌ನಿಗೆ ಫೋನ್ ಮಾಡಲು ಡಯಲ್ ಮಾಡಿದ. ಅವನ ಮೊಬೈಲ್ ಆಫ್ ಆಗಿತ್ತು. ಅವನು ಒಮ್ಮೆ ಹಿಂದೆ ವಿವರಿಸಿದ್ದಂತೆ ಒಂದು ಮೆಸೇಜ್ ಬಿಟ್ಟು ಥಿಯೇಟರ್‌ನತ್ತ ಹೊರಟ.

ಟ್ರಾಫಿಕ್ ಜಾಮ್‌ಗಳನ್ನು ದಾಟಿ ಥಿಯೇಟರ್ ಸೇರುವ ವೇಳೆಗೆ ಆಗ ತಾನೇ ಸಿನಿಮಾ ಶುರುವಾಗಿಬಿಟ್ಟಿತ್ತು. ಕತ್ತಲಲ್ಲಿಯೇ ತಡಕುತ್ತಾ ತನ್ನ ಸೀಟ್ ನಂಬರ್‌ನತ್ತ ನಡೆದ. ಯಾವುದೋ ಭೂತ ಪಿಶಾಚಿಗಳ ಸಿನಿಮಾ. ಆರಂಭದ ದೃಶ್ಯವೇ ಭಯಾನಕವಾಗಿತ್ತು. ಹೆಣ್ಣು ದೆವ್ವವೊಂದು ಅಡುಗೆ ಮಾಡಲು ಒಲೆ ಹೊತ್ತಿಸಿತ್ತು. ಒಲೆಗೆ ಇಂಧನವಾಗಿ ತನ್ನ ಕಾಲುಗಳನ್ನೇ ಬೆಂಕಿಯಲ್ಲಿಟ್ಟಿತ್ತು.

ಸೀಟು ಸಿಕ್ಕಿದಾಗ, ಸೀಟು ತೋರಿದ ಹುಡುಗನ ಟಾರ್ಚ್ ಬೆಳಕಿನಲ್ಲಿ ಪಕ್ಕದ ಸೀಟಿನಾತನ ಕಣ್ಣಿನ ಕೆಳಗಿನ ಚಿಕ್ಕ ಮಚ್ಚೆ ಕಂಡಿತ್ತು.

"ನೀನು ಬರೋದಿಲ್ಲ ಅಂದ್ಕೊಂಡಿದ್ದೆ!" ಎಂದ ಅವನು.

"ಸಿನಿಮಾ ಥಿಯೇಟರ್ ಒಳಗೆ ಕತ್ತಲಾಗೋಕ್ಕೆ ಮುಂದೆ ನೀನು ಬರೋಲ್ಲ ಅಂದ ನನಗೆ ಗೊತ್ತಿಲ್ಲ ಅಂದ್ಕೊಂಡಿದ್ದೀಯಾ?" ಎಂದ ಮಿತ್ರಜೀತ್.

"ಬಹಳ ಜಾಣ ನೀನು ಅಂತ ನನಗ್ಗೊತ್ತು" ಎಂದ ಅವನು.

"ನೋಡೂ..." ಕತ್ತಲಲ್ಲಿ ಅವನ ಮೊಗವನ್ನು ನೋಡಲೆತ್ನಿಸಿ, ವಿಫಲವಾಗ "ಇಲ್ಲಿಗೆ ನೀನು ನನ್ನನ್ನ ಹೊಗಳೋಕ್ಕಲ್ಲ ಬಂದಿರೋದು ಅಂತ ನನಗ್ಗೊತ್ತು. ಲೊರೆಟ್ಟಾ ಎಲ್ಲಿ?" ಎಂದ ಮಿತ್ರಜೀತ್.

"ಆಗ್ಲೇ ಹೇಳ್ದೆ ನಾನು. ನಿನಗೆ ಅವಸರ ಜಾಸ್ತೀಂತ. ಅವಳೆಂಥಾ ಕೋಟೇಲಿದ್ದಾಳೆ ಗೊತ್ತಾ? ಅದನ್ನು ಊಹಿಸೋಕ್ಕೂ ನಿನಗೆ ಸಾಧ್ಯವಿಲ್ಲ. ಆದರೂ ನಿನಗೆ ನಾನು ಒಂದು ಕ್ಲೂ ಕೊಡ್ತೀನಿ. ನನಗೇನು ಕೊಡ್ತೀ?" ಎಂದ ಆತ.

"ನಿನಗೆ ಒಂದು ಹೆಸರಿರಬೇಕಲ್ವಾ?" ಕೇಳಿದ ಮಿತ್ರಜೀತ್.

ಗಹಗಹಿಸಿ ನಕ್ಕ ಅವನ ನಗೆ ಸಿನಿಮಾದ ವಿಲ್ಲನ್‌ನ ನಗೆಯೊಂದಿಗೆ ಮಿಳಿತವಾಗಿತ್ತು.

"ನನ್ನ ಹೆಸರು ಪ್ರೇಂನಾಥ" ಎಂದ ಅವನು.

"ವಿಲ್ಲನ್ ಪ್ರೇಂನಾಥ? ಅದು ನಿಜವಾದ ಹೆಸರೇನಾ?"

"ನಿನಗ್ಯಾಕೆ ಅದು? ಹೇಳು ನನಗೇನು ಕೊಡ್ತೀ?"

"ಏನು ನಿರೀಕ್ಷೆ ಮಾಡ್ತಿದ್ದೀ?"

ಅವನ ಉತ್ತರ ಅತ್ಯಂತ ಅನಿರೀಕ್ಷಿತವಾಗಿತ್ತು ಮಿತ್ರಜೀತ್‌ನಿಗೆ.

"ನನಗೆ ನನ್ನ ಹುಡುಗಿ ಸಿಗೋ ಹಾಗೆ ಮಾಡ್ತೀಯಾ?"

ಚಕಿತನಾದರೂ ಅದನ್ನು ಮಾತಲ್ಲಿ ತೋರಗೊಡದೇ "ಖಂಡಿತ ಪ್ರಯತ್ನ ಮಾಡ್ತೀನಿ, ನೀನು ವಿವರ ಕೊಟ್ರೆ" ಎಂದ ನಿಯತ್ತಿನಿಂದ.

"ನಾನು ಕೆಲಸ ಮಾಡೋ ಜಾಗದಲ್ಲಿ ಒಬ್ಬ ಇದ್ದಾನೆ. ಅವನಿಗೆ ನನ್ನ ಹುಡುಗಿ ಮೇಲೇ ಕಣ್ಣು. ನನ್ನ ಹುಡುಗಿಗೆ ನನ್ನ ಈ ಕೆಲಸ ಇಷ್ಟವಿಲ್ಲ. ಅದನ್ನು ಬಿಡೋಕ್ಕೆ ನನಗೆ ಹಣ ಬೇಕು. ಆ ಹಣ ಸಂಪಾದನೆ ನಾನು ಮಾಡ್ಕೋತೀನಿ. ನನ್ನ ಹಿಂದೆ ಬಿದ್ದಿರೋ ಆ ರಾಸ್ಕಲ್‌ನ ನೀನು ಹಿಡಿಸ್ತೀಯಾ? ಹೇಗೂ ನಿಂಗೆ ಉಮಾಶಂಕರ್ ಪರಿಚಯ ಇದೆಯಲ್ಲಾ?" ಎಂದ ಪ್ರೇಂನಾಥ.

ಓಹೋ! ಈ ಮನುಷ್ಯ ಸಾಕಷ್ಟು ಶೋಧನೆ ನಡೆಸಿದ್ದಾನೆ!

"ಯಾವ ಅಪರಾಧದಲ್ಲಿ ಹಿಡಿದು ಹಾಕಿಸಲಿ, ನೀನೇ ಹೇಳ್ಬಿಡು"

"ಹಯ್ಯೋ, ನಮ್ಮ ಗುಂಪು ಭಾಳ ಕಂತ್ರಿ ಕೆಲಸಗಳನ್ನ ಮಾಡತ್ತೆ. ಡ್ರಗ್ ಸೆಲಿಂಗ್ ಒಂದು ಚಿಕ್ಕ ದಂಧೆ. ಊರಾಚೆಯ ಕಾಲೇಜಿನ ಹುಡುಗರಿಗೆ ಸಪ್ಲೈ ಮಾಡ್ತಾನೆ"

"ಅವನ ಹೆಸರು ಹೇಳು" ಉದ್ವೇಗಿಯಾಗಿ ಕೇಳಿದ ಮಿತ್ರಜೀತ್.

"ಸರ್ವೇಶ್ವರ್" ಎಂದು ಪ್ರೇಂನಾಥ್.

ಪ್ರೇಂನಾಥ್‌ನ ಕೈ ಮೇಲೆ ಕೈಯಿಟ್ಟು "ಪ್ರಾಮಿಸ್!" ಎಂದ ಮಿತ್ರಜೀತ್. ಅವನಿಗೆ ಡ್ರಗ್ಸ್ ಮಾರುವವರೆಂದರೆ ಸಿಕ್ಕಾಪಟ್ಟೆ ಸಿಟ್ಟು.

ಪ್ರೇಂನಾಥ್ ನಕ್ಕು, "ಥ್ಯಾಂಕ್ಸ್! ನೀನು ತುಂಬಾ ಕಟ್ಟುನಿಟ್ಟಿನವನೆಂದು ಕೇಳಿದ್ದೀನಿ. ನಿನಗೆ ಕ್ಲೂ ಕೊಡ್ತೀನಿ ಅಂದಿದ್ನಲ್ಲಾ. ತಗೋ. ಮನೆ – ದಕ್ಷತೆ – ಮಗಳು... ಸಾರೀ! ಇದಕ್ಕಿಂತ ಜಾಸ್ತಿ ಹೇಳಲಾರೆ. ಅವರು ಇಷ್ಟು ಹೊತ್ತಿಗೇ ನನ್ನನ್ನು ಮಿಸ್ ಮಾಡಿಕೊಂಡು ಹುಡುಕೋಕ್ಕೆ ಆರಂಭಿಸಿರಬಹುದು" ಎಂದು

ಹೇಳಿ ಎದ್ದು ನಿಂತು, “ಹ್ಞಾಂ! ಇದನ್ನು ಮರೆತಿದ್ದೆ. ಇದು ಜನರಿಗೆ ತಲುಪಬೇಕು. ನಾನೇ ಅಂದು ಇದನ್ನ ಜೋಪಾನ ಮಾಡಿದವನು. ತಗೋ!” ಎಂದು ಹೇಳಿ ಜಾಕೆಟ್ ಝಿಪ್ ತೆರೆದು ಅದರಿಂದ ಒಂದು ಪ್ಯಾಕೆಟ್ ತೆಗೆದು ಮಿತ್ರಜೀತ್‌ಗಿತ್ತು ಕತ್ತಲಲ್ಲಿಯೇ ಮಾಯವಾದ.

ಮಿತ್ರಜೀತ್ ಕ್ಷಣಮಾತ್ರದಲ್ಲಿ ಚೇತರಿಸಿಕೊಂಡು ವೇಗವಾಗಿ ಅವನ ಬೆನ್ನಟ್ಟಿದ. ಪ್ರೇಂನಾಥ್ ತ್ವರಿತಗತಿಯಲ್ಲಿ ಥಿಯೇಟರ್ ಗೇಟ್ ದಾಟಿದ್ದ. ಅವನ ಬೈಕನ್ನು ರಸ್ತೆಯ ಒಂದು ಬದಿಯಲ್ಲಿ ಪಾರ್ಕ್ ಮಾಡಿದ್ದನೆಂದು ತೋರುತ್ತದೆ. ಬೈಕ್ ಸ್ಟಾರ್ಟ್ ಮಾಡಿಕೊಂಡು ಹೊರಟೇಹೋದ.

“ಯಾಕೆ ಸಾರ್? ಭೂತದೆಯ್ಯದ ಪಿಚ್ಚರ್ ಭಯ ಆಯ್ತಾ?” ಹಲ್ಲು ಕಿಸಿದ ಬಾಗಿಲು ಕಾಯುವಾತ.

“ಹೂಂ. ಈಗ ಹೋದ್ರಲ್ಲಾ. ಅವರಿಗೆ ಜ್ವರಾನೇ ಬಂದ್ಬಿಟ್ಟಿದೆ. ಅವರನ್ನ ಆಸ್ಪತ್ರೆಗೆ ಕರಕೊಂಡು ಹೋಗ್ಬೇಕು” ಎಂದ ಮಿತ್ರಜೀತ್. ಬಾಗಿಲು ಕಾಯುವವ ಜೋಕ್ ಕೇಳಿದವನಂತೆ ನಕ್ಕ.

ಮಿತ್ರಜೀತ್ ಏನೋ ಹೊಳೆದವನಂತೆ “ಈಗ ಹೋದ್ನಲ್ಲಾ ಅವನ ಬಗ್ಗೆ ಏನಾದ್ರೂ ವಿಶೇಷ ಕಂಡೆಯಾ?” ಎಂದು ಪ್ರಶ್ನಿಸಿದ.

“ಈಗ ಹೋದ್ರಲ್ಲಾ ಆಯಪ್ಪನಾ? ಬಲಗೈನಲ್ಲಿ ಯಾವುದೋ ವಿಚಿತ್ರ ಬಳೆ ಹಾಕ್ಕೊಂಡಿದ್ದ ತಾಮ್ರದ್ದು. ಆಮೇಲೆ ಬಲಗಣ್ಣಿನ ಕೆಳಗೆ ಮಚ್ಚೆ ಇತ್ತು. ಕಣ್ಣು ಐಶ್ವರ್ಯಾ ರೈ ಕಣ್ ಥರಾ ಇತ್ತು...” ಎಂದು ಹೇಳುತ್ತಿದ್ದವನು ಹಠಾತ್ತನೆ “ಅವ್ರಿಗೆ ಜ್ವರ ಬಂದಿದೆ. ಆಸ್ಪತ್ರೇಗೆ ಕರಕೊಂಡು ಹೋಗ್ಬೇಕೂಂತಂದ್ರಿ?...” ಎಂದ ಸಂದೇಹದಿಂದ.

“ನೀನು ಡ್ಯೂಟಿಯಲ್ಲಿ ಎಷ್ಟು ನಿಗಾವಾಗಿರ್ತೀ ಅಂದ ಪರೀಕ್ಷೆ ಮಾಡಿದೆ ಅಷ್ಟೇ” ಎಂದು ಅವನ ಕೆನ್ನೆ ತಟ್ಟಿ ನಕ್ಕು ಥಿಯೇಟರಿನಿಂದ ಹೊರಬಿದ್ದ.

ಬಲಗೈಲಿ ತಾಮ್ರದ ಬಳಿ, ಐಶ್ವರ್ಯಾ ರೈ ಥರಾ ನೀಲಿ ಕಣ್ಣು. ಬಳೆ ತೆಗೆದುಬಿಟ್ಟರೂ ಕಣ್ಣು, ಕಣ್ಣಿನಡಿಯ ಮಚ್ಚೆ ಶಾಶ್ವತ ತಾನೇ!

ಬೈಕಿನ ಬಳಿ ಬಂದಾಗ ಎಡಗೈಲಿದ್ದ ಪ್ಯಾಕೆಟ್ ನೋಡಿದ. ಏನೋ ಅನುಮಾನ ಉಂಟಾಗಿ ಆ ಪ್ಯಾಕೆಟ್ಟಿನ ಮೇಲಿನ ಮೇಲುಹೊದಿಕೆ ಬಿಚ್ಚಿದ. ಬೆಚ್ಚಿದ.

ಅಲ್ಲಿದ್ದವು ಹನ್ನೊಂದು ಕಥೆಗಳು. ಇವನ ಮನೆಯಿಂದ ಅಂದು ಮಾಯವಾಗಿದ್ದ ಕಥೆಗಳು!

ಪಾಲ್  ಬರೆದಿದ್ದ ಸತ್ಯಕಥೆಗಳು. ಮಿತ್ರಜೀತ್ ಕೆಲಕಾಲ ಶಿಲೆಯಂತಾಗಿದ್ದ!

# 12

ಪಾಲ್‌ಗೆ ಒಳ್ಳೆಯ ಸುಳಿವು ಸಿಕ್ಕಿತ್ತು. ಅವನು ಉದ್ವೇಗಕ್ಕೊಳಗಾಗಿದ್ದ. ಈ ವಿಷಯ ಹೊರಗೆ ಬಂದರೆ ಎಂತಹ ಕೋಲಾಹಲ ಉಂಟಾಗಬಹುದು! ದೊಡ್ಡ ವ್ಯಕ್ತಿಗಳು ಅನ್ನಿಸಿಕೊಂಡವರು ಇಂತಹ ಚಿಲ್ಲರೆ ಕೆಲಸ ಮಾಡಿದರೆ ಅದೆಷ್ಟು ಅಸಹ್ಯವಾಗಿರುತ್ತದೆ! ಯಾರ ಪಾಲಿಗೋ ಸೇರಬೇಕಾದ, ಅದೂ ಸರ್ಕಾರ ದೊಡ್ಡ ಮನಸ್ಸು ಮಾಡಿ ಬಿಡುಗಡೆ ಮಾಡಿದ ಹಣ 'ಗುಳುಂ' ಆಗುತ್ತಿದೆ. ಇದನ್ನ ನಾನು ಅರಿತ ಮೇಲೆ ಹೇಗೆ ಸುಮ್ಮನಿರಲು ಸಾಧ್ಯ?

ಇದನ್ನು ಯಾರಿಗೂ ಹೇಳಲು ಮನಸ್ಸೊಡಂಬಡಲಿಲ್ಲ. ಈ ದುಷ್ಟ ಕೆಲಸದ ಬುಡ ಶೋಧಿಸಬೇಕು. ಯಾರೆಂದು ತಿಳಿದು, ಜನರಿಗೆ ತಿಳಿಸಬೇಕು.

ಇಷ್ಟು ದಿನ ತಾನು ಕಂಡ ಅನೇಕ ಕುಕೃತ್ಯಗಳನ್ನು ಪೇಪರ್‌ಗೆ ವರದಿಯಂತೆ ಬರೆಯುವ ಬದಲು ಅವುಗಳಿಗೆ ಸ್ವಲ್ಪ ಕಲ್ಪನೆ ಬೆರೆಸಿ ರೋಚಕ ಶೈಲಿಯಲ್ಲಿ ಬರೆದರೆ ಹೆಚ್ಚು ಜನರನ್ನು ತಲುಪುವುದೆಂಬ ಕಟು ಸತ್ಯ ಅವನು ಅರಿತಿದ್ದ. ಅದಕ್ಕೇ ಅವನು ಕಂಡ ಪೊಲಿಟಿಕಲ್ ಮಾಫಿಯಾ ಘಟನೆಗಳಿಗೆ ಕಥಾರೂಪ ಕೊಟ್ಟಿದ್ದ.

ಇತ್ತೀಚೆಗೆ ತನ್ನನ್ನು ಯಾರೋ ಹಿಂಬಾಲಿಸುತ್ತಿದ್ದಾರೆ ಎನ್ನಿಸಿತ್ತು. ತನ್ನ ಕಥೆಗಳು ಕ್ಷೇಮವಾಗಿರಬೇಕೆಂಬ ಅದಮ್ಯ ಆಸೆ ಉಂಟಾಗಿ ಅವನ್ನು ಅತ್ಯಂತ ಸುರಕ್ಷಿತ ಎನ್ನಿಸಿದ್ದ ಮಿತ್ರಜೀತ್‌ನ ಮನೆಯ ಬಾಗಿಲ ಸಂದಿನಿಂದ ತುರುಕಿದ್ದ.

ಆದರೆ ಮುಂದಿನ ಕೆಲವೇ ಕ್ಷಣಗಳಲ್ಲಿ ಅವನನ್ನು ಯಾರೋ ಹಿಂದಿನಿಂದ ಹಿಡಿದುಕೊಂಡಿದ್ದರು! ಕತ್ತಲಲ್ಲಿ ಸೆಣಸಾಟ ಬಹಳ ಹೊತ್ತು ಸಾಗಲಿಲ್ಲ.

ಅವನ ಮುಖಕ್ಕೆ ಕಪ್ಪು ಮುಸುಕು ಹಾಕಿ ಕಾರಲ್ಲಿ ಕರೆದೊಯ್ದಿದ್ದರು. ಇದಕ್ಕೆ ಕಾರಣ ಏನೆಂದು ಊಹಿಸಲಾರದಷ್ಟು ದಡ್ಡನಾಗಿರಲಿಲ್ಲ ಪಾಲ್. ಆ ದಿನ ಬೆಳಿಗ್ಗೆ ಪೇಪರ್‌ನಲ್ಲಿ ಬಂದ ಲೇಖದನ ಫಲ ಅದು! ಎಲ್ಲಿಗೆ ಕರೆದೊಯ್ಯುತ್ತಿದ್ದಾರೆ ತನ್ನನ್ನು? ಎಂಬ ಪ್ರಶ್ನೆ ಕಾಡಿತೇ ಹೊರತು ಏನು ಮಾಡುತ್ತಾರೆ ತನ್ನನ್ನು ಎಂಬ ಪ್ರಶ್ನೆ ಅಲ್ಲ. ಅವನು ತುಂಬಾ ಚೆನ್ನಾಗಿ ಅರಿತಿದ್ದ – ದೊಡ್ಡ ಬೆಟ್ಟ ಉರುಳುವಾಗ ಕೆಲವು ಔಷಧೀಯ ಸಸ್ಯಗಳು, ಉಪಯೋಗೀ ಮರಗಳು ತ್ಯಾಗ ಮಾಡಬೇಕೆಂದು.

ಯಾವುದೋ ಜಾಗಕ್ಕೆ ಬಂದು ಕಾರು ನಿಂತ ಅನುಭವವಾಯಿತು.

"ಇಳಿ!" ಎಂದ ಒಬ್ಬ. ಮೆಲ್ಲನಿಳಿದ ಪಾಲ್. ಎಲ್ಲಿಗೋ ತಳ್ಳಿಕೊಂಡು ಹೋದರು. ಹೊಸ್ತಿಲು, ಮೆಟ್ಟಿಲುಗಳು - ಹದಿನೈದಿದ್ದವು. ಹತ್ತು ಹೆಜ್ಜೆ ಇಟ್ಟ.

"ಸಾರ್! ಬಂದ ನೋಡಿ" ಎಂದ ತನ್ನನ್ನು 'ಇಳಿ' ಎಂದವನು.

"ಓಹೋಹೋ! ಮಹಾನ್ ಪತ್ರಕರ್ತರು. ಬನ್ನಿ ಬನ್ನಿ" ಎಂಬ ಸ್ವರ ಒಬ್ಬ ಪುರುಷನದು. ಎಲ್ಲಿ ಕೇಳಿರುವೆ ಈ ಸ್ವರವನ್ನು?

ಮೆದುಳನ್ನು ಕೆದಕಿದ. ತನ್ನ ಪರಿಶೋಧದಲ್ಲಿ ಇವನ ಪಾತ್ರವೇನು?

ಅಷ್ಟರಲ್ಲಿ 'ಹಲೋ' ಎಂಬ ಸ್ತ್ರೀಧ್ವನಿ ಕೇಳಿಸಿತ್ತು.

ಅದು ಅವನ ಮೆದುಳನ್ನು ಆವರಿಸಿದ್ದ ಭ್ರಮಾಪರದೆಯನ್ನು ಛಿದ್ರಗೊಳಿಸಿತ್ತು!

ಮೈ ಗಾಡ್! ಈ ಷಡ್ಯಂತ್ರದಲ್ಲಿ ಇವಳ ಹಸ್ತಕ್ಷೇಪ ಇದೆಯಾ?

ಮುಂದಕ್ಕೆ ಆಲೋಚಿಸಲು ಅವನಿಗಾಗಲಿಲ್ಲ. ಯಾರೋ ಅವನ ಮಣಿಕಟ್ಟಿಗೆ ಉರಿಯುತ್ತಿದ್ದ ಸಿಗರೇಟ್ ತುದಿಯನ್ನು ಒತ್ತಿದ್ದರು. ಅವನ ಚೀರುವಿಕೆ ಅಲ್ಲಿದ್ದ ಯಾರಲ್ಲೂ ಕರುಣೆ ಉಕ್ಕಿಸಲಿಲ್ಲ. ಕರುಣೆ ತೋರಬಹುದಾದ ಮನುಷ್ಯರಾರನ್ನೂ ಅವನ ಆಕ್ರಂದನ ತಲುಪಲಿಲ್ಲ!

"ಫಜಲ್! ಹೇ ಫಜಲ್! ಎಲ್ಲಿ ಕಳೆದು ಹೋಗಿದ್ದೀ?" ಅಮರೇಶ್ ತನ್ನ ಬಲಗೈಯಿಂದ ಚಿಟಿಕೆ ಹೊಡೆದು ಬೆಚ್ಚಿಸಿದ.

"ಆಂ..." ಎಂದು ತನ್ನ ಯೋಚನೆಯ ಬಲೆಯಿಂದ ಹೊರಬಿದ್ದು "ಹೇ ಅಮರ್! ಯಾವಾಗ ಬಂದೆ?" ಎಂದ ಫಜಲ್.

"ಏನಷ್ಟು ಗಾಢ ಆಲೋಚನೆ?" ಹುಬ್ಬು ಕುಣಿಸಿದ ಅಮರೇಶ್.

"ಏನಿಲ್ಲೋ... ಇರುತ್ತಲ್ಲಾ ಆಕ್ಯುಪೇಷನಲ್ ಹಝಾರ್ಡ್ಸ್" ನಕ್ಕ ಫಜಲ್.

ಆದರೆ ಆ ನಗೆಯ ಹಿಂದಿನ ಗಾಂಭೀರ್ಯ ಅರಿಯದವನೇನಲ್ಲ ಅಮರೇಶ್.

"ವೃತ್ತಿಯಲ್ಲಿನ ಅಪಾಯಗಳು! ನಿಜವಾಗ್ಲೂ ಒಳ್ಳೇ ಶಬ್ದ! ಆದರೆ ಫಜಲ್..." ಮಾತು ನಿಲ್ಲಿಸಿ, ಅವನ ಮುಂದೆ ಬಾಗಿ, ಅವನ ಮುಖಕ್ಕೆ ನೇರವಾಗಿ ತನ್ನ ಮುಖವನ್ನಿಟ್ಟುಕೊಂಡು, ಅವನ ದೃಷ್ಟಿಯೊಂದಿಗೆ ತನ್ನ ನೋಟ ಬೆರೆಸಿ, "ಈ ಸತ್ಯ ನಿನಗೆ ತಿಳಿಯದ್ದೇನಲ್ವಲ್ಲಾ?" ಎಂದ.

"ಹೌದು ಅಮರ್. ನಿನ್ನ ಮಾತು ನಿಜ" ನಿಟ್ಟುಸಿರಿಟ್ಟು ಎದ್ದು ನಿಂತು, ಅಡುಗೇ ಮನೆ ಕಡೆಗೆ ನಡೆದ. ಅಮರೇಶನಿಗೆ ತಾನು ಮಾಡಿಕೊಡುವ ಟೀ ಬಲು ಇಷ್ಟವೆಂದು ಅವನಿಗೆ ತಿಳಿದಿದೆ.

"ಫಜಲ್ ಏನಾಗಿದೆ ನಿನಗೆ?" ಕೇಳಿದ ಅಮರ್ ಅವನನ್ನು ಹಿಂಬಾಲಿಸಿ, ಅಡುಗೇಮನೆಯ ಗ್ರಾನೈಟ್ ಚಪ್ಪಡಿಯ ಮೇಲೆ ಜಾರಿದಂತೆ ನಿಂತು.

"ನಿಂಗೆ ತಿಳಿಯದ್ದೇನಿದೆ ಅಮರ್?" ಎಂದ ಸ್ಟವ್ ಹಚ್ಚಿ.

"ಖಂಡಿತ ನನಗೆ ತಿಳಿದಿಲ್ಲ" ಥಟ್ಟನೆ ನುಡಿದ ಅಮರ್.

"ಏನಂದೆ?" ಎಂದ ಫಜಲ್ ಚಿಕ್ಕ ಸ್ಟೀಲ್ ಪಾತ್ರೆಗೆ ನಲ್ಲಿಯಿಂದ ಎರಡು ಲೋಟ ನೀರು ತುಂಬಿ, ಸ್ಟವ್ ಮೇಲಿರಿಸುತ್ತಾ.

"ಹೌ..ದು.. ನೀ..ನು.. ಏ..ನು... ಮಾ... ಡ್ತಾ... ಇ...ದ್ದೀ.. ಅಂ... ತ ...ನ.. ನ .. ಗೆ... ತಿ... ಳಿ... ದಿ... ಲ್ಲ" ಎಂದ ಅಮರ್ ಪ್ರತಿ ಅಕ್ಷರವನ್ನೂ ಒತ್ತಿ ಒತ್ತಿ ಹೇಳಿ.

ಕುದಿಯಲಾರಂಭಿಸಿದ್ದ ನೀರನ್ನೇ ನೋಡುತ್ತಾ "ಒಂದು ವಿಪತ್ತು ಎದುರಾಗ್ತಾ ಇದೆ" ಎಂದ ಫಜಲ್.

"ವಿಪತ್ತಾ? ಏನಾಯ್ತು? ಯಾರಿಂದ ವಿಪತ್ತು?" ಆತಂಕದಿಂದ ಹತ್ತಿರ ಬಂದು, ಅವನ ಭುಜಗಳನ್ನು ಹಿಡಿದು ತನ್ನೆಡೆಗೆ ತಿರುಗಿಸಿಕೊಂಡು...

"ಹೇ ಚಿಯರ್ ಅಪ್! ಅಂತದ್ದೇನೂ ಆಗಿಲ್ಲ" ಎಂದ ಅಮರ್‌ನನ್ನು ದೂರ ತಳ್ಳಿ ಬಾಟಲ್‌ನಿಂದ ಚಹಾ ಪುಡಿ ತೆಗೆದು ಎರಡು ಚಮಚೆ ಪುಡಿಯನ್ನು ಪಾತ್ರೆಗೆ ಉದುರಿಸಿ... "ಇನ್ನೂ" ಎಂದು ಮುಗಿಸಿ ನಕ್ಕ.

"ಇನ್ನೂ? ಅಂದರೆ ಅಪಾಯ ಯಾವುದನ್ನೋ ಎಕ್ಸ್‌ಪೆಕ್ಟ್ ಮಾಡಿದ್ದೀ ಅನ್ನು?" ಚಿಂತೆಯಿಂದ ಅಂದ ಅಮರ್.

"ಅಫ್ ಕೋರ್ಸ್! ನನಗೀಗ ಪಾಲ್‌ನ ಬಗ್ಗೆ ಚಿಂತೆ ಉಂಟಾಗಿದೆ. ಅದೆಷ್ಟು ಚೆನ್ನಾಗಿದೆ ಅಲ್ವಾ ಇವತ್ತಿನ ಅವನ ಆರ್ಟಿಕಲ್?" ಎಂದ ಫಜಲ್ ಹಾಲನ್ನು ಫಿಲ್ಟರ್ ಬಳಸಿ ಕುದಿಯುತ್ತಿದ್ದ ಚಹಾ ಪಾತ್ರೆಗೆ ಸುರಿಯುತ್ತಾ.

"ಹೌದು. ತುಂಬಾ ಒಳ್ಳೆಯ ಲೇಖನ. ಅವನ ಹೆಸರು ಉಲ್ಲೇಖ ಮಾಡಿರದಿದ್ದರೂ ಯಾರ ಬಗ್ಗೆ ಹೇಳ್ತಿದ್ದಾನೆ ಅಂತ ಚೆನ್ನಾಗಿ ತಿಳಿಯುತ್ತೆ" ಎಂದ ಅಮರೇಶ್ ಸಂತಸ ತುಂಬಿದ ಸ್ವರದಲ್ಲಿ. "ಫೋನ್ ಮಾಡ್ದೆ. ಸಿಗಲಿಲ್ಲ" ಎಂದೂ ಸೇರಿಸಿದ.

ಗೆಳೆಯನೊಬ್ಬನ ಉನ್ನತಿ ಇವರಿಬ್ಬರಲ್ಲಿಯೂ ಸಂತೋಷ ಉತ್ಪತ್ತಿ ಮಾಡಿತ್ತು.

"ತಡಿ ಪೇಜ್ ಮಾಡೋಣ" ಎಂದ ಫಜಲ್, ಎರಡು ಗಾಜಿನ ಲೋಟಾಗಳಿಗೆ ಚಹಾ ತುಂಬಿ, ನಂತರ ಸಕ್ಕರೆ ಕಪ್, ಎರಡು ಚಮಚೆ ತೆಗೆದುಕೊಂಡು ಹಾಲ್‌ನಲ್ಲಿದ್ದ ಟೀಪಾಯ್ ಮೇಲಿಟ್ಟ.

"ಟೀ ಈಸ್ ಗ್ರೇಟ್, ಆಸ್ ಯೂಷುವಲ್" ಎಂದ ಅಮರೇಶ್ ಟೀ ಸವಿ ನೋಡಿ.

"ಥ್ಯಾಂಕ್ಯೂ!" ಎಂದ ಫಜಲ್ ಫೋನೆತ್ತಿ ಪಾಲ್‌ಗೆ ಸಂದೇಶ ನೀಡಿ ಟೀ ಕುಡಿದು ಮುಗಿಸಿ ಬಹಳ ಹೊತ್ತಾದರೂ ಪಾಲ್‌ನಿಂದ ಉತ್ತರ ಬರಲಿಲ್ಲ.

"ಹೇಗಿದೆ ಸಂಸಾರ?"ಕೇಳಿದ ಫಜಲ್.

"ಸುನೀತಿ ನಿನ್ನನ್ನ ಕರಕೊಂಡು ಬಾ ಅಂದಿದ್ದಾಳೆ" ಎಂದು ಹೇಳಿ ಅಮರೇಶ್ ಹೊರಟ. ಹಠಾತ್ತನೆ ಏನೋ ನೆನೆಸಿಕೊಂಡವನಂತೆ "ಈಗಲೇ ಅಪಾಯ ಉಂಟಾಗಿಲ್ಲ ಅಂದೆ. ಆದರೆ ವಿವರ ಹೇಳ್ಳೇ ಇಲ್ಲ?" ಎಂದ ಆಕ್ಷೇಪಣಾ ಸ್ವರದಲ್ಲಿ.

"ನೀನು ಡೀಪಾಗಿ ರೀಸರ್ಚ್ ಮಾಡ್ತಿದ್ದೀಯಲ್ಲಾ ಅದರ ವಿವರ ಹೇಳು" ಎಂದ ಫಜಲ್.

"ಇನ್ನೂ ಸ್ವಲ್ಪ ಸಮಯದ ನಂತರ ನಾನೇ ಹೇಳ್ತೇನೆ" ಎಂದ ಅಮರೇಶ್.

"ಇನ್ನೂ ಸ್ವಲ್ಪ ಸಮಯದ ನಂತರ ನಾನೇ ಹೇಳ್ತೀನಿ" ಎಂದ ಫಜಲ್.

"ನನ್ನ ಮಾತು ನನಗೇ ತಿರುಗಿಸ್ತೀಯಾ?" ಕೇಳಿದ ಅಮರೇಶ್ ತನ್ನ ಬೈಕ್ ಹತ್ತಿ.

"ನಿನ್ನ ಗೆಳೆಯ ಅಲ್ವಾ?" ಎಂದ ಸವಾಲು ಹಾಕುವವನಂತೆ ಫಜಲ್.

ಅಮರೇಶ್ ಹೊರಟ.

ಅಂದೇ ಸಂಜೆ ಪ್ರೆಸ್‌ಕ್ಲಬ್‌ನಲ್ಲಿ ಮಿತ್ರಜೀತ್‌ನ ಭೇಟಿ ಆಗಿತ್ತು. ನಂತರ ಪಾಲ್‌ನ ಶವದರ್ಶನವಾಗಿತ್ತು ಸರ್ಕಾರೀ ಆಸ್ಪತ್ರೆಯಲ್ಲಿ. "ಇಂದು ಪಾಲ್ ... ನಾಳೆ ಯಾರು ಬಲಿ?" ಎಂದುಕೊಂಡರು ಫಜಲ್, ಅಮರೇಶ್.

ಫಜಲ್‌ಗಿಂತ ಅಮರೇಶ್ ತನ್ನ ಇನ್ವೆಸ್ಟಿಗೇಷನ್‌ನಲ್ಲಿ ಮುಂದಿದ್ದ. ರಾಜ್ಯದ ಕೆಲವು ಹಿಂದುಳಿದ ಹಳ್ಳಿಗಳ ಉದ್ಧಾರಕ್ಕೆ ಮೀಸಲಿಟ್ಟಿದ್ದ ಹಣ ಸ್ವಾಹಾ ಆಗುತ್ತಿದೆ ಎಂದು ಅಮರೇಶನಿಗೆ ತಿಳಿದು ಬಂದಿತ್ತು. ಅದರ ನೇಪಥ್ಯ ಅವನೆದೆಯಲ್ಲಿ ಮುಳ್ಳು ಚುಚ್ಚಿದಂತಾಗಿತ್ತು. ದೇಶದ ಜನರ ಹಣ ನುಂಗಲು ಇವರಿಗೇನು ಅಧಿಕಾರವಿದೆ? ಎಂದುಕೊಂಡಿದ್ದ ಉರಿಗೋಪದಿಂದ.

ಅವನಿಗೆ ಅಡ್ಡಗಾಲು ಹಾಕಲು ಈಗಾಗಲೇ ವ್ಯೂಹವೊಂದು ರಚಿಸಲ್ಪಟ್ಟಿತ್ತು!

# 13

ಪಾಲ್‌ನ ಕಥೆಗಳು! ರಾಜಕೀಯ (ಕು)ತಂತ್ರದ ವಿವರ ತುಂಬಿದ ವ್ಯಥೆಗಳು!

ಇವರೇನಾ ನಮ್ಮನ್ನು ಆಳುವವರು? ಇವರಿಗೇನಾ ನಾವು ಓಟು ಕೊಟ್ಟು ಸಿಂಹಾಸನದ ಮೇಲೆ ಕೂರಿಸುವುದು? ಜನರ ನಂಬಿಕೆಗಳನ್ನು ಬುಡಮೇಲು ಮಾಡಿಬಿಡುವರಲ್ಲಾ! ಛೇ!

ಪತ್ರಕರ್ತರು ತಮ್ಮ ಲೇಖನಿಯನ್ನು ಪ್ರಜೆಗಳಲ್ಲಿ ಪ್ರಜ್ಞೆಯನ್ನು ಜಾಗೃತಗೊಳಿಸಲು ಉಪಯೋಗಿಸಿದರೆ, ಅದರಲ್ಲಿನ ಶಾಯಿಯು ಪತ್ರಕರ್ತರ ರಕ್ತವೇ ಆಗಬಾರದಲ್ಲವೇ?

ಇಂದು ಪಾಲ್, ನಾಳೆ ನಾನು, ನಾಡಿದ್ದು ಮತ್ತೊಬ್ಬ... ಒಟ್ಟಿನಲ್ಲಿ ಪ್ರತಿ ಕುಟಿಲತೆ ಬಯಲಿಗೆ ಬಂದಾಗಲೂ ಒಂದೊಂದು ಬಲಿ ಆಗಲೇಬೇಕೇ? ಮಿತ್ರಜೀತ್‌ನ ಲಹರಿ ನಿಜಕ್ಕೂ ಆಲೋಚನಾಪ್ರಚೋದಕವಾಗಿದ್ದವು. ಸ್ವರೂಪ್ ಬಂದಾಗಲೇ ಅವನು ವರ್ತಮಾನಕ್ಕೆ ಹಿಂದಿರುಗಿದ್ದು.

“ಇವತ್ತಾದ್ರೂ ಹಸನ್ಮುಖಿ ಆಗಯ್ಯಾ ಮಿತ್ರಾ” ಎಂದ ಸ್ವರೂಪ್ ಹಾಸ್ಯವಾಗಿ.

“ಈವತ್ತಾ? ಇವತ್ತೇನು ವಿಶೇಷ? ಸೂರ್ಯ ಪೂರ್ವದ ಬದಲು ಪಶ್ಚಿಮದಲ್ಲಿ ಹುಟ್ಟಿದನೇನು?” ಕೇಳಿದ ಮಿತ್ರಜೀತ್.

“ಉಹೂ. ನಮ್ಮ ನಡುವಿನ ಸೂರ್ಯ ಇವತ್ತಿಗೆ ಸರಿಯಾಗಿ ಇಪ್ಪತ್ತೊಂಬತ್ತು ವರ್ಷಗಳ ಹಿಂದೆ ಹುಟ್ಟಿದ್ದ. ಜನ್ಮದಿನದ ಹಾರ್ದಿಕ ಶುಭಾಶಯ!” ಎಂದ ಸ್ವರೂಪ್ ತನ್ನ ಕೈ ಚಾಚಿ ಮಿತ್ರಜೀತ್‌ನ ಹಸ್ತವನ್ನು ಲಾಘಿಸಿ.

ಅವನನ್ನು ಎಳೆದು ತಬ್ಬಿಕೊಂಡ ಮಿತ್ರಜೀತ್. ಇವನೊಬ್ಬ ನನ್ನ ಜನ್ಮದಿನವನ್ನು ನೆನಪಿಟ್ಟುಕೊಂಡಿದ್ದಾನೆ!

“ಧನ್ಯವಾದಗಳು” ಎಂದ ಭಾವುಕನಾಗಿ.

“ಇದು ನಿನಗೆ ಕಾಣಿಕೆ” ಎಂದು ಜೇಬಿನಿಂದ ಪುಟ್ಟ ಡಬ್ಬಾವನ್ನು ಕಾಣಿಕೆಯಂತೆ ನೀಡಿದ. ಮಿತ್ರಜೀತ್ ಅದನ್ನು ಬಿಚ್ಚಿ, “ಮೊಬೈಲ್?” ಎಂದ ಸಂಭ್ರಮದಿಂದ.

"ಹೌದು ನಿನಗೇ. ನಂಬರ್ ನೆನಪಿಟ್ಕೋ." ಎಂದು ಆ ಮೊಬೈಲ್ ನಂಬರ್ ಹೇಳಿದ. ನಂತರ ಚಿಕ್ಕ ಪುಸ್ತಕ ನೀಡಿ, "ಇದು ಇನ್‌ಸ್ಟ್ರಕ್ಷನ್ ಮ್ಯಾನ್ಯುಯಲ್. ಓದಿ ಎಲ್ಲಾ ಫಂಕ್ಷನ್ಸ್ ಸೆಟ್ ಮಾಡಿಕೋ" ಎಂದ ಸ್ವರೂಪ.

"ಇದರ ಅಗತ್ಯವೇನಿತ್ತೋ ಸ್ವರೂಪಾ? ನಿನ್ನ ಶುಭಾಶಯವೇ ಸಾಕಿತ್ತು ನನಗೆ" ಎಂದ. ಅವನ ಕಣ್ಣಂಚಿನಲ್ಲಿ ನೀರು ತುಳುಕಿತ್ತು.

"ಹೇ ಬ್ರೇವ್ ಬಾಯ್! ನೀನಿಷ್ಟು ಸಾಫ್ಟ್ ಅಂದುಕೊಂಡಿರಲಿಲ್ಲ!" ಎಂದ ಸ್ವರೂಪ್, ಏನೋ ನೆನಪಾದವನಂತೆ "ನೆನ್ನೆ ಏನ್ಮಾಡ್ದೆ?" ಕೇಳಿ ನಂತರ, "ನನ್ನ ಸೀನಿಯರ್ಗೆ ಯಾವುದೋ ಕೇಸ್‌ಗೆ ಸಂಬಂಧಿಸಿದ ಪೇಪರ್ಗಳನ್ನು ಹುಡುಕೀ ಹುಡುಕೀ ಸುಸ್ತಾದೆ" ಎಂದ.

ಮಿತ್ರಜೀತ್ ಹೈಕೋರ್ಟ್‌ನಲ್ಲಿ ಸ್ವರೂಪನಿಂದ ಬೀಳ್ಕೊಂಡಾಗಿನಿಂದ ಇಲ್ಲಿಯವರೆಗಿನ ವಿವರಗಳನ್ನು ನೀಡಿದ. ಸ್ವರೂಪನ ಕಣ್ಣುಗಳು ಚಕಿತತೆಯಿಂದ ವಿಶಾಲವಾದವು.

"ಈಗೇನು ಮಾಡ್ಬೇಕೂಂತಿದ್ದೀ?" ಕೇಳಿದ ಸ್ವರೂಪ್.

"ಪ್ರೇಂನಾಥ್ ಮತ್ತೆ ಕಣ್ಣಿಗೆ ಬೀಳ್ತಾನಾ ನೋಡ್ಬೇಕು. ಅವನ ವೈರಿ ಸರ್ವೇಶ್ವರ್ ನಗರದಾಚೆಯ ಕಾಲೇಜಿನಲ್ಲಿ ಡ್ರಗ್ಸ್ ಸಪ್ಲೈ ಮಾಡೋವಾಗ ಹಿಡೀಬೇಕು. ಆಮೇಲೆ ಇನ್ನೊಂದು ಕೆಲಸಾನ ಗುಟ್ಟಾಗಿ ಮಾಡಬೇಕು" ಎಂದ ಮಿತ್ರಜೀತ್.

"ಏನದು ಗುಟ್ಟಿನ ಕೆಲಸ?" ಕುತೂಹಲಿಯಾದ ಸ್ವರೂಪ್.

"ಇಲ್ಲಿ ನೋಡು" ಎಂದು ಪಾಲ್‌ನ ಕಥೆಗಳ ಹಸ್ತಪ್ರತಿ ತೋರಿಸಿದ.

ಸ್ವರೂಪ್ ಅಲ್ಲಲ್ಲೇ ಕಣ್ಣಾಡಿಸಿ, "ವಾವ್! ಇಟ್ಸ್ ಎ ಗೋಲ್ಡ್ ಮೈನ್!" ಎಂದ ಆನಂದದಿಂದ.

"ಇದನ್ನ ಯಾರ ಬಳಿಯಾದರೂ ನೀಡಿ ಡಿ.ಟಿ.ಪಿ. ಮಾಡಿಸ್ಬೇಕು. ಆಮೇಲೆ ಒಂದೊಳ್ಳೇ ದಿನ ರಿಲೀಸ್ ಮಾಡ್ಬೇಕು ಈ ಬುಕ್‌ನ" ಎಂದ.

"ನನ್ನ ಫ್ರೆಂಡ್ ಒಬ್ಬ ಇದ್ದಾನೆ. ನಾನು ಕೊಡ್ತೀನಿ" ಎಂದ ಸ್ವರೂಪ್.

"ಗುಟ್ಟಾಗಿ ಮಾಡ್ತಾನೆ ತಾನೇ?" ಕೇಳಿದ ಮಿತ್ರಜೀತ್. "ಈಗಾಗ್ಲೇ ನನ್ನ ಹತ್ತಿರದಿಂದ ಮಾಯವಾಗಿ ಅತಿ ವಿಚಿತ್ರರೀತಿಯಲ್ಲಿ ನನ್ನ ಬಳಿಗೆ ವಾಪಸ್ಸು

ಬಂದಿದೆ” ಎಂದು ಸ್ವರೂಪನ ಕೈಗಿತ್ತ. ಸ್ವರೂಪ್ ಅದನ್ನು ತನ್ನ ಚರ್ಮದ ಚೀಲಕ್ಕೆ ಸೇರಿಸಿದ.

“ಈಗ ಕಾಲೇಜಿಗೆ ರಜ ಇಲ್ಲ ಅಲ್ವಾ?” ಕೇಳಿದ ಮಿತ್ರಜೀತ್.

“ಇಲ್ಲ ಯಾಕೆ?”

“ಫ್ರೀಯಾಗಿದ್ದೀಯಾ? ಸ್ವಲ್ಪ ಆ ಕಾಲೇಜಿನ ಹತ್ತಿರ ಹೋಗೋಣ”

“ಸರಿ ನಡಿ”

ಸ್ವರೂಪನ ಕಾರು ನಗರದ ಹೊರವಲಯ ಸೇರಿತು. ಕಾಲೇಜು ದೊಡ್ಡದೆಂದು ಅಲ್ಲಿದ್ದ ದೊಡ್ಡ ಕಟ್ಟಡ, ಅಲ್ಲಿ ಸೇರಿದ್ದ ದೊಡ್ಡ ವಿದ್ಯಾರ್ಥಿಗಳ ಗುಂಪು ತಿಳಿಸಿದ್ದವು. ಕಾರು ಪಾರ್ಕ್ ಮಾಡಿ ಗೇಟಿನೊಳಗೆ ಹೋದರು. ಅಲ್ಲಲ್ಲಿ ನಿಂತು ಹರಟುತ್ತಿದ್ದ, ನಗುತ್ತಿದ್ದ, ಪರಸ್ಪರ ರೇಗಿಸುತ್ತಿದ್ದ ವಿದ್ಯಾರ್ಥಿ, ವಿದ್ಯಾರ್ಥಿನಿಯರ ಗುಂಪುಗಳು.

“ಸರ್ವೇಶ್ವರ ನೋಡೋಕ್ಕೆ ಹೇಗಿದ್ದಾನೇಂತ ಗೊತ್ತಾ?” ಕೇಳಿದ ಸ್ವರೂಪ್. ತಿಳಿದಿಲ್ಲವೆಂಬಂತೆ ತುಟಿ ಉಬ್ಬಿಸಿದ ಮಿತ್ರಜೀತ್.

“ಮತ್ತೆ ಹೇಗೆ?” ಎಂದು ಸ್ವರೂಪ್ ಕೇಳುವ ವೇಳೆಗೆ ಕಾಲೇಜು ಆರಂಭವಾಯಿತೆಂಬ ಸಂಕೇತವಾಯಿತು.

ಅಲ್ಲಲ್ಲಿ ಚೆದುರಿ ನಿಂತಿದ್ದ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಸರಸರನೆ ಕಾಲೇಜು ಕಟ್ಟಡದ ಮುಖ್ಯ ದ್ವಾರ ತಲುಪಿ ಒಳಗೆ ಹೋದರು. ಯಾರೂ ಹೊರಗೆ ಕಾಣಿಸಲಿಲ್ಲ. ಕೇವಲ ಇಬ್ಬರು ಯುವಕರು ಮಾತ್ರ ಯಾರೋ ಒಬ್ಬನೊಂದಿಗೆ ಅವಸರವಸರವಾಗಿ ಏನನ್ನೋ ಪಡೆದು ಓಡಿದರು. ಆ ಮನುಷ್ಯ ಅತ್ತಿತ್ತ ನೋಡಿ ಸರಸರನೆ ಗೇಟಿನತ್ತ ನಡೆದ.

ಮಿತ್ರಜೀತ್‌ಗೆ ಅವನ ಮೇಲೆ ಸಂದೇಹವುಂಟಾಯಿತು. ಅವನನ್ನು ಹಿಂಬಾಲಿಸಿದ. ಸ್ವರೂಪ್ ಕೂಡಾ ಮಿತ್ರಜೀತ್‌ನೊಂದಿಗೇ ಹೆಜ್ಜೆ ಹಾಕಿದ. ಆ ಮನುಷ್ಯ ಸ್ವಲ್ಪ ದೂರ ನಡೆದು ಪಕ್ಕದ ರಸ್ತೆಗೆ ತಿರುಗಿ ಅಲ್ಲಿ ನಿಂತಿದ್ದ ಸ್ಯಾಂಟ್ರೋ ಕಾರು ಹತ್ತಿದ.

ಮಿತ್ರಜೀತ್ ಜಾಗೃತನಾದ. “ನೀನು ಕಾರು ತೊಗೊಂಡು ಫಾಲೋ ಮಾಡು. ಈಗ ಅವನು ಕೇವಲ ಎರಡೇ ದಾರಿ ತೊಗೋಬೇಕು. ಇಲ್ಲಾ ಊರೊಳಗೆ ಅಥವಾ

ಊರಾಚೆಗೆ ಹೋಗ್ತಾನೆ. ನಾನು ಆಟೋ ಹತ್ತುತ್ತೀನಿ" ಎಂದ ಸ್ವರೂಪ್‌ನೊಂದಿಗೆ, ಅಲ್ಲಿದ್ದ ಒಂದು ಆಟೋ ತೋರಿಸಿ. ಸ್ವರೂಪ್ ಓಡಿದ.

ಮಿತ್ರಜೀತ್ ಕುಳಿತ ಆಟೋ ಸ್ಯಾಂಟ್ರೋವನ್ನು ಬೆನ್ನಟ್ಟಿತು. ಸ್ಯಾಂಟ್ರೋ ಕಾರು ಆಟೋಗೆ ಸರಿಸಾಟಿಯೇ?

ಆದರೆ ಆಟೋ ಡ್ರೈವರ್‍ಗೆ ತನ್ನ ರೇರ್ ಇಂಜಿನ್ ಆಟೋ ಬಗ್ಗೆ ಮಹಾ ನಂಬಿಕೆ. ಹಿಂದೆಯೇ ಹೋದ.

ಕಾರು ಊರೊಳಗೆ ಹೋಗಿದ್ದು ನೋಡಿ ಮಿತ್ರಜೀತ್‌ಗೆ ನಿರಾಳವಾಗಿತ್ತು. ಊರೊಳಗೆ ಟ್ರಾಫಿಕ್ ಜ್ಯಾಮ್, ಟ್ರಾಫಿಕ್ ಸಿಗ್ನಲ್‌ಗಳು ಸರ್ವೇಸಾಮಾನ್ಯ. ಸರ್ವೇಶ್ವರ (ಅವನಿಗೆ ಅದೇಕೋ ಇವನೇ ಸರ್ವೇಶ್ವರ ಎನ್ನಿಸಿಬಿಟ್ಟಿತ್ತು!) ಹೇಗೂ ನಿಧಾನವಾಗಿಯೇ ಡ್ರೈವ್ ಮಾಡಬೇಕು! ಅವನ ಯೋಚಿಸಿದಂತೆಯೇ ಸರ್ವೇಶ್ವರ್ ನಿಧಾನವಾಗಿ ಹೋಗಹತ್ತಿದ. ಹಿಂದೆ ನೋಡಿದ.

ಸ್ವರೂಪನ ಕಾರು ಇವನ ಆಟೋದಿಂದ ಮೂರನೆಯದಾಗಿತ್ತು. ಆಟೋ ಡ್ರೈವರ್‍ಗೆ ಹಣ ನೀಡಿ ದೌಡಾಯಿಸಿದ. ಓಡಿ ಹೋಗಿ ಇವನು ಸ್ವರೂಪನ ಕಾರು ತಲುಪುವುದಕ್ಕೂ, ಸಿಗ್ನಲ್ ಹಸಿರು ಬಣ್ಣಕ್ಕೆ ತಿರುಗುವುದಕ್ಕೂ ಸರಿ ಹೋಗಿತ್ತು. ಸ್ಯಾಂಟ್ರೋವನ್ನು ಬೆನ್ನಟ್ಟಿದರು.

ಕಾರು ನಿಧಾನವಾಗಿ ಒಂದು ಬಡಾವಣೆ ತಲುಪಿ ಮನೆಯೊಂದರ ಮುಂದೆ ನಿಂತಿತು.

"ಉಮಾಶಂಕರ್‍ಗೆ ಫೋನ್ ಮಾಡು" ಎಂದ ಸ್ವರೂಪ್. ಮಿತ್ರಜೀತ್ ತನ್ನ ಮೊಬೈಲ್‌ನಿಂದ ಪ್ರಥಮ ಕರೆ ಮಾಡಿದ.

"ಹಲೋ ಉಮಾಶಂಕರ್!" ಎಂದ. ಥ್ಯಾಂಕ್ ಗಾಡ್! ಸಿಕ್ಕಿದ್ನಲ್ಲಾ...

"ಏನು ಮಿತ್ರಜೀತ್!" ಕೇಳಿದ ಉಮಾಶಂಕರ್. ಅವನಿಗೇನೋ ಆನಂದ. ಮಿತ್ರಜೀತ್ ತನ್ನ ಮೇಲೆ ಸಿಟ್ಟಾಗಿಲ್ಲ.

ಕೆಲಸ ಬೇರೆ, ಮೈತ್ರಿ ಬೇರೆ. ಆದರೆ ಕೆಲಸದಿಂದಾಗಿ ಮೈತ್ರಿಗೆ ಕುತ್ತು ಬರುವುದು ಬಹಳ ಜನಕ್ಕೆ ಹಿಡಿಸುವುದಿಲ್ಲ. ಉಮಾಶಂಕರ್ ಆ ಬಹಳ ಜನರಲ್ಲೊಬ್ಬ. ಯಾವುದೋ ದೊಡ್ಡ ಜಾಲದಲ್ಲಿ ಸಿಕ್ಕಿಕೊಂಡಿರುವಾಗ ಆ ರೀತಿ ವರ್ತಿಸಿದ್ದ. ಈಗ ಮಿತ್ರಜೀತ್‌ಗೆ ಏನಾದರೂ ಸಹಾಯ ಬೇಕಾದರೆ ಮಾಡಬೇಕು ಎಂದು

ನಿರ್ಧರಿಸಿಕೊಂಡ. ಮಿತ್ರಜೀತ್ ಹೇಳಿದ್ದು ಕೇಳಿ ಅವನಲ್ಲಿ ಅಲರ್ಟ್‌ನೆಸ್ ಬಂದಿತು. ತಕ್ಷಣವೇ ಬರಲೊಪ್ಪಿಕೊಂಡ.

ಮಿತ್ರಜೀತ್, ಸ್ವರೂಪ್ ಸ್ಯಾಂಟ್ರೋದಿಂದ ಆ ಚಾಲಕ ಇಳಿದು ಹೋದ ಮನೆಯ ಮೇಲೆ ಕಣ್ಣಿಟ್ಟಿದ್ದರು. ಮಿತ್ರಜೀತ್‌ಗೆ ಕುತೂಹಲ ಏರಿತು.

ಸ್ವರೂಪ್‌ಗೆ "ಇಲ್ಲೇ ಇದ್ದು ಉಮಾಶಂಕರ್‌ಗೆ ಸಂಕೇತ ಕೊಡು. ನಾನು ಸ್ವಲ್ಪ ಬರ್ತೀನಿ" ಎಂದು ಹೇಳಿ ಆ ಮನೆಯ ಕಾಂಪೌಂಡು ಹಾರಿ ಮನೆಯ ಆವರಣಕ್ಕೆ ಬಂದ. ತೆರೆದ ಕಿಟಕಿಯ ಬಳಿ ಮರೆಯಾಗಿ ನಿಂತು ಒಳಗಿನ ಮಾತುಗಳನ್ನು ಆಲಿಸತೊಡಗಿದ.

"ನೀನು ಏನು ಹೇಳಿದ್ರೂ ನಾನು ನಂಬೋಲ್ಲ ಸರ್ವೇಶ್ವರ್!" ಎಂದಿತ್ತು ಸ್ತ್ರೀಕಂಠವೊಂದು. ಓ! ಇವನೇ ಸರ್ವೇಶ್ವರ್!

"ನಿನಗೆ ನಂಬಿಕೆ ಬರೋಕ್ಕೆ ಏನ್ಮಾಡ್ಲೀ ನಿರೋಷಾ? ಯಾವ್ದಾದ್ರೂ ಫೋಟೋಗ್ರಾಫಿಕ್ ಪುರಾವೆ ತರಬೇಕಷ್ಟೇ" ಎಂದ ಸರ್ವೇಶ್ವರ್.

ಇವಳೇನಾ ಪ್ರೇಂನಾಥ್ ಹೇಳಿದ್ದ ಅವನ ಗೆಳತಿ? ಇರಬಹುದೇನೋ!

"ನೋಡು ಸರ್ವೇಶ್ವರ! ನನಗೆ ಪ್ರೇಂನಾಥ್ ಮೇಲೆ ನಂಬಿಕೆ. ಯಾಕೇಂದ್ರೆ ಅವನು ನನ್ನ ಮಾತು ಕೇಳ್ತಿದ್ದಾನೆ" ಎಂದಳು ನಿರೋಷಾ.

"ನಾನೂ ಕೇಳ್ತಿದ್ದೀನಿ ಅಂದರೆ ನೀನು ನಂಬೋಲ್ಲವಲ್ಲ" ಎಂದ ಸರ್ವೇಶ್ವರ್. ಬೇಸರವಿತ್ತು ಅವನ ಸ್ವರದಲ್ಲಿ.

"ಅವನು ನನ್ನ ಮಾತನ್ನು ಕೇಳಿ ಹಳೇ ಕೆಲಸಕ್ಕೆ ನಮಸ್ಕಾರ ಹಾಕಿ ಹೊಸ ಕೆಲಸ ಮಾಡ್ತಾನೇಂತ ನಿನಗ್ಗೊತ್ತಾ?"

"ಗೊತ್ತು. ಅದಕ್ಕೇ ಅವನಿಗೆ ತಕ್ಕ ಶಾಸ್ತಿ ಆಗಿದೆ!" ಎಂದ ಸರ್ವೇಶ್ವರ್.

"ನೀನೇನ್ಮಾಡ್ದೆ?" ಚೀರಿದ್ದಳು ನಿರೋಷಾ.

"ನಾನೂ ಒಳ್ಳೇ ಕೆಲಸ ಮಾಡ್ತೀನಿ ಅಂದ್ರೆ ನೀನು ನಂಬಬೇಕು ನಿರೋಷಾ" ಎಂದ ಗದರಿ.

"ಏನೂ? ರೋಫ್ ಹಾಕ್ಬೇಡಾಂತ ನಿನಗೆ ಹೇಳಿಲ್ವಾ? ಏನಂದೆ ನೀನು? ಒಳ್ಳೆ ಕೆಲಸಾನಾ? ನೀನು ಮಾಡ್ತೀಯಾ? ನಿನ್ನ ಬುದ್ದಿ ಏನೂಂತ, ನಿನ್ನ 'ಕೆಲಸ'

ಏನೂಂತ ನಂಗೆ ಪ್ರೇಂ ಹೇಳಿದ್ದಾನೆ..." ಎಂದವಳು ನಂತರ ಇದ್ದಕ್ಕಿದ್ದಂತೆ "ಎಲ್ಲಿ, ನಿನ್ನ ಜೇಬು ತೋರಿಸು" ಎಂದಳು.

"ಜೇಬು ಯಾಕೆ? ನನ್ನ ಹೃದಯಾನೇ ತೋರಿಸ್ತೀನಿ" ಎಂದು ಗಹಗಹಿಸಿದ ಸರ್ವೇಶ್ವರ್.

ನಿರೋಷಾ ಚೀರಿದ ಸದ್ದು ಕೇಳಿಸಿತ್ತು.

ಅಷ್ಟರಲ್ಲಿ ದಢಾರನೆ ಬಾಗಿಲು ತೆರೆದುಕೊಂಡ ಸದ್ದು!

"ಆಕೆ ಹೇಳಿದ್ರುಲ್ಲಾ... ಜೇಬು ತೋರಿಸು!" ಗಟ್ಟಿಯಾದ ಪುರುಷಸ್ವರ ಕೇಳಿತ್ತು.

"ಓ ಉಮಾಶಂಕರ್! " ಎಂದು ಉದ್ಗರಿಸಿ ಮನೆಯನ್ನು ಬಳಸಿ ಮುಂಬಾಗಿಲಿಗೆ ಓಡಿದ ಮಿತ್ರಜೀತ್.

"ನೀನಾ? ನೀನಿಲ್ಲಿರೋ ವಿಷ್ಯ ಈಗಾಗ್ಲೇ ತಿಳಿದಿರಬೇಕು. ಇಲ್ದಿದ್ರೂ ನಾನೇ ತಿಳಿಸ್ತೀನಿ" ಎಂದ ಸರ್ವೇಶ್ವರ್ ಸ್ವಲ್ಪವೂ ಹೆದರಿಕೆ ಇಲ್ಲದೇ.

ಅಬ್ಬಾ! ಉಮಾಶಂಕರ್ ನನಗೆ ಸಹಾಯ ಮಾಡಲು ಹಿಂದೇಟು ಹಾಕಿದ್ದರಲ್ಲಿ ಆಶ್ಚರ್ಯವೇನಿಲ್ಲ. ಇವರುಗಳು ಯಾವುದಕ್ಕೂ ಹೇಸದ ಜನ. ಪ್ರಜೆಗಳ ಅಭಿವೃದ್ಧಿ ಕಾರ್ಯದಲ್ಲಿ ಹಸ್ತಕ್ಷೇಪ ಮಾಡುವುದರಲ್ಲಿ 'ಸಾಧನೆ' ಮಾಡಿದ್ದಾರೆ ಎಂದುಕೊಂಡ ಮಿತ್ರಜೀತ್.

ಸರ್ವೇಶ್ವರ್ ತನ್ನ ಮೊಬೈಲ್ ಸರಕ್ಕನೆ ಎತ್ತಿಕೊಂಡ. ಅವನು ಡಯಲ್ ಮಾಡುವಷ್ಟರಲ್ಲಿ ಉಮಾಶಂಕರ್ ಮಿಂಚಿನಂತೆ ಅವನನ್ನು ಒದ್ದು ಕೆಳಗುರುಳಿಸಿದ.

ಆಗ ಉದುರಿದ್ದವು ಚಿಕ್ಕಚಿಕ್ಕ ಬಿಳಿಯ ಪುಡಿ ತುಂಬಿದ್ದ ಪ್ಲಾಸ್ಟಿಕ್ ಪೊಟ್ಟಣಗಳು! ಉಮಾಶಂಕರ್ ಅವನನ್ನು ಹೆಡೆಮುರಿ ಕಟ್ಟಿದ. ಬೊಂಬೆಯಂತೆ ನಿಂತಿದ್ದ ನಿರೋಷಾ ವೇಗವಾಗಿ ಕಾರ್ಯಸನ್ನದ್ಧಳಾಗಿ ಒಳಗೋಡಿ ಹಗ್ಗವೊಂದನ್ನು ತಂದಳು. ಸ್ವರೂಪ್‌ನ ಸಹಾಯದಿಂದ ಉಮಾಶಂಕರ್ ಸರ್ವೇಶ್ವರನನ್ನು ಕಟ್ಟಿ ಹಾಕಿದ. ಸರ್ವೇಶ್ವರ್ ಚೀರಲು ಬಾಯ್ತೆರೆಯುತ್ತಿದ್ದಂತೆ ನಿರೋಷಾ ಬಟ್ಟೆಯೊಂದನ್ನು ಅವನ ಬಾಯಿಗೆ ತುರುಕಿದಳು. ಮಿತ್ರಜೀತ್ ಅವಳತ್ತ ಮೆಚ್ಚುಗೆಯಿಂದ ನೋಡಿದ. ನಿರೋಷಾ ನಾಚುತ್ತಾ ನಿಂತಳು.

ಎಲ್ಲವೂ ಕೆಲವೇ ನಿಮಿಷಗಳಲ್ಲಿ ನಡೆದುಹೋಗಿತ್ತು.

"ಉಮಾಶಂಕರ್!" ಅವನನ್ನು ಪಕ್ಕಕ್ಕೆ ಕರೆದ ಮಿತ್ರಜೀತ್.

"ಇವನನ್ನು ಸ್ಟೇಷನ್ನಿಗೆ ಕರೆದೊಯ್ದು ಕೆಲವೇ ನಿಮಿಷಗಳಲ್ಲಿ ಹೊರಗೆ ಹೋಗ್ತಾನೆ. ಆದ್ದರಿಂದ..." ಎಂದು ಏನೋ ಪಿಸುಗುಟ್ಟಿದ ಮಿತ್ರಜೀತ್. ಸಂಸಾರವಂದಿಗನಾಗಿದ್ದ ಉಮಾಶಂಕರ್ಗೆ ಅವನ ಸರ್ಕಾರೀ ಕೆಲಸ ಮುಖ್ಯವಾಗಿತ್ತು.

"ನಿರೋಷಾ!" ಎಂದ ಮಿತ್ರಜೀತ್. ಅವನತ್ತ ನೋಡಿದಳು ನಿರೋಷಾ.

"ಪ್ರೇಂನಾಥ್ ಎಲ್ಲಿ?" ಕೇಳಿದ. ನಿರೋಷಾ ಕುಸುಕುಸು ಅಳಲಾರಂಭಿಸಿದಳು.

"ಯಾಕೆ ಆ ಅಳು?" ಕೇಳಿದ ಉಮಾಶಂಕರ್.

"ಪ್ರೇಂ ಬಂದೇ ಇಲ್ಲ. ಇವನಿಗೆ ಪ್ರೇಂ ಕಂಡರಾಗುತ್ತಿರಲಿಲ್ಲ. ಇವನೇ ಅವನನ್ನ ಏನಾದರೂ ಮಾಡಿರಬೇಕು" ದೂರಿದಳು. "ಯಾಕೇಂದ್ರೆ ನೀವು ಬರೋಕ್ಕೆ ಮುಂಚೆ ಪ್ರೇಂಗೆ ತಕ್ಕ ಶಾಸ್ತಿ ಆಗಿದೆ ಅಂದ ಇವನು" ಎಂದಳು.

"ಎಲ್ಲಿ ಪ್ರೇಂ ಮನೆ?" ಕೇಳಿದ ಮಿತ್ರಜೀತ್. ವಿಳಾಸ ಹೇಳಿದಳು ನಿರೋಷಾ.

"ಸ್ವರೂಪ್! ನೀನು ಸರ್ವೇಶ್ವರ್ನ ಕರಕೊಂಡು ಹೋಗು. ನಾನು ಉಮಾಶಂಕರ್ ಜೊತೆ ಪ್ರೇಂ ಮನೆಗೆ ಹೋಗಿ ಬರ್ತೀನಿ. ... ಅಂದ ಹಾಗೆ ನಿರೋಷಾ... ಪ್ರೇಂನಾಥ್ ಬಳಿ ಫೋನಿಲ್ವಾ?" ಕೇಳಿದ ಮಿತ್ರಜೀತ್.

"ಇದೆ. ಆದರೆ ಯಾಕೋ ಫೋನೆತ್ತುತ್ತಿಲ್ಲ. ನಾನೇ ಹೊರಡ್ತಿದ್ದೆ. ಅಷ್ಟರಲ್ಲಿ ಇವನು ಬಂದ" ಎಂದಳು.

ಸರ್ವೇಶ್ವರ್ ಒದ್ದಾಡುತ್ತಿದ್ದರೂ ಅವನನ್ನು ಕಾರಿನೊಳಕ್ಕೆ ನೂಕಿದ್ದರು ಮೂವರೂ. ಆ ಬಡಾವಣೆಯಲ್ಲಿ ಜನಸಂಚಾರ ಕಡಿಮೆ ಇತ್ತು. ಇವರು ಮಾಡಿದ ಬಂಧನದ ವಿಷಯ ಯಾರಿಗೂ ತಿಳಿಯಲಿಲ್ಲ.

ಕಾರಿನಲ್ಲಿ ಸರ್ವೇಶ್ವರ್ ಸೆಣಸಾಡಲಾಂಭಿಸಿದಾಗ ಜೇಬಿನಿಂದ ಮುಕ್ಕಾಲಡಿ ಉದ್ದದ, ಆರಿಂಚು ವ್ಯಾಸದ ಮರಳು ತುಂಬಿದ ಚೀಲದಿಂದ ಸರ್ವೇಶ್ವರ್ನ ತಲೆಯ ಹಿಂಭಾಗಕ್ಕೆ ಉಮಾಶಂಕರ್ ಬಾರಿಸಿದ. ಸರ್ವೇಶ್ವರ್ ನಿಶ್ಚೇಷ್ಟಿತನಾದ.

"ನೀವಿಲ್ಲಿರೋದು ಕ್ಷೇಮವಲ್ಲ. ನಿಮಗೆ ಯಾವುದಾದರೂ ಸುರಕ್ಷಿತ ಜಾಗ ಇದೆಯೇ?" ಕೇಳಿದ ಉಮಾಶಂಕರ್ ನಿರೋಷಾಳನ್ನು.

"ನನ್ನ ಕಜಿನ್ ಇಲ್ಲಿಂದ ಇಪ್ಪತ್ತು ಕಿ.ಮೀ. ದೂರದಲ್ಲಿರೋ ಏರಿಯಾಗೆ ಹೊಸದಾಗಿ ಬಂದಿದ್ದಾಳೆ. ಇವತ್ತೇ ಫೋನ್ ಮಾಡಿದ್ಲು. ಅಲ್ಲಿರ್ತೀನಿ. ಇದು ಅಡ್ರೆಸ್" ಎಂದು ಹೇಳಿ ಚೀಟಿ ಬರೆದು, "ಫೋನ್ ನಂಬರ್ರೂ ಇದೆ. ಪ್ರೇಂಗೆ ಅಲ್ಲಿಗೇ ಫೋನ್ ಮಾಡಿ ಬರೋಕ್ಕೆ ಹೇಳಿ" ಎಂದಳು ನಿರೋಷಾ.

ಅವಳು ಹೊರಟ ಮೇಲೆ, ಸ್ವರೂಪ್ ಸರ್ವೇಶ್ವರ್ ನಿರ್ಗಮಿಸಿದ ಮೇಲೆ ಮಿತ್ರಜೀತ್, ಉಮಾಶಂಕರ್ ಪ್ರೇಂನ ವಿಳಾಸ ಪತ್ತೆ ಹಚ್ಚಲು ಹೊರಟರು. ಸಾಕಷ್ಟು ದೂರದಲ್ಲಿತ್ತು ಅವನ ವಿಳಾಸ. ಬರಬರುತ್ತಾ ಮನೆಗಳು ಕಡಿಮೆ ಆದವು. "ಇಲ್ಲಿ ಯಾರನ್ನಾದರೂ ಕೊಲೆ ಮಾಡಿ ಬಿಸಾಡಿದರೂ ತಿಳಿಯೋಲ್ಲ" ಎಂದ ಉಮಾಶಂಕರ್.

ಪ್ರೇಂನ ಮನೆ ಒಂದು ಅಂಚಿನಲ್ಲಿತ್ತು. "ಊರಿನ ಕೊನೇ ಮನೆ ಇದೇ ಇರಬೇಕು" ಎಂದು ಮಿತ್ರಜೀತ್ ನಕ್ಕ. ಆದರೆ ಆ ನಗೆ ಆ ಮನೆಯ ಬಾಗಿಲಿಗೆ ಹೋಗುತ್ತಿದ್ದಂತೆ ಮಾಯವಾಗಿ ಆತಂಕ ಕಾಣಿಸಿಕೊಂಡಿತು.

ಬಾಗಿಲು ತಾನಾಗಿಯೇ ತೆರೆದುಕೊಂಡಿತ್ತು. ಉಮಾಶಂಕರ್ "ಪ್ರೇಂನಾಥ್!" ಎಂದು ಕೂಗುತ್ತಾ ಒಳನಡೆದ.

ಮಿತ್ರಜೀತ್ ಸುತ್ತಲೂ ನೋಡುತ್ತಾ ಉಮಾಶಂಕರ್ನನ್ನು ಹಿಂಬಾಲಿಸಿದ. ಮನೆಯೆಲ್ಲಾ ಹುಡುಕಿ ಬಾತ್‌ರೂಮಿಗೆ ಬಂದವನು ತಟಕ್ಕನೆ ನಿಂತ ಉಮಾಶಂಕರ್.

ಅಲ್ಲಿ ಮುಖವಡಿಯಾಗಿ ಬಿದ್ದಿತ್ತೊಂದು ಶವ! ಗಂಡಸಿನ ಹೆಣ. ಉಮಾಶಂಕರ್ ಹೆಣವನ್ನು ತಿರುಗಿಸಿದೊಡನೆ ಮಿತ್ರಜೀತ್ ಅವಾಕ್ಕಾದ.

ಮುಖದಲ್ಲಿ ಗಾಬರಿಯ ನೋಟ, ಕಣ್ಣಿನ ನೀಲಿ ಬಣ್ಣ, ಬಲಗಣ್ಣಿನಡಿಯ ಮಚ್ಚೆ, ಕೈಲಿದ್ದ ತಾಮ್ರದ ಬಳೆ ಸಾರಿಸಾರಿ ಹೇಳಿದ್ದವು. ಪ್ರೇಂನಾಥ್ ಸತ್ತುಹೋಗಿದ್ದಾನೆ!

# 14

“ಯಾರೋ ತಿಳಿದವರು ತೀರಾ ಹತ್ತಿರಕ್ಕೆ ಬಂದು ತಲೆಯ ಹಿಂಭಾಗಕ್ಕೆ ಬಾರಿಸಿದ್ದಾರೆ. ಅವನ ಮುಖದಲ್ಲಿ ಗಾಬರಿ, ಆಶ್ಚರ್ಯ ಎರಡೂ ಇದ್ದವು” ಎಂದ ಉಮಾಶಂಕರ್.

ಅವರು ಪ್ರೇಂನಾಥ್ ಮನೆಯ ಬಳಿಯಿದ್ದ ಹೊಟೇಲ್‌ನಲ್ಲಿ ಕುಳಿತಿದ್ದರು. ಇಬ್ಬರಿಗೂ ಸ್ಟ್ರಾಂಗ್ ಕಾಫಿಯ ಆವಶ್ಯಕತೆ ಉಂಟಾಗಿತ್ತು. ಪೊಲೀಸರು, ವೈದ್ಯ, ಛಾಯಾಗ್ರಾಹಕ ಅವರವರ ಕೆಲಸ ಮಾಡುತ್ತಿದ್ದರು.

“ಅಂತೂ ತಾನು ಹೇಳಿದ ಹಾಗೇ ಸರ್ವೇಶ್ವರ್ ಪ್ರೇಂಗೆ ಶಾಸ್ತಿ ಮಾಡಿಸಿದ್ದಾನೆ” ಎಂದ ಉಮಾಶಂಕರ್.

ಮಿತ್ರಜೀತ್ ಯೋಚಿಸುತ್ತಿದ್ದ. ತನ್ನನ್ನು ಭೇಟಿ ಆದ ವಿಷಯವೋ, ಪಾಲ್‌ನ ಹಸ್ತಪ್ರತಿ ಕಳೆದುಹೋದ ವಿಷಯವೋ ತಿಳಿದು ಅವನಿದ್ದ ಗ್ಯಾಂಗ್ ಲೀಡರ್ ಈ ಕೆಲಸ ಮಾಡಿಸಿರಬಾರದೇಕೆ?

“ನೀನು ಸರ್ವೇಶ್ವರನನ್ನು ಭೇಟಿ ಆಗು. ವಿಷ್ಯ ಏನೂಂತ ತಿಳಿಯೋಕ್ಕೆ ಪ್ರಯತ್ನಿಸು. ನಾನೂ ಎಚ್ಚರಿಕೆಯಿಂದ ಬರ್ತೀನಿ” ಎಂದ ಉಮಾಶಂಕರ್.

ಅಯ್ಯೋ ಬಡಪಾಯಿ! ಎಂದುಕೊಂಡ ಮಿತ್ರಜೀತ್. ಕೆಲಸದ ಒತ್ತಡ, ಸುತ್ತಮುತ್ತಲಿನ ಬೇಹುಗಾರರು, ಭೂಗತ ಪ್ರಪಂಚ-ಪೊಲೀಸರ ಅಪವಿತ್ರ ಮೈತ್ರಿ – ಎಂತಹ ದುಃಸ್ಥಿತಿ ಉಂಟುಮಾಡಿವೆ!

ಸ್ವರೂಪ್‌ಗೆ ಫೋನ್ ಮಾಡಿ ಅವನಿದ್ದ ಮನೆಯ ವಿಳಾಸ ಪಡೆದ. ಸ್ವರೂಪನ ಫಾರಂಹೌಸ್ ಅದು. ಅದರಿರವಿನ ಬಗ್ಗೆ ಯಾರಿಗೂ ತಿಳಿಯದೆಂದೇ ಹೇಳಬೇಕು. ಅದರ ಉಪಯೋಗ ಈಗ ಪಡೆದಿದ್ದ ಸ್ವರೂಪ್.

ಮಿತ್ರಜೀತ್‌ಗೆ ತಿಳಿದಿದೆ – ತಾನಾಗಲೀ, ಸ್ವರೂಪ್ ಆಗಲೀ ಪತ್ತೇದಾರರಲ್ಲ – ಈ ವಿಷಯದಲ್ಲಿ ಹಸ್ತಕ್ಷೇಪ ಮಾಡುವುದು ಎಷ್ಟು ಸರಿ? ಎಂದು ಕೂಡಾ ಆಲೋಚಿಸಿದ್ದ. ಆದರೆ ಪಾಲ್ ತನ್ನ ಮಿತ್ರ. ಲೊರೆಟ್ಟಾ ಪಾಲ್‌ನ ಗೆಳತಿ. ಸಿಲ್ವೆಸ್ಟರ್ ಲೊರೆಟ್ಟಾಳ ಪತಿ. ಇವರಲ್ಲಿ ಪಾಲ್ ನಿರ್ಜೀವವಾಗಿದ್ದಾನೆ. ಸಿಲ್ವೆಸ್ಟರ್ ಪೊಲೀಸರ ಅತಿಥಿ. ಉಳಿದವಳು ಲೊರೆಟ್ಟಾ- ಕಾಣೆಯಾಗಿದ್ದಾಳೆ.

ಅವಳನ್ನು ತಾನು ನೋಡಿದ್ದು ಸ್ವಲ್ಪವೇ ಸಮಯವಾದರೂ ಮನಸ್ಸಿಗೆ ಒಂದು ರೀತಿ ಇಷ್ಟವಾಗಿದ್ದಾಳೆ. ಈ ಎಲ್ಲಾ ಕಾರಣ ಯೋಚಿಸಿದಾಗ ತಾನು ಹೇಗಾದರೂ ಲೊರೆಟ್ಟಾಳನ್ನು ಪತ್ತೆ ಹಚ್ಚಬೇಕೆಂಬ ಇರಾದೆ ಬಲವಾಗುತ್ತಿದೆ. ಪತ್ತೇದಾರ ತಾನೇಕಾಗಬಾರದು? ಕನಿಷ್ಠಪಕ್ಷ ಈ ಒಂದು ಕೇಸ್‌ಗೆ?

ಈ ಆಲೋಚನೆ ಬಂದೊಡನೆ ಕಾರ್ಯಮಗ್ನನಾಗಿ ಮುಂದಿನ ಹೆಜ್ಜೆ ಏನೆಂದು ಆಲೋಚಿಸಿದ.

ನಿರೋಷಾಳನ್ನು ಭೇಟಿಯಾಗಲೇ ಎಂದುಕೊಂಡ. ನಂತರ ಅನ್ನಿಸಿತು – ಅದಕ್ಕೆ ಉಮಾಶಂಕರ್ ಇದ್ದಾನೆ. ತನ್ನ ಮುಖ್ಯ ಗುರಿ ಸರ್ವೇಶ್ವರ್. ಏನಾದರೂ ಬಾಯ್ಬಿಡುವನೇ?

ಅವನು ಹೇಳಿದಂತೆಯೇ ಪ್ರೇಂನಾಥ್‌ಗೆ ಶಾಸ್ತಿ ಆಗಿತ್ತು.

ಆಗ ಮಿತ್ರಜೀತ್‌ನ ನೆನಪು ಪ್ರೇಂನಾಥ್ ಹೇಳಿದ್ದ ಸುಳಿವಿನತ್ತ ಹೊರಳಿತ್ತು.

ಏನಂದಿದ್ದ ಅವನು? ಮನೆ – ದಕ್ಷತೆ- ಮಗಳು.

ಏನಿರಬಹುದು ಇದರರ್ಥ? ಪ್ರೇಂನಾಥ್ ಏಕೆ ನೇರವಾಗಿ ಹೇಳಲಿಲ್ಲ? ಹೇಳಿದ್ದರೆ ಕೆಲಸ ಸುಲಭವಾಗುತ್ತಿತ್ತು.

ಏನು ಹೇಳಲೆತ್ನಿಸಿದ್ದ ಅವನು?

ಮನೆ...? ದಕ್ಷತೆ...? ಮಗಳು...?

ತನ್ನನ್ನು ತಾನು ಮಹಾಬುದ್ಧಿವಂತನೆಂದುಕೊಂಡಿದ್ದಾನೆಂದು ತೋರುತ್ತದೆ ಆ ಪ್ರೇಂನಾಥ್. ಅದಕ್ಕೇ ಒಗಟಿನಲ್ಲಿ ಕ್ಲೂ ನೀಡಿ ಇಂದು ಪ್ರಾಣ ಕಳೆದುಕೊಂಡಿದ್ದಾನೆ. ಅವನಿಂದ ಇನ್ನು ಯಾವ ಸಹಾಯವೂ ಸಿಗದು. ಈಗ ಒಗಟು ಒಡೆದರೆ ಏನಾದರೂ ಉಪಯೋಗವಾದೀತು.

ಸ್ವರೂಪ್‌ಗೆ ಫೋನ್ ಮಾಡಿದ.

“ನಿನ್ನ ಗಿರಾಕಿ ಇನ್ನೂ ಎದ್ದಿಲ್ಲ. ಹೆಣದಂತೆ ಬಿದ್ದುಕೊಂಡಿದ್ದಾನೆ” ಎಂದ ಸ್ವರೂಪ್.

“ಉಮಾಶಂಕರನ ಮರಳಿನ ಚೀಲದ ಏಟು ಸಕತ್ತಾಗಿಯೇ ಬಿದ್ದಿದೆ ಹಾಗಾದ್ರೆ” ಎಂದು ನಕ್ಕ ಮಿತ್ರಜೀತ್, ಫೋನ್ ಡಿಸ್ಕನೆಕ್ಟ್ ಮಾಡಿದ.

ನಂತರ ಬೈಕ್ ಹತ್ತಿ ಸ್ವರೂಪ್‌ನ ಫಾರಂ ಹೌಸ್‌ನತ್ತ ಹೊರಟ.

"ಸ್ವಲ್ಪ ನಿಲ್ಲಿ" ಎಂದ ನಡುರಸ್ತೆಯಲ್ಲಿ ಟ್ರಾಫಿಕ್ ಪೊಲೀಸ್.

"ಏನು ವಿಶೇಷ?" ಯಾರೋ ಕೇಳಿದರು.

"ಇನ್‌ಫರ್ಮೇಷನ್ ಮಿನಿಸ್ಟ್ರು ಈಗ ಈ ಕಡೆ ಹೋಗ್ತಾರೆ. ಇಂಜಿನ್ ಆಫ್ ಮಾಡಿ" ಸಿಡುಕಿದ ಸಂಚಾರಿ ಪೇದೆ.

ಎಲ್ಲರೂ ಬೈದುಕೊಂಡು ತಂತಮ್ಮ ಗಾಡಿಗಳ ಎಂಜಿನ್‌ಗಳನ್ನು ಮಲಗಿಸಿದರು. ಮೂರು ಅಂಬಾಸೆಡರ್, ಒಂದು ಮಾರುತಿ ಜಿಪ್ಸಿ, ನಂತರ ಇಂಡಿಕಾ, ನಡುವೆ ಮಂತ್ರಿಯ ಲ್ಯಾನ್ಸರ್, ಮತ್ತೊಂದು ಮಾರುತಿ ಜಿಪ್ಸಿ, ಒಂದು ಸಂಚಾರಿ ಆಸ್ಪತ್ರೆ, ಮತ್ತೆರಡು ಜೀಪ್!

ದೇವರೇ! ಇವರ ಜೀವ ಇಷ್ಟು ಬೆಲೆ ಬಾಳುವಂಥದ್ದೇ? ದೇಶದ ವಿದೇಶೀ ವಿನಿಮಯ – ವಾಹನಗಳ ಇಂಧನದ ರೂಪದಲ್ಲಿ - ಹೀಗೆ ಪೋಲಾಗುತ್ತಿದೆಯಲ್ಲಾ? ಅಲ್ಪನಿಗೆ ಐಶ್ವರ್ಯ ಬಂದರೆ ಅರ್ಧರಾತ್ರೀಲಿ ಕೊಡೆ ಹಿಡಿದವನ ಕಥೆ ಈ ಮಂತ್ರಿಯದು.

ಈ ಮೆರವಣಿಗೆಯನ್ನೇ ಗಮನಿಸುತ್ತಿದ್ದ ಮಿತ್ರಜೀತ್‌ಗೆ ಕಪ್ಪು ಗಾಜಿನ ಹಿಂದೆ ಕುಳಿತಿದ್ದ ಮಂತ್ರಿ ಕಾಣಿಸಲಿಲ್ಲ.

ಕೊನೆಗೂ ಅಲ್ಲಿಂದ ಮಲಗಿದ್ದ ಎಂಜಿನ್‌ಗಳನ್ನು ಎಬ್ಬಿಸಿಕೊಂಡು ಎಲ್ಲ ವಾಹನಗಳೂ ಹೊರಟವು.

ಆ ಫಾರಂ ಹೌಸ್ ತಲುಪಿದಾಗ ಸುಮಾರು ಒಂದು ಗಂಟೆ ತಡವಾಗಿತ್ತು.

"ಬಾ ಬಾ" ಎಂದ ಸ್ವರೂಪ್, ಅವನಿಗೆ ತಂಪು ಪಾನೀಯ ನೀಡಿದ ನಂತರ ಸರ್ವೇಶ್ವರ್‌ನನ್ನು ಎಬ್ಬಿಸಲು ಹೋದರು.

"ಏಳಲು ಇಷ್ಟು ಹೊತ್ತು ಬೇಕಾಗಿಲ್ಲ ಅಲ್ವಾ? ಉಮಾಶಂಕರ್ ನೀಡಿದ ಪೆಟ್ಟು ತುಂಬಾ ಜೋರಾಗಿ ಬಿತ್ತಾ?" ಎಂದು ಪ್ರಶ್ನಿಸಿದ ಮಿತ್ರಜೀತ್.

"ಗೊತ್ತಿಲ್ಲ. ನೋಡಿದ್ರೆ ಗೊತ್ತಾಗ್ಬೋದು" ಎಂದು ಹೇಳಿದ ಸ್ವರೂಪ್ ಗಕ್ಕನೆ ನಿಂತ.

"ಯಾಕೆ? ಏನಾಯ್ತು?" ಕೇಳಿದ ಮಿತ್ರಜೀತ್ ಚಕಿತನಾಗಿ.

ಸ್ವರೂಪ್ ಸರ್ವೇಶ್ವರ್‌ನತ್ತ ಬೆರಳು ತೋರಿದ. ಅವನ ತಲೆ ಅಸ್ವಾಭಾವಿಕವಾದ ಕೋನದಲ್ಲಿತ್ತು. ಹತ್ತಿರಕ್ಕೆ ವೇಗವಾಗಿ ಹೋದರು. ಸರ್ವೇಶ್ವರ್‌ನಲ್ಲಿ ಚಲನೆ ಇರಲಿಲ್ಲ. ಅವನ ಪ್ರಾಣ ಹೋಗಿತ್ತು.

ಸ್ವೂಪ್ ತಕ್ಷಣವೇ ಉಮಾಶಂಕರ್‌ಗೆ ಡಯಲ್ ಮಾಡಲಾರಂಭಿಸಿದ. ಮಿತ್ರಜೀತ್‌ಗೆ ಮತ್ತೆ 'ಡೆಡ್ ಎಂಡ್' ತಲುಪಿದ ಅನುಭವವಾಗಿತ್ತು.

"ಏನಂದ್ರೀ?" ಎಂದಳು ಸುನೀತಿ ಅವನ ಮಾತು ಅರ್ಥವಾಗದೇ. ಅಮರೇಶ್ ನಕ್ಕ.

"ಯಾಕೆ ನಗು? ನಾನೇನು ತಪ್ಪು ಮಾಡ್ದೆ?" ಮೂತಿ ತಿರುವಿದಳು ಸುನೀತಿ.

"ತಪ್ಪಾ? ನೀನಾ? ಅದು ಸಾಧ್ಯವೇ ಇಲ್ಲ" ಎಂದ ಅಮರೇಶ.

ಸುನೀತಿ ನಾಚಿದಳು. ಅವಳ ನಾಚಿಕೆ ಅವನಿಗೆ ಮುದ ತಂದಿತ್ತು.

"ಆಗ್ಲೇ ಏನಂದ್ರಿ ಅಂದೆ?" ಎಂದಳು ನೆನಪಿಸಿ.

"ಏನಿಲ್ಲ. ಈಗೆಲ್ಲಾ ನೀನು ತುಂಬಾ ಸುಂದರಿಯಾಗಿ ಕಾಣ್ತಿದ್ದೀ" ಎಂದ ನಿಯತ್ತಿನಿಂದ ಅಮರೇಶ.

"ಯಾಕೆ ಗೊತ್ತಾ?" ಪ್ರಶ್ನೆ ಕೇಳುವಾಗ ಅವಳ ವದನ ತಾವರೆಯಾಗಿತ್ತು.

"ನೀನು ಹೇಳಿದ್ರೆ ತಾನೇ ನಂಗೆ ಗೊತ್ತಾಗೋದು" ಎಂದ ಆಸಕ್ತಿಯಿಂದ.

ಸುನೀತಿಗೆ ಬಹಳವೇ ಸಂತಸವಾಗಿತ್ತು. ತುಂಬಾ ದಿನಗಳ ನಂತರ ಅಮರ್ ಅವಳೊಂದಿಗೆ ಇಷ್ಟು ಹೊತ್ತು ಸರಸಸಲ್ಲಾಪ ನಡೆಸುತ್ತಿದ್ದಾನೆ. ಅವಳಿಗೂ ಅಪರೂಪಕ್ಕೆ ರಜೆಯಿದ್ದು, ಅಡುಗೆ ಕೆಲಸ ಮುಗಿಸಿ ಅವನೊಂದಿಗೆ ಹಾಯಾಗಿ ಕುಳಿತಿದ್ದಳು.

"ನೀವು ಕೆಲಸಕ್ಕೆ ಹೋದ್ಮೇಲೆ ಬೋರಾಗ್ತಿತ್ತು. ಇನ್ಮೇಲೆ ನಾವು ಮೂವರಾಗ್ತೀವಿ" ಎಂದಳು ನಿಗೂಢವಾಗಿ.

"ಯಾರು ಬರ್ತಾರೆ? ನಮ್ಮ ತಾಯೀನಾ? ನಿಮ್ಮ ತಾಯೀನಾ?" ಕೇಳಿದ.

“ಅಮರ್! ದಿಸ್ ಈಜ್ ಟೂ ಬ್ಯಾಡ್! ನಮ್ಮಿಬ್ಬರಿಗೂ ಇಬ್ಬರೂ ಪೇರೆಂಟ್ಸ್ ಇಲ್ಲ ಅಂತ ನಂಗೂ ಗೊತ್ತು, ನಿಮಗೂ ಗೊತ್ತು” ಎಂದು ನಸುಮುನಿಸಿನಿಂದ ಹೇಳಿ ದಢಕ್ಕನೆದ್ದಳು.

ನಾಲ್ಕು ಹೆಜ್ಜೆ ಇಟ್ಟವಳು ಅವನ ಮಡಿಲಿನಲ್ಲಿ ಕುಕ್ಕರಿಸಿದಳು- ಏಕೆಂದರೆ ಅವನವಳ ನೈಟಿ ಹಿಡಿದು ಎಳೆದುಕೊಂಡಿದ್ದ!

“ಹುಷಾರು ಚಿನ್ನಾ! ಒಳಗಿನ ಜೀವಕ್ಕೆ ಅಪಾಯವಾದೀತು!” ಎಂದ ಆತಂಕದಿಂದ ಅಮರೇಶ.

ಹಿಂದಕ್ಕೆ ತಿರುಗಿ ಅವನ ಎದೆಯ ಮೇಲೆ ತನ್ನ ಕೋಮಲ  ಹಸ್ತಗಳಿಂದ ಮೃದುವಾಗಿ ಗುದ್ದಿ “ನಾನು ಹೇಳಿದ್ದನ್ನ ಸರಿಯಾಗೇ ಅರ್ಥ ಮಾಡ್ಕೊಂಡು ಒರಟೊರಟಾಗಿ ನಡಕೊಂಡ್ರಿ!” ಎಂದಳು ಕೋಪ, ನಾಚಿಕೆಗಳಿಂದ.

“ಓ ಚಿನ್ನಾ! ಅಯ್ ಆಮ್ ಸೋ ಹ್ಯಾಪ್ಪೀ” ಎಂದು ಅವಳನ್ನು ಬಳಸಿ, ಅವಳ ಕುತ್ತಿಗೆಗೆ ಮುತ್ತಿಡುತ್ತಾ.

ಕೆಲಕಾಲ ಅಲ್ಲಿ ಸಮಯ ‘ಸ್ಟ್ಯಾಚ್ಯೂ’ ಆಗಿತ್ತು.

ಅಮರೇಶನ ಸಂತಸದ ಕ್ಷಣಗಳು ಮುಗಿಯುವುದನ್ನೇ ಕಾಯುತ್ತಿದ್ದವು ಅವನ ಆತಂಕಭರಿತ ಆಲೋಚನೆಗಳು.

ದೊಡ್ಡ ರಾಕೆಟ್ ಒಂದರ  ವಿವರಗಳು ಅವನಿಗೆ ಮುಟ್ಟಿದ್ದವು. ಆ ಗುಂಪಿನಲ್ಲೊಬ್ಬ ಇವನಿಗೆ ರಹಸ್ಯ ವಿಷಯಗಳನ್ನು ತಿಳಿಸಿದ್ದ. ಅದಕ್ಕೆ ಬದಲಾಗಿ ತನ್ನ ಪತ್ರಿಕೆಯ ಮಾಲೀಕನಿಂದ ಹಣವನ್ನು ವಸೂಲು ಮಾಡಿಕೊಂಡಿದ್ದ. ಮೊದಲೇ ಒಪ್ಪಿಕೊಂಡಿದ್ದಂತೆ ಆ ಮಾಲೀಕ ತನ್ನನ್ನು ಯಾವುದೇ ಪ್ರಶ್ನೆ ಕೇಳದೇ ತಾನು ಕೇಳಿದಷ್ಟು ಹಣ ನೀಡಿದ್ದ. ಪತ್ರಿಕಾರಂಗದ ನೈತಿಕತೆ ಇದನ್ನು ಒಪ್ಪುವುದೋ ಇಲ್ಲವೋ, ಕೆಲವು ಭೂಗತರ ವಿಷಯಗಳು ಹೊರಬರಲು ಇಂತಹ ಚಿಕ್ಕ ಎರೆಹುಳುವನ್ನು ಮೀನಿಗೆ ಉಣಿಸಲೇಬೇಕು ಎಂಬ ನಿರ್ಧಾರಕ್ಕೆ ಬಂದಿದ್ದ ಅಮರೇಶ್.

ಈಗ ತಾನು ಸಿದ್ದಪಡಿಸಿರುವ ಲೇಖನವನ್ನು ಇನ್ನೆರಡು ವಾರಗಳಲ್ಲಿ ಪ್ರಕಟಣೆಗೆ ಕಳುಹಿಸಬೇಕು.

ಪಾಲ್‌ನ ಲೇಖನವು ಚೂಪಾದ ಬರವಣಿಗೆ. ಹೆಸರುಗಳನ್ನು ಬರೆಯದಿದ್ದರೂ ಪಾಲ್ ಯಾರ ಬಗ್ಗೆ ಹೇಳಿರುವನೆಂದು ಎಲ್ಲರಿಗೂ ಅರ್ಥವಾಗುವಂತಿತ್ತು.

ಅಮರೇಶನ ಮೆದುಳು ಪಾಲ್‌ನ ಕೆಲಸವನ್ನು ಶ್ಲಾಘಿಸಿತ್ತು. ಆಧರೆ ಅವನ ಮನದೊಳಗಣ ಮನದಲ್ಲಿ ಪಾಲ್‌ನ ಬಿಂಬ ಮೂಡಿತ್ತು. ಅವನ ಹೆಣದ ಚಿತ್ರ ಎದ್ದು ಕಂಡಿತ್ತು. ಹಿಂಸೆಗೊಳಗಾದ ಅವನ ದೇಹವನ್ನು ನೆನೆದು ಅಮರೇಶನ ಮನ ತಲ್ಲಣಿಸಿತ್ತು.

ಈ ರಿಸ್ಕ್ ಏಕೆ? ಜನರು ಹೊಗಳುವರೆಂದೇ? ಪತ್ರಿಕೆಯ ಸರ್ಕ್ಯುಲೇಷನ್ ಹೆಚ್ಚುವುದೆಂದೇ? ಸರ್ಕ್ಯುಲೇಷನ್ ಹೆಚ್ಚಿಸಲು ಕೆಲವು ಸೆಕ್ಸೀ ಚಿತ್ರಗಳು, ರೋಚಕ ಕೊಲೆ ಸುದ್ದಿಗಳು ಸಾಕಲ್ಲವೇ?

ಅಲ್ಲ. ಹಾಗಾದರೆ ಇಂತಹ ರಿಸ್ಕೀ ರೈಟಿಂಗ್ ಏಕೆ ಮಾಡಬೇಕು?

ಆತ್ಮತೃಪ್ತಿಗೆ.

ಹೌದು. ತನಗೆ ಅನ್ನ ನೀಡಿರುವ ಓದುಗರಿಗೆ ಅವರ ಸುತ್ತಮುತ್ತ ನಡೆಯುತ್ತಿರುವ ಅನ್ಯಾಯಗಳನ್ನು ಬೊಟ್ಟುಮಾಡಿ ತೋರಿಸಬೇಕು. ಅವರು ಅದರಿಂದ ಎಚ್ಚೆತ್ತುಕೊಂಡು ಸರಿಯಾದ ಜನರನ್ನು ಸರ್ಕಾರದ ರಚನೆಗೆ ಆಹ್ವಾನಿಸುತ್ತಾರೆ. ಕೆಟ್ಟ ಜನರನ್ನು, ಅವರು ಮಾರುವ ವಸ್ತುಗಳನ್ನು ಧಿಕ್ಕರಿಸುತ್ತಾರೆ.

ಈ ಆತ್ಮತೃಪ್ತಿಗೆ ಆಹಾರವಾಗಿ ಇಂತಹ ಸ್ಫೋಟಕ ವಿಷಯಗಳನ್ನು ಹೊರಹಾಕುತ್ತಿರಬೇಕು.

“ಏನು ಅಮರ್? ತುಂಬಾ ಆಳವಾಗಿ ಯೋಚಿಸ್ತಿದ್ದೀರಿ?” ಕೇಳಿದಳು ಸುನೀತಿ. ಒಂದು ವೇಳೆ ತಾನು ಸತ್ತರೆ ಸುನೀತಿಯ ಗತಿ ಏನು?

“ಸುನೀತಿ!” ಎಂದ ಸೀರಿಯಸ್ಸಾಗಿ.

“ಏನ್ರೀ?” ಎಂದಳು ಗಾಬರಿಯಿಂದ.

“ನನಗೇನಾದ್ರೂ ಅಪಾಯ ಆದ್ರೆ ನೀನು ಫಜಲ್ ಹೆಲ್ಪ್ ತಗೋ” ಎಂದ ಇನ್ನೂ ಗಂಭೀರವಾಗಿಯೇ.

“ಯಾಕೆ ಅಮರ್? ಏನಾದ್ರೂ ಪ್ರಾಬ್ಲೆಂ?” ಆತಂಕಭರಿತ ಸ್ವರದಲ್ಲಿ ಕೇಳಿದಳು.

ಸುನೀತಿ ಪದವೀಧರೆ. ಒಳ್ಳೆಯ ಕೆಲಸದಲ್ಲಿದ್ದಾಳೆ.

“ನೀನು ಹೇಳ್ತಾನೇ ಇರ್ತೀಯಲ್ಲ ಸುನೀತಿ? ಅನ್ಯಾಯದ ವಿರುದ್ಧ ಹೋರಾಡು ಅಂತ. ನಾನು ಮಾಡೋ ಪ್ರತಿಯೊಂದೂ ಹೋರಾಟಾನೇ. ಕೆಲವೊಮ್ಮೆ

ಎದುರಾಳಿ ಬಹಳ ಸ್ಟ್ರಾಂಗ್ ಆಗಿರ್ತಾನೆ. ಆಗ ನಮ್ಮ ಡಿಫೆನ್ಸ್ ಮೆಕ್ಯಾನಿಜಂ ಕೂಡಾ ಗಟ್ಟಿಮುಟ್ಟಾಗಿರಬೇಕು. ಹೌದಲ್ವಾ?"

"ಹೂಂ. ಅದಕ್ಕೇನಾ ಫಜಲ್ ಹೆಲ್ಪ್ ತಗೋ ಅನ್ನೋ ಪೀಠಿಕೆ?" ಕೇಳಿದಳು ಸುನೀತಿ ನಗುತ್ತಾ.

ಅವಳು ನಕ್ಕಿದ್ದರೂ ಮನಸ್ಸು ಸ್ವಲ್ಪ ಕಸಿವಿಸಿಗೊಂಡಿತ್ತು. ಇಷ್ಟು ದಿನ ಕೇವಲ ಬೆದರಿಕೆಯ ಕರೆಗಳು ಮಾತ್ರವೇ ಬರುತ್ತಿದ್ದವು. ಈಗ ಅಮರ್ ಹೇಳಿದ್ದು ಸ್ವಲ್ಪ ಹೆಚ್ಚು ಗಾಬರಿಯ ವಿಷಯದಂತಿದೆ. ಆದರೆ ತಾನು ಹೇಡಿಯಾಗಬಾರದು. ಪತಿಯನ್ನು ಹುರಿದುಂಬಿಸಿ ಅವನಲ್ಲಿ ಹುಮ್ಮಸ್ಸು ಹೆಚ್ಚಿಸಬೇಕು. ಅದೇ ಸರಿಯಾದ ಸತೀಧರ್ಮ.

"ಹೌದು ಸುನೀ. ಯಾವಾಗ ಏನಾಗತ್ತೋ ತಿಳೀದು. ಯಾವುದಕ್ಕಾದರೂ ಪ್ರಿಪೇರ್ ಆಗಿರಬೇಕು ಅಂತ ನನಗೆ ಹೇಳಿಕೊಟ್ಟೋರು ಯಾರು?" ಎಂದು ಅವಳ ಕೆನ್ನೆ ತಟ್ಟಿ ನಕ್ಕ.

ನಿಡುಸುಯ್ದು, ನಂತರ ಹೇಳಿದಳು. "ನಿಜ ಅಮರ್. ಸಿದ್ಧಾಂತ ನಿಜವಾಗಿಯೂ ಉನ್ನತ ಭಾವನೆ. ಆದರೆ ನಮ್ಮದೇ ವೃತ್ತದ ಪರಿಧಿಯಲ್ಲಿ ಯೋಚಿಸಿದಾಗ ನಮ್ಮ ಮಗುವಿನ ಭವಿಷ್ಯದ ಬಗ್ಗೆ ಚಿಂತಿಸಿದಾಗ ಸ್ವಲ್ಪ ಸ್ವಾರ್ಥ ನನ್ನನ್ನು ಆವರಿಸುತ್ತದೆ"

ಅಮರೇಶ ಈಗ ಸೀರಿಯಸ್ಸಾಗಿಯೇ "ಸುನೀ!" ಎಂದು ಅವಳ ತೋಳು ಹಿಡಿದು, "ಇದೊಂದು ದೊಡ್ಡ ಕೇಸ್ ಆಗಿಬಿಡಲಿ. ಆಮೇಲೆ ನಾನು ಸ್ವಲ್ಪ ದಿನ ಆರಾಮವಾಗಿರ್ತೀನಿ, ನಿನ್ನ ಹೆರಿಗೆ ಆಗುವವರೆಗೂ" ಎಂದ.

ಸುನೀತಿಯ ಮನ ಅರಳಿತ್ತು. ಅವಳಾದರೂ ಕೇವಲ ಮನುಷ್ಯಳು! ಪತಿಯ ಕಾರ್ಯ ಅವಳಿಗೆ ಸಂತಸ ತಂದಂತೆಯೇ ಪತಿಯ ಸುರಕ್ಷೆ ನೆಮ್ಮದಿ ತಂದಿತ್ತು. ಈ ಇಚ್ಚಿತ್ತ ಮನೋಭಾವ ಅವಳಿಗೇ ಮುಜುಗರ ತಂದಿತ್ತು.

ಇದೇ ಏನೋ ಮನುಷ್ಯನ ಸಿದ್ಧಾಂತ- ಸ್ವಾರ್ಥಗಳ ನಡುವಿನ ಘರ್ಷಣೆ ಎಂದರೆ!

ಹಣ ಪಡೆದು ಕೆಲವು ರಹಸ್ಯಗಳನ್ನು ಹೇಳಿದ್ದ ಮನುಷ್ಯ ಇಂದು ರಾತ್ರಿ ಹತ್ತೂವರೆಗೆ ರೈಲ್ವೇ ಸ್ಟೇಷನ್ನಿನಲ್ಲಿ ಭೇಟಿ ಆಗುವವನಿದ್ದ. ಇಂದು ಆ ಮನುಷ್ಯ ಯಾವುದೋ ವಸ್ತುವನ್ನು ತಂದುಕೊಡುವೆನೆಂದಿದ್ದಾನೆ. ಸ್ವಲ್ಪ ಪುರಾವೆಗಳೂ ಇದ್ದರೆ ಪತ್ರಿಕೆಯಲ್ಲಿನ ಲೇಖನಕ್ಕೆ ಪುಷ್ಟಿ ಸಿಗುತ್ತದೆ. ಅದೂ ಅಲ್ಲದೇ ಮಾನನಷ್ಟ

ಮೊಕದ್ದಮೆ ಹಾಕುವ 'ದೊಡ್ಡ ಮನುಷ್ಯರ' ಬಾಯಿ ಮುಚ್ಚಲು ಏನಾದರೂ ಗಟ್ಟಿ ಪ್ರೂಫ್ ಇರಬೇಕು.

ಸುನೀತಿಗೆ ರಾತ್ರಿಯ ಮುಖಾಮುಖಿ ಬಗ್ಗೆ ಹೇಳುವುದೋ ಬೇಡವೋ ಎಂದು ಯೋಚಿಸಿ, ಹೇಳಬಾರದೆಂದೇ ನಿರ್ಧರಿಸಿದ.

ರಾತ್ರಿ ಒಂಬತ್ತಕ್ಕೆ ಸಲ್ಲಾಪದೊಂದಿಗೆ ಊಟ ಮಾಡಿದರು ಇಬ್ಬರೂ.

ಅವಳು ಒಂಬತ್ತೂ ಐವತ್ತಕ್ಕೆ ನಿದ್ರೆ ಮಾಡಿದಳು. ಇವನು ಡೋರ್ ಲಾಕ್ ಎಳೆದುಕೊಂಡು ಹೊರಟ. ಮೈಯೊಮ್ಮೆ ಏಕೋ ಅದುರಿತು. ಎಡಗಣ್ಣೂ ಅದುರಿತು. ಅವನು ಅಪಶಕುನಗಳನ್ನು ನಂಬುವವನಲ್ಲ.

ರಾತ್ರಿ ಹೊತ್ತು ಗಾಳಿ ತಣ್ಣಗಾಗಿರುವುದರಿಂದ ಛಳಿ ಎನಿಸಿರಬೇಕೆಂದುಕೊಂಡ. ಬೆಳಿಗ್ಗೆ, ಸಂಜೆ, ಸದಾ ಕಂಪ್ಯೂಟರ್ ಸ್ಕ್ರೀನ್ ನೋಡುತ್ತಿದ್ದರೆ ಎಡಗಣ್ಣು ಮಾತ್ರ, ಬಲಗಣ್ಣೂ ಅದುರೀತು! ಮೊದಲು ಆಂಟಿಗ್ಲೇರ್ ಕನ್ನಡಕ ಕೊಂಡುಕೊಳ್ಳಬೇಕು. ಮನಸ್ಸು ತರ್ಕ-ನಂಬಿಕೆಗಳ ನಡುವಿನ ಯುದ್ಧಭೂಮಿಯಾಗಿದ್ದರೆ ದೇಹ ತನ್ನ ಗಮ್ಯದತ್ತ ಹೋಗುತ್ತಿತ್ತು.

ಸ್ಟೇಷನ್ನಿನಲ್ಲಿ ಎಲ್ಲಿ ಭೇಟಿ? ಯೋಚಿಸಿದ.

ಆ ಮನುಷ್ಯನ ಹೆಸರೂ ತನಗೆ ತಿಳಿಯದು. ಅವನನ್ನು ನಂಬಲು ಮೊದಲು ಮನವೊಪ್ಪಿರಲಿಲ್ಲ. ಆದರೆ ತಾನು ಮಾಡಲು ಹೊರಟಿರುವುದು ಮಹಾಯಜ್ಞ. ಅದಕ್ಕೆ ತುಪ್ಪ, ಸಮಿತ್ತುಗಳು ಅನೇಕವು ಬೇಕು. ಕೆಲವೊಮ್ಮೆ ತುಪ್ಪ ಕಲಬೆರಕೆಯದೂ ಆಗಿರಬಹುದು. ಆದರೆ ಆ ಕೆಲಸಕ್ಕೆ ಸಹಾಯಕವಾಗಿರುವುದೇ ಒಂದು ಹೆಗ್ಗಳಿಕೆ.

ಹಾಗೆ ನೋಡಿದಲ್ಲಿ ಎಂತೆಂತಹ ಭದ್ರ ಕೋಟೆಗಳು ಚಿಕ್ಕ ಚಿಕ್ಕ ಮನುಷ್ಯರ ಕ್ಷಣಿಕ, ಹೀನ ಆಶೆಗಳಿಂದಾಗಿ ಛಿದ್ರವಾಗಿವೆ. ಕಿತ್ತೂರು ಚೆನ್ನಮ್ಮಳಂತಹ ವೀರಾಗ್ರಣಿಗಳ ಸುರಕ್ಷಾ ಕವಚ ಸೀಳಿದ್ದು ಕೇವಲ ಸಾಮಾನ್ಯ, ಕೆಟ್ಟಬುದ್ಧಿಯ ಜನರ ದುರಾಶೆಯಿಂದಲೇ.

ಇಲ್ಲಿ ಅದು ಉಲ್ಟಾ ಆಗಿದೆ. ಈ ಮನುಷ್ಯನ ಚಿಕ್ಕ ಆಸೆ ಭೂಗತ ಪ್ರಪಂಚದಲ್ಲಿ ಒಂದು ರಂಧ್ರ ಕೊರೆಯಲಿದೆ. ಅಮರೇಶ್ ಈ ವಿಷಯವನ್ನು ಸ್ಪಷ್ಟವಾಗಿಯೇ ಅರಿತಿದ್ದ. ತನ್ನ ಲೇಖನದಿಂದ ಪ್ರಪಂಚ ಬದಲಾಗುವುದಿಲ್ಲ. ಆದರೆ ತನ್ನ ಒಂದೊಂದು ಪರಿಶೋಧನಾತ್ಮಕ ಲೇಖನವೂ ಬಿರುಕನ್ನು ಹೆಚ್ಚು ಮಾಡುತ್ತಾ

ಹೋಗುತ್ತದೆ. ತನ್ನಂತೆಯೇ ಮತ್ತೊಬ್ಬ ಫಜಲ್, ಮಗದೊಬ್ಬ ಮಿತ್ರಜೀತ್ ಬಿರುಕನ್ನು ಅಗಲಿಸುತ್ತಾ ಹೋದರೆ ಆ ಜಿಗುಪ್ಸಾ ಜಗತ್ತಿಗೆ ಬೇರೆ ಜನರು ಹೋಗದಿರುತ್ತಾರೆ. ಕ್ರಮೇಣ ಕುಕೃತ್ಯಗಳು ಮಾಯವಾಗಿ ಪ್ರಪಂಚ ಸಾಫ್ ಆಗುತ್ತದೆ.

ಅವನ ಆದರ್ಶ ಮನಸ್ಸನ್ನು ಅವನ ಪ್ರ್ಯಾಕ್ಟಿಕಲ್ ಮೆದುಳು ಕೇಳಿತು. ಪಾಲ್‌ನನ್ನು ಏಕೆ ಮರೆತೆ? ಒಂದು ಲೇಖನ- ಅದೂ ಯಾರನ್ನೂ ಹೆದರಿಸದ ರಚನೆ, ಅವನ ಪ್ರಾಣವನ್ನು ಕಿತ್ತುಕೊಂಡಿದೆ. ಸಾಯುವ ಮೊದಲು ನರಕ ಶಿಕ್ಷೆ ಅನುಭವಿಸಿದ್ದಾನೆ.

ಯಾಕೆ ಅವನನ್ನು ಚಿತ್ರಹಿಂಸೆ ಮಾಡಿದರು? ಸುಮ್ಮನೆ ಏಕೆ ಸಾಯಿಸಲಿಲ್ಲ? ಅವನ ಉದ್ವೇಗ ಜಾಸ್ತಿಯಾಗತೊಡಗಿತು.

# 15

ಅವನು ಬೈಕಿನಲ್ಲಿ ಪಯಣಿಸುತ್ತಲೇ ತಾನಿದ್ದ ಜಾಗದ ಪರಿಶೀಲನೆ ನಡೆಸಿದ. ಬಲಗಡೆಗೆ ಒಂದು ಬೂತ್ ಕಂಡಿತ್ತು.

ಸರಕ್ಕನೆ ಬೈಕನ್ನು ತಿರುಗಿಸಿದ. ಇವನ ಹಠಾತ್ ಚರ್ಯೆಯಿಂದಾಗಿ ಹಿಂದೆ ಬರುತ್ತಿದ್ದ ಸ್ಕೂಟರ್ ಸವಾರ ಚಕ್ಕನೆ ಬ್ರೇಕ್ ಹಾಕಿ ಇವನನ್ನು ಬೈದ. ಅವನೆಡೆಗೆ ಕ್ಷಮಾಪಣಾಸ್ಮಿತ ಬೀರಿ, ಬೈಕ್ ನಿಲ್ಲಿಸಿ ಬೂತ್‌ಗೆ ಓಡಿದ.

ಯಾರಿಗೆ ಫೋನ್ ಮಾಡಲಿ? ಫಜಲ್ ಸಿಗಲಿಲ್ಲ. ಮಿತ್ರಜೀತ್ ಕೂಡಾ ಸಿಗಲಿಲ್ಲ. ಕೊನೆಗೆ ಇಬ್ಬರಿಗೂ ಒಂದೊಂದು ಪೇಜರ್ ಮೆಸೇಜ್ ಕಳಿಸಿದ.

"ಪಾಲ್‌ನನ್ನು ಹಿಂಸಿಸುವ ಅಗತ್ಯ ಏನಿತ್ತು? ಇದರ ಬಗ್ಗೆ ಬೆಳಿಗ್ಗೆ ನನ್ನನ್ನು ನನ್ನ ಮನೆಯಲ್ಲಿ ಹತ್ತು ಗಂಟೆಗೆ ಭೇಟಿ ಮಾಡಿ"

ಪೇಜರ್ ಸಂದೇಶ ತೆಗೆದುಕೊಂಡಾತ ಸರಿಯಾಗಿ ಬರೆದುಕೊಂಡಿರುವನೇ ಎಂದು ಎರಡು ಬಾರಿ ಕೇಳಿ ತಿಳಿದುಕೊಂಡು ಬೂತ್‌ನಾತನಿಗೆ ಹಣ ನೀಡಿ ಹೊರಬಂದ. ಗಡಿಯಾರ ಹತ್ತೂಕಾಲು ತೋರಿಸುತ್ತಿತ್ತು.

ಇನ್ನು ಕಾಲು ಗಂಟೆಯಲ್ಲಿ ರೈಲ್ವೇ ಸ್ಟೇಷನ್ನಿನಲ್ಲಿರಬೇಕು. ಆ ಮನುಷ್ಯನೂ ಕದ್ದುಮುಚ್ಚಿ ಬರುತ್ತಿದ್ದಾನೆ. ಬೈಕ್ ಸ್ಟೇಷನ್ ತಲುಪಿತು.

ಬೈಕ್ ಪಾರ್ಕ್ ಮಾಡಿ, ಭೇಟಿಗೆಂದು ನಿಗದಿತ ಸ್ಥಳಕ್ಕೆ ಹೋದ.

ಅಲ್ಲಿ ಯಾರೂ ಇರಲಿಲ್ಲ. ಅದೊಂದು ನಿರ್ಜನಸ್ಥಳ. ರೈಲ್ವೇ ಹಳಿಗಳ ಜಾಗ. ಅದೇ ಕೊನೆಯ ಹಳಿ. ಅದರಾಚೆಗೆ ಕಲ್ಲಿದ್ದಲು, ಕಂಬಿಗಳ ಕೆಳಕ್ಕೆ ಹಾಸುವ ಮರ, ಸಿಮೆಂಟಿನ ಸ್ಲೀಪರುಗಳನ್ನು ಪೇರಿಸಿದ್ದರು. ಈ ಸ್ಥಳವನ್ನಾರಿಸಿದ್ದ ಮನುಷ್ಯ ಏಕಿನ್ನೂ ಬಂದಿಲ್ಲ ಎಂದು ಅಮರೇಶ್ ಯೋಚಿಸುವಷ್ಟರಲ್ಲಿ ಆ ಮನುಷ್ಯ ಬಂದನೆಂಬಂತೆ ಹೆಜ್ಜೆ ಸದ್ದು ಕೇಳಿಸಿತ್ತು.

ಇವನ ಕೈಗೆ ಒಂದು ತೆಳ್ಳನೆಯ ಅಗಲ ವಸ್ತು ನೀಡಿ ಇವನಿತ್ತ ಹಣದ ಚೀಲ ತೆಗೆದುಕೊಂಡು ಆ ಮನುಷ್ಯ ಅಲ್ಲಿಂದ ಸರಕ್ಕನೆ ಹೊರಟ. ಅಮರೇಶ ಸುಮಾರು ನೂರುಗಜ ನಡೆದಿದ್ದಾಗ ಜರುಗಿತ್ತು ಆ ಘಟನೆ!

ಆ ಮನುಷ್ಯ ಭಯಂಕರವಾಗಿ ಚೀರಿದ್ದು ಕೇಳಿಸಿತ್ತು ಅಮರೇಶನಿಗೆ. ಪ್ರಾಣಾಪಾಯಕ್ಕೆ ಸಿಕ್ಕಿಕೊಂಡ ಪ್ರಾಣಿಯ ಪ್ರಾಣಾಂತಿಕ ಕೂಗದು!

ಅಮರೇಶ್ ಕ್ಷಣಕಾಲ ಗೊಂದಲದಲ್ಲಿ ಬಿದ್ದ. ತಾನೇನು ಮಾಡಬೇಕೀಗ? ಅವನ ಸಹಾಯಕ್ಕೆ ಹೋಗಲೇ ಬೇಡವೇ?

ಕೈಯಲ್ಲಿದ್ದ ವಸ್ತುವನ್ನು ನೋಡಿದ. ಅದೊಂದು ಸಿ.ಡಿ. ಕವರ್. ಅಂದರೆ ಆ ಮನುಷ್ಯ ಭೂಗತರ ಸಂಗತಿಗಳನ್ನು ಒಂದು ಸಿ.ಡಿ.ಯಲ್ಲಿ ಹಾಕುವಷ್ಟು ಬುದ್ಧಿವಂತನೇ? ಅಥವಾ ಭೂಗತ ಪ್ರಪಂಚಕ್ಕೆ ತಾನಂದುಕೊಂಡಿರುವುದಕ್ಕಿಂತ ಹೆಚ್ಚು ಗೆದ್ದಲು ಹತ್ತಿದೆಯೇ? ಯಾರಾದರೂ ಕಂಪ್ಯೂಟರ್ ನಿಪುಣ ಅವರೊಂದಿಗಿದ್ದು ಈಗ ಬೇರೆ ಆಗಿದ್ದಾನೆಯೇ?

ಕಾಲ್ಗಳು ವೇಗವಾಗಿ ಬೈಕಿನ ಬಳಿಗೆ ಬಂದವು. ಸಿಡಿ ಕವರ್ನ್ನು ಬೈಕಿನ ಟೂಲ್‌ಬಾಕ್ಸ್‌ನಲ್ಲಿ ತುರುಕಿದಾಗ ಅವನ ಮಾನವೀಯತೆ ಮತ್ತೆ ಮರೆದಿತ್ತು. ಒಂದು ಕ್ಷಣ ಆಲೋಚಿಸಿ ಮರಳಿ ಆ ಮನುಷ್ಯನನ್ನು ಭೇಟಿಯಾದ ಸ್ಥಳಕ್ಕೆ ಓಡಿದ. ಅಲ್ಲೀಗ ನಿಶ್ಶಬ್ದ ಆವರಿಸಿಕೊಂಡಿತ್ತು.

ಜೇಬಿನಿಂದ ಪುಟ್ಟ ಟಾರ್ಚ್ ತೆಗೆದ. ಅದು ಅವನ ಮನೆಯ ಕೀಲಿಕೈಗಳೊಂದಿಗೆ ಇತ್ತು. ಚಿಕ್ಕ ಬೆಳಕಿನ ಕೋಲು ಅವನ ಕತ್ತಲ ಹಾದಿಗೆ ಪ್ರಭೆ ತೋರಿಸಲು ಯತ್ನಿಸುತ್ತಿತ್ತು. ಕತ್ತಲಲ್ಲಿ ಯಾವುದೋ ದೊಡ್ಡ ವಸ್ತುವನ್ನು ಎಡವಿ ಧೊಪ್ಪನೆ ಬಿದ್ದ. ಕೈಲಿದ್ದ ಟಾರ್ಚ್ ಬಿದ್ದುಹೋಯಿತು. ಆ ಬೆಳಕಿನ ತುದಿ ನೋಡಿ, ಟಾರ್ಚ್ ಕೈಗೆತ್ತಿಕೊಂಡು ತಾನು ಎಡವಿದ್ದೇನೆಂಬುದನ್ನು ಗಮನಿಸಿದ.

ಮೈಯೆಲ್ಲಾ ಬೆವರು ಕಿತ್ತುಕೊಂಡು ಬಂದಿತ್ತು ಆ ತಣ್ಣಗಿನ ರಾತ್ರಿಯಲ್ಲೂ.

ತನಗೆ ಸಿ.ಡಿ. ಕವರ್ ತಂದಿತ್ತಿದ್ದ ಮನುಷ್ಯ ಅಲ್ಲಿ ಬಿದ್ದಿದ್ದ. ಅವನನ್ನೇ ತಾನೆಡವಿದ್ದು. ಸತ್ತಿರುವನೇ? ಮೆಲ್ಲನೆ ಹತ್ತಿರ ಹೋಗಿ ಅವನ ಮೂಗಿನ ಬಳಿ ತನ್ನ ಬಲಹಸ್ತವಿಟ್ಟ. ಉಸಿರಾಟವಿರಲಿಲ್ಲ. ಅಂದರೆ ಇವನು ಸತ್ತುಹೋಗಿದ್ದಾನೆ!

ಅದೇಕೋ ಅನುಮಾನ ಉಂಟಾಗಿ ಶವವನ್ನು ಪರೀಕ್ಷಿಸಿದ. ತಾನಿತ್ತಿದ್ದ ಹಣ ಈಗ ಇರಲಿಲ್ಲ.

ಮುಖದ ಮೇಲೆ ಬೆಳಕು ಬಿಟ್ಟ. ಟಾರ್ಚ್ ಹಿಡಿದ ಕೈ ಕಂಪಿಸಿತು. ಮುಖದ ಮೇಲೆ ಸಿಗರೇಟಿನಿಂದ ಸುಟ್ಟ ಗಾಯದ ಗುರುತುಗಳು. ಚರ್ಮ ಸುಟ್ಟ ವಾಸನೆ ಇನ್ನೂ ಹಸಿಯಾಗಿತ್ತು.

ಓ ದೇವರೇ! ಇವನಿಂದ ಏನೋ ವಿಷಯ ಹೊರಗೆಳೆಯಲು ಹಿಂಸೆ ಮಾಡಿದ್ದಾರೆ! ಏನಿರಬಹುದು?

ತನ್ನ ಬಗ್ಗೆಯೂ ಹೇಳಿರಬಹುದೇ ಆ ಮನುಷ್ಯ?

ಆ ಯೋಚನೆ ಬಂದೊಡನೆ ಅಲ್ಲಿಂದ ವೇಗವಾಗಿ ಓಡಿದ.

ತನಗಿನ್ನು ಹೆಚ್ಚು ಕಾಲಾವಕಾಶವಿಲ್ಲ. ಲೇಖನವನ್ನು ಬೇಗನೇ ಪ್ರಕಟಿಸಬೇಕು. ತನ್ನ ಎರಡು ವಾರದ ವಾಯಿದೆ ಈಗ ಪ್ರಯೋಜನಕ್ಕೆ ಬರದು.

ಬೈಕು ಓಡುತ್ತಿದ್ದರೆ ಅದರ ವೇಗವನ್ನು ದಾಟಿತ್ತು ಅವನ ಆಲೋಚನಾ ಗತಿ. ನೇರವಾಗಿ ಪತ್ರಿಕೆಯ ಆಫೀಸಿಗೆ ಬೈಕ್ ಓಡಿಸಿದ.

ಮರುದಿನ ಬೆಳಿಗ್ಗೆ ಹೊಸ ವಾರದ ಪತ್ರಿಕೆ ಹೊರಬೀಳಬೇಕು. ಸಂಪೂರ್ಣವಾಗಿ ವಿಷಯವನ್ನೆಲ್ಲಾ ಓದಿ, ಪ್ರೂಫ್ ರೀಡ್ ಮಾಡಿ ಮುದ್ರಣಕ್ಕೆ ಸಿದ್ಧಗೊಳಿಸಿದ್ದ.

ಆದರೆ ಈಗ ಅವನ ಯೋಚನೆ – ಯೋಜನೆ ಬದಲಾದವು.

ಪತ್ರಿಕೆಯ ಪ್ರೆಸ್‌ಗೆ ಬಂದವನು ಮಾಡಿದ ಮೊತ್ತ ಮೊದಲ ಕೆಲಸ ಮುದ್ರಣವನ್ನು ಸ್ಥಗಿತಗೊಳಿಸಿದ್ದು. ಲ್ಯಾಪ್‌ಟಾಪ್ ಮನೆಯಲ್ಲಿತ್ತು. ಕಂಪ್ಯೂಟರ್ ನಾಲ್ಕು ಕಿ.ಮೀ. ದೂರದ ಆಫೀಸಿನಲ್ಲಿತ್ತು. ಹೋಗಿ ಕಂಪ್ಯೂಟರ್ ಬಳಸುವಷ್ಟು ವ್ಯವಧಾನ, ಸಮಯಗಳಿರಲಿಲ್ಲ.

ಪೇಪರ್, ಪೆನ್ ತೆಗೆದುಕೊಂಡು ಬರೆಯಲಾರಂಭಿಸಿದ. ಕೈ ಬೇಗನೆ ಓಡಲಿಲ್ಲ. ಎಷ್ಟೋ ದಿನಗಳಾಗಿದ್ದವು ತಾನು ಪೆನ್ ಹಿಡಿದು!

ಯಾವುದು ಹರಿತ? ಪೆನ್? ಖಡ್ಗ? ಎಂಬುದು ಹಳೆಯ ವಾಕ್ಯ. ಯಾವುದು ಸಿಡಿತ? ಕಂಪ್ಯೂಟರ್? ಏಕೆ 47? ಎಂಬುದು ಹೊಸಮಾತು.

ಏನೇನೋ ಹೊಚ್ಚ ಹೊಸ ಆಲೋಚನೆಗಳು ಬರುತ್ತಿವೆ. ಮುಂದಿನ ವಾರ ಇದರ ಬಗ್ಗೆ ಒಂದು ಲವಲವಿಕೆಯ ಅಂಕಣ ಬರೆಯಬೇಕು.

ಕೈ ಬರೆಯುತ್ತಿತ್ತು. ಮೆದುಳು ಪುಟಗಳ ಮೇಲೆ ಅಕ್ಷರಗಳನ್ನು ತುಂಬುತ್ತಿತ್ತು. ಬರವಣಿಗೆ ಪೂರ್ತಿಯಾಗಲು ಕಾಯಲಿಲ್ಲ ಅವನು. ಆಗಾಗಲೇ ಅದನ್ನು ಡಿ.ಟಿ.ಪಿ. ಮಾಡುವಾತನಿಗೆ ನೀಡುತ್ತಿದ್ದ. ಡಿ.ಟಿ.ಪಿ.ಯವನ ಕಂಪ್ಯೂಟರಿನಲ್ಲಿಯೇ ಬರೆಯಬಹುದೆಂದು ಅನ್ನಿಸಲಿಲ್ಲ ಅವನಿಗೆ.

ಸ್ಪೂನಿನಲ್ಲಿ ಎಷ್ಟು ಊಟ ಮಾಡಿದರೂ, ಕೈಯಲ್ಲಿ ಕಲಸಿ ಒಂದು ತುತ್ತು ತಿಂದ ತೃಪ್ತಿ ಬರೋಲ್ಲ.

ಡಿ.ಟಿ.ಪಿ.ಯವನು ಕೊಟ್ಟ ಪ್ರೂಫ್‌ನಲ್ಲಿ ಅಲ್ಲಲ್ಲಿ ತಿದ್ದುಪಡಿ ಮಾಡಿದ. ಶೀರ್ಷಿಕೆಗಾಗಿ ಸ್ವಲ್ಪ ತಲೆ ಕೆರೆದುಕೊಂಡ.

ಕೊನೆಗೂ ಹೊಳೆದಿತ್ತು. ಸರ್ಕಾರಿ ನೌಕರರು- ಹಳ್ಳಿಗಳ ಉದ್ಧಾರದ ಧನಭಕ್ಷಕರು?

ಮತ್ತೊಮ್ಮೆ ತೃಪ್ತಿಯಿಂದ ಲೇಖನ ಓದಿ, ಕೊನೆಗೆ – ಇದರ ಮತ್ತಷ್ಟು ವಿವರಗಳಿಗೆ ನಮ್ಮ ಮುಂದಿನ ಸಂಚಿಕೆ ಓದಿರಿ ಎಂದು ಬರೆದು ನಿಟ್ಟುಸಿರಿಟ್ಟ. ಎಂತಹ ಕೆಟ್ಟ ಜನ! ಕೈ ತುಂಬಾ ಸಂಬಳ (ಜೊತೆಗೆ ಗಿಂಬಳ ಕೂಡಾ), ಶಾಶ್ವತ ಸರ್ಕಾರೀ ಕೆಲಸ. ತಮ್ಮ ತಟ್ಟೆಯಲ್ಲಿ ಪಂಚಭಕ್ಷ್ಯ ಪರಮಾನ್ನಗಳಿದ್ದರೂ ಪಕ್ಕದ ಎಲೆಯ ಗಂಜಿಯೂ ಬೇಕು. ಎಂತಹ ನಿಕೃಷ್ಟ, ದುಷ್ಟ ಆಸೆ!

ಕೈ ಗಡಿಯಾರ ನೋಡಿಕೊಂಡ. ಬೆಳಗಿನ ಝಾವ ಐದು ಗಂಟೆ.

ಪತ್ರಿಕೆ ಎಂಟಕ್ಕೆ ನಗರದ ಎಲ್ಲಾ ಜಾಗಗಳಿಗೂ ವಿತರಣೆ ಆಗುತ್ತದೆ. ನಗರದ ಎಡಿಷನ್ ಬೆಳಗ್ಗೆ ಹನ್ನೊಂದಕ್ಕೆ.

ಮನೆ ತಲುಪಿದಾಗ ಸುನೀತಿ ಇನ್ನೂ ಮಲಗಿದ್ದಳು.

ಪಾಪ! ಗರ್ಭಿಣಿ ಬೇರೆ, ಚೆನ್ನಾಗಿ ಮಲಗಲಿ ಎಂದುಕೊಂಡು ಅಡುಗೆಮನೆ ಸೇರಿ ಚಹಾ ಮಾಡಿಕೊಂಡ. ರಾತ್ರಿಯೆಲ್ಲಾ ನಿದ್ದೆ ಕೆಟ್ಟಿದ್ದರಿಂದ ತಲೆ ನೋಯಲಾರಂಭಿಸಿತ್ತು.

ಫೋನ್ ರಿಂಗಾಗಿತ್ತು.

"ಹಲೋ" ಎಂದ.

ಅತ್ತಕಡೆ ಅವನ ಪತ್ರಿಕೆಯ ಸಂಪಾದಕ ರಾಮಸ್ವಾಮಿ. ಅವನನ್ನು ರೈಲ್ವೇ ಪೊಲೀಸ್ ಠಾಣೆಯಲ್ಲಿರಬಹುದಾದ ಮನುಷ್ಯನ ಹೆಣದ ವಿವರ ಪಡೆಯಲು ಆದೇಶಿಸಿದ.

ಮತ್ತೊಂದು ಫೋನ್. ಈ ಸಲ ಫಜಲ್‌ನ ಕಾಲ್.

“ಬೇಗ ಬರ್ತೀನಿ. ಹತ್ತಂಟೆ ಲೇಟು. ನಾನೆಲ್ಲೋ ಅರ್ಜೆಂಟಾಗಿ ಹೋಗ್ಬೇಕು. ಈಗ್ಲೇ ಬರಲಾ?”

“ಮಿತ್ರಜೀತ್ ಹತ್ತಂಟೇಗೆ ಬಂದ್ರೆ?” ಎಂದ ಅಮರ್.

“ಅವನಿಗೆ ಮತ್ತೊಮ್ಮೆ ವಿವರಿಸು. ನನಗೆ ಆಮೇಲೆ ಟೈಮಿಲ್ಲ” ಎಂದ ಫಜಲ್.

ಫಜಲ್ ಬಂದು ಚಹಾ ಕುಡಿದ ನಂತರ ತನ್ನ ಹಿಂದಿನ ದಿನದ ಸಾಹಸವನ್ನು ವಿವರಿಸಿದ.

ಫಜಲ್ ಚಿಂತಾಕ್ರಾಂತನಾದ. “ಕೇರ್ಫುಲ್ ಅಮರ್! ನನಗ್ಯಾಕೋ ಒಂಥರಾ ಅನೀಜಿಯಾಗ್ತಿದೆ” ಎಂದ ಸ್ವಲ್ಪ ಹೊತ್ತಿನ ಮೌನದ ನಂತರ.

“ಡೋಂಟ್ ವರ್ರೀ. ದೇಶಕ್ಕಾಗಿ ಮಾಡ್ತಿರೋ ಅಳಿಲುಸೇವೆ ಇದು” ಎಂದ ಹೆಮ್ಮೆಯಿಂದ.

ಆಗ ಕೂಡಾ ಒಂದು ಮುಖ್ಯ ವಿಷಯ ಅವರನ್ನು ತಪ್ಪಿಸಿಕೊಂಡಿತ್ತು. ಅದೇನೆಂದು ಒಮ್ಮೆ ಯೋಚಿಸಿದ್ದರೆ ಚೆನ್ನಾಗಿರುತ್ತಿತ್ತೇನೋ...

ಅದಕ್ಕೆ ಕಾರಣ ಅವರ ಮಾತಿನ ಧಾಟಿ ಪಾಲ್‌ನತ್ತ ತಿರುಗಿದ್ದುದು.

“ಹೌದೂ... ಪಾಲ್‌ಗೆ ಹಿಂಸೆ ಕೊಡುವ ಅಗತ್ಯ ಏನಿತ್ತು? ಲೇಖನ ಬರೆದಿದ್ದಕ್ಕೆ ತಕ್ಕ ಶಿಕ್ಷೆ ಅಂತ ಸುಮ್ಮನೆ ಕೊಲ್ಲಬಹುದಿತ್ತಲ್ಲಾ” ಎಂದ ಅಮರೇಶ್.

“ನಿಜ! ಇದರ ಬಗ್ಗೆ ಆಲೋಚಿಸಲಿಲ್ಲ. ಯಾಕಿರಬಹುದು?” ಫಜಲ್ ಕೇಳಿದ.

“ಅವನ ಲೇಖನದಲ್ಲಿ ಯಾವುದೇ ಹೆಸರು ಉಲ್ಲೇಖಿಸಲ್ಪಟ್ಟಿರಲಿಲ್ಲ. ಅಂದರೆ ಇನ್ನೂ ಒಂದಿಷ್ಟು ವಿಷಯ ಅವನಲ್ಲಿದ್ದಿರಬೇಕು. ಯಾವ ರೂಪದಲ್ಲಿ?”

“ಸಿ.ಡಿ! ಇದು ನನಗೆ ನೆನಪಾಗಲಿಲ್ಲ. ಯಾಕಿರಬಹುದು?” ಫಜಲ್ ಕೇಳಿದ.

ಅಮರೇಶನಿಗೆ ಆ ಕ್ಷಣದಲ್ಲಿಯೂ ರೈಲ್ವೇ ಹಳಿಗಳ ಮೇಲೆ ಕೊಲೆಯಾದ ಮನುಷ್ಯ ನೀಡಿದ ಸಿ.ಡಿ.ಕವರ್ನ್ನ ನೆನಪಾಗದಿದ್ದುದು ವಿಪರ್ಯಾಸವಲ್ಲದೇ ಮತ್ತೇನು?

“ಕೋಡ್! ಹ್ಞಾಂ! ಮಿತ್ರಜೀತ್ ಬಳಿ ಯಾವುದೋ ಮೂರು ಚೀಟಿ ಇದ್ದ ಹಾಗೆ ನೆನಪು” ಎಂದ ಅಮರೇಶ್.

“ಅವನು ಬಂದಾಗ ಮರೆಯದೇ ಕೇಳು” ಎಂದ ಫಜಲ್ ಎದ್ದುನಿಂತು “ಮೂರು ದಿನ ಊರಲ್ಲಿರೋಲ್ಲ. ಗುಡ್‌ಲಕ್ ಕಣೋ ಅಮರ! ಮೇ ಗಾಡ್ ಬ್ಲೆಸ್ ಯೂ!” ಎಂದು ಅದೇಕೋ ಹತ್ತಿರ ಬಂದು ಅಮರೇಶನನ್ನು ಗಾಢವಾಗಿ ಆಲಿಂಗಿಸಿಕೊಂಡ.

“ಹೇ, ಯಾಕೋ ಕಣ್ಣೀರು ಫಜಲ್? ಆ ಕಾನ್ಟ್ ಬಿಲೀವ್ ದಿಸ್!” ಎಂದ ಅಮರೇಶ್ ಫಜಲ್‌ನನ್ನು ತನ್ನೆರಡೂ ತೋಳುಗಳಿಂದ ಹಿಡಿದು.

“ಯಾಕೋ ನನಗೆ ಈ ಸಲ ಹೊಟ್ಟೆಯಲ್ಲಿ ಸಂಕಟ ಆಗ್ತಿದೆ. ನಾಳೆ ಫೋನು ಮಾಡ್ತೀನಿ. ಈ ಸಲದ ಆರ್ಟಿಕಲ್ ತುಂಬಾ ಸ್ಟ್ರಾಂಗ್ ಆಗಿದೆಯಾ?” ಎಂದ ಏನೋ ನೆನಪಾದವನಂತೆ.

“ನೀನೇ ಓದಿ ಹೇಳು” ಎಂದು ತಾನು ತಂದಿದ್ದ ಪ್ರತಿಯನ್ನು ನೀಡಿದ. ಫಜಲ್ ಅದರ ಶೀರ್ಷಿಕೆ ಮೇಲೆ ಕಣ್ಣಾಡಿಸಿ “ಗ್ರೇಟ್!” ಎಂದ.

ಆ ಪತ್ರಿಕೆಯಿಂದಲೇ ಅವನಿಗೊಂದು ಮುದ್ದುಪೆಟ್ಟು ಹಾಕಿ “ಬೈ” ಎಂದ.

“ಗುಡ್‌ಬೈ!” ಎಂದ ಅಯಾಚಿತವಾಗಿ ಅಮರೇಶ್.

ಅದನ್ನು ಕೇಳಿ, ಆಗ ತಾನೇ ಎದ್ದಿದ್ದ ಸುನೀತಿ, ಬಾಗಿಲ ಬಳಿ ನಡೆದಿದ್ದ ಫಜಲ್ ಇಬ್ಬರೂ ಬೆಚ್ಚಿಬಿದ್ದರು.

ಇದು ಯಾವುದಾದರೂ ಅಪಾಯಕ್ಕೆ ಮುನ್ಸೂಚನೆಯೇ? ಎಂದು ಕಂಪಿಸಿದ ಫಜಲ್.

# 16

“ಮಿತ್ರಜೀತ್! ಇದ್ಯಾಕೋ ನಾವಂದುಕೊಂಡಿದ್ದಕ್ಕಿಂತ ಕಾಂಪ್ಲಿಕೇಟೆಡ್ ಆಗ್ತಿದೆ” ಎಂದ ಸ್ವರೂಪ್. ಉಮಾಶಂಕರ್ ಕೂಡಾ ಅವರೊಂದಿಗಿದ್ದ. ಸರ್ವೇಶ್ವರನ ಶವ ಮಹಜರ್ ಆಗಿ ಪೋಸ್ಟ್ ಮಾರ್ಟಂಗೆ ಸರ್ಕಾರಿ ಆಸ್ಪತ್ರೆ ತಲುಪಿತ್ತು. ಡಾಕ್ಟರನ ವರದಿ ದೂರವಾಣಿಯಲ್ಲಿ ಬಂದಿತ್ತು.

“ಸಯನೈಡ್ ಸೂಯಿಸೈಡ್” ಎಂದಿದ್ದ ತಪಾಸಣೆ ನಡೆಸಿದ್ದ ವೈದ್ಯ.

“ಅಂದರೆ ನಮ್ಮ ಹಿಡಿತಕ್ಕೆ ಅವನು ಸಿಕ್ಕಾಗ ಸರಿಯಾಗಿ ಪರೀಕ್ಷೆ ಮಾಡಬೇಕಿತ್ತು ನಾವು. ಅವನಿಗೆಲ್ಲೋ ಪ್ರಜ್ಞೆ ಬಂದಿರಬೇಕು. ಚಿತ್ರಹಿಂಸೆ, ಪೋಲೀಸ್ ಆತಿಥ್ಯ ನೆನೆಸಿಕೊಂಡೇ ಸಯನೈಡ್ ಮಾತ್ರೆ ಕಚ್ಚಿಬಿಟ್ಟಿರಬೇಕು” ಎಂದ ಮಿತ್ರಜೀತ್.

ಉಮಾಶಂಕರ್ ಬಹಳವೇ ಬೇಸರಗೊಂಡಿದ್ದ. ಇದು ಒಂದು ರೀತಿ ಅವನ ವೈಫಲ್ಯ. ಅತ್ತ ಪ್ರೇಂನಾಥ್, ಇತ್ತ ಸರ್ವೇಶ್ವರ್ ಇಬ್ಬರೂ ಹೆಣವಾಗಿ ನಮ್ಮ ಮುಂದಿನ ಪರಿಶೋಧ ನಿಲ್ಲುವಂತೆ ಮಾಡಿದ್ದಾರೆ.

“ಇನ್ನು ನಾನು ಹೊರಡ್ತೀನಿ. ಪ್ರಮಾಣವಚನದ ಸಮಾರಂಭ ಇದೆ. ಕ್ರೌಡ್ ಕಂಟ್ರೋಲಿಂಗ್‌ಗೆ” ಎಂದು ಎದ್ದು ನಿಂತ ಉಮಾಶಂಕರ್.

“ಯಾವುದಪ್ಪಾ ಪ್ರಮಾಣ ವಚನ? ಮುಖ್ಯಮಂತ್ರಿ ಯಾವ ಎಕ್ಸ್‌ಪ್ಯಾನ್‌ಷನ್ನೂ ಅನೌನ್ಸ್ ಮಾಡಿದ ಹಾಗಿಲ್ಲ” ಎಂದ ಸ್ವರೂಪ್.

“ಇದು ದಢೀರ್ ಅಂತ ಫಿಕ್ಸ್ ಆಗಿದೆ. ನಮ್ಮ ಸಿ.ಎಂ. ಪರಶಿವಮೂರ್ತಿ ಸ್ವಲ್ಪ ಬೇರೆ ರೀತಿ ಆಡಿರೋದು ಇದೇ ಮೊದಲು. ಯಾವಾಗ್ಲೂ ಎಲ್ಲವನ್ನೂ ಪತ್ರಿಕೆಯವರಿಗೆ, ಮಾಧ್ಯಮಕ್ಕೆ, ಜನರಿಗೆ ಹೇಳಿ ಆಮೇಲೆ ಆಕ್ಷನ್ ತಗೊಳ್ಳೋರು” ಎಂದ ಉಮಾಶಂಕರ್ ಹೊರಡಲಣಿಯಾಗುತ್ತಾ.

“ಅವರು ಯಾವಾಗಲೂ ದಕ್ಷತೆಗೆ ಹೆಸರುವಾಸಿ. ಈಗ ಯಾರದು ಸ್ವೇರಿಂಗ್ ಇನ್ ಸೆರ್ಮನಿ?” ಕೇಳಿದ ಸ್ವರೂಪ್.

“ನಾಗಸಿಂಹ! ಮೊನ್ನೆ ಮೊನ್ನೆ ಇನ್‌ಫರ್ಮೇಷನ್ ಖಾತೆ ತಗೊಂಡ್ರಲ್ಲಾ? ಈಗ ಅವರಿಗೆ ಗೃಹಖಾತೇನ ವಹಿಸಿಕೊಡ್ತಿದ್ದಾರೆ. ಸಿ.ಎಂ. ಅದನ್ನ ಇಷ್ಟು ದಿನ ಅವರೇ ಇಟ್ಟುಕೊಂಡಿದ್ರು” ಎಂದ ಉಮಾಶಂಕರ್ ತನ್ನ ಬೈಕೇರಿ.

ನಂತರ ಮುಂದಕ್ಕೆ ಬಾಗಿ ಸ್ವರೂಪ್, ಮಿತ್ರಜೀತ್‌ರಿಗೆ ಮಾತ್ರ ಕೇಳುವಂತೆ, "ಸಿ.ಎಂ. ಮಗಳು ದೇವನಾಯಕಿಗೂ, ನಾಗಸಿಂಹನಿಗೂ ಭಾಳ ಭಾಳ ಅಂತೆ. ಆದರೆ ಪ್ಲೀಜ್ ಡೋಂಟ್ ಕೋಟ್ ಮೀ" ಎಂದು ಅಲ್ಲಿಂದ ಹೊರಟುಹೋದ.

ಸ್ವರೂಪ್ ಮನೆಯೊಳಗೆ ಬಂದ. ಮಿತ್ರಜೀತ್ ಹಿಂಬಾಲಿಸದಿದ್ದಾಗ ಚಕಿತನಾಗಿ ವಾಪಸ್ಸು ಬಂದ.

ಮಿತ್ರಜೀತ್ ನಿಂತಲ್ಲೇ ಮರವಾದಂತಾಗಿಬಿಟ್ಟಿದ್ದ!

ಅವನ ಮೆದುಳಲ್ಲಿ ಅದೇಕೋ ಗೃಹಶಾಖೆ-ಪರಶಿವಮೂರ್ತಿ-ದೇವನಾಯಕಿ ಶಬ್ದಗಳು ಗಿರಕಿ ಹೊಡೆಯುತ್ತಿದ್ದವು. ಏನು ಈ ಮೂರರ ನಡುವಿನ ಕೊಂಡಿ? ಹೊಳೆಯಲಿಲ್ಲ.

"ಮಿತ್ರಜೀತ್! ಪ್ರೇಂನಾಥ್ ನಿನಗೆ ಪಾಲ್‌ನ ಕಥೆಗಳನ್ನು ಕೊಟ್ಟಾಗ ಮಾತಾಡಲೇ ಇಲ್ವಾ? ಇನ್ನೊಂದ್ಸಲ ಎಲ್ಲಾನೂ ನೆನಪಿಸ್ಕೋ. ಏನಾದ್ರೂ ಬಿಟ್ಟು ಹೋಗಿದ್ರೆ ಜ್ಞಾಪಕ ಬರುತ್ತೆ" ಎಂದ ಸ್ವರೂಪ್.

ಥಳುಕು ಹೊಡೆದಂತಾಗಿತ್ತು ಮಿತ್ರಜೀತ್‌ಗೆ.

ಪದಬಂಧ ಮಾಡುವಾಗ ಯಾವುದೋ ಒಂದು ಅಕ್ಷರ ದೊರೆತೊಡನೆ ಥಕಥಕನೆ ನಾಲ್ಕೈದು ಪದಗಳು ಹೊಳೆಯುವಂತೆ ಸ್ವರೂಪನ ಒಂದು ಮಾತು, ಅವನ ಒಳಗೇ ಹೊಗೆಯಾಡುತ್ತಿದ್ದ ಬೇರೆ ಬೇರೆ ಘಟನೆಗಳ ತುಣುಕುಗಳೆಲ್ಲಾ ಸೇರಿ, ಸರಿಯಾದ ಪರಿಪೂರ್ಣ ಚಿತ್ರವೊಂದನ್ನು ರೂಪಿಸಿದವು.

"ಸ್ವರೂಪ್!" ಎಂದ ಎಕ್ಸೈಟ್ ಆಗಿ.

"ಏನು?" ಎಂದು ಕೇಳಿದ ಸ್ವರೂಪ್.

"ನನಗೆ ಈಗ ಎಲ್ಲವೂ ಅರ್ಥ ಆಗ್ತಿದೆ ಸ್ವರೂಪ್! ರಾತ್ರಿ ಒಂದು ಸಾಹಸ ಮಾಡಬೇಕು. ರೆಡಿ?" ಎಂದ ನಗುತ್ತಾ ಮಿತ್ರಜೀತ್. ಸ್ವರೂಪ್ ಗಲಿಬಿಲಿಯಿಂದ ಅವನತ್ತ ನೋಡಿ ಹೂಂ ಎಂದ. ಮಿತ್ರಜೀತ್ ಎಲ್ಲಿಯೂ ಕುಳಿತುಕೊಳ್ಳದಾದ.

ಆಗ ಬಂದಿತ್ತು ಅಮರೇಶನ ಪೇಜರ್ ಸಂದೇಶ.

ಗಡಿಯಾರ ನೋಡಿದ. ಇನ್ನೂ ಹನ್ನೆರಡು ಗಂಟೆಗಳ ನಂತರ ಅಮರೇಶನನ್ನು ಭೇಟಿ ಮಾಡಿದರಾಯಿತು.

ಅಮರ್‌ನ ಪ್ರಶ್ನೆಯನ್ನು ಪುನರುಚ್ಚರಿಸಿದ. "ಪಾಲ್‌ನನ್ನು ಹಿಂಸಿಸುವ ಅಗತ್ಯ ಏನಿತ್ತು?"

ಸ್ವರೂಪ್ ರಾತ್ರಿಯ ಅಡುಗೆಗಾಗಿ ಸೌತೇಕಾಯಿ ಹೆಚ್ಚಿದ ನಂತರ ಈರುಳ್ಳಿ ಹೆಚ್ಚುತ್ತಾ ಕಣ್ಣೀರು ಸುರಿಸುತ್ತಾ "ಪಾಪ ಪಾಲ್! ಬಡಪಾಯಿ!" ಎಂದ ಸೊರ್ರನೆ ಮೂಗೆಳೆದುಕೊಂಡು.

"ನನಗೂ ಬೇಸರ ಆಗ್ತಿದೆ ಸ್ವರೂಪ್. ಆದರೆ ನೀನೀವತ್ತು ಅಳ್ತಿದ್ದೀಯಲ್ಲಾ?" ಎಂದ ಸ್ವರೂಪ್‌ನತ್ತ ನೋಡದೇ ಮಿತ್ರಜೀತ್.

"ಈರುಳ್ಳಿ ಹೆಚ್ಚು. ಸಂತೋಷದ ಸಂಗತಿ ಬಗ್ಗೇನೂ ಅಳಬಹುದು" ಎಂದ ಸ್ವರೂಪ್ ನಸುಮುನಿಸಿನಿಂದ.

"ಯಾಕೆ ನೀನು ಮದ್ವೆ ಆಗ್ಲ್ಯಾರ್ದು?" ಎಂದ ಮಿತ್ರಜೀತ್.

"ಯಾಕೆ ನೀನು ಮದ್ವೇ ಆಗ್ಲ್ಯಾರ್ದು?" ಎಂದ ಸ್ವರೂಪ್. ತನ್ನ ಮಾತಿನ ಅನುಕರಣ ಮಿತ್ರಜೀತ್‌ಗೆ ನಗೆ ತಂದಿತ್ತು.

"ನನಗೆ ಸರಿಯಾದ ಹುಡುಗಿ ಸಿಕ್ಕಿಲ್ಲ" ಎಂದ ಮಿತ್ರಜೀತ್.

"ನನಗೂ ಅಷ್ಟೇ!" ಎಂದ ಸ್ವರೂಪ್, ಟೇಬಲ್ ಮೇಲೆ ತಟ್ಟೆ, ಪಾತ್ರೆಗಳನ್ನಿಡುತ್ತಾ.

ಊಟ ಮಾಡುವಾಗ ಮಿತ್ರಜೀತ್ ತನ್ನ ಯೋಜನೆ ವಿವರಿಸಿದ. ಸ್ವರೂಪ್‌ನ ನೇತ್ರಗಳು ವಿಶಾಲವಾದವು.

"ಇಷ್ಟು ರಿಸ್ಕ್ ತಗೊಳ್ಳಲೇಬೇಕು. ಒಂದು ವೇಳೆ ನಾನು ಸಿಕ್ಕಿಕೊಂಡರೆ ನೀನಿದ್ದೀಯಲ್ಲಾ ಬೆಯಿಲ್ ಕೊಡೋಕ್ಕೆ. ನನ್ನ ಪರವಾಗಿ ಕೋರ್ಟಿನಲ್ಲಿ ವಾದಿಸೋಕ್ಕೆ" ಎಂದ.

"ಹೇ! ಅಷ್ಟೊಂದು ಯೋಚನೆ ಬೇಡ. ಬಟ್ ಸ್ಟಿಲ್ ಬೀ ಕೇರ್‌ಫುಲ್" ಎಂದ ಸ್ವರೂಪ್.

ಕಪ್ಪು ಬಣ್ಣದ ಬಟ್ಟೆ ಧರಿಸಿದರು ಇಬ್ಬರೂ. ರಾತ್ರಿ ಸುಮಾರು ಹನ್ನೊಂದೂವರೆಗೆ ಮೊದಲೇ ನಿರ್ಧರಿಸಿಕೊಂಡಿದ್ದ ಸ್ಥಳ ತಲುಪಿದರು. ಬಿಕೋ ಎನ್ನುವ ರಸ್ತೆ. ಭರೋ ಎನ್ನುವ ಗಾಳಿ. ಸಾಹಸಿಗಳಿಗೆ ಹೇಳಿ ಮಾಡಿಸಿದಂತಹ ವಾತಾವರಣ.

“ಗುಡ್ ಲಕ್ ಮಿತ್ರಜೀತ್!” ಎಂದ ಸ್ವರೂಪ್.

ಹೆಬ್ಬೆಟ್ಟೆತ್ತಿದ ಮಿತ್ರಜೀತ್ ತನ್ನ ಗುರಿ ತಲುಪಲು ಸಿದ್ಧನಾದ.

ಸ್ವರೂಪ್ ಆಲೋಚಿಸುತ್ತಿದ್ದ.

ಒಂದು ವೇಳೆ ಮಿತ್ರಜೀತ್‌ನ ಲೆಕ್ಕಾಚಾರದಲ್ಲೇನಾದರೂ ತಪ್ಪಿದ್ದರೆ... ಮುಂದಿನ ತಾಪತ್ರಯವನ್ನು ಊಹಿಸಿಯೇ ಕಳವಳಗೊಂಡ ಸ್ವರೂಪ್.

ಬೆಂಗಳೂರಿನ ಎಡಿಷನ್ ಬಂದ ಒಂದು ಗಂಟೆಯೊಳಗೆ ಅಮರೇಶನ ಮನೆಯ ಫೋನು, ಆಫೀಸಿನ ಫೋನು ಗಣಗಣ ಹೊಡೆದುಕೊಳ್ಳಲಾರಂಭಿಸಿದವು. ಅವನ ಪೇಜರ್ ತುಂಬಾ ಅಭಿನಂದನೆಯ ಸಂದೇಶಗಳೇ!

ಸೀದಾ ಸಾದಾ ಭಾಷೆಯಲ್ಲಿ ಓದುಗನೆದುರಲ್ಲಿ ಕುಳಿತು ಮಾತಾಡುತ್ತಿರುವನೇನೋ ಎಂಬ ಶೈಲಿ ಓದುಗರಿಗೆ ಮೋಡಿ ಮಾಡುತ್ತಿತ್ತು. ಓದುಗರು ವಾರ ವಾರ ಅವನ ಬರವಣಿಗೆಗಾಗಿ ಚಾತಕಪಕ್ಷಿಗಳಂತೆ ಕಾದು ಓದಿ, ಮಂತ್ರಮುಗ್ಧರಾಗುತ್ತಿದ್ದರು. ಇದು ಪತ್ರಿಕೆ ಆರಂಭವಾದಾಗಿನಿಂದಲೂ ಉಂಟಾಗುತ್ತಿದ್ದ ಪ್ರತಿಕ್ರಿಯೆ.

ಆಗಾಗ ಅವನದೇ ಜೀವನ ಚರಿತ್ರೆಯ ತುಣುಕುಗಳು, ಆತ್ಮವೃತ್ತಾಂತದಂತೆ ಪ್ರಕಟಗೊಂಡು ಓದುಗರ ಚಿತ್ತಭಿತ್ತಿಯಲ್ಲಿ ಶಾಶ್ವತವಾಗಿ ಇರುತ್ತಿದ್ದವು. ಇಂದು ಅಮರೇಶನ ಪರೀಕ್ಷಾ ದಿನ.

ಅವನ ಮಾಲೀಕ, ಪತ್ರಿಕೆಗೆ ಹಣ ಹಾಕಿದಾತ - ಬಹಳ ಅಪರೂಪಕ್ಕೆ ಫೋನಿನಲ್ಲಿ ಮಾತಾಡಿಸಿದ್ದ. ಹಣ ಬಿಟ್ಟರೆ ಬೇರೆ ವಿಷಯ ಮಾತಾಡದವನೂ ಆ ಮಾತನ್ನಾಡಬೇಕೆಂದರೆ ಆ ಲೇಖನ ಅದೆಷ್ಟು ಬಲಯುತವಾಗಿರಬೇಕು!

‘ಶಹಬ್ಬಾಸ್ ಅಮರ್!’ ಎನ್ನುವ ರೀತಿಯ ಸಂದೇಶಗಳ ಸುರಿಮಳೆಯಾಗಿತ್ತು. ಅಮರೇಶ ಒಂದು ರೀತಿಯ ಭ್ರಾಮಕ ಭಾವನೆಗೊಳಗಾಗಿದ್ದ. ತನ್ನ ಕಟು ಲೇಖನಗಳನ್ನು, ಅವುಗಳಲ್ಲಿನ ಹರಿತವನ್ನು ಅತಿಯಾಗಿ ಮೆಚ್ಚುವ ಜನ, ನಾಳೆ ತನ್ನ ಲೇಖನಿಯೆಂಬ ಖಡ್ಗ ಸ್ವಲ್ಪ ಮೊಂಡಾದರೂ ಸಹಿಸುವರೇ? ತನ್ನನ್ನು ಇಂದಿನಂತೆಯೇ ಆದರಿಸುವರೇ?

“ಸುನೀ! ನಾನು ಸ್ವಲ್ಪ ಹೊರಗೆ ಹೋಗಿ ಬರ್ತೀನಿ” ಎಂದ.

“ಇನ್ನೈದು ನಿಮಿಷ!” ಕೂಗಿದಳು ಹೊರಗಿನಿಂದ ಸುನೀತಿ.

"ಏನ್ಮಾಡ್ತಾ ಇದ್ದೀ?" ಎಂದ.

ಅವನ ಲೆದರ್ ಜಾಕೆಟ್ ಹಿಡಿದು ಒಳಬಂದಳು.

"ಅದ್ಯಾಕೆ ಆ ಬೈಕ್‌ನ ವಾರಕ್ಕೊಂದ್ಸಲವಾದರೂ ತೊಳಕೋಬಾರದಾ? ನಾನೂ ನಿಮ್ಗೆ ಹೇಳೀ ಹೇಳೀ ಸಾಕಾಗಿ ಈವತ್ತು ತೊಳೆದೆ" ಎಂದಳು.

"ಥ್ಯಾಂಕ್ಸ್ ಸುನೀ. ನಾನು ಬರ್ತೀನಿ. ಒಂದು ವೇಳೆ ಮಿತ್ರಜೀತ್ ಫೋನ್ ಮಾಡಿದ್ರೆ ರಾತ್ರಿ ಸಿಗ್ತೀನಿ ಅಂತ ಹೇಳು" ಎಂದು ಅವಳ ಮೂಗೆಳೆದ. ನಂತರ ಅದೇಕೋ ಅವಳನ್ನು ಬರಸೆಳೆದು ಮುಖವೆಲ್ಲಾ ಮುತ್ತಿಕ್ಕಿ "ನೀನು ಆರೋಗ್ಯವಾಗಿರಬೇಕು. ಮೊದಲ ಕೆಲವು ವಾರ ಕ್ರೂಷಿಯಲ್ಲು. ಹೊರಡ್ತೀನಿ. ನೀನು ಯಾವಾಗ್ಲೂ ಸಂತೋಷವಾಗಿರಬೇಕು. ಅದೇ ನನ್ನ ಆಸೆ" ಎಂದು ನುಡಿದು ಹೊರನಡೆದ.

"ಈ ಜ್ಯಾಕೆಟ್ ಬೇಡ್ವಾ?" ಎಂದಳು.

"ಈ ರಣಬಿಸಿಲಲ್ಲಾ? ಬೇಡಾ. ಬೈ" ಎಂದು ಕೂಗಿ ಹೇಳಿ ಬೈಕ್ ಕಿಕ್ ಮಾಡಿ ಹೊರಟುಬಿಟ್ಟ.

"ಮತ್ತೆ ಈ ಸಿ.ಡಿ?" ಅವಳ ಸ್ವರ ಅವನನ್ನು ತಲುಪಲಿಲ್ಲ. ಸಿ.ಡಿ.ಯನ್ನು ಅಮರೇಶನ ಕಬೋರ್ಡ್‌ನಲ್ಲಿಟ್ಟು ತನ್ನ ಕೆಲಸಕ್ಕೆ ಹೊರಟಳು.

ಅಮರೇಶ್ ತನ್ನ ಮನೆಯ ತಿರುವನ್ನು ದಾಟಿದೊಡನೆ ಒಂದು ಜೀಪ್, ಎರಡು ಬೈಕುಗಳು ಅವನನ್ನು ಹಿಂಬಾಲಿಸಿದವು.

ಮಿತ್ರಜೀತ್‌ಗೆ ತಿಳಿದಿತ್ತು. ತಾನು ತಗೊಳ್ಳುತ್ತಿರುವ ರಿಸ್ಕ್ ಅತ್ಯಂತ ದೊಡ್ಡದೆಂದು. ಆದರೆ ಆ ರಿಸ್ಕ್‌ನಿಂದ ರಿವಾರ್ಡ್ ಸಿಗುವ ಸಾಧ್ಯತೆ ಇದೆ ಎಂಬ ಅರಿವೂ ಇತ್ತು. ಸಿಕ್ಕಿಕೊಂಡರೆ ಅನುಭವಿಸುವ ಕಷ್ಟವೂ ಊಹಿಸುವಂತಹದ್ದೇ.

ಕಾನೂನು ಬಾಹಿರ ಕೆಲಸ ಮಾಡಿದವರು ಹೆದರುತ್ತಾರೆ. ಈ ವಿಷಯದ ಉಪಯೋಗ ಪಡೆಯಲು ತಾನೀಗ ಪ್ರಯತ್ನಿಸುತ್ತಿದ್ದಾನೆ.

ಸ್ವರೂಪ್‌ನಿಗೆ ಎಚ್ಚರಿಕೆಯಿಂದಿರಲು ಹೇಳಿ ಮರವನ್ನು ಹತ್ತಿ ಒಂದು ತುದಿಗೆ ಬಂದು ಗೋಡೆ ಹಾರಿದ. ಕೆಲವು ದಿನಗಳ ಹಿಂದೆ ಮಳೆ ಬಂದಾಗ ಆಶ್ರಯ ಪಡೆದಿದ್ದ ಮರ. ಅದರ ಪಕ್ಕದ ಗುಡ್ಡ. ಗುಡ್ಡಕ್ಕೆ ಆವರಿಸಿದಂತಿದ್ದ ದೊಡ್ಡ ಗೋಡೆ. ಅದನ್ನೇ ಅವನೀಗ ಹಾರಿದ್ದು. ಯಾವುದೋ ಮಾನಸಿಕ ಶಕ್ತಿ ಅವನಿಗೆ ಅಲ್ಲಿಗೆ ಹೋಗಲು, ಪರೀಕ್ಷಿಸಲು ಪ್ರೇರಣೆ ನೀಡಿತ್ತು.

ಕತ್ತಲಲ್ಲಿ ಮರಗಳು ಭೂತಗಳಂತೆ ನರ್ತಿಸುತ್ತಿದ್ದವು. ಗುಡ್ಡ ಹತ್ತುವಾಗ ಮೂರ್ನಾಲ್ಕು ಸಲ ಹಿಡಿತ ಸಡಿಲಗೊಂಡಿತು. ಅದು ಅವನ ಉತ್ಸಾಹವನ್ನು ಭಂಗಿಸಲಿಲ್ಲ. ನೊರಜುಗಲ್ಲುಗಳ ಮೇಲೆ ಕಾಲಿಟ್ಟು ಹತ್ತಿದ. ಅಲ್ಲಲ್ಲಿ ಬೆಳೆದಿದ್ದ ಪುಟ್ಟ ಗಟ್ಟಿಬೇರಿನ ಗಿಡಗಳು ಸಹಾಯ ಮಾಡಿದವು.

ಗುಡ್ಡದ ಸಮತಟ್ಟಾದ ಪ್ರದೇಶ ತಲುಪಿದ. ಮರಗಳ ನಡುವಿನ ಬೆಳಕು ಈಗಲೂ ಕಂಡಿತ್ತು. ಈ ಕಾಂಪೌಂಡಿನಲ್ಲಿರುವ ದೊಡ್ಡ ಬಂಗಲೆಯಿಂದ ಸುಮಾರು ದೂರದಲ್ಲಿ ಕೂಗಳತೆಗಿಂತ  ಹೆಚ್ಚಿನ ಅಂತರದಲ್ಲಿತ್ತು ಆ ಚಿಕ್ಕ ಫಾರಂಹೌಸ್. ಹತ್ತಿರ ಬಂದು ಕಿಟಕಿಯಲ್ಲಿ ಹಣಕಿದ. ಬೆಳಕು ಬಹಳವೇ ಮಂಕಾಗಿತ್ತು.

ಏನಾದರೂ ಚಲನೆ ಇರುವುದೇ ಎಂದು ಮೊದಲು ಪರಿಶೀಲನೆ ನಡೆಸಬೇಕು. ಅದಕ್ಕೂ ಮುಂಚೆ ಈ ಫಾರಂಹೌಸ್ ಸುತ್ತಲೂ ಏನಾದರೂ ಕಾವಲಿರುವುದೇ ಎಂದು ನೋಡಬೇಕು.

ಮಿತ್ರಜೀತ್‌ಗೆ ತಾನು ಮಾಡುತ್ತಿರುವ ಕೆಲಸ ಸರಿಯಲ್ಲವೆಂದು ತಿಳಿದಿತ್ತು. ಈಗ ತಾನು ಶೋಧಿಸಹೊರಟಿರುವುದು ನೀರಿನ ಚಿಲುಮೆ ಅಲ್ಲದೇ ಮೃಗತೃಷ್ಣಾ ಆದರೆ? ಎಂಬ ಅನುಮಾನವೂ ಇದೆ.

ಬೇರೆ ಯಾವ ಮಾರ್ಗವೂ ತೋಚದಿದ್ದುದರಿಂದ, ಸಿನಿಮಾ ಥಿಯೇಟರಿನಲ್ಲಿ ಪ್ರೇಂನಾಥ್ ನೀಡಿದ ಕ್ಲೂ, ಅವನನ್ನು ಇಲ್ಲಿಗೆ ಬರುವಂತೆ ಮಾಡಿದೆ. ಆ ಕ್ಲೂ ಎಷ್ಟು ನಿಜ? ಎಂಬ ಪ್ರಶ್ನೆ ಕಾಡದೇ ಇರಲಿಲ್ಲ ಮಿತ್ರಜೀತ್‌ಗೆ. ಕಾಲುಗಳು ಮನೆಯ ಮುಂಭಾಗಕ್ಕೆ ಅವನನ್ನು ತಂದವು.

ಅವನೂಹಿಸಿದಂತೆಯೇ ಯಾರೂ ಕಾವಲಿರಲಿಲ್ಲ. ಇದು ಯಾರ ಮನೆ ಎಂಬ ಪ್ರಶ್ನೆ ಅವನ ಮನದಲ್ಲಿ ಮೂಡಲಿಲ್ಲ. ಮತ್ತೆ ಕಿಟಕಿಗಳನ್ನೆಲ್ಲಾ ಗಮನಿಸಿದ. ಬಾಗಿಲು ಮುಚ್ಚಿದ್ದ ಕಿಟಕಿಯಲ್ಲಿ ಚಿಕ್ಕ ಸಂದಿಯೊಂದಿತ್ತು. ಆ ಸಂದಿನಿಂದ ಒಳಗೆ ನೋಡಿದವನು ನೆಮ್ಮದಿಗೊಂಡ.

ತನ್ನ ಪ್ರಯತ್ನದ ಮೊದಲ ಹೆಜ್ಜೆ ಸಫಲವಾಗಿದೆ!

ಈಗ ಎರಡನೆಯ ಯತ್ನ ಮಾಡಬೇಕು. ಮತ್ತೆ ಮುಂಬಾಗಿಲಿಗೆ ಬಂದ. ಅವನೆಣಿಕೆ ಸರಿಹೋಗಿತ್ತು. ಬಾಗಿಲಿಗೆ ಬೀಗ ಹಾಕಿರಲಿಲ್ಲ. ಬದಲಾಗಿ ಚಿಲಕಕ್ಕೆ ಒಂದು ನಟ್ಟು ಬೋಲ್ಟು ಸಿಗಿಸಲ್ಪಟ್ಟಿತ್ತು!

ಮನದಲ್ಲೇ ನಕ್ಕು ಅದನ್ನು ತೆಗೆದು ಬೆಕ್ಕಿನ ಹೆಜ್ಜೆ ಇಡುತ್ತಾ ಒಳನಡೆದ. ಕಿಟಕಿಯ ಬಾಗಿಲು ಮುಚ್ಚಿದ ಕೊಠಡಿಯ ಬಾಗಿಲಿಗೆ ಒಂದು ಸ್ಕ್ರೂಡ್ರೈವರ್ ಸಿಕ್ಕಿಸಲ್ಪಟ್ಟಿತ್ತು.

ಸದ್ದು ಮಾಡದೇ ಅದನ್ನು ತೆಗೆದ. ಹಾಸಿಗೆಯ ಮೇಲೆ ಮಲಗಿದ್ದ ವ್ಯಕ್ತಿಯನ್ನು ಮೆಲ್ಲಗೆ ಕರೆದ.

"ಲೊರೆಟ್ಟಾ!" ತಟಕ್ಕನೆ ಕುಳಿತವಳು ಚೀರಲು ಹೋಗಿ ಟಕ್ಕನೆ ಬಾಯಿ ಮುಚ್ಚಿಕೊಂಡಳು. ಆ ಮಂಕು ಬೆಳಕಿನಲ್ಲಿಯೂ ಸಂತೋಷ, ನಿರಾಳಗಳು ಅವನ ಕಂಗಳಲ್ಲಿ ಕಂಡಿದ್ದವು ಮಿತ್ರಜೀತ್‌ಗೆ.

"ನೀವು ಹೇಗೆ..." ಮಾತು ಮುಂದಕ್ಕೆ ಹೊರಡಲಿಲ್ಲ ಲೊರೆಟ್ಟಾಗೆ.

"ಅದೆಲ್ಲಾ ಆಮೇಲೆ. ನಡೀರಿ" ಎಂದ ಮಿತ್ರಜೀತ್ ಅವಸರಿಸುತ್ತಾ. ಹೆಜ್ಜೆ ಹೆಜ್ಜೆಯನ್ನೂ ಎಣಿಸುತ್ತಾ ಹೊರಬಂದು ನಟ್ಟುಬೋಲ್ಟು ಮತ್ತೆ ಸಿಗಿಸಿದ ಮಿತ್ರಜೀತ್.

ಬಂದ ದಾರಿಯಲ್ಲಿಯೇ ಅವಳ ಕೈ ಹಿಡಿದು ನಡೆದ. ಜೀನ್ಸ್ ಪ್ಯಾಂಟ್, ಟೀಷರ್ಟ್ ಧರಿಸಿದ್ದ ಲೊರೆಟ್ಟಾಳ ಕಂಗಳಿಂದ ನೀರು ಸುರಿಯುತ್ತಿತ್ತು. ಗುಡ್ಡವನ್ನು ದಾಟಿ ಸ್ವರೂಪ್ ನಿಂತಿದ್ದ ಮರದ ಕೊಂಬೆಯ ಬಳಿಗೆ ಬಂದರು. ಮಿತ್ರಜೀತ್ ಮೊಣಕಾಲೂರಿ ತನ್ನೆರಡೂ ಕೈಗಳನ್ನು ಒಂದರೊಂದರೊಳಗೆ ಬೆರಳುಗಳು ಹೆಣೆದುಕೊಳ್ಳುವಂತೆ ಇಟ್ಟುಕೊಂಡ.

ಲೊರೆಟ್ಟಾ ಧೈರ್ಯವಂತ ಸಾಹಸೀ ಹೆಣ್ಣು. ಅವನ ಕೈಮೇಲೆ ಮರದ ರೆಂಬೆ ಹಿಡಿದಳು. ಮರವನ್ನು ಕೋತಿಯಂತೆ ಹತ್ತಿ ಮರವಿಳಿದಳು. ಮಿತ್ರಜೀತ್‌ನನ್ನು ನಿರೀಕ್ಷಿಸುತ್ತಿದ್ದ ಸ್ವರೂಪ್ ಈ ಹೆಣ್ಣು ಅಲ್ಲಿಗೆ ಬಂದಾಗ ತಬ್ಬಿಬ್ಬಾದ. ಕತ್ತಲೆ ಹರಡಿದ್ದರಿಂದ ಅವಳಾರೆಂದು ತಿಳಿಯಲಿಲ್ಲ.

ಲೊರೆಟ್ಟಾ ಕೂಡಾ ಸ್ವರೂಪ್‌ನ ಇರವು ಕಂಡು ಗಲಿಬಿಲಿಗೊಂಡಳು. ಅಷ್ಟರಲ್ಲಿ ಮಿತ್ರಜೀತ್ ಅಲ್ಲಿಗೆ ತಲುಪಿದ್ದ.

ಮಿತ್ರಜೀತ್ ನಾಟಕೀಯವಾಗಿ ಸ್ವರೂಪ್‌ಗೆ ಹೇಳಿದ. "ಸ್ವರೂಪ್! ಮೀಟ್ ಮಿಸೆಸ್ ಲೊರೆಟ್ಟಾ ಸಿಲ್ವೆಸ್ಟರ್!"

ಸ್ವರೂಪನ ಬಾಯಿ ತೆರೆದುಕೊಂಡೇ ಇತ್ತು!

# 17

ಅಮರೇಶನಿಗೆ ತನ್ನ ಹಿಂದೆ ಇರುವ ವಾಹನಗಳು, ವ್ಯಕ್ತಿಗಳ ಬಗ್ಗೆ ಸುಳಿವು ಸಿಕ್ಕುವ ವೇಳೆಗೆ ತೀರಾ ತಡವಾಗಿತ್ತು.

ಅವನಿಂದು ತನ್ನ ಮಾಲೀಕನನ್ನು ಭೇಟಿಯಾಗಲು ಹೊರಟಿದ್ದ. ತನ್ನ ಮಾಲೀಕ ಬೆಳಗಿನ ಹೊತ್ತು ಸಾಮಾನ್ಯವಾಗಿ ನಗರದ ಹೊರಗಿನ ಗಾಲ್ಫ್ ಮೈದಾನದಲ್ಲಿ ಆಟವಾಡುತ್ತಿರುತ್ತಾನೆ. ಇಂತಹ ವಿಶಿಷ್ಟ, ಅಪರೂಪ ಲೇಖನ ಪ್ರಕಟವಾದಾಗ ತನ್ನ ಬಾಸ್‌ನನ್ನು ಮುಖಾಮುಖಿ ಭೇಟಿಯಾಗಿ ಪ್ರತಿಯನ್ನು ಕೊಡುವ ಪರಿಪಾಠವಿಟ್ಟುಕೊಂಡಿದ್ದ. ಪತ್ನಿ ಸುನೀತಿ ತಾನು ಹೊರಟಾಗ ಏನು ಹೇಳಿದಳೆಂದು ಊಹಿಸಲೆತ್ನಿಸಿದ. ಉಹೂಂ, ಪ್ರಯೋಜನವಾಗಲಿಲ್ಲ.

ಅಬ್ಬಾ! ಇಷ್ಟು ದೂರ ಒಂಟಿಯಾಗಿ ಪಯಣಿಸುವಾಗ ತನ್ನ ವಾಕ್‌ಮನ್ ಇಟ್ಟುಕೊಂಡಿದ್ದರೆ ಚೆನ್ನಿತ್ತು ಎಂದುಕೊಂಡಾಗ ಮುಖಕ್ಕೆ ಯಾರೋ ಬಾರಿಸಿದಂತಾಗಿತ್ತು.

ಅಯ್ಯೋ! ಅದು ಹೇಗೆ ನಾನು ಈ ವಿಷಯ ಮರೆತೆ?

ರೈಲ್ವೇ ಹಳಿ ಮೇಲೆ ಸತ್ತ ಮನುಷ್ಯ ನೀಡಿದ ಸಿ.ಡಿ. ಕವರ್!

ಅದರಲ್ಲಿ ಏನಿದ್ದಿತು? ಅದು ಹೇಗೆ ನನಗಿಷ್ಟು ಮರೆವು ಬಂತು? ತನ್ನನ್ನೇ ಬೈದುಕೊಳ್ಳುತ್ತಾ ಗಾಡಿಯನ್ನು ಒಂದು ಪಕ್ಕಕ್ಕೆ ನಿಲ್ಲಿಸಿದ.

ಅವನನ್ನು ಹಿಂಬಾಲಿಸುತ್ತಿದವರು ಅಲರ್ಟ್ ಆಗಿ ತಮ್ಮ ವಾಹನಗಳನ್ನು ನಿಲ್ಲಿಸಿದರು. ಅವನು ಬೈಕ್ ರಿಪೇರಿ ಮಾಡಲು ನಿಲ್ಲಿಸಿರುವನೆಂದುಕೊಂಡರು. ಅಮರೇಶ ತನ್ನ ಬೈಕಿನ ಡಬ್ಬಾಗಳನ್ನು ತೆರೆದ. ಸಿ.ಡಿ. ಕವರ್ ಇರಲಿಲ್ಲ!

ಎಲ್ಲಿ ಹೋಯಿತು? ರಸ್ತೆಯಲ್ಲೆಲ್ಲಾದರೂ ಬಿದ್ದು ಹೋಯಿತೇ? ಇರಲಾರದು. ಡಬ್ಬಾದ ಬೀಗ ಭದ್ರವಾಗಿಯೇ ಇದೆ.

ಹಾಗಾದರೆ… ಹಾಗಾದರೆ… ಇದ್ದಕ್ಕಿದ್ದಂತೆ ಸುನೀತಿಯ ನೆನಪು ಮುನ್ನುಗ್ಗಿತು. ಅರೆ! ಅವಳು ಗಾಡಿ ಕ್ಲೀನ್ ಮಾಡಿದಳು. ಕೈಯಲ್ಲಿ ಲೆದರ್ ಜಾಕೆಟ್ ಇಟ್ಟುಕೊಂಡಿದ್ದಳು. ಅಂದರೆ… ಅಂದರೆ… ಅವಳೇ ಸಿ.ಡಿ. ಕವರನ್ನು ಜೋಪಾನ ಮಾಡಿರಬೇಕು.

ತಕ್ಷಣವೇ ಅವಳಿಗೆ ಫೋನ್ ಮಾಡಬೇಕು. ಸುತ್ತಲೂ ನೋಡಿದ. ಮನೆಗಳು ಇರದ ನಿರ್ಜನ ತಾಣ. ಇನ್ನೂ ಸ್ವಲ್ಪ ಮುಂದೆ ನೋಡೋಣವೆಂದುಕೊಂಡು ಬೈಕ್ ಹತ್ತಿ ಸ್ಟಾರ್ಟ್ ಮಾಡಿ ಮುಂದಕ್ಕೆ ಚಾಲಿಸಿದ.

ಈಗ, ಬೆಂಬತ್ತಿದ್ದ ವಾಹನಗಳೂ ಚಲನೆಗೆ ಬಂದವು.

ಅಮರೇಶನಿಗೆ ಅದೇಕೋ ಸಂಶಯವುಂಟಾಗಿ ಹಿಂದೆ ನೋಡಿದ. ಮೂರು ವಾಹನಗಳು ಮಾತ್ರ ಇವೆ ಇಡೀ ರಸ್ತೆಗೆ – ತನ್ನ ಬೈಕ್ ಬಿಟ್ಟರೆ.

ಅವನ ಮನವೇನೋ ಕೇಡು ಶಂಕಿಸಿತು. ತನ್ನ ಅನುಮಾನದ ಸತ್ಯಾಸತ್ಯತೆ ತಿಳಿಯಲು ಬೈಕಿನ ವೇಗ ಹೆಚ್ಚಿಸಿದ. ಹಿಂದಿದ್ದ ವಾಹನಗಳ ವೇಗವೂ ವರ್ಧಿಸಿತ್ತು.

ಅಮರೇಶನಿಗೆ ಇದರ ಬುಡ ಶೋಧಿಸಬೇಕೆಂಬ ಛಲ ಮೂಡಿತು. ಸರಕ್ಕನೆ ಬೈಕ್ ನಿಲ್ಲಿಸಿದ. ಆ ವಾಹನಗಳೂ ನಿಂತವು.

ಅಂದರೆ ಇವರು ನನ್ನ ಬೇಟೆಗೆ ಬಂದಿದ್ದಾರೆ. ಇವರನ್ನು ಎದುರಿಸಲು ಸಾಧ್ಯವಾಗದು ಪ್ರಾಯಶಃ. ಸದ್ಯಕ್ಕೆ ನನ್ನ ಜೀವ ಉಳಿಸಿಕೊಂಡರೆ ಮುಂದಿನದರ ಬಗ್ಗೆ ಯೋಚಿಸಬಹುದು.

ಹೀಗೆ ಯೋಚಿಸಿದ್ದೇ ತಡ, ವೇಗವನ್ನು ಹೆಚ್ಚಿಸಿದ. ಆ ಬೈಕಿನಲ್ಲಿ ಬಹುಶಃ ಮೊದಲನೇ ಸಲ ಆ ಗತಿಯಲ್ಲಿ ಹಾದಿಯನ್ನು ಕ್ರಮಿಸುತ್ತಿದ್ದುದು.

ಏನು ಮಾಡಿಯಾನು?

ಭಾರತೀಯ ಸಿನಿಮಾಗಳಿಂದ ಪ್ರಭಾವಿತರಾಗಿ ಇಂತಹ ಕೆಲಸ ಮಾಡುತ್ತಿರುವರೋ, ಇಲ್ಲಾ ಇವನ್ನು ನೋಡಿಯೇ ಸಿನಿಮಾ ತೆಗೆಯುತ್ತಾರೋ ತಿಳಿಯದು. ಆದರೆ ತಾನು ಸಿನಿಮಾ ಹೀರೋನಂತೆ ಒಂಟಿಯಾಗಿ ಕಾದಾಡಲಾರ.

ರಸ್ತೆಯಲ್ಲಿ ಯಾವುದೇ ಕಟ್ಟಡವಾಗಲೀ, ಬೇರೆ ವಾಹನಗಳಾಗಲೀ ಕಾಣಿಸಲಿಲ್ಲ. ವೇಗವಾಗಿ ಆಲೋಚಿಸಿ ಬೈಕನ್ನು ಒಂದು ಪಕ್ಕಕ್ಕೆ ಉರುಳಿಸಿ, ಒಂದೆಡೆ ಕಂಡ ಕಬ್ಬಿನ ಗದ್ದೆಯೊಳಗೆ ನುಗ್ಗಿದ. ಯಾವ ಘಳಿಗೆಯಲ್ಲಿ ಅವನು ಬೈಕಿನಿಂದಿಳಿದನೋ ಆ ಕ್ಷಣದಲ್ಲಿಯೇ ಆ ಮೂರು ವಾಹನಗಳ ಜನರೂ ವಾಹನಗಳನ್ನು ನಿಲ್ಲಿಸಿದರು. ಅವರು ಗಾಡಿಗಳಿಂದಿಳಿದಾಗ ಅವರುಗಳ ಕೈಯಲ್ಲಿ ಹಾಕಿ ಸ್ಟಿಕ್, ಲಾಂಗ್ ಕತ್ತಿಗಳೂ ಬಂದವು.

ಅಯ್ಯೋ! ಆಟವಾಡೋಕ್ಕೆ ಉಪಯೋಗಿಸಲ್ಪಡಬೇಕಾದ ಹಾಕಿ ಸ್ಟಿಕ್ ಈಗ ಪ್ರಾಣ ತೆಗೆಯಲು ಹೊರಟಿದೆ. ಇದೆಂತಾ ವಿಚಿತ್ರ ಮತ್ತು ವಿಷಾದಕರ ಸನ್ನಿವೇಶ!!

ಮನುಷ್ಯರಲ್ಲಿ ಎರಡು ವಿಧ. ಪ್ರಾಣ ಉಳಿಸಿಕೊಳ್ಳುವವರು, ಪ್ರಾಣ ತೆಗೆಯುವವರು – ಎನ್ನಿಸಿಬಿಡುತ್ತದೆ.

ಈಗ ಎರಡೂ ವಿಧದ ಜನ ಅಲ್ಲಿದ್ದಾರೆ. ಆದರೆ ಉಳಿಸಿಕೊಳ್ಳಲು ಹೋರಾಡುತ್ತಿರುವವನೊಬ್ಬ, ತೆಗೆಯಲು ಒಂಬತ್ತು ಜನ!

ಅಮರೇಶ ಸ್ವಲ್ಪ ದೂರ ಓಡಿದ. ನಂತರ ಅದೇಕೋ ಸಿಟ್ಟು ಬಂತು. ಜೊತೆಗೆ ಹಠ!

ಹಿಂದಿನ ಕಾಲದಲ್ಲಿ, ಮಹಾಭಾರತದಂತಹ ಗ್ರಂಥದಲ್ಲಿ ಯುದ್ಧದಲ್ಲಿ ಹೋರಾಡುವವ ವೀರಸ್ವರ್ಗ ಸೇರುವ ಎಂದಿದ್ದಾರೆ. ಈಗ ನಾನೂ ಅದನ್ನೇ ಮಾಡುತ್ತೇನೆ ಎಂದು ವೀರಾವೇಶದಿಂದ ತಿರುಗುವ ವೇಳೆಗೆ ಟಪ್ಪನೆ ತಲೆಯ ಮೇಲೆ ಬಾಂಬ್ ಸ್ಫೋಟಿಸಿದಂತಾಗಿತ್ತು. ನಾಲ್ಕು ಒರಟು ಕೈಗಳು ಅವನ ರೆಟ್ಟೆ ಹಿಡಿದು ನಿಂತವು. ಉಳಿದವರು ಹಾಕಿ ಸ್ಟಿಕ್‌ನಿಂದ ಪ್ರಹಾರ ಮಾಡಿದರು.

ತನ್ನ ಕಾಲ್ಗಳನ್ನೇ ಉಪಯೋಗಿಸಿ ಎದುರಿಗಿದ್ದವರನ್ನು ಒದ್ದ. ಆದರೇನು? ಬಹಳ ಹೊತ್ತು ಅವನ ಸೆಣಸಾಟ ನಡೆಯಲಿಲ್ಲ.

ಒಂದು ಒಳ್ಳೆಯ ಕೆಲಸ ಮಾಡಿದ ತೃಪ್ತಿ ಅವನ ಮುಖದಲ್ಲಿ ಕಾಣಿಸುತ್ತಿದ್ದಂತೆ ಅವನ ಪ್ರಾಣಪಕ್ಷಿ ಅವನ ದೇಹ ಬಿಟ್ಟು ಹಾರಿಹೋಗಿತ್ತು.

ಅಲ್ಲಿಯೇ ಕುಳಿತಿದ್ದ ಕಾಗೆಗಳು ಇದ್ದಕ್ಕಿದ್ದಂತೆ ಆಗಸದತ್ತ ಹಾರಿ “ಕಾಕಾ” ಎನ್ನತೊಡಗಿದವು.

ಅವನ ಬಗ್ಗೆ ಹೊಗಳಿಕೆಯ ಹಾಡು ಹಾಡುತ್ತಿದ್ದವೋ ಏನೋ! ಅವನ ಕೊಲೆಗಡುಕರು ಅವನ ಹೆಣದ ಕಾಲುಗಳನ್ನು ಹಿಡಿದು ದರದರನೆ ರಸ್ತೆಗೆ ಎಳೆತಂದರು.

ಅವನನ್ನು ರಸ್ತೆಯ ನಡುವಿನಲ್ಲಿ ಹಾಕಿದರು. ಒಬ್ಬ ಅವನ ಬೈಕನ್ನು ಓಡಿಸಿಕೊಂಡು ಬಂದ. ಅವರ ಮೇಲೆ ಜೀಪನ್ನು ನಾಲ್ಕು ಬಾರಿ ಓಡಿಸಿ, ಬೈಕ್ ಜಖಂ ಮಾಡಿದರು. ಅವನ ಹೆಣದ ಮೇಲೆ ಜೀಪ್ ಒಮ್ಮೆ ಓಡಿತು. ಬಂದಿದ್ದ ಜನರ ನಾಯಕ ಅಲ್ಲಿನ ದೃಶ್ಯದ ವೀಕ್ಷಣೆ ಮಾಡಿದ. ನೋಡಲು ಅದೊಂದು

'ಹಿಟ್ ಆಂಡ್ ರನ್' ರೀತಿ ಇತ್ತು. ತಮ್ಮ 'ಘನ' ಕಾರ್ಯ ಮುಗಿಸಿ ಅವರು ಹೊರಟುಹೋದರು.

ಅಮರೇಶನ ಶವ ರಸ್ತೆಯ ನಡುವೆ ಅನಾಥವಾಗಿ ಬಿದ್ದಿತ್ತು. ಒಂದು ಗರುಡ ಪಕ್ಷಿ ಆಗಸದಲ್ಲಿ ಒಂಟಿಯಾಗಿ ಹಾರಾಡುತ್ತಿತ್ತು. ಬಹುಶಃ ಅವನ ವೀರಪ್ರಾಣವನ್ನು ವೈಕುಂಠಕ್ಕೆ ಕರೆದೊಯ್ಯುವುದಕ್ಕಿರಬಹುದು.

"ತುಂಬಾ ನಾಟಕೀಯವಾಗಿತ್ತು ನಿನ್ನ ಕೆಲಸ" ಎಂದ ಮೆಚ್ಚುಗೆಯಿಂದ ಸ್ವರೂಪ್. ಮಿತ್ರಜೀತ್ ಸುಮ್ಮನೆ ನಕ್ಕ. ಲೊರೆಟ್ಟಾ ನಿರಾಳವಾಗಿ ಟೀ ಕುಡಿಯುತ್ತಿದ್ದಳು. ಸ್ವರೂಪನ ಫಾರಂಹೌಸಿನಲ್ಲಿದ್ದರು ಅವರು ಮೂವರೂ.

"ಏನು ಮಾಡಲಿ? ನನಗೆ ಸಡನ್ನಾಗಿ ಲೊರೆಟ್ಟಾ ಅಲ್ಲಿರಬಹುದು ಅನಿಸಿತ್ತು. ಸೋ, ಅದಕ್ಕೇ ಆ ರೀತಿ ತಕ್ಷಣವೇ ಹೋಗಬೇಕಾಯ್ತು" ಎಂದ ಮಿತ್ರಜೀತ್.

"ಹೇಗೆ ಸಿಕ್ಕಿತು ನಿನಗೆ ಸುಳಿವು?" ಕೇಳಿದ ಸ್ವರೂಪ್.

ಮಿತ್ರಜೀತ್ ಎದ್ದು ನಿಂತು ಶತಪಥ ತಿರುಗುತ್ತಾ "ಅವತ್ತು ಪ್ರೇಂನಾಥ್ ಮನೆ-ದಕ್ಷತೆ-ಮಗಳು ಅಂತ ಹೇಳಿ ಹೊರಟುಹೋದ. ತಾನೊಬ್ಬ ದೊಡ್ಡ ಒಗಟುಗಾರ ಎಂದುಕೊಂಡನೋ ಏನೋ, ಅಷ್ಟು ಮಾತ್ರ ಹೇಳಿದ್ದ. ನಾನು ತುಂಬಾನೇ ತಲೆ ಕೆಡಿಸಿಕೊಂಡು ಏನೂ ಅರ್ಥವಾಗದೇ ಸುಮ್ಮನಾಗಿಬಿಟ್ಟೆ. ಆವತ್ತು ಉಮಾಶಂಕರ್ ಬಂದಾಗ ಸಿ.ಎಂ. ದಕ್ಷ ಎಂದ. ದೇವನಾಯಕಿ ಅವರ ಮಗಳು ಎಂದ. ನಾಗಸಿಂಹ ಗೃಹಮಂತ್ರಿಯಾಗಿ ಸ್ಟೇರಿಂಗ್ ಇನ್ ಮಾಡ್ತಾರೆ ಎಂದ. ಎಲ್ಲವೂ ನನ್ನ ತಲೆಯಲ್ಲಿ ಗಿರಿಗಿರನೆ ಸುತ್ತಿ ಪ್ರೇಂನಾಥ್ ಹೇಳಿದ್ದು ಇದೇನಾ ಎನ್ನಿಸಿತು" ಮಾತು ನಿಲ್ಲಿಸಿ ಉಸಿರೆಳೆದುಕೊಂಡ.

ಲೊರೆಟ್ಟಾ, ಸ್ವರೂಪ್ ಅವನನ್ನೇ ನೋಡುತ್ತಾ ಅವನ ಮಾತುಗಳನ್ನು ಆಸಕ್ತಿಯಿಂದ ಆಲಿಸುತ್ತಿದ್ದರು.

"ತಾಳೆ ಹಾಕಿ ನೋಡಿದಾಗ ಪ್ರೇಂನಾಥ್ ಹೇಳಿರೋದು ಇದೇ ಅನ್ನಿಸ್ತು. ಅವತ್ತೊಂದು ದಿನ ಮಳೆ ವಿಪರೀತವಾಗಿ ಸುರೀತಿದ್ದಾಗ ನೀವಿದ್ದ..." ಲೊರೆಟ್ಟಾಳತ್ತ ತಿರುಗಿ "ಮನೆ ನೋಡಿದ್ದೆ. ಅದರೊಳಗೆ ಸಿ.ಎಂ. ಪರಶಿವಮೂರ್ತಿ ಮಗಳು ದೇವನಾಯಕಿಯನ್ನ ಹಾಗೂ ಗೃಹಮಂತ್ರಿ ನಾಗಸಿಂಹನ್ನ ನೋಡಿದ್ದೆ. ಅದ್ಯಾಕೋ ಆ ಸ್ಥಳ ಒಂದು ಗುಟ್ಟಾದ ಜಾಗ ಅನ್ನಿಸಿತು. ಅಲ್ಲಿ ಯಾರನ್ನಾದರೂ ಮುಚ್ಚಿಟ್ಟರೆ ಯಾರೂ ಅಲ್ಲಿರಬಹುದೆಂದು ಕಲ್ಪಿಸಿಕೊಳ್ಳಲೂ ಸಾಧ್ಯವಿಲ್ಲ. ಸೋ, ಯಾವುದು ಸಾಧ್ಯವಿಲ್ಲವೋ ಅದನ್ನೇ

ಗೆಸ್ ಮಾಡ್ದೆ. ಲೊರೆಟ್ಟಾ ಪತ್ತೆ ಆಯ್ತು" ಎಂದು ಮುಗಿಸಿದ ಮಿತ್ರಜೀತ್. ನಂತರ ಲೊರೆಟ್ಟಾಳನ್ನು ಉದ್ದೇಶಿಸಿ "ಈಗ ನಿಮ್ಮ ಕಥೆ ಹೇಳಿ" ಎಂದ.

ಲೊರೆಟ್ಟಾ ಒಮ್ಮೆ ಮೈ ಅದುರಿಸಿ, "ಅವತ್ತು ಬೆಲ್ ಆದಾಗ ಯಾರೋ ತಿಳಿದವರು ಬಂದರು ಅಂತ ಬಾಗಿಲು ತೆರೆದೆ. ಮತ್ತೆ ಮುಚ್ಚೋಕ್ಕೆ ಆಗದ ಹಾಗೆ ಕಾಲನ್ನು ಅಡ್ಡ ಇಟ್ಟರು. ಗನ್ ತೋರಿಸಿದರು. ನಿನ್ನ ಗಂಡ ಸಿಲ್ವೆಸ್ಟರ್ನ ಜೀವ ಉಳಿಯಬೇಕಾದ್ರೆ ನಾನು ಹೇಳಿದ ಜಾಗಕ್ಕೆ ಬಾ ಅಂದ್ರು. ನಾನು ಹೆಚ್ಚು ಪ್ರತಿಭಟಿಸೋಕ್ಕೆ ಹೋಗಲಿಲ್ಲ. ತುಂಬಾ ಕ್ರೂರ ಜನರ ಹಾಗೆ ಕಂಡರು. ನೀವು ಯಾರಾದರೂ ಬರಬಹುದೂಂತ ಒಂದು ಮಿಣುಕು ಆಸೆ ಇಟ್ಕೊಂಡು ನನ್ನ ಬ್ಯಾಗನ್ನು ಅಡ್ಡಾದಿಡ್ಡಿ ಬಿಸಾಡಿದೆ" ಕ್ಷಣಕಾಲ ನಿಲ್ಲಿಸಿದಳು.

"ನಾನು ನಿನಗೆ ಆವತ್ತೇ ಹೇಳಿದ್ನಲ್ಲಾ" ಎಂದ ಮಿತ್ರಜೀತ್, ಸ್ವರೂಪ್‌ಗೆ.

"ನನ್ನನ್ನು ರಾತ್ರಿವರೆಗೆ ಯಾವುದೋ ಮನೇಲಿಟ್ಟು ಆಮೇಲೆ ನೀವು ನನ್ನನ್ನು ನೋಡಿದ ಮನೆಗೆ ಕರೆದೊಯ್ದರು. ಇನ್ನೂ ಎರಡು ವಾರವಾದರೂ ನಾನಲ್ಲಿ ಇರಬೇಕಿತ್ತಂತೆ. ಎರಡೋ ಮೂರೋ ಮುಖ್ಯ ಕೆಲಸ ಆದ ಮೇಲೆ ನನ್ನ ಬಿಟ್ಟುಬಿಡ್ತಿದ್ರಂತೆ" ಎಂದವಳು "ಸಿಲ್ವೆಸ್ಟರ್ ಹೇಗಿದ್ದಾರೆ?" ಆತಂಕದಿಂದ ಕೇಳಿದಳು.

"ನಾನು ಕೋರ್ಟಿಗೆ ಹೋದಾಗ ವಿಚಾರಿಸ್ದೆ. ಹೀ ಈಸ್ ಫೈನ್" ಎಂದ ಸ್ವರೂಪ್.

"ಐ ಶುಡ್ ಥ್ಯಾಂಕ್ ಗಾಡ್ ಆಂಡ್ ಯೂ ಟು ಫಾರ್ ದಟ್" ಎಂದಳು ಕೃತಜ್ಞತಾಪೂರ್ವಕವಾಗಿ.

"ದೇವರಿಗೆ ಧನ್ಯವಾದ ಹೇಳಿ. ನಮಗೆ ಬೇಕಿಲ್ಲ" ಎಂದು ನಸುನಕ್ಕ ಮಿತ್ರಜೀತ್, ನಂತರ ಹಠಾತ್ತನೆ ಏನೋ ನೆನೆಸಿಕೊಂಡು "ಲೊರೆಟ್ಟಾ, ಆವತ್ತು ಪಾಲ್ ಸಾಯುವಾಗ ನೀವಿದ್ರಿ ಅಲ್ವಾ? ಏನಾದ್ರೂ ನಿಮಗೆ ಹೇಳಿದ್ನಾ?" ಎಂದ ಕಾತರದಿಂದ.

ಲೊರೆಟ್ಟಾ ದುಃಖದಿಂದ "ಪಾಲ್‌ನ ಕೊಲೆ ತುಂಬಾ ಅನ್ಯಾಯದಿಂದ ನಡೆದಿದೆ. ಅದು ಯಾವುದೋ ಎವಿಡೆನ್ಸ್ ಕಲೆಕ್ಟ್ ಮಾಡಿದ್ನಂತೆ. ಅದಕ್ಕೇ ಚಿತ್ರಹಿಂಸೆ ಕೊಟ್ಟು ಸಾಯಿಸಿದರು" ಕಣ್ಣೀರು ಸುರಿಯಿತು ಅವಳ ಕಂಗಳಿಂದ. ನಂತರ ಸಿಟ್ಟಿನಿಂದ "ಆ ಬ್ರೂಟ್‌ಗಳನ್ನು ಪನಿಶ್ ಮಾಡ್ಬೇಕು!" ಎಂದಳು ಹಲ್ಲು ಕಡಿದು.

"ಸತ್ಯ ಸತ್ತಿಲ್ಲ ಲೊರೆಟ್ಟಾ! ಖಂಡಿತ ಶಿಕ್ಷೆ ಕೊಡಿಸೋಣ" ಎಂದ ಸ್ವರೂಪ್.

“ನಿಮ್ಮ ಮನೆಯಲ್ಲಿ ಅವನ ಕಥೆಗಳ ಸ್ಕ್ರಿಪ್ಟ್ ಜೊತೆಯಲ್ಲಿ ಮೂರು ಪೇಪರ್ ಸ್ಲಿಪ್ ಹಾಕಿದ್ನಂತೆ. ಅದ್ರಲ್ಲಿತ್ತಂತೆ ಕ್ಲೂ” ಎಂದಳು.

ಮಿತ್ರಜೀತ್ ಉದ್ವೇಗಗೊಂಡ. “ಹೌದು! ಮೂರು ಚೀಟಿ ಇವೆ. ಇಂಗ್ಲೀಷಲ್ಲಿ ಬರೆದಿದ್ದಾನೆ. ಅದರಲ್ಲೇ ನನಗೆ ಲೊರ್, ಸಿಲ್ ಅನ್ನೋ ಶಬ್ದಗಳು ಸಿಕ್ಕಿದ್ದಕ್ಕೇ ನಾನು ನಿಮ್ಮ ಮನೆಗೆ ಬಂದಿದ್ದು” ಎಂದ ಮಿತ್ರಜೀತ್.

“ಹೌದು. ನಮ್ಮ ಬಗ್ಗೆ ಕೂಡಾ ನಿಮಗೆ ಹೇಳಲೆತ್ನಿಸಿದನಂತೆ. ಮೊದಲು ಎರಡನೇ ಚೀಟಿಯ ಬ್ಯಾಕ್ ಸೈಡು...” ನೆನಪಿಸಿಕೊಂಡು ಮುಂದುವರಿಸಿದಳು. “ನಂತರ ಮೂರನೆಯ ಚೀಟಿಯ ಹಿಂಭಾಗ ಮೊದಲ ಚೀಟಿಯ ಮುಂಭಾಗ, ಮೂರನೆಯ ಚೀಟಿ ಫ್ರಂಟು, ನಂತರ ಎರಡನೇ ಸ್ಲಿಪ್ ಮುಂಭಾಗ, ಕೊನೆಗೆ ಮೊದಲ ಚೀಟಿ ಮುಂಭಾಗವನ್ನು ರಿವರ್ಸ್ ಆರ್ಡರ್‌ನಲ್ಲಿ ಪ್ರತಿ ಮೂರನೇ ಅಕ್ಷರವಾಗಿ ಕನ್‌ವರ್ಟ್ ಮಾಡಿ...”ವಿವರಿಸಿದಳು. ಮಿತ್ರಜೀತ್ ಬೆರಗಾದ. ಅವನ ಬೆರಗು ಪಾಲ್‌ನ ಕೋಡ್ ಬಗ್ಗೆ ಅಲ್ಲ, ಲೊರೆಟ್ಟಾಳ ನೆನಪಿನ ಶಕ್ತಿಯ ಬಗ್ಗೆ.

ಅದನ್ನೇ ಹೇಳಿದ ಲೊರೆಟ್ಟಾಗೆ.

ಅವಳು ನಾಚಲಿಲ್ಲ. ಬದಲಾಗಿ ಮ್ಲಾನವದನಳಾಗಿ “ಮಿತ್ರಜೀತ್! ಪಾಲ್ ಎಂದರೆ ನನಗೆ ತುಂಬಾ ಬೇಕಾಗಿದ್ದವನು ಅವನ ಪ್ರತಿ ಮಾತೂ ನನಗೆ ಟೆನ್ ಕಮಾಂಡ್‌ಮೆಂಟ್‌ಸ್‌ನ ಹಾಗೆ. ಹಾಗಿರುವಾಗ ಅವನು ಜೀವವನ್ನೇ ತೆತ್ತಿದ್ದಕ್ಕೆ ಕಾರಣವಾದ ಈ ಸಾಮಾನ್ಯ ಕೋಡ್ ನೆನಪಿಲ್ಲದಿದ್ದರೆ ಹೇಗೆ?” ಎಂದಳು.

ಈಗೆ ನಿಜವಾಗಿಯೂ ಅಸಾಮಾನ್ಯಳು ಎಂದುಕೊಂಡ ಸ್ವರೂಪ್.

“ಅಂದರೆ ಈ ದಿನ ಸಿಕ್ಕಿದ ಅಮರೇಶನ ಸಂದೇಶ ಇದೇ ಸಂದೇಹ ವ್ಯಕ್ತಪಡಿಸಿತ್ತು” ಎಂದು ಜ್ಞಾಪಿಸಿಕೊಂಡ ಮಿತ್ರಜೀತ್.

ಅಮರೇಶನಿಗೆ ಒಮ್ಮೆ ಫೋನ್ ಮಾಡಬೇಕು ಎಂದುಕೊಂಡ. ಅಷ್ಟರಲ್ಲಿ ಅವನ ಪೇಜರ್‌ಗೆ ಸಂದೇಶ ಬಂದಿತ್ತು. ಆ ಸಂದೇಶ ನೋಡಿ ಆಘಾತಕ್ಕೊಳಗಾದ ಮಿತ್ರಜೀತ್.

ಅವನ ಮೊಗ ನೋಡಿದೊಡನೆ ಏನೋ ಅನಾಹುತ ನಡೆದಿದೆ ಎನಿಸಿತು ಸ್ವರೂಪ್‌ಗೆ.

“ಏನಾಯ್ತು?” ಎಂದು ಕೇಳಿದ.

"ಅಮರೇಶ್ ಆಕ್ಸಿಡೆಂಟ್ ಆಗಿ ಸತ್ತುಹೋಗಿದ್ದಾನೆ!"

# 18

ಪೊಲೀಸ್ ಠಾಣೆಗೆ ಮಿತ್ರಜೀತ್, ಸ್ವರೂಪ್ ಹೋಗುವ ವೇಳೆಗೆ ಅಲ್ಲಿಗೆ ಫಜಲ್ ಬಂದಿದ್ದ. ಉಮಾಶಂಕರ್ ಕೂಡಾ ಇದ್ದ.

“ಇಟ್ ಈಸ್ ಅ ಕ್ಲಿಯರ್ ಕೇಸ್ ಆಫ್ ಆಕ್ಸಿಡೆಂಟ್. ರಸ್ತೆ ಮಧ್ಯೆ ಬೈಕ್ ಬಿದ್ದಿದೆ. ಮೂರು ಜನ ವಿಟ್ನೆಸ್ ಇದ್ದಾರೆ. ಒಂದು ಟ್ರಕ್ ಸಡನ್ನಾಗಿ ಬ್ರೇಕ್ ಫೆಯಿಲ್ ಆಗಿದ್ದರಿಂದ ವಿಪರೀತ ಸ್ಪೀಡಾಗಿ ಬಂತಂತೆ. ಅದನ್ನು ಅವಾಯ್ಡ್ ಮಾಡೋಕ್ಕೆ ಹೋಗಿ ಕೆಳಗೆ ಬಿದ್ದಿದ್ದಾನೆ. ಆದರೂ ಟ್ರಕ್ ಮೈಮೇಲೆ ಹತ್ತಿದ್ದರಿಂದ ಪ್ರಾಣ ಸ್ಪಾಟ್‌ನಲ್ಲೇ ಹೋಗಿದೆ” ಎಂದ ಟ್ರಾಫಿಕ್ ಇನ್‌ಸ್ಪೆಕ್ಟರ್ ಘನಲಿಂಗ. ಘನಲಿಂಗನ ಬಗ್ಗೆ ಮಿತ್ರಜೀತ್‌ಗೆ ಬಹಳವೇ ಅನುಮಾನಾಸ್ಪದವಾದ ವಿಷಯಗಳು ತಿಳಿದಿವೆ. ಇಂತಹವನ ಠಾಣೆಯಲ್ಲಿ ಅಮರೇಶನ ಹೆಣ ಇದೆ ಎಂದರೆ ಈ ಸಾವಿನ ಹಿಂದೆ ಏನೋ ಷಡ್ಯಂತ್ರವಿದೆ. ಫಜಲ್ ಈಗ ತಾನೇ ಅಮರೇಶನ ಲೇಖನದ ಬಗ್ಗೆ ಹೇಳಿದ. ಅಂದರೆ ಇದು ಪಾಲ್‌ನ ಸಾವಿನ ರೀತಿಯದೇ.

“ಫಜಲ್! ಅಮರೇಶನ ಮಿಸೆಸ್‌ಗೆ ವಿಷಯ ತಿಳಿಸಿದೆಯಾ?” ಕೇಳಿದ ಮಿತ್ರಜೀತ್.

“ಇಲ್ಲ! ಆ ದುಃಖಕರ ವಿಷಯಾನ ನನ್ನಿಂದಲೇ ಹೇಳಿಸೋಕ್ಕೆ ಉಮಾಶಂಕರ್ ಪ್ಲಾನ್ ಮಾಡಿದ್ದಾನೆ” ಎಂದ ಫಜಲ್. ಅವನ ತಲೆ ಜೇನುಗೂಡಾಗಿತ್ತು.

ಅಮರೇಶನ ರಚನೆ ನಿಜಕ್ಕೂ ಸ್ಫೋಟಕವೇ. ಬಾಂಬ್‌ನಂತೆ ಸಿಡಿದಿದೆ ಆ ದುರಾತ್ಮರ ಮೇಲೆ. ಅದಕ್ಕೇ ಸೇಡು ತೀರಿಸಿಕೊಂಡಿದ್ದಾರೆ.

ನಿನ್ನೆ ಪಾಲ್, ಇಂದು ಅಮರೇಶ್.. ನಾಳೆ ನಾನಾ? ಎನ್ನುವ ಪ್ರಶ್ನೆ ಅವನ ಮನದಲ್ಲೊಮ್ಮೆ ಸುಳಿದು ಹೋಯಿತು.

ಅವರು ತಮ್ಮದಲ್ಲದ ಖಜಾನೆಯಲ್ಲಿರುವ ಹಣದ ಬಗ್ಗೆ ಹಸ್ತಕ್ಷೇಪ ಮಾಡಿದರೆ ಅಪರಾಧವಲ್ಲ. ಆದರೆ ಅದನ್ನು ಎತ್ತಿ ತೋರಿಸಿದ ಪತ್ರಕರ್ತ ಮಹಾಪರಾಧಿ! ಇದಕ್ಕೆ ಕೊನೆ ಹೇಗೆ?

ಇನ್ನು ಅಮರ್‌ನ ಪತ್ನಿ ಸುನೀತಿಗೆ ವಿಷಯ ತಿಳಿಸಬೇಕು. ತನ್ನಲ್ಲಿ ಇದ್ದಬದ್ದ ಧೈರ್ಯವನ್ನೆಲ್ಲಾ ಒಗ್ಗೂಡಿಸಿಕೊಂಡ. ಅವಳಿಗೆ ಫೋನ್ ಮಾಡಿ

ಹೇಳುವುದಕ್ಕಿಂತ ಎದುರಿನಲ್ಲಿ ಹೇಳಿದರೊಳಿತು. ಒಂದು ವೇಳೆ ಅವಳಿಗೆ ಆಘಾತವನ್ನು ಸಹಿಸಿಕೊಳ್ಳಲು ಸಾಧ್ಯವಾಗದಿದ್ದರೆ ವೈದ್ಯಕೀಯ ಸಹಾಯ ಬೇಕಾದೀತು.

ಅವಳ ಮನೆ ತಲುಪಿ ಬಾಗಿಲು ತಟ್ಟಿದ. ಬಾಗಿಲು ತೆರೆದ ಸುನೀತಿ ಫಜಲ್‌ನನ್ನು ಅಚ್ಚರಿ ಆನಂದಗಳೊಂದಿಗೆ ಸ್ವಾಗತಿಸಿದಳು. "ಇದೇನಿದು? ಇದ್ದಕ್ಕಿದ್ದ ಹಾಗೆ?" ಎಂದಳು ಅವನಿಗೆ ಕೂರಲು ಕುರ್ಚಿ ತೋರಿಸಿ.

ಹೇಗೆ ಪ್ರಾರಂಭಿಸಲಿ ? ಎಂದುಕೊಂಡ.

"ನೀವು ಏನೋ... ಐ ಮೀನ್.." ನಿಲ್ಲಿಸಿದಳು.

ಫಜಲ್‌ನ ಮುಖ ಅವಳಿಗೆ ಕೆಲವು ಸತ್ಯಗಳನ್ನು ... ಕಟು ಸತ್ಯಗಳನ್ನು ಅರುಹಿತ್ತು.

"ಸುನೀತಿ... ಅಮರ್..." ಗಂಟಲುಬ್ಬಿ ಬಂದಿತ್ತು ಫಜಲ್‌ಗೆ.

"ಎಲ್ಲಿ?" ಎಂದಳು ಶಾಂತಸ್ವರದಲ್ಲಿ.

ಅವಳ ಶಾಂತಚಿತ್ತ ಅವನಲ್ಲಿ ಶಂಕೆ ಮೂಡಿಸಿತ್ತು. ಇವಳಿಗೆಲ್ಲೋ ಡೀಪ್ ಶಾಕ್ ಆಗಿದೆ!

"ಗೌರ್ಮೆಂಟ್ ಆಸ್ಪತ್ರೆ..." ಎಂದ ಮೆಲ್ಲನೆ.

"ಪ್ರಾಣ...?"

ಇಲ್ಲವೆಂದು ಅಡ್ಡಡ್ಡಲಾಗಿ ತಲೆ ಆಡಿಸಿದ.

ಕುರ್ಚಿ ಹಿಡಿದುಕೊಂಡು ಮೆಲ್ಲನೆ ಕುಕ್ಕರಿಸಿದಳು. ಇವಳಿಗೆ ನಿಧಾನಾಘಾತ ಆಗಿದೆ ಎಂದುಕೊಂಡ ಫಜಲ್.

"ಡಾಕ್ಟರ್‌ಗೆ ಫೋನ್ ಮಾಡ್ತೀನಿ" ಎಂದ.

"ಬೇಡ ಫಜಲ್. ಅಮರ್ ಹೇಳಿದ ಒಂದು ಕೆಲಸ ಈಗ ನಡೀತಿದೆ. ನಿಮ್ಮ ಹೆಲ್ಪ್ ತೊಗೊಳ್ಳೋದು. ಎರಡನೇದು ಯಾವಾಗ ಆಗುತ್ತೋ ತಿಳೀದು. ಯಾವುದಕ್ಕಾದ್ರೂ ಸಿದ್ಧವಾಗಿರಬೇಕು ಎಂದಿದ್ರು ಅಮರ್. ಬಹುಶಃ ಇದನ್ನು ಎಕ್ಸ್‌ಪೆಕ್ಟ್ ಮಾಡಿದ್ರೇನೋ" ಎಂದಳು ಸುನೀತಿ ನಿರ್ಭಾವುಕಳಾಗಿ.

“ಸುನೀತಿ ಅಮರ್‌ಗೆ ಆಗಿರೋದು ಆಕ್ಸಿಡೆಂಟ್” ಎಂದ ಫಜಲ್.

“ನಂಬ್ತೀರಾ ಅದನ್ನ  ನೀವು ಫಜಲ್?” ಕೇಳಿದಳು ನೇರವಾಗಿ ನೋಡಿ. ಫಜಲ್ ಚಡಪಡಿಸಿದ.

ಮಿತ್ರಜೀತ್‌ನಿಂದ ಅದರ ಬಗ್ಗೆ ಸಂದೇಶ ಬರಬೇಕು. ಆಗ ಅವನ ಪೇಜರ್ ಜೀವ ತಳೆದಿತ್ತು.

ಮಿತ್ರಜೀತ್ ಅವನ ಮೊಬೈಲ್ ನಂಬರ್ ನೀಡಿ ತಕ್ಷಣವೇ ಕರೆ ಮಾಡೆಂದಿದ್ದ.

ಫಜಲ್ ಒಮ್ಮೆಗೇ ಫೋನಿನತ್ತ ಹಾರಿ ಡಯಲ್ ಮಾಡಿದ.

ಮಿತ್ರಜೀತ್ ರಿಸೀವ್ ಮಾಡಿ, “ಫಜಲ್ ಹಾಕಿ ಸ್ಟಿಕ್‌ಗಳಿಂದ ಹೊಡೆದು ಕೊಂದಿದ್ದಾರೆ. ಆಮೇಲೆ ರಸ್ತೆ ಮೇಲೆ ಮಲಗಿಸಿ, ಜೀಪ್ ಹರಿಸಿ...” ಮಾತು ನಿಂತುಹೋಯಿತು ಮಿತ್ರಜೀತ್‌ನದು.

ದುಃಖ ನುಂಗಿಕೊಂಡು ಮತ್ತೆ ಹೇಳಿದ “ಒಬ್ಬ ಯುವಕ ನೋಡಿದ್ದಾನೆ. ಹಳ್ಳಿ ಯುವಕ. ಆದರೂ ದೇಶದ ಬಗ್ಗೆ ಕಾಳಜಿಯೇನೂ ಕಡಿಮೆಯಿಲ್ಲ. ನಮ್ಮ ಎಜ್ಯುಕೇಟೆಡ್‌ಗಳಿಗಿಂತ ಸಾವಿರ ಪಾಲು ಮೇಲು. ಅವರು ಏಳೆಂಟು ಜನ ಇದ್ರಂತೆ. ಆದ್ದರಿಂದ ಅವರ ಹತ್ತಿರ ಹೋಗಲು ಹೆದರಿಕೆ ಆಯಿತಂತೆ. ಯಾರಿಗೂ ಹೇಳಬೇಡ. ಸಮಯ ಬಂದಾಗ ಕೋರ್ಟಿಗೆ ಬಾ ಅಂದಿದ್ದೀನಿ” ಎಂದು ಮುಗಿಸಿದ.

ಫಜಲ್ ಫೋನಿಟ್ಟು ಸುನೀತಿಯ ಕಡೆಗೆ ತಿರುಗಿದ. ಅಡುಗೆ ಮನೆಯಲ್ಲಿದ್ದಳು. ಚಹಾ ಮಾಡಿ ಅವನಿಗೊಂದು ಕಪ್ ನೀಡಿ ತಾನೊಂದು ಕುಡಿಯುತ್ತಾ, “ನಾನು ಮೌರ್ನಿಂಗ್ ಮಾಡಬಹುದು. ಆದರೆ ಫಾಸ್ಟಿಂಗ್ ಮಾಡೋ ಹಾಗಿಲ್ಲ. ಯಾಕೇಂದ್ರೆ...” ಮಾತು ನಿಲ್ಲಿಸಿ ಅವನತಮುಖಿಯಾಗಿ “ನನ್ನಲ್ಲಿ ಅಮರ್‌ನ ಕುಡಿ ಜೀವ ತಳೆದಿದೆ” ಎಂದು ಹೇಳಿ, ನಂತರ ತಲೆ ಎತ್ತಿ ದೃಢವಾಗಿ ಅಂದಳು. “ಆ ವೀರ ಅಮರ್‌ನ ಮಗು ತಂದೆಗಿಂತ ಹೆಚ್ಚಿನ, ತಂದೆ ಹೆಮ್ಮೆ ಪಡುವ ಜರ್ನಲಿಸ್ಟ್ ಆಗಿ ದೇಶಸೇವೆ ಮಾಡಬೇಕು” ಫಜಲ್ ಆ ಮಾತೃಮೂರ್ತಿಯನ್ನು ಮನಸಾರೆ ನಮಿಸಿದ.

ಮಿತ್ರಜೀತ್ ನೇರವಾಗಿ ಅಮರ್‌ನ ಮನೆಗೆ ಬಂದ. ಸುನೀತಿಗೆ ಮೆಲು ಮಾತಿನ ಸಾಂತ್ವನ ನೀಡಿ “ಫಜಲ್ ಎಲ್ಲಿ?” ಎಂದ.

“ಯಾವುದೋ ಅರ್ಜೆಂಟ್ ಕೆಲಸ ಅಂತ ಹೋದ್ರು” ಎಂದಳು ಸುನೀತಿ.

"ಅಮರ್ನ ರೀಸೆಂಟ್ ಆರ್ಟಿಕಲ್ ಬಹಳವೇ ಪವರ್ಫುಲ್ ಆಗಿತ್ತು. ಇನ್ನೂ ಏನಾದರೂ ಬರೆದಿಟ್ಟಿರುವ ವಿಷಯ ನಿಮಗೆ ತಿಳಿದಿದೆಯೇ?" ಕೇಳಿದ ಮಿತ್ರಜೀತ್.

ಇಲ್ಲವೆಂದು ತಲೆಯಾಡಿಸಿದವಳಿಗೆ ಹಠಾತ್ತನೆ ಅಂದು ಅಮರ್ ಬಿಟ್ಟುಹೋದ ಸಿ.ಡಿ. ಕವರ್ನ ನೆನಪಾಗಿತ್ತು. ಘಜಲ್‌ಗೇ ಕೊಡಬೇಕಿತ್ತು, ಮರೆತಿದ್ದಳು. ಮಿತ್ರಜೀತ್ ಕೇಳಿದಾಗ ರೂಂಗೆ ಹೋಗಿ ಆ ಸಿ.ಡಿ. ಕವರ್ ತಂದಿದ್ದಳು.

ಮಿತ್ರಜೀತ್ ಕವರ್ ಓಪನ್ ಮಾಡಿದ. ಅದರಲ್ಲಿ ಸಿ.ಡಿ. ಇರಲಿಲ್ಲ! ಬದಲಾಗಿ ಬಿಳಿಯ ಕಾಗದಗಳನ್ನು ಸಿಡಿ ಕವರ್ ಒಳಗೆ ಹಿಡಿಸುವಂತೆ ಕತ್ತರಿಸಿ ತುಂಬಲಾಗಿತ್ತು. ಮುತ್ತು ಪೋಣಿಸಿದಂತೆ ಚಿಕ್ಕ ಚಿಕ್ಕ ಅಕ್ಷರಗಳಲ್ಲಿ, ಕನ್ನಡದಲ್ಲಿ ಬರೆಯಲ್ಪಟ್ಟಿತ್ತು. ಕಷ್ಟಪಟ್ಟು ಅರ್ಧ ಪುಟ ಓದಿದ. ಬೆನ್ನು ಹುರಿಯಲ್ಲಿ ಛಳಿ ಹುಟ್ಟಿತ್ತು.

ಅಯ್ಯೋ, ಇದೆಂಥಾ ಅನ್ಯಾಯ! ಎಂದುಕೊಂಡ.

ನಂತರ ಓದುವುದನ್ನು ನಿಲ್ಲಿಸಿ, ಆ ಸಿ.ಡಿ. ಕವರ್ಗೇ ಕಾಗದಗಳನ್ನು ತುಂಬಿ, ಸುನೀತಿಯತ್ತ ತಿರುಗಿ, "ನೀವು ಇದನ್ನು ಓದಿದ್ದೀರಾ?" ಎಂದ ಆತಂಕದಿಂದ.

"ಇಲ್ಲ. ಸದ್ಯಕ್ಕೆ ನನಗೆ ಯಾವುದರಲ್ಲಿಯೂ ಆಸಕ್ತಿ ಇಲ್ಲ" ಎಂದಾಗ ಕಂಬನಿಗಳೆರಡು ಫಳಕ್ಕನೆ ಅವಳ ಕಂಗಳಿಂದ ಉರುಳಿ ಬಿದ್ದವು. ಮಿತ್ರಜೀತ್ ವ್ಯಥೆಯಿಂದ ಖಿನ್ನನಾದ.

ಅಮರೇಶ ನಾವು ನಾಲ್ವರಲ್ಲಿ ಮದುವೆಯಾದವ. ಇನ್ನೂ ಬಹಳ ಜನರಿದ್ದಾರೆ ಮದುವೆಯಾದವರು. ಆದರೆ ಇಂತಹ ಸಾಹಸೀ ಕೆಲಸ ಮಾಡುವವರು ಕಡಿಮೆ. ಅಲ್ಲಿ ಇಲ್ಲಿಂದ ಬಂದ ಸುದ್ದಿ, ಸಿನಿಮಾ, ನಾಟಕ, ಪುಸ್ತಕ, ನೃತ್ಯ ವಿಮರ್ಶೆಗಳಂತಹ ನಿರಪಾಯಕಾರೀ ವಿಷಯಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಾರೆ. ಅವು ತಪ್ಪು ಕೆಲಸಗಳೆಂದಲ್ಲ. ಒಂದು ಪತ್ರಿಕೆಯ ಪೂರ್ಣ ರೂಪಕ್ಕೆ ಇವೆಲ್ಲಾ ಸಹಾಯಕವಾಗುತ್ತವೆ. ಆದರೆ ಇಂತಹ ಸ್ಕೂಪ್, ವಿಶಿಷ್ಟ ಬರವಣಿಗೆಗಳು ಖಾರಾ ತಿಂಡಿಗಳ ಮೆಣಸಿನಕಾಯಿಯ ಅಂಶದಂತೆ, ಸಿಹಿತಿಂಡಿಗಳಲ್ಲಿನ ಸಕ್ಕರೆ-ಬೆಲ್ಲಗಳಂತೆ ಪಾತ್ರ ವಹಿಸುತ್ತವೆ. ಪತ್ರಿಕೆಯ ಸರ್ಕ್ಯುಲೇಷನ್ ಹೆಚ್ಚುವುದರೊಂದಿಗೆ, ಓದುಗರ ಪ್ರೀತಿಗೆ ಪಾತ್ರವಾಗುತ್ತದೆ ಪತ್ರಿಕೆ.

ಭ್ರಷ್ಟತೆಯ ದೊಡ್ಡ ಕಬ್ಬಿಣದ ಕವಚದಲ್ಲಿ ಚಿಕ್ಕ ತೂತು ಮಾಡಬಲ್ಲರು ನಿಯತ್ತುಳ್ಳ ಪತ್ರಕರ್ತರು. ಆ ತೂತು ಒಳಗಿನ ಕೆಟ್ಟ ಗಾಳಿಯನ್ನು, ನೀರನ್ನು ಹೊರ ತರಬಲ್ಲದು.

ಸುನೀತಿಗೆ ಸೀರಿಯಸ್ಸಾಗಿ ಹೇಳಿದ ಮಿತ್ರಜೀತ್. "ನೀವು ಆದಷ್ಟು ಬೇಗ ಮಾಡಬೇಕಾದ ಕೆಲಸಗಳನ್ನು ಮುಗಿಸಿಕೊಳ್ಳಿ. ಆಮೇಲೆ ನಮ್ಮ ಜೊತೆ ಸ್ವಲ್ಪ ದಿನವಿರಿ. ಆ ದುರುಳರು ಈ ಸಿ.ಡಿ.ಗಾಗಿ ಮತ್ತೆ ಇಲ್ಲಿಗೆ ಬರಬಹುದು. ಜನರೇನಾದರೂ ಅಡ್ಡ ಬಂದರೆ ಹಲ್ಲೆ ಮಾಡಲೂ ಹೇಸುವವರಲ್ಲ ಆ ಜನ. ಆದ್ದರಿಂದ ದಯವಿಟ್ಟು ನೀವು ನನ್ನ ಮಾತಿಗೆ ಮನ್ನಣೆ ಕೊಟ್ಟು ನಮ್ಮ ಬಳಿ ಕೆಲವು ದಿನ ಇರಿ"

ಅವನ ಮೊಬೈಲ್ ರಿಂಗಾಗಿತ್ತು. "ಹಲೋ ಮಿತ್ರಜೀತ್ ಹಿಯರ್" ಎಂದ.

ಅತ್ತಕಡೆಯಿಂದ ಉಮಾಶಂಕರ್. "ಹೇಳು ಉಮಾ" ಎಂದ.

"ನೀನೆಲ್ಲಿದ್ದೀಯೋ ನನಗೆ ತಿಳಿಯದು. ಆದರೆ ನನಗೆ ಕ್ಲಾಸಿಫೈಡ್ ಸುದ್ದಿಯೊಂದು ಸಿಕ್ಕಿದೆ. ಅಮರೇಶನನ್ನು ಕೊಂದ ಜನ ಈಗ ಅವನ ಮನೆ ಕಡೆ ಬರ್ತಿದ್ದಾರಂತೆ. ಹೇಗಾದ್ರೂ ಮಿಸೆಸ್ ಅಮರೇಶನನ್ನು ಕಾಪಾಡು" ಎಂದು ಹೇಳಿದ. ಅವನ ದನಿಯ ಕಳಕಳಿ ಮಿತ್ರಜೀತ್‌ನನ್ನು ಮುಟ್ಟಿತ್ತು.

ತನ್ನ ಸುತ್ತಲೂ ಇರುವ ಬೇಹುಗಾರಿಕೆಯ ಗೋಡೆ ದಾಟಿ ಇಷ್ಟು ಸುದ್ದಿ ನೀಡಿದನಲ್ಲ! ಅಷ್ಟು ಸಾಕು...

"ಮೇಡಂ, ಈಗಲೇ ನಿಮ್ಮ ಮುಖ್ಯ ವಸ್ತುಗಳನ್ನು ಪ್ಯಾಕ್ ಮಾಡಿಕೊಂಡು ನನ್ನ ಜೊತೆ ಬನ್ನಿ ಪ್ಲೀಸ್. ನಾನೊಂದುಕೊಂಡಿದ್ದಕ್ಕಿಂತ ಬೇಗ ಬರ್ತಿದ್ದಾರೆ ಆ ದುಷ್ಕರ್ಮಿಗಳು!" ಎಂದ ಅವಸರದಿಂದ.

ಸುನೀತಿ ಆಲೋಚಿಸಿದಳು. ಈಗ ಮುಖ್ಯವೆಂದರೆ ತನ್ನ ಗರ್ಭದಲ್ಲಿರುವ ಕುಡಿಯನ್ನು ಉಳಿಸಿಕೊಳ್ಳುವುದು. ಉಳಿದೆಲ್ಲ ಕಾರ್ಯಗಳೂ ಗೌಣ, ನಗಣ್ಯ. ಸರಸರನೆ ಸಿದ್ದವಾದಳು.

ಮಿತ್ರಜೀತ್ ಅವಳ ಬ್ಯಾಗ್ ಕೈಗೆತ್ತಿಕೊಂಡ. ಮನೆಗೆ ಬೀಗ ಹಾಕಿ ಹೊರಬಂದು ಎದುರಿಗೇ ಇದ್ದ ಆಟೋ ಹಿಡಿದರು. ಅವರು ರಸ್ತೆಯ ಈ ಕಡೆಯ ತಿರುವಿನಲ್ಲಿ ಮರೆಯಾಗುವುದಕ್ಕೂ, ಆ ಕಡೆಯ ತಿರುವಿನಿಂದ ಆ ರಸ್ತೆಗೆ ಜೀಪೊಂದು ಬರುವುದಕ್ಕೂ ತಾಳೆಯಾಯಿತು.

# 19

ಫಜಲ್ ಈಗ ದ್ವಂದ್ವದಲ್ಲಿ ಬಿದ್ದ. ಅವನಿಗೆ ಬಾಳಿನಲ್ಲಿ ಯಾವುದೋ ಮುಖ್ಯವಾದುದನ್ನು ಕಳೆದುಕೊಂಡ ಭಾವನೆ ಉಂಟಾಗಿತ್ತು. ತನ್ನ ಯಾವುದೋ ಪರಮೋಚ್ಚ ಭಾಗ ಹಾಳಾಗಿ ಹೋದ ಭಾವ. ಅಮರ್‌ನನ್ನು ಅವನು ಅಷ್ಟು ಹಚ್ಚಿಕೊಂಡುಬಿಟ್ಟಿದ್ದ. ಅವನೇ ಇಲ್ಲದ ಮೇಲೆ ತನಗೇಕೆ ಈ ಜೀವನ? ಎನ್ನುವ ಜಿಜ್ಞಾಸೆಗೆ ಒಳಗಾದ. ತಮ್ಮಿಬ್ಬರ ಅನೇಕ ವಾಗ್ವಿವಾದಗಳ ನೆನಪು ಮುನ್ನುಗ್ಗಿ ಬಂತು.

ಅದೆಷ್ಟು ಸ್ನೇಹಕಲಹ ತಮ್ಮಿಬ್ಬರ ನಡುವೆ! ಯಾವ ವಿಷಯವಾದರೂ ಇಬ್ಬರದೂ ಒಂದೇ ಅನಿಸಿಕೆಯಾದರೂ, ವಾದ ಮಾಡಿದರೆ ಯಾವ ಹೊಸ ವಿಷಯ ಯಾವ ಹೊಸ ದಿಕ್ಕಿನಲ್ಲಿ ಜನ್ಮ ತಳೆಯಬಹುದೆಂಬ ಅಭಿಲಾಷೆ. ಎಲ್ಲ ವಿಷಯಗಳನ್ನು ಹಂಚಿಕೊಂಡರೂ ಈ ಒಂದು ವಿಷಯದಲ್ಲಿ ಮುಚ್ಚುಮರೆ ಮಾಡಿಬಿಟ್ಟ ಅಮರ್. ಮೊದಲೇ ಗೊತ್ತಿದ್ದರೆ ಉಳಿಸಿಕೊಳ್ಳಬಹುದಿತ್ತೇನೋ ಎಂದುಕೊಂಡ ಫಜಲ್.

ಆಗ ಅವನ ಅಂತಃಸಾಕ್ಷಿ ಅವನನ್ನು 'ನೀನು ಎಲ್ಲಾ ವಿಷಯ ಅವನಿಗೆ ಹೇಳಿರುವೆಯಾ?' ಎಂದು ಕೇಳಿತ್ತು.

ಅದಕ್ಕೆ ಉತ್ತರ ಹೇಳದಾದ ಫಜಲ್.

ಹೌದು. ಅವನೂ ಒಂದು ದೊಡ್ಡ ಸ್ಫೋಟಕಕಾರೀ ವಿಷಯದ ಬಗ್ಗೆ ಓಡಾಡುತ್ತಿದ್ದ. ಈ ವಿಷಯವನ್ನು ಗುಟ್ಟಾಗಿ ಇಟ್ಟಿದ್ದ. ತನ್ನ ಸಂಶೋಧನೆಗೆ ಸಂಬಂಧಿಸಿದ ವ್ಯಕ್ತಿ ಉನ್ನತ ಹುದ್ದೆಯಲ್ಲಿರುವವನು. ಮಾಡುತ್ತಿರುವ ಕೆಲಸ ತೀರಾ ಹೀನಾಯದ್ದು. ರಾಜ್ಯಕ್ಕೆ, ದೇಶಕ್ಕೆ ಸಂಪತ್ತು ಒದಗಿಸುವ ವಸ್ತುಗಳನ್ನು ನಿರ್ದಯದಿಂದ ಕಳ್ಳಸಾಗಾಣಿಕೆ ಮಾಡುತ್ತಿರುವವನು.

ಯಾರೋ ಇಬ್ಬರ ಪೈಪೋಟಿಯಿಂದಾಗಿ, ಅವರಲ್ಲೊಬ್ಬ ಆ ಗ್ಯಾಂಗ್‌ನ ಬಗ್ಗೆ ಸುಳಿವುಗಳನ್ನು ನೀಡಲಾರಂಭಿಸಿದ್ದ. ಇದು ಎಷ್ಟು ದಿನ ಸಿಗುವುದೋ ತಿಳಿಯದು. ಸಿಕ್ಕಷ್ಟು ಸಂಗತಿಗಳನ್ನು ಒಟ್ಟಿಗೆ ಕಲೆಹಾಕಿದ್ದ. ಒಂದು ಲೇಖನ ಸಿದ್ಧಪಡಿಸುತ್ತಿದ್ದ. ಪಾಲ್, ಅಮರೇಶ್‌ರ ಪ್ರಾಣ ತೆಗೆದ ಸುದ್ದಿಗಳಷ್ಟೇ ಪ್ರಾಮುಖ್ಯತೆ ತನ್ನ ಸಮಾಚಾರವೂ ಪಡೆಯಲಿತ್ತು.

ತಾನೇನು ಮಾಡಬೇಕು? ಎಲ್ಲವನ್ನೂ ಪೂರ್ತಿಯಾಗಿ ಒಮ್ಮೆಲೇ ಪ್ರಕಟಿಸಬೇಕೇ? ಇಲ್ಲವೇ ಕಂತಿನಲ್ಲಿಯೇ? ಹಾಗೆ ಕಂತುಗಳಲ್ಲಿ ಪ್ರಕಟಿಸುವುದಾದರೆ ಮೊದಲ ಕಂತು ಬೆಳಕು ಕಂಡೊಡನೆ ತನ್ನನ್ನು ಉಳಿಸುವರೇ ಆ ಜನ? ಪಾಲ್, ಅಮರ್‌ರ ದಾರಿಯಲ್ಲಿಯೇ ಕಳಿಸುವರೇ?

ಅವನಿಗೆ ತನ್ನ ಸಾವಿನ ಬಗ್ಗೆ ಹೆದರಿಕೆ ಇಲ್ಲ. ಪ್ರತಿಯೊಂದು ಪಯಣದಂತೆಯೇ ಸಾವೂ ಒಂದು ಪ್ರಯಾಣ. ಹೊಸದಾರಿ ಅಷ್ಟೇ. ಹಾಗಿರುವಾಗ ತಾನು ಸಿದ್ದಪಡಿಸಿದ ವಿಷಯಗಳೆಲ್ಲಾ ಬೆಳಕು ಕಾಣದೇ ಕತ್ತಲಲ್ಲಿಯೇ ಉಳಿದುಬಿಡಬೇಕೇ?

ಇಲ್ಲ, ಅದು ಬಹಳ ಜನರನ್ನು ತಲುಪಬೇಕು. ಹೇಗೆ? ತನ್ನ ಪತ್ರಿಕಾ ಮಾಲೀಕ, ಸಂಪಾದಕರು ಇಂತಹ ಸುದ್ದಿಯನ್ನು ಕಂತುಗಳಲ್ಲಿ ಪ್ರಕಟಿಸು ಎನ್ನುವುದರಲ್ಲಿ ಸಂದೇಹವಿಲ್ಲ.

ಹಾಗಾದರೆ ತಾನೇನು ಮಾಡಲಿ? ಮನಸ್ಸು ಆಲೋಚಿಸುತ್ತಿದ್ದರೂ ದೇಹ ತನ್ನ ಮನೆಯತ್ತ ಕಾರಿನಲ್ಲಿ ಹೋಗುತ್ತಿತ್ತು.

ಪೇಜರ್ ಬಝ್ ಎಂದಿತ್ತು. ಕಾರಿನ ಸ್ಟೀರಿಂಗ್ ಅಲುಗಾಡಿಸುತ್ತಲೇ ಎಡಗೈಯಿಂದ ಸಂದೇಶ ಓದಿದ. ಮಿತ್ರಜೀತ್‌ನಿಂದ ಆ ಸಂದೇಶ ಬಂದಿತ್ತು.

‘ದಯವಿಟ್ಟು ಆದಷ್ಟೂ ಬೇಗ ಸ್ವರೂಪ್‌ನ ಫಾರಂಹೌಸ್ ತಲುಪು. ನನಗೆ ಫೋನ್ ಮಾಡು’

ಹತ್ತಿರದಲ್ಲಿಯೇ ಕಂಡ ಟೆಲಿಫೋನ್ ಬೂತ್‌ನಿಂದ ಮಿತ್ರಜೀತ್‌ನ ಮೊಬೈಲ್‌ಗೆ ಫೋನ್ ಮಾಡಿದ.

“ಹಾಯ್ ಫಜಲ್! ನಿನಗೊಂದು ಸುದ್ದಿ ಕೊಡಬೇಕು. ಅಮರೇಶನ ಮನೆಗೆ ಈಗಾಗಲೇ ರೌಡಿಗಳು ಹೋಗಿದ್ದಾರೆ. ಯಾವುದೋ ಮುಖ್ಯವಸ್ತುವನ್ನು ಹುಡುಕಲು ಅವರು ಹೋಗಿದ್ದಾರೆ....” ಎಂದ. ಮಿತ್ರಜೀತ್‌ನ ಮಾತನ್ನು ಕತ್ತರಿಸಿ, “ಅವರಿಗೆ ಅದು ಸಿಗುವುದೇ?” ಎಂದ ಫಜಲ್.

“ಇಲ್ಲ. ಅದು ನನ್ನ ಬಳಿ ಇದೆ. ಇನ್ನೊಂದು ವಿಷಯ. ಪಾಲ್ ತಾನು ಸಿದ್ದಪಡಿಸಿರೋ ಪುರಾವೆಗಳು ನನ್ನ ಮನೆಯಲ್ಲಿದೆ. ಸುನೀತಿ ಅವರನ್ನು ಸ್ವರೂಪ್‌ನ ಮನೇಲಿ ಬಿಟ್ಟು ಈಗ ನಮ್ಮನೇಗೆ ಹೋಗ್ತಿದ್ದೀನಿ” ಎಂದ ಮಿತ್ರಜೀತ್.

ಫಜಲ್‌ಗೆ ಮಿತ್ರಜೀತ್‌ನ ಬಗ್ಗೆ ಇದ್ದ ಒಳ್ಳೆಯ ಭಾವನೆ ಹೆಚ್ಚಾಗಿತ್ತು.

"ಆ ಮನೆ ಬಗ್ಗೆ ಯಾರಿಗೂ ತಿಳಿದಿಲ್ವಾ?"

"ಉಹೂಂ. ಅದಕ್ಕೇ ಆ ಅಡ್ವಾಂಟೇಜ್ ತಗೋತಿದ್ದೀವಿ. ನೀವ್ಯಾಕೆ ಒಮ್ಮೆ ಬರಬಾರದು? ಇನ್ನೊಂದು ಸರ್ಪ್ರೈಸ್ ಇದೆ ಅಲ್ಲಿ ನಿಮಗೆ" ಎಂದ ಮಿತ್ರಜೀತ್.

"ಖಂಡಿತ ಬರ್ತೀನಿ. ಆದರೆ ನಾಳೆ ಬೆಳಿಗ್ಗೆ. ಈವತ್ತು ರಾತ್ರಿ ನನಗೆ ಕೆಲಸ ಇದೆ. ಅಂದ ಹಾಗೆ ಸ್ವರೂಪ್ ಮನೆ ಅಡ್ರೆಸ್ ಕೊಡಿ" ಎಂದ ಫಜಲ್ ವಿಳಾಸ ಪಡೆದು, ಫೋನ್‌ನವನಿಗೆ ಹಣ ನೀಡಿ ಕಾರಿನಲ್ಲಿ ಕುಳಿತ.

ಮೆದುಳು ಛಿದ್ರವಾಗುವಷ್ಟು ಆಲೋಚಿಸಿದ. ನಂತರ ಒಂದು ನಿರ್ಧಾರಕ್ಕೆ ಬಂದ.

ಆ ನಿರ್ಧಾರದಿಂದ ಯಾರಿಗೆ ಎಷ್ಟು ಒಳ್ಳೆಯದಾಯಿತು, ಯಾರಿಗೆ ಎಷ್ಟು ತೊಂದರೆಯಾಯಿತು ಎನ್ನುವುದನ್ನು ಕಾಲವೇ ತಿಳಿಸಲಿದೆ!

ಮಿತ್ರಜೀತ್ ತನ್ನ ಮನೆಯ ಬೀಗ ತೆಗೆದ. ಒಳಗಿನಿಂದ ಬಾಗಿಲು ಭದ್ರ ಪಡಿಸಿಕೊಂಡು, ಚಿಲಕವನ್ನೂ ಹಾಕಿ ತನ್ನ ರೂಮಿಗೆ ಬಂದ. ಕೆಲವೇ ಕ್ಷಣಗಳಲ್ಲಿ ಪಾಲ್ ತನ್ನ ಮನೆಯಲ್ಲಿ ಬಿಸಾಡಿದ್ದ ಮೂರು ಚೀಟಿಗಳು ದೊರೆತವು. ಲೊರೆಟ್ಟಾ ಹೇಳಿದ್ದೇನು?

ಅದನ್ನು ನೆನೆದು ಪ್ರತಿ ಚೀಟಿಯನ್ನೂ ಸರಿಯಾದ ಕ್ರಮದಲ್ಲಿ ಜೋಡಿಸಿಕೊಂಡ. ನಂತರ ಲೊರೆಟ್ಟಾ ಹೇಳಿದ ಡೀಕೋಡಿಂಗ್ ವಿಧಾನ ಪ್ರಯೋಗಿಸಿದ. ಪ್ರತಿ ಪದವನ್ನೂ ಬೇರೆ ಒಂದು ಚೀಟಿಯಲ್ಲಿ ಬರೆಯುತ್ತಾ ಹೋದ.

ಅದು ಬಹಳವೇ ಜಾಣತನದ ವಿಧಾನವೆಂದು ಮಿತ್ರಜೀತ್‌ಗೆ ಅನ್ನಿಸಿತು, ಪೂರ್ತಿಯಾಗಿ ಅದನ್ನು ಡೀಕೋಡ್ ಮಾಡಿದ ಮೇಲೆ.

ಪಾಲ್‌ನ ಮೂರು ಚೀಟಿಗಳ ಸಾರಾಂಶವಿಷ್ಟೇ... ಊರಾಚೆಯ ಪಾಳು ಮನೆಯೊಂದರ ಬೆಂಚಿನ ಕೆಳಗೆ ಹಾಸಿರುವ ಹಾಸುಕಲ್ಲನ್ನು ಪಕ್ಕಕ್ಕೆ ಸರಿಸಿ. ಲೊರೆಟ್ಟಾ ಸಿಲ್ವೆಸ್ಟರ್ ತನ್ನ ಆತ್ಮೀಯ ಸ್ನೇಹಿತರು. ಅವರುಗಳಿಗೆ ತನ್ನಿಂದ ತೊಂದರೆ ಆಗಕೂಡದು. ತನ್ನ ಆಸ್ತಿಯೆಲ್ಲಾ ಲೊರೆಟ್ಟಾಗೆ ಸೇರಬೇಕು. ಅವಳಿಗಾಗಿ ನಾನು ಬರೆದಿಟ್ಟಿರುವ ಪತ್ರ ನೀಡಬೇಕು.

ಮಿತ್ರಜೀತ್‌ನ ಕಣ್ಣಾಲಿಗಳಲ್ಲಿ ನೀರು ತುಂಬಿಕೊಂಡಿತ್ತು. ಅದೆಷ್ಟು ಹಚ್ಚಿಕೊಂಡಿದ್ದ ಪಾಲ್ - ಲೊರೆಟ್ಟಾ ಮತ್ತು ಅವಳ ಪತಿ ಸಿಲ್ವೆಸ್ಟರ್ ಇಬ್ಬರನ್ನೂ. ಲೊರೆಟ್ಟಾ ತಮ್ಮ ಬಳಿ ಸುರಕ್ಷಿತವಾಗಿದ್ದಾಳೆ. ಆದರೆ ಪಾಪ ಸಿಲ್ವೆಸ್ಟರ್! ಅನ್ಯಾಯವಾಗಿ ಪೊಲಿಟಿಕಲ್ ಮಾಫಿಯಾದ ಕೈಯಲ್ಲಿನ ಪಗಡೇಕಾಯಿ ಆಗಿದ್ದಾನೆ!

ಪಾಲ್ ನೀಡಿದ ಸುಳಿವುಗಳನ್ನು ಉಪಯೋಗಿಸಿಕೊಂಡು ಆ ಜಾಗಕ್ಕೆ ಹೋಗಲು ನಿರ್ಧರಿಸಿದ ಮಿತ್ರಜೀತ್. ಮನೆಯಿಂದ ಹೊರಡುವಾಗ ತಾನಂದು ತೆಗೆದ ನಾಗಸಿಂಹ, ದೇವನಾಯಕಿಯರ ಕಾರುಗಳ ಭಾವಚಿತ್ರಗಳನ್ನು ತೆಗೆದಿಟ್ಟುಕೊಂಡ. ಅದರಲ್ಲಿ ಎರಡು ಕಾರುಗಳು ಮತ್ತು ಆ ಫಾರಂಹೌಸ್‌ನ ಒಂದು ಭಾಗ ನಿಚ್ಚಳವಾಗಿ ಮೂಡಿಬಂದಿದ್ದವು.

ಪ್ರತಿಯೊಂದು ಚಿಕ್ಕ ಸಾಕ್ಷ್ಯಾಧಾರವೂ ನಮಗೆ ಸಹಾಯ ಮಾಡಲಿದೆ ಎಂದುಕೊಳ್ಳುತ್ತಾ ಮನೆಗೆ ಬೀಗ ಹಾಕಿ ಬೈಕ್ ಹತ್ತಿದ.

ಅವನ ಬೈಕ್ ಹೋಗುವುದನ್ನೇ ನಿರೀಕ್ಷಿಸುತ್ತಿದ್ದ ಒಬ್ಬ ಬೈಕ್ ಸವಾರ ಹೆಲ್ಮೆಟ್, ಕಪ್ಪುಕನ್ನಡಕ ಧರಿಸಿ ಅವನನ್ನು ಹಿಂಬಾಲಿಸಿದ.

ಫಜಲ್ ನೇರವಾಗಿ ತನ್ನ ಕಛೇರಿಗೆ ಬಂದ. ತನ್ನ ಇಷ್ಟುದಿನಗಳ ಪರಿಶೋಧನೆಯನ್ನೆಲ್ಲಾ ಒಗ್ಗೂಡಿಸಿದ. ಕಂಪ್ಯೂಟರ್ ಆನ್ ಮಾಡಿ 'ನುಡಿ' ಪುಟ ತೆರೆದ.

ಬೆರಳುಗಳು ಕೀಗಳನ್ನು ಒತ್ತುತ್ತಾ ಹೋದವು. ಗಂಧದ ಮರ, ತೇಗದ ಮರ ನಮಗೆ ಬೇಡವೇ? ಇವು ಪರದೇಶಕ್ಕೆ ಕಳ್ಳ ಸಾಗಾಣಿಕೆಯಾದರೆ ನಮ್ಮ ಭವಿಷ್ಯದ ಜಗತ್ತಿಗೆ, ಭಾವೀ ಸಂತತಿಗೆ ಉಳಿಯುವುದೇನು? ... ಹೀಗೇ ಸಾಗಿತ್ತು ಅವನ ಲೇಖನ. ಹೆಸರುಗಳನ್ನು ಬರೆಯಲಿಲ್ಲ. ಕಾರಣವಿತ್ತು ಅದಕ್ಕೆ – ಜನರಿಗೆ ಯಾರೆಂದು ಪರೋಕ್ಷವಾಗಿ ತಿಳಿಸಿ, ನಂತರ ಸರಿಯಾದ ದಾರಿಯಲ್ಲಿ ನ್ಯಾಯಾಲಯದ ಕಟ್ಟೆ ಹತ್ತಿದರೆ ಜನರಿಗೆ ನ್ಯಾಯ ಸಿಗುವುದು ಖಚಿತ.

ಅದಕ್ಕೆ ಸಾಕ್ಷಿಯಾಗಿ ಅನೇಕ ಕೇಸ್‌ಗಳು ನಡೆದಿವೆ.

ಮುಖ್ಯಮಂತ್ರಿ ಗದ್ದುಗೆಯಲ್ಲಿದ್ದ (ಕು)ಖ್ಯಾತರನ್ನು ಜೈಲಿಗೆ ಹಾಕಲಾಗಿದೆ. ಜನರ, ಪ್ರಾಣಿಗಳ ಆಹಾರವನ್ನು ಅಕ್ರಮವಾಗಿ ನುಂಗಿದವರಿಗೆ ಶಿಕ್ಷೆ ಆಗಿದೆ. ಆಗುತ್ತಲೂ ಇದೆ.

ಒಂದು ಚಿಕ್ಕ ಅಪಸ್ವರ ಅವನನ್ನು ಹಠಾತ್ತನೆ ಕೆಣಕಿತು. 'ಸಾಕ್ಷಿ ಹೇಳುವೆನೆಂದಿದ್ದ ವ್ಯಕ್ತಿ ಇದ್ದಕ್ಕಿದ್ದಂತೆ ಹತೋಟಿ ತಪ್ಪಿನ ಲಾರಿಯ ಅಡಿಗೆ ಸಿಕ್ಕಿ ಪಡ್ಚಾ ಆಗಿದ್ದನಲ್ಲ, ಅದಕ್ಕೇನು ಹೇಳ್ತೀ ಫಜಲ್?"

ಫಜಲ್ ಕ್ಷಣಕಾಲ ಬೆಪ್ಪಾದ. ನಂತರ 'ಛೇ ಛೇ! ಇವೆಲ್ಲಾ ಅಪರೂಪದ ಕೇಸ್‌ಗಳು. ಸಿನಿಮಾ ನೋಡಿ ಇವರು ಹೀಗೆ ವರ್ತಿಸುವರೋ, ಇಲ್ಲಾ ಇವರ ವರ್ತನೆ ನೋಡಿ ಸಿನಿಮಾ ತೆಗೆಯುವರೋ!'

ಲೇಖನ ಪೂರ್ತಿಯಾದಾಗ ಒಮ್ಮೆ ಓದಿದ. ತೃಪ್ತಿಯಾಗಲಿಲ್ಲ. ಆದರೆ ಏನು ಮಾಡಲೂ ಆಗುವುದಿಲ್ಲ. ಈ ಕಂತಿಗೆ ಇಷ್ಟು ಸಾಕು. ಇದರ ಪ್ರತಿಕ್ರಿಯೆ ನೋಡಿ ಮುಂದಿನ ವಾರ ಸ್ವಲ್ಪ ಹೆಚ್ಚು ಬರೆದರಾಯಿತು.

ಆದರೆ ಪಾಲ್, ಅಮರ್ ಇಬ್ಬರೂ ಮೊದಲ ಕಂತನ್ನು ಪತ್ರಿಕೆಗಳಲ್ಲಿ ಪ್ರಕಟಿಸಿದ ತಕ್ಷಣವೇ ಸಾವಿಗೀಡಾದರು. ಅಂದರೆ ಈ ಮಾಫಿಯಾದ ಅಷ್ಟಪಾದಿಯ ಕೈಗಳಂತಹ ತೋಳುಗಳು ಬಹಳವೇ ಉದ್ದವಾಗಿವೆ. ಅವರು ಸಾಯಿಸಬಹುದೆಂಬ ಹೆದರಿಕೆಯಿಂದ ತಾನು ಬರೆಯದೇ ಇದ್ದರೆ ಅದು ಹೇಡಿತನ!

ಈ ಕಂತು ಹೊರಬಿದ್ದೊಡನೆ ಇನ್ನು ಎರಡೇ ದಿನಗಳಲ್ಲಿ ಮತ್ತೊಂದು ವಿಶೇಷ ಪ್ರಕಟಣೆ ಎಂದು ಹೇಳಿ ಉಳಿದ ಭಾಗವನ್ನು ಪ್ರಕಟಿಸಿಬಿಡಬೇಕು. ಆ ಎರಡು ದಿನ ತಾನು ಪೊಲೀಸ್ ರಕ್ಷಣೆಯಲ್ಲಿರಬೇಕು. ತನಗೆ ಸಾವಿನ ಭಯವಿಲ್ಲ. ಆದರೆ ತನ್ನ ಸಾವು ಸಂಭವಿಸಿದರೆ ತಾನು ಮಾಡಿ ಮುಗಿಸಬೇಕೆಂದಿರುವ ಕೆಲಸ ಅಪೂರ್ಣವಾಗಿಬಿಡುತ್ತದೆ.

ಇಲ್ಲ, ಇಲ್ಲ. ಮಿತ್ರಜೀತ್ ಇನ್ನೂ ಇದ್ದಾನೆ. ಅವನ ಮೂಲಕ ಈಗ ಪಾಲ್, ಅಮರರ ಉಳಿದ ಶೋಧ ಸರಿಯಾದ ರೂಪ ತಳೆಯಲಿದೆ. ತಾನೂ ಅವನ ಸಹಾಯ ಪಡೆಯಬೇಕು.

ಆ ಯೋಚನೆ ತಲೆಗೆ ಬಂದಿದ್ದೇ ತಡ, ಎಲ್ಲ ಸಾಕ್ಷ್ಯಗಳನ್ನೂ ಒಂದು ದಪ್ಪ ಕವರ್‌ಗೆ ಹಾಕಿದ. ಜೇಬಿನಿಂದ ಮಿತ್ರಜೀತ್ ಹೇಳಿದ್ದ ಸ್ವರೂಪ್‌ನ ಫಾರಂಹೌಸ್‌ನ ವಿಳಾಸ ಬರೆದ. ಒಂದು ಪುಟ್ಟ ಪತ್ರವನ್ನು ಮಿತ್ರಜೀತ್‌ಗೆ ಬರೆದ.

ತನ್ನ ಲೇಖನವನ್ನು ಅಚ್ಚಿಗೆ ಕಳಿಸಿ ಹೊರಬಂದ. ಹತ್ತಿರದಲ್ಲಿಯೇ ಇದ್ದ ಕೊರಿಯರ್ ಆಫೀಸಿಗೆ ಹೋಗಿ ಆ ಕವರನ್ನು ಮಿತ್ರಜೀತ್‌ಗೆ ರವಾನಿಸಿದ. ನಂತರ

ನಿರಾಳವಾಗಿ ಪತ್ರಿಕೆಯ ಆಫೀಸಿನ ಛೇರ್ ಮೇಲೇ ಒರಗಿದ. ಅವನಿಗೆ ನಿದ್ರೆ ಹತ್ತಿತ್ತು.

ಕನಸು ಬಿತ್ತು – ಅಮರೇಶ್, ಪಾಲ್ ಕೈ ಕೈ ಹಿಡಿದು ಯಾವುದೋ ಸ್ವರ್ಗಸಮಾನವಾದ ಭವನದ ಮುಂದೆ ನಿಂತಿದ್ದಾರೆ. ಯಾರ ಕಡೆಗೋ ಕೈ ತೋರಿ ಕರೆಯುತ್ತಿದ್ದಾರೆ. ಕೆಲವು ಕ್ಷಣಗಳ ನಂತರ ಯಾರನ್ನು ಅವರಿಬ್ಬರೂ ಕರೆಯುತ್ತಿರುವರೆಂದು ಅರಿವಾದಾ ಬೆವರಿದ.

ಮಿತ್ರಜೀತ್! ಅವರಿಬ್ಬರ ಹತ್ತಿರಕ್ಕೆ ನಡೆದು, ಅವರಿಬ್ಬರ ಹೆಗಲುಗಳ ಮೇಲೆ ಕೈ ಹಾಕಿ ಮುಂದೆ ನಡೆದ ಮಿತ್ರಜೀತ್.

ಬೆಚ್ಚಿ ಎದ್ದು ಕುಳಿತ. ಯಾಕೆ ಇಂತಹ ವಿಚಿತ್ರ ಕನಸು ಬಿತ್ತು? ಅವನಿಗೇ ಅರ್ಥವಾಗಲಿಲ್ಲ.

"ಸಾರ್! ಫಸ್ಟ್ ಕಾಪಿ!" ಎಂದು ಸಹಾಯಕ ಸಂಪಾದಕ ಪ್ರತಿ ತಂದಿತ್ತಾಗ ಅದನ್ನು ಓದಲೆತ್ನಿಸಿದ. ಯಾಕೋ ಅವನ ತಲೆಯೊಳಗೆ ಒಂದಕ್ಷರವೂ ಇಳಿಯಲಿಲ್ಲ. ಮಾರ್ಕೆಟ್‌ಗೆ ಪತ್ರಿಕೆ ತಲುಪುವ ವ್ಯವಸ್ಥೆ ಮಾಡಿಸಿ ಮನೆಗೆ ಹೊರಟ. ಹೆಚ್ಚು ಹೊತ್ತು ಅಲ್ಲಿ ಕುಳ್ಳಿರಲಾಗಲಿಲ್ಲ. ಯಾಕೋ ಅಮರ್ ಸತ್ತ ಜಾಗವನ್ನೊಮ್ಮೆ ನೋಡಬೇಕೆನ್ನಿಸಿತು.

ಗಡಿಯಾರ ನೋಡಿದ. ಹತ್ತುಗಂಟೆ. ಅಂದರೆ ಪತ್ರಿಕೆ ಮಾರ್ಕೆಟ್ ತಲುಪಿ ಎರಡು ಗಂಟೆಗಳಾಗಿವೆ.

ಹೊರಗೆ ಹೊರಟ. ಪಾಪ ಫಜಲ್!

ಅವನ ಲೇಖನ ಉಂಟು ಮಾಡಿರುವ ಕೋಲಾಹಲದ ಬಗ್ಗೆ ಅವನಿಗಿನ್ನೂ ತಿಳಿದಿಲ್ಲ!

ಅವನ ವೈರಿಗಳಾಗಲೇ ಸಿದ್ಧವಾಗಿದ್ದರು.

ಅವನನ್ನು ಹಿಂಬಾಲಿಸಿದರು.

# 20

ಮೈಯೆಲ್ಲಾ ಕಣ್ಣಾಗಿಸಿಕೊಂಡಿದ್ದ ಮಿತ್ರಜೀತ್‌ಗೆ ತನ್ನನ್ನು ಯಾರೋ ಬೆಂಬತ್ತಿರುವರೆಂದು ತಿಳಿದುಹೋಯಿತು. ಈಗೇನು ಮಾಡಲಿ? ಚಕಚಕನೆ ಆಲೋಚಿಸಿದ. ಈ ಬಾಲವನ್ನು ಹಲ್ಲಿ ಬಿಟ್ಟುಬಿಡುವಂತೆ ಬಿಡಬೇಕು. ಹೇಗೆ?

ಮಿಂಚಿನಂತಹ ಉಪಾಯ ಹೊಳೆಯಿತು. ಗಾಡಿಯನ್ನು ಪ್ರೆಸ್‌ಕ್ಲಬ್‌ಗೆ ತಂದ. ಒಳಗೆ ಹೋಗಿ ಒಂದು ಸ್ಕಾಚ್ ಆರ್ಡರ್ ಮಾಡಿದ. ಕಣ್ಣಂಚಿನಿಂದ ಗೇಟಿನತ್ತ ನೋಡಿದ. ಯಾರೂ ಕಾಣಿಸಲಿಲ್ಲ.

ತಾನು ಬೈಕ್ ಇಟ್ಟಾಗ ಇನ್ನೂ ಯಾರೂ ಬಂದಿರಲಿಲ್ಲ. ತಾನು ಧರಿಸಿದ ನೀಲಿ ಜಾಕೆಟ್ ರಿವರ್ಸ್ ಮಾಡಿದ. ಅದು ಹಸಿರು ಬಣ್ಣದ್ದಾಯಿತು. ನೀಟಾಗಿ ಬಾಚಿದ್ದ ತಲೆ ಕೆದರಿಕೊಂಡ. ಪ್ರೆಸ್‌ಕ್ಲಬ್‌ನಲ್ಲಿದ್ದ ಬೇರೆ ಪತ್ರಿಕೆಯೊಂದರ ವರದಿಗಾರ ಇವನ ಪರಿಚಯದವನು. ಅವನಿಂದ ಅವನ ಕಾರು ಪಡೆದುಕೊಂಡು ಅಲ್ಲಿಂದ ಹೊರಟ.

ಅವನು ಹೊರಬರುವುದನ್ನೇ ನಿರೀಕ್ಷೆ ಮಾಡುತ್ತಿದ್ದ ವ್ಯಕ್ತಿಗೆ ಇವನೇ ತಾನು ಹಿಂಬಾಲಿಸಿದ ವ್ಯಕ್ತಿ ಎಂದು ತಿಳಿಯಲೇ ಇಲ್ಲ! ನಿರಾಳವಾಗಿ ನಿಟ್ಟುಸಿರಿಟ್ಟು ನಗರದಾಚೆಗೆ ಕಾರೋಡಿಸಿದ. ಸೂರ್ಯ ಬರಬರುತ್ತಾ ತನ್ನ ಪಡುವಣ ಗೃಹದತ್ತ ಚಲಿಸತೊಡಗಿದ. ಸುಮಾರು ಏಳೂವರೆಯಾಗಿತ್ತು ಮಿತ್ರಜೀತ್, ಪಾಲ್ ಗುರುತು ಹೇಳಿದ್ದ ಜಾಗ ಸೇರುವ ವೇಳೆಗೆ. ಪಾಳುಮನೆ ಎಲ್ಲೆಂದು ಹುಡುಕಿದ.

ಒತ್ತಾಗಿ ಬೆಳೆದ ಮರಗಳ ನಡುವೆ ಒಂದೇ ಒಂದು ಮನೆ ತೀರಾ ಜೀರ್ಣಸ್ಥಿತಿಯಲ್ಲಿತ್ತು. ಇದೇ ಇರಬೇಕು ಪಾಳುಮನೆ!

ಅಲ್ಲಿ ನಾಲ್ಕೈದು ಬೆಂಚುಗಳಿದ್ದವು. ಟಾರ್ಚ್‌ಲೈಟಿನಲ್ಲಿ ಹುಡುಕಿದ. ಕೇವಲ ಒಂದು ಬೆಂಚಿನ ಕೆಳಗೆ ಕಲ್ಲು ಹಾಸಿತ್ತು.

ಅದನ್ನು ಸ್ವಲ್ಪ ಬಲ ಉಪಯೋಗಿಸಿ ಸರಿಸಿದ. ಅಲ್ಲಿತ್ತು ಒಂದು ಅಗಲವಾದ ಪ್ಲಾಸ್ಟಿಕ್ ಚೀಲ.

ಅವನಲ್ಲಿ ಎಕ್ಸೈಟ್‌ಮೆಂಟ್ ಉದಿಸಿತ್ತು.

ಪಾಲ್! ಅಬ್ಬಾ! ಅದೆಷ್ಟು ಕೆಲಸ ಮಾಡಿದ್ದಾನೆ!

ಛೇ! ಬದುಕಿರಬೇಕಿತ್ತವನು! ಈ ರಹಸ್ಯದಿಂದಾಗಿ ಪ್ರಾಣ ಕಳೆದುಕೊಂಡ.

ಕಲ್ಲನ್ನು ಮತ್ತೆ ಅದರ ಜಾಗದಲ್ಲಿ ಪ್ರತಿಷ್ಠಾಪಿಸಿ, ಬ್ಯಾಗನ್ನು ಕಾರಿನಲ್ಲಿ ಹಾಕಿಕೊಂಡ. ಈಗ ನೇರವಾಗಿ ಸ್ವರೂಪನ ಫಾರಂಹೌಸ್ ತಲುಪಬೇಕು.

ಅವನು ಫಾರಂಹೌಸ್ ತಲುಪಿದಾಗ ರಾತ್ರಿ ಹತ್ತೂವರೆ ಆಗುತ್ತಿತ್ತು.

ಸ್ವರೂಪ್ ಚಿಂತಾಕ್ರಾಂತನಾಗಿ ಕುಳಿತಿದ್ದ. “ಹೇ ಯಾಕೆ?” ಕೇಳಿದ ಮಿತ್ರಜೀತ್.

“ನೀನು ಹೊರಟಿದ್ದು ಯಾವಾಗ? ಬಂದಿದ್ದು ಯಾವಾಗ? ಈಗಾಗಲೇ ನಾವು ಇಬ್ಬರನ್ನು ಕಳೆದುಕೊಂಡಿದ್ದಾಗಿದೆ. ಯೋಚನೆ ಉಂಟಾಗದೇ ಇರತ್ತಾ?” ಎಂದ ಡಿನ್ನರ್ ಟೇಬಲ್‌ಗೆ ನಡೆದು.

ಸುನೀತಿ ಆಗಲೇ ಮಲಗಿಬಿಟ್ಟಿದ್ದಳು. ಲೊರೆಟ್ಟಾ ಊಟ ಮುಗಿಸಿ ಅಲ್ಲಿಯೇ ಪುಸ್ತಕವೊಂದನ್ನು ಓದುತ್ತಾ ಕುಳಿತಿದ್ದಳು.

“ನೀನು?” ಎಂದ ಮಿತ್ರಜೀತ್ ಊಟವನ್ನು ತಟ್ಟೆಗೆ ಬಡಿಸಿಕೊಳ್ಳುತ್ತಾ.

“ನಾನಾಗ್ಲೇ ಊಟ ಮಾಡಿದೆ ಇವರಿಬ್ಬರೊಂದಿಗೆ” ಎಂದ ಸ್ವರೂಪ್.

ಅವನಲ್ಲಿ ಪ್ರತೀಕ್ಷೆಯಿತ್ತು – ಮಿತ್ರಜೀತ್‌ನ ರಾತ್ರಿ ಸಾಹಸದ ವಿವರಣೆ ಬಗ್ಗೆ. ಅವನ ಕುತೂಹಲವನ್ನು ನೋಡಿ ಮುಗುಳ್ನಕ್ಕ ಮಿತ್ರಜೀತ್.

ಊಟ ಮುಗಿಸಿ ಟೇಬಲ್ ಲ್ಯಾಂಪ್ ಆನ್ ಮಾಡಿದ. ಪಾಲ್‌ನ ಕವರನ್ನು ಓಪನ್ ಮಾಡಿದ. ಒಂದು ಕವರ್ ಮೇಲೆ ‘ನನ್ನ ಸಾವಿನ ನಂತರ’ ಎಂದೂ, ಮತ್ತೊಂದರ ಮೇಲೆ ‘ಲೊರೆಟ್ಟಾ ಸಿಲ್ವೆಸ್ಟರ್‌ಗೆ’ ಎಂದೂ ಬರೆಯಲ್ಪಟ್ಟಿದ್ದವು.

“ಲೊರೆಟ್ಟಾ… ನಿಮಗೆ” ಎಂದು ಅವಳ ಗಮನ ಸೆಳೆದ ಮಿತ್ರಜೀತ್.

ಲೊರೆಟ್ಟಾ ನೆಪ ಮಾತ್ರಕ್ಕೆ ಕೈಯಲ್ಲಿ ಹಿಡಿದಿದ್ದ ಪುಸ್ತಕವನ್ನು ಪಕ್ಕಕ್ಕಿಟ್ಟು ಎದ್ದುಬಂದಳು. ಮಿತ್ರಜೀತ್ ನೀಡಿದ ಪತ್ರ ಪಡೆದು ತನ್ನ ಕುರ್ಚಿಗೆ ಹಿಂದಿರುಗಿ ಒಡೆದಳು.

ಜೀವನ ಎಷ್ಟು ಅನಿಶ್ಚಯತೆಯಿಂದ ಕೂಡಿದೆ ಅಲ್ವಾ? ನಾನು ಏನೇನೋ ಮಾಡುವೆನೆಂದು ಕನಸು ಕಂಡಿದ್ದೆ. ಆದರೆ ಅನಿರೀಕ್ಷಿತ ಬೆಳವಣಿಗೆಯೊಂದು

ನನ್ನನ್ನು ಅದರೆಡೆಗೆ ಆಕರ್ಷಿತನಾಗುವಂತೆ ಮಾಡಿತು. ಅದರತ್ತ ಆಸಕ್ತಿ ಹೆಚ್ಚುತ್ತಿದ್ದಂತೆ ನಿಮ್ಮಗಳ ಒಡನಾಟ ಕಡಿಮೆಯಾಗುತ್ತಾ ಹೋಯಿತು.

ಒಡನಾಟವೇ ಹೊರತು ಆಸಕ್ತಿ ಅಲ್ಲ ಕಡಿಮೆ ಆಗಿದ್ದು. ಏನು ಮಾಡಲಿ? ಪ್ರಜಾಸೇವೆಯೇ ನನ್ನ ಜೀವನದ ಧ್ಯೇಯ ಎಂದು ನಾನೆಂದರೆ ಅದು ಹಾಸ್ಯಾಸ್ಪದವಾಗಿ ಕಾಣಿಸಬಹುದು ಬಹುತೇಕ ಜನರಿಗೆ.

ಆದರೆ ನನಗೆ ಗೊತ್ತು. ನೀನಾಗಲೀ ಸಿಲ್ವೆಸ್ಟರ್ ಆಗಲೀ ಹಾಗೆ ನನ್ನ ಬಗ್ಗೆ ಕೇವಲವಾಗಿ ಆಲೋಚಿಸುವವರಲ್ಲವೆಂದು.

ಗುಡ್ ಲಕ್ ಲೊರೆಟ್ಟಾ! ನಿನಗೂ ನಿನ್ನ ಪತಿಗೂ ನನ್ನ ಶುಭಾಶಯಗಳು ಸದಾ ಇರುತ್ತವೆ.

ಇತ್ತೀಚೆಗೆ ನನ್ನ ಕೆಲಸದಲ್ಲಿ ಅಡ್ಡಿ ಅಡಚಣೆಗಳು ಕಾಣಿಸುತ್ತಿವೆ. ಯಾವುದೋ ದೊಡ್ಡ ಗುಂಪು ವ್ಯವಸ್ಥಿತ ಅಪರಾಧಗಳಲ್ಲಿ ತೊಡಗಿದೆ. ಇದರ ಬುಡ ಶೋಧಿಸಲು ಸನ್ನದ್ಧನಾಗಿದ್ದೇನೆ. ಈ ಶೋಧ ನನ್ನ ಪ್ರಾಣವನ್ನು ಹರಣ ಮಾಡುವ ಭಯ ಇಲ್ಲದಿಲ್ಲ. ಭಯವೆಂದರೆ ನನಗೆ ಸಾವಿನ ಭಯವಿಲ್ಲ. ಆದರೆ ನಿಮ್ಮಗಳ ಒಡನಾಟ ಇಲ್ಲದೇ ಹೋಗುವುದೇ ಎಂಬ ಹೆದರಿಕೆ.

ಏನು ಮಾಡಲಿ?

ಇವರುಗಳು ಎಷ್ಟು ಎಚ್ಚರಿಕೆಯಿಂದಿದ್ದಾರೆಂದರೆ ಸದಾ ನನ್ನ ಹಿಂದೆ ಯಾರೋ ಇದ್ದ ಹಾಗೆ ಭಾಸವಾಗುತ್ತಿದೆ. ನನಗನ್ನಿಸುವುದಿಷ್ಟು! ಇಲ್ಲಿ ಯಾರನ್ನೂ... ಅಂದರೆ ಯಾರನ್ನೂ ನಂಬಲಾಗದು. ದೇವರು ಒಳ್ಳೆಯವನಿದ್ದರೂ ಅವನ ಸುತ್ತಲಿನ 'ದೇವತೆಗಳು' ಕೆಡುಕು ಮಾಡುವ ಜನ.

ನನ್ನ ಸಾವು ಅಥವಾ ಅಪಘಾತ ಬಹಳವೇ ಬೇಗನೆ ಘಟಿಸಲಿದೆ. ಅದಕ್ಕೇ ಈ ಪತ್ರವನ್ನು ನನ್ನ ಶೋಧದೊಂದಿಗೆ ಇಟ್ಟಿದ್ದೇನೆ. ನನ್ನ ಕೋಡೆಡ್ ಪತ್ರ ಮಿತ್ರಜೀತ್‌ಗೆ ತಲುಪಿಸಿದ್ದೇನೆ. ಜೊತೆಯಲ್ಲಿ ಹನ್ನೊಂದು ಕಥೆಗಳಿವೆ. ಅವು ವಾಸ್ತವ-ಕಲ್ಪನೆ ಬೆರೆತಿರುವುದು. ಓದುಗರಿಗೆ ಬೇಗ ತಲುಪಿಸುವ ಆಸೆ ಇದೆ.

ಸಿಲ್ವೆಸ್ಟರ್‌ಗೆ ನನ್ನ ಅಭಿನಂದನೆ ಹೇಳು. ಇನ್ನು ಮೇಲೆ ಅವನನ್ನೇ ನಿನ್ನ 'ಮಾತಿನ' ಗೆಳೆಯನನ್ನಾಗಿ ಮಾಡಿಕೋ. ನಾನು ಅದೃಷ್ಟವಂತ. ನಿನ್ನಂತಾ ಗೆಳತಿ ಸಿಲ್‌ನಂತಾ ಗೆಳೆಯ ಸಿಕ್ಕಿದ್ದೀರಿ. ಇನ್ನು ಕೆಲವು ದಿನ ನಿಮ್ಮ ಸಾಂಗತ್ಯ ಸಿಕ್ಕಿದರೆ ಅದೇ ನನ್ನ ಪುಣ್ಯ. ಗುಡ್ ಲಕ್ ಲೊರೆಟ್ಟಾ. ಗಾಡ್ ಬ್ಲೆಸ್ ಯೂ. ಚಿಯರ್ಸ್!

ಪಾಲ್ ಲೊರೆಟ್ಟಾಳ ಕಂಗಳಿಂದ ಕಂಬನಿ ಧಾರೆಯಾಗಿ ಹರಿಯಿತು. ಆತಂಕದಿಂದ ಬಳಿ ಬಂದ ಮಿತ್ರಜೀತ್‌ಗೆ ಪತ್ರ ನೀಡಿದಳು. ಅವನೂ ಓದಿ ನಿಡುಸುಯ್ದ.

ಸ್ವರೂಪ್ ಅವನನ್ನು "ಮಿತ್ರಜೀತ್! ಈ ವೀಡಿಯೋ ನೋಡು" ಎಂದ.

ಮಿತ್ರಜೀತ್. ಲೊರೆಟ್ಟಾ ಟಿವಿ ಪರದೆಯತ್ತ ನೋಡಿದರು.

ಚಿತ್ರ ಮಸುಕುಮಸುಕಾಗಿತ್ತು. ಆದರೆ ಕೆಲವು ವ್ಯಕ್ತಿಗಳು ಸ್ಪಷ್ಟವಾಗಿ ಕಂಡರು. ಆ ಮುಖಗಳನ್ನು ನೋಡಿ ಗಾಬರಿಯಾದರು ಮಿತ್ರಜೀತ್, ಸ್ವರೂಪ್. ಲೊರೆಟ್ಟಾಗೆ ಅವರಾರೆಂದು ತಿಳಿಯಲಿಲ್ಲ.

ಚಿತ್ರ ಮುಂದುವರೆದಿತ್ತು. ಈಗ ಬಂದ ವ್ಯಕ್ತಿ ಅತ್ಯಂತ ಕುಖ್ಯಾತ ಭೂಗತ ದೊರೆ! ಅವನು ಬಂದು ಅಪ್ಪಿಕೊಂಡ ವ್ಯಕ್ತಿಯನ್ನು ನೋಡಿ ಬೆವರಿದರು ಮೂವರೂ.

"ಪಾಲ್ ಇಂಥಾ ಡೈನಮೈಟ್ ಇಟ್ಕೊಂಡು ಯಾಕೆ ಮುಂದಿನ ಹೆಜ್ಜೆ ಇಡಲಿಲ್ಲ?" ಕೇಳಿದ ಸ್ವರೂಪ್.

"ನನಗೆ ತಿಳಿದಿದೆ ಯಾಕೇಂತ" ಎಂದ ಮಿತ್ರಜೀತ್.

"ಏನದು?" ಕುತೂಹಲದಿಂದ ಕೇಳಿದ ಸ್ವರೂಪ್.

"ಲೊರೆಟ್ಟಾಗೆ ಬರೆದ ಪತ್ರದಲ್ಲಿ ದೇವರು ಒಳ್ಳೆಯವನಿದ್ದರೂ ಅವನ ಸುತ್ತಲಿನ 'ದೇವತೆ'ಗಳು ಕೆಡುಕು ಮಾಡುವ ಜನ ಅಂತ ಬರೆದಿದ್ದಾನೆ. ಇದರರ್ಥ ಏನು ಗೊತ್ತಾ?"

ಉಹೂಂ ಎಂದು ತಲೆ ಆಡಿಸಿದ ಸ್ವರೂಪ.

"ಸ್ವಲ್ಪ ಯೋಚಿಸು. ನಿನಗೇ ತಿಳಿಯತ್ತೆ" ಮಾರ್ಮಿಕವಾಗಿ ಅಂದ ಮಿತ್ರಜೀತ್.

ಉಳಿದ ಕಾಗದಗಳನ್ನು ನೋಡಲು ಸಿದ್ದರಾಗುತ್ತಿದ್ದಂತೆ ಬಾಗಿಲನ್ನು ಟಕ್ ಟಕ್ ಎನ್ನಿಸಿದ್ದರು ಯಾರೋ. ಮೂವರೂ ಪರಸ್ಪರ ಮುಖ ನೋಡಿಕೊಂಡರು.

ಸ್ವರೂಪ್ ಎಲ್ಲಾ ದಾಖಲೆಗಳನ್ನೂ ಸರಸರನೆ ಎತ್ತಿಕೊಂಡು ಹೋಗಿ ತನ್ನ ರೂಂ ಬೀರೂವಿನಲ್ಲಿಟ್ಟು ಬೀಗ ಹಾಕಿದ. ಟಕ್ ಟಕ್ ಬಾಗಿಲು ಸದ್ದಾಗುತ್ತಲೇ ಇತ್ತು.

ಸ್ವರೂಪ ಬಾಗಿಲಲ್ಲಿನ ಕಳ್ಳಗಿಂಡಿಯಲ್ಲಿ ನೋಡಲೆತ್ನಿಸಿದ. ಯಾರೆಂದು ತಿಳಿಯಲಿಲ್ಲ.

ಬಾಗಿಲನ್ನು ಬಾಗಿಲ ಕಟ್ಟನ್ನು ಒಂದು ಸರಪಳಿಯಿಂದ ಭದ್ರಮಾಡಿ ಬಾಗಿಲನ್ನು ಮೆಲ್ಲನೆ ತೆರೆದ.

ಅಲ್ಲಿದ್ದ ವ್ಯಕ್ತಿಯನ್ನು ನೋಡಿ ವಿಸ್ಮಯಗೊಂಡ. ಮರುಕ್ಷಣ ಸರಪಳಿಯನ್ನು ತೆಗೆದು ಆ ವ್ಯಕ್ತಿಯನ್ನು ಸರಕ್ಕೆಂದು ಒಳಗೆಳೆದುಕೊಂಡು ಬಾಗಿಲನ್ನು ಮುಚ್ಚಿದ. ಬಂದ ವ್ಯಕ್ತಿಯನ್ನು ಮಿತ್ರಜೀತ್ ಚಕಿತತೆಯಿಂದಲೂ, ಲೊರೆಟ್ಟಾ ಸಂಭ್ರಮಾಶ್ಚರ್ಯಗಳಿಂದಲೂ ವೀಕ್ಷಿಸಿದರು.

ಬಂದವನು ಲೊರೆಟ್ಟಾಳ ಪತಿ ಸಿಲ್ವೆಸ್ಟರ್!

# 21

ಫಜಲ್ ಅಮರೇಶ ಸತ್ತ ಜಾಗಕ್ಕೆ ಬಂದ. ಅವನನ್ನು ಹಿಂಬಾಲಿಸಿದವರು ಬಹಳವೇ ಹತ್ತಿರಕ್ಕೆ ಬಂದರು. ಫಜಲ್‌ಗೆ ಅವರತ್ತ ಗಮನವಿರಲಿಲ್ಲ. ಇಲ್ಲೇ … ಇಲ್ಲೇ ನನ್ನ ಗೆಳೆಯ ಅಮರ್‌ನಿಗೆ ಸಾವು ತಂದರು ದುರುಳರು!

ಛೇ! ನಿಜವಾಗಿಯೂ ನಷ್ಟ ಆಗಿರೋದು ನನಗೆ. ಎದೆಗಾರಿಕೆಯಿಂದ ಕೆಲಸ ಮಾಡಿದರೆ ಅದಕ್ಕೆ ಸಾವು ಶಿಕ್ಷೆಯೇ?

ನನ್ನ ಲೇಖನ ಇನ್ನಷ್ಟು ಕಸವನ್ನು ಹೊರಹಾಕಿದೆ. ಆ ಕಸದ ಹಿಂದಿನ ಜನ ಉರಿದೇಳುತ್ತಾರೆ. ನನ್ನ ಮೇಲೂ ಪ್ರಹಾರ ನಡೆಸುತ್ತಾರೆ. ಯಾವಾಗ ಮಾಡಬಹುದು?

ಇವತ್ತೇನಾ? ಮನದಲ್ಲೇ ನಗುತ್ತಾ ರಸ್ತೆಯ ಮೇಲೆ ಕೂತ. ಅಮರ್‌ನ ಹೆಣವಿದ್ದ ಜಾಗವನ್ನು ಬಲಗೈಯಿಂದ ಪ್ರೀತಿಯಿಂದ ಸವರಿದ.

ಯಾಕೋ ಇನ್ನೂ ಯಾರೂ ನನ್ನ ಮೇಲೆ ಧಾಳಿ ಮಾಡಿಲ್ಲ!

ಅಷ್ಟೇ!

ಮರುಕ್ಷಣ ರಸ್ತೆಯ ಮೇಲೆ ದಭಾರನೆ ಬಿದ್ದಿದ್ದ. ಏಳು ಜನ!

ಮೈಮೇಲೆ ಬೀಳುತ್ತಿದ್ದ ಏಟುಗಳ ನಡುವೆಯೂ ತನ್ನ ಆಕ್ರಮಣಕಾರರನ್ನು ಎಣಿಸಿದ್ದ.

ಪರಿಶೋಧನಾತ್ಮಕ ಪತ್ರಕರ್ತನಲ್ಲವೇ ನಾನು!

ನಗು ಉಕ್ಕಿ ಬರುತ್ತಿತ್ತು. ನೋವು ಮೈಯನ್ನು ಕ್ಷಣಕ್ಷಣಕ್ಕೂ ಹೊಗುತ್ತಿತ್ತು. ನಾಲ್ವರು ಅವನನ್ನು ಎತ್ತಿಕೊಂಡರು.

ಓ! ನಾಲ್ಕು ಜನರಿಗೆ ಬೇಕಾದವನು ನಾನ!

ಅವನ ಲಘು ಲಹರಿಯ ಬಗ್ಗೆ ಅವನಿಗೇ ಅಚ್ಚರಿ. ತಾನು ಸಾವನ್ನು ಸಂತೋಷದಿಂದ ಸ್ವಾಗತಿಸುತ್ತಿರುವನೇ?

ಯಾರೋ ಒಬ್ಬ ಮರವೊಂದಕ್ಕೆ ಕಟ್ಟಿ ಹಾಕಿದ. ಇಲ್ಲಿ ತನ್ನ ಸಹಾಯಕ್ಕೆ ಬರುವವರು ಯಾರೂ ಇಲ್ಲವೇ? ಅದೂ ಈ ಹಾಡುಹಗಲಿನಲ್ಲಿ? ಧಾಳಿಕಾರರು ತಮ್ಮ ಕರ್ತವ್ಯವನ್ನು ನಿರ್ವಹಿಸುತ್ತಿದ್ದರು.

ಚಾಕು, ಬಾಕು, ಚೂರಿ, ಲಾಂಗ್, ಕತ್ತಿ ಎಲ್ಲವೂ ಇದ್ದವು.

ಕುತ್ತಿಗೆಗೆ ಪೆಟ್ಟು, ಹಣೆಗೆ ಏಟು, ಮಣಿಕಟ್ಟಿಗೆ ಗಾಯ, ಎದೆಗೆ ಹೊಡೆತ, ಒಂದಲ್ಲ, ಎರಡಲ್ಲ, ಅನೇಕ.

ಅಲ್ಲಿ ಮಾನವೀಯತೆ, ಕರುಣೆಗಳು ಕೊಲೆಯಾಗಿದ್ದವು. ನಿರ್ದಯತೆ ಅಲ್ಲಿ ವಿಜೃಂಭಿಸಿತ್ತು.

ಫಜಲ್‌ನ ಪ್ರಾಣವಾಯು ಅಲ್ಲಿನ ಗಾಳಿಯಲ್ಲಿ ಲೀನವಾಯಿತು.

ಮರಕ್ಕೆ ಕಟ್ಟಲ್ಪಟ್ಟಿದ್ದ ಫಜಲ್ ಈಗ ಹೆಣವಾಗಿದ್ದ. ಅವನ ಶವವನ್ನು ಎತ್ತಿಕೊಂಡು ಬಂದು ಅವನ ಕಾರಿನ ಮುಂದಿನÀ ಸೀಟಿನಲ್ಲಿ ಕೂರಿಸಿದರು ಆ ರೌಡಿಗಳು.

ನಂತರ ಕಾರನ್ನು ನ್ಯೂಟ್ರಲ್ ಗೇರ್‌ನಲ್ಲಿಟ್ಟು ನೂಕಿದರು.

ಅಲ್ಲಿಂದ ನಿರ್ಗಮಿಸಿದರು. ಕಾರು ನಿಧಾನವಾಗಿ ಅಲ್ಲಿಯೇ ಇದ್ದ ಹಳ್ಳದತ್ತ ಇಳಿಯಲಾರಂಭಿಸಿತು.

“ಜೈಲಿನಿಂದ ತಪ್ಪಿಸಿಕೊಂಡು ಬಂದೆಯಾ?” ಕೇಳಿದ ಸ್ವರೂಪ್.

ಸಿಲ್ವೆಸ್ಟರ್ ಬಹಳವೇ ಸುಸ್ತಾಗಿದ್ದ.

“ನಾಲ್ಕು ಮೈಲಿ ಓಡಿಬಂದನಂತೆ” ಲೊರೆಟ್ಟಾ ಹೇಳಿದಳು. ಬಿಸಿನೀರಿನ ಬೇಸಿನ್ನಿನಲ್ಲಿ ಅವನಿಗೆ ಕಾಲಿಡುವಂತೆ ಹೇಳಿ, ನೋವು ನುಂಗುವ ಮುಲಾಮನ್ನು ಕಾಲ್ಕಂಬಗಳಿಗೆ ಪ್ರೀತಿಯಿಂದ ಉಜ್ಜುತ್ತಿದ್ದಳು. ಸಿಲ್ವೆಸ್ಟರ್ ತನ್ನ ಹೆಂಡತಿಯನ್ನು ಅಭಿಮಾನ, ಪ್ರೇಮಗಳಿಂದ ನೋಡುತ್ತಿದ್ದವನು “ಇಲ್ಲ” ಎಂದ.

“ಮತ್ತೆ?” ಎಂದು ಕೇಳಿದ ಸಿಲ್ವೆಸ್ಟರ್.

ಸಿಲ್ವೆಸ್ಟರ್‌ನನ್ನು ಹಠಾತ್ತಾಗಿ ನೋಡಿದ ಷಾಕ್ ಕಡಿಮೆಯಾದ ಮೇಲೆ ಪಾಲ್, ಅಮರೇಶ್‌ರ ಬಳಿಯಿದ್ದ ಸಾಕ್ಷ್ಯಗಳನ್ನು ವಿವರವಾಗಿ ಓದಲಾರಂಭಿಸಿದ್ದ.

ಲೊರೆಟ್ಟಾ ತನ್ನ ಇನಿಷಿಯಲ್ ಷಾಕ್ ಕಳೆದೊಡನೆ ಸಿಲ್ವೆಸ್ಟರ್‌ನ ಉಪಚಾರಕ್ಕೆ ಶುರುವಿಟ್ಟುಕೊಂಡಿದ್ದಳು. ಅದು ಮಿತ್ರಜೀತ್‌ಗೆ ಮುದ ತಂದಿತ್ತು. ಇವಳು ನಿಜಕ್ಕೂ ಪತಿಯೊಂದಿಗೆ ಪ್ರೀತಿಯಿಂದಿದ್ದಾಳೆ!

"ಪೊಲೀಸ್ನೋರೇ ಬಿಟ್ಬಿಟ್ರು" ಎಂದ ಸಿಲ್ವೆಸ್ಟರ್.

"ಏನೂ?" ಸ್ವರೂಪ್ ಗಲಿಬಿಲಿಯಿಂದ ಕೇಳಿದ.

"ಹೌದು.." ಎಂದ ಸಿಲ್ವೆಸ್ಟರ್ ವಿವರ ನೀಡಿದ...

ಅಂದು ಬೆಳಿಗ್ಗೆ ಕ್ಯೂ ನಿಂತು ತಿಂಡಿಯ ತಟ್ಟೆ ತೆಗೆದುಕೊಂಡು ತನ್ನ ಮಾಮೂಲೀ ಜಾಗದಲ್ಲಿ ಕುಳಿತು ತಿಂಡಿ ತಿನ್ನುತ್ತಿದ್ದಾಗ ಒಬ್ಬ ಸೆಂಟ್ರಿ ಅವನನ್ನು ಕರೆದಿದ್ದ.

ಅವನ ಬಳಿಗೆ ಹೋದಾಗ "ಸಾಹೇಬ್ರು ಕರೀತವ್ರೆ. ತಿಂಡಿ ತಿನ್ಬುಟ್ಟು ಅವ್ರುನ್ನ ಓಗ್ನೋಡು" ಎಂದಿದದ.

ಸಿಲ್ವೆಸ್ಟರ್‌ಗೆ ಗಲಿಬಿಲಿ. ಜೈಲಿಗೆ ಬಂದಾಗಿನಿಂದ ಎಂದೂ ತನ್ನೆಡೆಗೆ ತಿರುಗಿ ನೋಡದ ಜೈಲರ್ ತನ್ನನ್ನು ನೋಡಬೇಕೆಂದನೇ? ಅಚ್ಚರಿಯೂ ಆಗಿತ್ತು. ಜೈಲರ್ ರೂಮಿಗೆ ಹೋದ. ಸೆಂಟ್ರಿಯನ್ನು ಹೊರಗೆ ಕಳಿಸಿ ಬಾಗಿಲು ಹಾಕಿದ ಜೈಲರ್. ಸಿಲ್ವೆಸ್ಟರ್‌ಗೆ ಗಾಬರಿಯಾಗಿತ್ತು.

ಈ ಜೈಲರ್ ಈಗೇನು ಮಾಡಲಿದ್ದಾನೆ? ನೋಡಲು ರಕ್ಕಸನಂತಿದ್ದಾನೆ. ಕೆಂಡದಂತಹ ಕಂಗಳು, ದೊಡ್ಡ ದೇಹ, ದಪ್ಪ ಮೀಸೆ!

"ಸಿಲ್ವೆಸ್ಟರ್!" ಎಂದ.

"ಸರ್!" ಎಂದ ಹೆಚ್ಚು ಭಯ ಕಡಿಮೆ ವಿನಯದೊಂದಿಗೆ.

"ನಿನ್ನನ್ನು ಈ ರಾತ್ರಿ ಬಿಟ್ಟುಬಿಡ್ತೀನಿ. ಆದರೆ..." ಮಾತು ನಿಲ್ಲಿಸಿದ ಜೈಲರ್. ಸಿಲ್ವಸ್ಟರ್ ಈಗ ನಿಜಕ್ಕೂ ಹೆದರಿದ.

ಅವನು ಅನೇಕ ಕತೆಗಳನ್ನು ಓದಿದ್ದ. ಸಿನಿಮಾಗಳು ಹಲವನ್ನು ನೋಡಿದ್ದ. ಯಾವುದೋ ಕಾನೂನು ಬಾಹಿರ ಕೆಲಸವನ್ನು ಬಂದಿಗಳಿಂದ ಮಾಡಿಸುವ ಕೃತ್ಯಗಳ ಬಗ್ಗೆ ತಿಳಿದಿದ್ದ. ಅಂತಹುದ್ದೇ ಯಾವುದೋ ನನ್ನಿಂದಲೂ ಈಗ ಆಗಬೇಕೇನೋ!

ಆದರೆ ಅವನ ಊಹೆ ತಪ್ಪಾಗಿತ್ತು.

“ನಿನ್ನನ್ನು ಬಿಡುತ್ತಿರೋದಕ್ಕೆ ಕಾರಣ - ನಿನ್ನ ಹೆಂಡತಿ ಎಲ್ಲೋ ಕಾಣೆಯಾಗಿದ್ದಾಳೆ. ಅವಳನ್ನು ಹುಡುಕಿಕೋ ಹೋಗು” ಎಂದ ಜೈಲರ್.

ಸಿಲ್ವೆಸ್ಟರ್ ಚಿಂತಿಸಿದ. ಲೊರೆಟ್ಟಾ ಎಲ್ಲಿದ್ದಾಳೆ? ಎಲ್ಲಿ ಹುಡುಕುವುದು? ರಾತ್ರಿ ಹನ್ನೊಂದಾಗುತ್ತಿದ್ದಂತೆ ಅವನ ರೂಮಿನ ಬಳಿ ಯಾರೋ ಬೆಕ್ಕಿನಂತೆ ಸದ್ದಿಲ್ಲದೇ ಬಂದರು. ಕಪ್ಪು ಮುಸುಕು ಧರಿಸಿದ್ದ ವ್ಯಕ್ತಿ!

ಅವನ ರೂಮಿನ ಬೀಗ ತೆಗೆದು, ಅವನಿಗೆ ಸಂಜ್ಞೆ ಮಾಡಿ ಹೊರಟುಹೋದ ಆ ವ್ಯಕ್ತಿ! ಬೇರೇನೂ ಮಾಡಲು ತೋಚದೇ ಹೊರಬಂದ.

ನೀರವ ನಿಶೀಥಿ! ಬಿಕೋ ಎನ್ನುವ ಜಾಗ! ಸುಮಾರು ದೂರ ಬಂದ. ಒಂದು ನರಪಿಳ್ಳೆಯೂ ಕಾಣಲಿಲ್ಲ. ಈಗ ತಾನೆಲ್ಲಿ ಹೋಗಲಿ?

ಇವರು ನನ್ನನ್ನು ಬಿಟ್ಟುಬಿಟ್ಟಿರುವುದನ್ನು ನೋಡಿದರೆ, ಇವರು ನನ್ನ ಮೇಲೆ ಒಂದು ಕಣ್ಣಿಟ್ಟೇ ಇರಬೇಕು.

ಬೆಳಕು ಮೂಡುವುದನ್ನೇ ನಿರೀಕ್ಷಿಸುತ್ತಾ ಒಂದು ಅಂಗಡಿಯ ಮುಂಬಾಗಿಲಲ್ಲಿ ಕೂತ. ಸೂರ್ಯನ ಪ್ರಥಮ ಕಿರಣ ಭೂಮಿ ಸೋಕುತ್ತಿದ್ದಂತೆ ತಾನಿರುವ ಸ್ಥಳದ ಪರಿಶೀಲನೆ ನಡೆಸಿದ.

ಮುಖದ ಮೇಲೆ ಸಂತಸದ ನಗೆ ಮೂಡಿತು. ಅನತಿ ದೂರದಲ್ಲಿ ತನ್ನ ಸಹಪಾಠಿ ಗೆಳೆಯ ರಿಚೀಯ ಮನೆ ಕಂಡಿತ್ತು. ನಾವಿಬ್ಬರೂ ಒಂದೇ ಸೈಜಿನವರು! ರಿಚೀ ಹೆಚ್ಚು ಪ್ರಶ್ನಿಸಲಿಲ್ಲ. ಪೇಪರ್ನಲ್ಲಿ ಇವನ ಕೇಸ್ ಬಗ್ಗೆ ವಿವರಗಳು ಪ್ರಕಟವಾಗಿದ್ದುವಲ್ಲ!

ಡೀಸೆಂಟಾಗಿ ಡ್ರೆಸ್ ಮಾಡಿಕೊಂಡು, ರಿಚೀಗೆ ಧನ್ಯವಾದ ಅರ್ಪಿಸಿ, ಹತ್ತಿರದಲ್ಲಿ ಕಂಡ ಆಟೋ ಹತ್ತಿದ ಜೇಬು ಮುಟ್ಟಿಕೊಂಡ. ರಿಚೀ ನೀಡಿದ ಸಾಲದ ಹಣ ಭದ್ರವಾಗಿತ್ತು.

ಮನೆಯ ಬಳಿ ಹೋದ. ಲೊರೆಟ್ಟಾ ಇರಲಿಲ್ಲ. ಅವಳ ಗೆಳತಿಯರ ಮನೆಗೆ ಹತ್ತಿರದ ಬೂತ್‌ನಿಂದ ಫೋನ್ ಮಾಡಿದ. ಉಹೂಂ! ಸಿಗಲಿಲ್ಲ.

ನಡೆಯುತ್ತಾ ಹೊರಟ. ಸಂಜೆಯಾಯಿತು. ಎಲ್ಲಿ ಹುಡುಕುವುದು? ಸೂರ್ಯ ಮುಳುಗುತ್ತಾ ಬಂದ.

ಆ ಸಮಯದಲ್ಲಿ ಅವನಿಗೆ ಏನು ಮಾಡಲೂ ತೋಚಲಿಲ್ಲ. ಹತ್ತಿರದ ಹೊಟೇಲ್‌ನಲ್ಲಿ ಕಾಫಿ ಕುಡಿಯಲು ಕುಳಿತ. ಹೊಟೇಲ್ ವೆಯ್ಟರ್ ಅವನಿಗೆ ಬಿಲ್ ಕೊಡುತ್ತಾ "ನೀವು ಹೊರಗಡೆ ಹೋದಾಗ ಅಲ್ಲೊಂದು ಆಟೋ ನಿಂತಿರುತ್ತಂತೆ. ಅದರಲ್ಲಿ ನಿಮ್ಮ ಫ್ರೆಂಡ್ ಇದಾರಂತೆ" ಎಂದ.

ಸಿಲ್ವೆಸ್ಟರ್ ಆಲೋಚಿಸಿದ. ಫ್ರೆಂಡ್ ಎನ್ನುತ್ತಿದ್ದಾನೆ. ಹೋಗುವುದೇ ಸರಿ ಎಂದುಕೊಂಡ.

ವೆಯ್ಟರ್ ಹೇಳಿದಂತೆಯೇ ಹೊರಗೊಂದು ಆಟೋ ಇತ್ತು. ಬೇರೆ ಯಾರೂ ಇರಲಿಲ್ಲ. ಆಟೋ ಡ್ರೈವರ್ ಮಾತ್ರವಿದ್ದ.

ಇವನು ಬಂದೊಡನೆ "ಹತ್ತಿ ಸಾರ್" ಎಂದ.

ಹತ್ತಿದೊಡನೆ ಆಟೋ ಭರ್ರೆಂದು ಓಡಿತು. ಆಟೋ ಡ್ರೈವರ್ ಒಂದು ಕಾಗದ ನೀಡಿ, "ಇಲ್ಲಿಗೆ ಹೋದರೆ ನಿಮ್ಮ ಶ್ರೀಮತಿ ಸಿಗ್ತಾರೆ. ಆದರೆ ನಿಮ್ಮನ್ನು ಬಹಳ ಜನ ಫಾಲೋ ಮಾಡ್ತಿರಬಹುದು. ಸೋ ಹುಷಾರಾಗಿ ಹೋಗಿ. ನಾನೀಗ ವಿರುದ್ಧ ದಿಕ್ಕಿನಲ್ಲಿ ಹೋಗ್ತಿದ್ದೀನಿ. ನೀವು ಮಾಡೋ ಬೆಸ್ಟ್ ಕೆಲಸ ಅಂದ್ರೆ ಬಸ್ ಹತ್ತಿಬಿಡಿ. ಲಾಸ್ಟ್ ಸ್ಟಾಪ್‌ನಿಂದ ಸುಮಾರು ನಾಲ್ಕು ಮೈಲಿ ನಡೆದುಬಿಡಿ. ಯಾರೂ ಫಾಲೋ ಮಾಡಲ್ಲ" ಎಂದ.

"ಇದು ಯಾರಾದ್ರೂ ಮಾಡ್ತಿರೋ ನಾಟಕ ಯಾಕಿರಬಾರದು?" ಎಂದ ಸಿಲ್ವೆಸ್ಟರ್.

"ನಾನು ಉಮಾಶಂಕರ್‌ಗೆ ಬೇಕಾದವನು. ಅಷ್ಟು ತಿಳಕೊಂಡ್ರೆ ಸಾಕು" ಎಂದ ಆಟೋ ಡ್ರೈವರ್, "ಅಗೋ! ಬಸ್ಸು ಆ ಸ್ಟಾಪಿನಲ್ಲಿ ನಿಲ್ಲುತ್ತೆ. ಹತ್ತಿರ ನಿಲ್ಲಿಸ್ತೀನಿ" ಎಂದು ಹೇಳಿ ನಿಲ್ಲಿಸಿದ.

ಸಿಲ್ವೆಸ್ಟರ್ ಛಕ್ಕನೆ ಬಸ್ ಹತ್ತಿದ. ಯಾರಾದರೂ ಫಾಲೋ ಮಾಡುತ್ತಿರುವರೇ ಎಂದು ನೋಡಿದ. ಯಾರೂ ಕಾಣಿಸಲಿಲ್ಲ. ಬಸ್ ಕೊನೆಯ ಸ್ಟಾಪ್‌ಗೆ ಬಂದಾಗ ಪೂರ್ಣ ಕತ್ತಲಾಗಿತ್ತು. ತನ್ನ ಟೀನೇಜ್‌ನಲ್ಲಿ ಸಿಲ್ವೆಸ್ಟರ್ ಒಬ್ಬ ರನ್ನರ್. ಮ್ಯಾರಥಾನ್ ಅವನ ವೈಶಿಷ್ಟ್ಯ. ಅದನ್ನು ನೆನೆದು ಓಡಿದ. ಕಲ್ಲು ಮುಳ್ಳೆನ್ನದೇ ಓಡಿ ಸ್ವರೂಪ್‌ನ ಫಾರಂಹೌಸ್ ತಲುಪಿದ್ದ...

"ಅಬ್ಬಾ! ಸಿಲ್! ತುಂಬಾ ಕಷ್ಟ ಆಗಿರಬೇಕಲ್ವಾ?" ಎಂದಳು ಲೊರೆಟ್ಟಾ. ಸಿಲ್ವೆಸ್ಟರ್ ಪತ್ನಿಯತ್ತ ಪ್ರೇಮಭರಿತ ದೃಷ್ಟಿ ಬೀರಿದ.

“ಓ ಮೈ ಗಾಡ್! ಪಾಲ್, ಅಮರೇಶ್ ಸಾಕಷ್ಟು ಎವಿಡೆನ್ಸ್ ಕಲೆಕ್ಟ್ ಮಾಡಿದ್ದಾರೆ!” ಎಂದ ಮಿತ್ರಜೀತ್ ಎಲ್ಲವನ್ನೂ ಓದಿ ಮುಗಿಸಿ.

ಅವನು ಸ್ವರೂಪ್ ಈಗ ಸ್ವರೂಪ್‌ನ ರೂಮ್‌ನಲ್ಲಿದ್ದರು.

“ಈಗ ಇದನ್ನು ಹೇಗೆ ಬಯಲು ಮಾಡುವುದು?” ಎಂದ ಸ್ವರೂಪ್.

“ಇದಕ್ಕೆ ನನ್ನ ಹತ್ತಿರ ಒಂದು ಉಪಾಯವಿದೆ!” ಎಂದು ಹೇಳಿದ ಮಿತ್ರಜೀತ್.

ಯಾವುದೋ ಹೆಣ್ಣಿನ ಚೀರುವಿಕೆ ಮಿತ್ರಜೀತ್, ಸ್ವರೂಪ್‌ರನ್ನೆಬ್ಬಿಸಿತ್ತು. ಬೆಚ್ಚಿ ಹೊರಬಂದರು.

# 22

ಕೈಯಲ್ಲಿ ಪೇಪರ್ ಹಿಡಿದು ಸುನೀತಿ ದುಃಖಿಸುತ್ತಿದ್ದಳು. ಮಿತ್ರಜೀತ್ ಪೇಪರ್ ಕೈಗೆ ತೆಗೆದುಕೊಂಡ. ಬೆಚ್ಚಿದ.

ಫಜಲ್‌ನ ಸಾವು!

ತನ್ನ ಈ ಸಾಹಸಗಳ ನಡುವೆ ರೇಡಿಯೋ, ಟಿ.ವಿ.ಯೊಂದಿಗೆ ಸಂಪರ್ಕ ಇಟ್ಟುಕೊಂಡಿರಲಿಲ್ಲ. ಇಲ್ಲದಿದ್ದರೆ ರಾತ್ರಿಯೇ ವಿಷಯ ತಿಳಿಯುತ್ತಿತ್ತೇನೋ...

ಸುನೀತಿಯ ಕಂಬನಿ ಧಾರೆಧಾರೆಯಾಗಿ ಹರಿಯುತ್ತಿತ್ತು. “ನಾನೆಂತಾ ದುರದೃಷ್ಟವಂತೆ. ಪತಿ, ಗೆಳೆಯ ಇಬ್ರನ್ನೂ ಕಳೆದುಕೊಂಡೆ” ಎಂದಳು ಅಳುವಿನ ನಡುವೆ.

ಲೊರೆಟ್ಟಾಗೆ ಅವಳ ಸ್ಥಿತಿ ಬಗ್ಗೆ ತಿಳಿದಿತ್ತು. ಅವಳು ಸುನೀತಿಯನ್ನು ಸಾಂತ್ವನಗೊಳಿಸಲೆತ್ನಿಸಿದ್ದಳು.

“ನೋಡೂ! ಈ ನಾಜೂಕು ಪರಿಸ್ಥಿತೀಲಿ ನೀನು ಆರೋಗ್ಯ ಹಾಳು ಮಾಡಿಕೊಳ್ಳಬಾರದು. ನಾನೂ ನನ್ನ ಗೆಳೆಯನನ್ನು ಕಳೆದುಕೊಂಡೆ. ಲಕ್ಕಿಲೀ ನನ್ನ ಪತಿ ಮತ್ತೆ ಸಿಕ್ಕಿದರು”

ಮಿತ್ರಜೀತ್, ಸ್ವರೂಪ್ ಫಜಲ್‌ನ ಅಂತ್ಯಸಂಸ್ಕಾರದ ಬಗ್ಗೆ ಆಲೋಚಿಸುತ್ತಿದ್ದರು. ಉಮಾಶಂಕರ್‌ನ ಫೋನ್ ಬಂದಿತ್ತು. ಬಹಳವೇ ದುಃಖದಿಂದ ಮಾತಾಡಿದ್ದ.

“ತುಂಬಾ ಹಾರಿಬಲ್ ಬೀಟಿಂಗ್ ಕಣಯ್ಯಾ ಮಿತ್ರಜೀತ್! ನರರೂಪದ ರಾಕ್ಷಸರು ಅವರು. ಅವರನ್ನು ಎದುರಿಸಿದವರಿಗೆ ಇದೇ ಶಿಕ್ಷೆ ಎನ್ನೋ ರೀತೀಲಿ ಹಿಂಸಿಸಿದ್ದಾರೆ. ಅವನ ಹೆಣಾನೂ ಸಿಗದ ಹಾಗೆ ಕಾರನ್ನು ಹಳ್ಳಕ್ಕೆ ತಳ್ಳಿದ್ದಾರೆ...” ದುಃಖ ನುಂಗಲು ಮಾತು ನಿಲ್ಲಿಸಿ, ನಂತರ “ಆದರೆ ಅಷ್ಟರಲ್ಲಿ ಯಾವುದೋ ಜೀಪ್ ಆ ಕಡೆ ಬಂದಿದೆ. ಪೊಲೀಸ್ ಜೀಪ್ ಅಂತ ಅಂದ್ಕೊಂಡು ಓಡಿಬಿಟ್ಟಿದ್ದಾರೆ. ಅಷ್ಟು ಹೊತ್ತೂ ನಾಟಕ ನೋಡೋ ಹಾಗೆ ನಿಂತಿದ್ದ ಕೆಲವರು ಕಾರನ್ನು ತಡೆದು ನಿಲ್ಲಿಸಿದ್ದಾರೆ” ಎಂದ.

“ಥ್ಯಾಂಕ್ಸ್ ಫಾರ್ ದ ಮೆಸೇಜ್ ಉಮಾ. ಹಾಗೇ ಸಿಲ್ವೆಸ್ಟರ್ನ ಕಳಿಸಿದ್ದಕ್ಕೆ ಕೂಡಾ” ಎಂದ ಮಿತ್ರಜೀತ್.

“ನನ್ನ ಪರಿಧೀಲಿ, ನನ್ನ ಕೈಲಾದಷ್ಟು ನಾನು ಮಾಡ್ತೀನಿ ಮಿತ್ರಜೀತ್” ಎಂದು ಹೇಳಿ ಡಿಸ್ಕನೆಕ್ಟ್ ಮಾಡಿದ.

“ನೀವು ಮನೆಯಿಂದ ಹೊರಗೆ ಬರಬೇಡಿ. ಕೇರ್ಫುಲ್!” ಎಂದು ಮಿತ್ರಜೀತ್ ಉಳಿದವರಿಗೆ ಹೇಳುವ ಹೊತ್ತಿಗೆ ಹೊರಗೆ ಸದ್ದಾಗಿತ್ತು.

ಎಲ್ಲರೂ ಬೇರೆ ಬೇರೆ ರೂಮಿನಲ್ಲಿ ಅವಿತರು. ಗೇಟು ತೆರೆದು ಒಳಗೆ ಬಂದಿದ್ದರು ಇಬ್ಬರು.

“ಯಾರು?” ಎಂದ ಸ್ವರೂಪ್.

“ನಾವು ಕೊರಿಯರ್ ಸರ್ವೀಸ್‌ನವರು. ಮಿತ್ರಜೀತ್ ಇದ್ದಾರಾ?” ಎಂದನೊಬ್ಬ.

ಸ್ವರೂಪ್ ಅಲರ್ಟ್ ಆದ. ಒಳಗಿನಿಂದ ಮಿತ್ರಜೀತ್ ಹೊರಗೆ ಬರುವುದೋ ಬೇಡವೋ ಎಂದು ಆಲೋಚಿಸುತ್ತಿದ್ದ.

“ಯಾರಿಂದ ಬಂದಿದೆ ಪಾರ್ಸೆಲ್?” ಕೇಳಿದ ಸ್ವರೂಪ್.

“ಮಿಸ್ಟರ್ ಫಜಲ್ ಇಂದ. ಆದರೂ ನಿಮ್ಮ ಮನೆ ಭಾಳ ದೂರ ಸರ್” ಎಂದ ಮತ್ತೊಬ್ಬ.

ಮಿತ್ರಜೀತ್ ರಿಸ್ಕ್ ತೆಗೆದುಕೊಳ್ಳಲು ನಿರ್ಧರಿಸಿದ.

“ನಾನೇ ಮಿತ್ರಜೀತ್” ಹೊರಬಂದ. ಸಹಿ ಹಾಕಿಸಿಕೊಂಡು ಪಾರ್ಸೆಲ್ ಇತ್ತು ಹೊರಟು ಹೋದರು ಆ ಇಬ್ಬರೂ.

ಪಾರ್ಸೆಲನ್ನು ಆತುರದಂದ ಬಿಚ್ಚಿದ ಮಿತ್ರಜೀತ್.

ದೊಡ್ಡ ಮನುಷ್ಯರು. ಅವರ ಹಾಗೂ ಭೂಗತ ಪ್ರಪಂಚದ ನಡುವಿನ ಅಪವಿತ್ರ ಮೈತ್ರಿಯ ಬಗ್ಗೆ ವಿವರಗಳಿದ್ದವು.

ಫಜಲ್‌ನ ಶೋಧ ನಿಜಕ್ಕೂ ವಿಸ್ಫೋಟಕಾರಕ! ಮುಖ್ಯವಾಗಿ ಮರಗಳ ಕಳ್ಳಸಾಗಾಣಿಕೆ ಬಗ್ಗೆ ಹೆಚ್ಚು ವಿವರಗಳಿದ್ದವು.

ಹಠಾತ್ತನೆ ಮತ್ತೆ ಫೋನ್ ರಿಂಗಾಯಿತು.  ಉಮಾಶಂಕರ್ ಮಾತಾಡುತ್ತಿದ್ದ.

"ದಯವಿಟ್ಟು ನೀವಿಬ್ಬರೂ ಫಜಲ್‌ನ ಸಂಸ್ಕಾರಕ್ಕೆ ಬರಬೇಡಿ. ಅಪಾಯ ಕಾದಿದೆ" ಎಂದು ಫೋನಿಟ್ಟುಬಿಟ್ಟ.

ಸ್ವರೂಪ್, ಮಿತ್ರಜೀತ್ ಗೊಂದಲದಲ್ಲಿ ಬಿದ್ದರು. ಅವರ ಮಾತುಗಳನ್ನು ಕೇಳಿಸಿಕೊಂಡ ಸುನೀತಿ ಮುಂದೆ ಬಂದಳು.

"ನಾನೊಬ್ಬಳು ಮೇಕಪ್ ಆರ್ಟಿಸ್ಟ್. ನಿಮಗೆ ಸ್ವಲ್ಪ ಬೇರೆ ರೀತಿ ಮೇಕಪ್ ಮಾಡ್ತೀನಿ. ಫಜಲ್‌ಗೆ ನಾವು ಕೊಡೋ ಅಂತಿಮ ಕಾಣಿಕೆ ಇದು" ಎಂದಳು.

ಇದು ಸಿನಿಮಾ ಅಥವಾ ಕಥೆಯಲ್ಲ. ಆದರೂ ಪ್ರಯತ್ನದಲ್ಲಿ ತಪ್ಪಿಲ್ಲ ಎಂದುಕೊಂಡು ಒಪ್ಪಿದರು ಇಬ್ಬರೂ.

ಮನೆಯಲ್ಲಿ ದೊರೆತ ಕೆಲವೇ ವಸ್ತುಗಳ ಸಹಾಯದಿಂದಲೇ ಸುನೀತಿ ತನ್ನ ಕೈಚಳಕ ತೋರಿದ್ದಳು.

ಹೊರಗೆ ಬಂದು ಸ್ವರೂಪನ ಕಾರು ಏರಿದಾಗ ಅವರ ರೂಪ ಅವರಿಗೇ ಬೇರೆಯಾಗಿ ಕಂಡಿತ್ತು. ಆಟೋ ಸಿಗುವ ಜಾಗ ತಲುಪಿದೊಡನೆ ಇಬ್ಬರೂ ಬೇರೆ ಬೇರೆ ಆಟೋ ಹತ್ತಿದರು. ಕಾರು ಅಲ್ಲಿಯೇ ಪಾರ್ಕ್ ಮಾಡಿದರು.

ಉಮಾಶಂಕರ್ ಭೇಟಿಯಾದ. ಅವನಿಗೆ ಇವರನ್ನು ಗುರುತಿಸಲು ಸಾಧ್ಯವಾಗಲಿಲ್ಲ. ಸಂಸ್ಕಾರ ಮುಗಿದ ಮೇಲೆ ಅಲ್ಲಿಂದ ಹೊರಟರು. ಫಜಲ್‌ಗಾಗಿ ಕಣ್ಣೀರು ಸುರಿಸಿ ತಮ್ಮ ನಮನ ಸಲ್ಲಿಸಿದಾಗ ಮನಸ್ಸು ಭಾರವಾಗಿತ್ತು. ಅಲ್ಲಲ್ಲಿ ಕೆಲವರು ದುರುಳರು ಇರುವುದನ್ನು ಗುರುತಿಸಿದ್ದರು. ಅವರಿಗೇ ಇವರಾರೆಂದು ಅರಿವಾಗಲಿಲ್ಲ.

ಮಿತ್ರಜೀತ್ ತಲೆಯಲ್ಲಿ ಉಪಾಯವೊಂದು ಸಿದ್ಧವಾಗುತ್ತಿತ್ತು.

ಹೇಗೆ? ಎಲ್ಲಿ? ಈ ಪುರಾವೆಗಳನ್ನು ಬಹಿರಂಗಗೊಳಿಸುವುದು?

ಮೂವರು ಪತ್ರಕರ್ತ ಮಿತ್ರರು ತಮ್ಮನ್ನೇ ಬಲಿ ಕೊಟ್ಟುಕೊಂಡು ಈ ವಿವರ ಸಂಗ್ರಹಿಸಿದ್ದಾರೆ. ಅವರು ಮೂವರ ಆತ್ಮಕ್ಕೆ ಶಾಂತಿ ಸಿಗಬೇಕಾದರೆ ದುಷ್ಟರಿಗೆ ಶಿಕ್ಷೆ ಆಗಲೇಬೇಕು.

ತನ್ನನ್ನೇ ನಂಬಿ ವಿವರಗಳನ್ನು ತನಗೆ ಒಪ್ಪಿಸಿದ್ದಾರೆ.

ಹೇಗೆ? ಹೇಗೆ?

ಪಾಲ್ ಲೊರೆಟ್ಟಾಗೆ ಬರೆದ ಕಾಗದದ ನೆನಪಾಯಿತು.

ದೇವರು ಒಳ್ಳೆಯವರು – ಆದರೆ ಸುತ್ತಮುತ್ತಲ 'ದೇವತೆಗಳು' ಕೆಟ್ಟ ಜನ.

ಆ ವಾಕ್ಯವನ್ನೇ ಸುಮಾರು ಸಲ ಉಚ್ಚರಿಸಿದ.

ಪ್ರತಿ ಸಲ ಅವನಿಗೆ ಆ ವಾಕ್ಯ ಹೊಸ ಹೊಸ ಅರ್ಥಗಳನ್ನು ನೀಡಿತ್ತು. ಆ ಮಾತಿನಿಂದ ಅವನಿಗೆ ಅವನ ಮುಂದಿನ ಹೆಜ್ಜೆ ಏನೆಂಬುದರ ಅರಿವು ಮೂಡಿತು. ಸ್ವರೂಪ್ ಎಲ್ಲೆಂದು ನೋಡಿದ. ಹತ್ತಿರದಲ್ಲಿಯೇ ಮಿತ್ರಜೀತ್‌ನ ಸನ್ನೆಗಾಗಿ ಕಾಯುತ್ತಾ ನಿಂತಿದ್ದ. ಮೂಕಾಭಿನಯ ಮಾಡಿ ಅವನೇನು ಮಾಡಬೇಕೆಂದು 'ಹೇಳಿದ'!

ಅವನ ಸಂದೇಶ ತಲುಪಿತೆಂದು ತಲೆದೂಗಿ ಅಲ್ಲಿಂದ ಸ್ವರೂಪ್ ಹೊರಟುಹೋದ. ಮಿತ್ರಜೀತ್ ಸ್ವರೂಪ್‌ನ ಫಾರಂಹೌಸ್ ತಲುಪಿದ. ಸುನೀತಿ, ಲೊರೆಟ್ಟಾ ಮತ್ತು ಸಿಲ್ವೆಸ್ಟರ್ ಮೂವರೂ ಇಸ್ಪೀಟ್ ಆಡುತ್ತಿದ್ದರು. ಸಧ್ಯ! ಕ್ರಮೇಣ ಶಾಂತಿ ನೆಲೆಸುತ್ತಿದೆ.

ಸ್ವರೂಪ್‌ನ ಸ್ಟಡೀ ರೂಮಿಗೆ ಹೋದ. ಕಂಪ್ಯೂಟರ್ ಆನ್ ಮಾಡಿದ. ಋಷಿಯಂತೆ, ಕೇಂದ್ರೀಕರಿಸಿ ಧ್ಯಾನ ಮಾಡುವಂತೆ, ಪಾಲ್, ಅಮರೇಶ್, ಫಜಲ್‌ರ ವರದಿಗಳನ್ನು ಕಂಪ್ಯೂಟರ್‌ಗೆ ಫೀಡ್ ಮಾಡುತ್ತಾ ಹೋದ. ಕೆಲವು ಪುಟಗಳನ್ನು ಸ್ಕ್ಯಾನರ್ ಬಳಸಿ ಸ್ಕ್ಯಾನ್ ಮಾಡಿ ಸೇವ್ ಮಾಡಿದ.

ಸ್ವರೂಪ್ ಬಂದಾಗಲೂ ಮಿತ್ರಜೀತ್ ಇನ್ನೂ ಬರೆಯುತ್ತಲೇ ಇದ್ದ.

"ಹೋದ ಕೆಲಸ ಆಯ್ತಾ?" ಕೇಳಿದ ಮಿತ್ರಜೀತ್.

"ಹೂಂ. ಇಲ್ನೋಡು!" ಎಂದ ಸ್ವರೂಪ್. ಅವನ ಕೈಯಲ್ಲಿ ಒಂದು ಪುಸ್ತಕವಿತ್ತು. ಮಿತ್ರಜೀತ್ ಸಂತಸದಿಂದ ನೋಡಿದ.

"ಇದು ಡಮ್ಮಿ ಕಾಪಿ. ಬೈಂಡ್ ಮಾಡಿಸಿಕೊಂಡು ಬಂದೆ. ನನ್ನ ಫ್ರೆಂಡ್ ಪ್ರೂಫ್ ನೋಡಿದ್ದಾನೆ. ಟೈಟಲ್ ಚೆನ್ನಾಗಿದೆಯಾ?" ನೋಡಿದ.

"ಸತ್ಯವಿನ್ನೂ ಸತ್ತಿಲ್ಲ! ಚೆನ್ನಾಗಿದೆ ಟೈಟಲ್. ನಮಗೂ ನಮ್ಮ ಕೆಲಸಕ್ಕೆ ಹುಮ್ಮಸ್ಸು ಕೊಡುತ್ತೆ. ಜೀವನದಲ್ಲಿ ಪಾಜ಼ಿಟಿವ್ ಆಟಿಟ್ಯೂಡ್ ಇರಲೇಬೇಕು. ಈಗ ನೋಡು. ಒಳ್ಳೆಯ ಕೆಲಸ ಮಾಡಿದ್ದಕ್ಕೆ ಪಾಲ್, ಅಮರೇಶ್, ಫಜಲ್ ಹುತಾತ್ಮರಾದರು. ಅವರ ಸಾವು ನಮಗೆ ಹೆದರಿಕೆ ಹುಟ್ಟಿಸಿ, ನಾವು ಈ ಕೆಲಸ

ಮಾಡೋದನ್ನು ಬಿಟ್ಟುಬಿಡುವಂತೆ ಮಾಡಬೇಕು. ಆದರೆ ಇನ್ನಷ್ಟು ಹುಮ್ಮಸ್ಸು ಹುಟ್ಟಿಸ್ತಿದೆ. ಅವರು ಅರ್ಧಕ್ಕೆ ನಿಲ್ಲಿಸಿದ ಕೆಲಸವನ್ನು ನಾವು ಮುಗಿಸುವುದಕ್ಕೆ ಏನು ಮಾಡಬೇಕು ಗೊತ್ತಾ?" ಎಂದ ಮಿತ್ರಜೀತ್.

ಸ್ವರೂಪ್ ಹುಬ್ಬೇರಿಸಿದ. "ಇವನ್ನೆಲ್ಲಾ ರಿಮೂವಬಲ್ ಡಿಸ್ಕ್‌ಗಳಲ್ಲಿ ಸೇವ್ ಮಾಡಿದ್ದೀನಿ. ಇದನ್ನ ನೀವು ತೆಗೆದುಕೊಂಡು ಹೋಗಿ..." ಎಂದು ಹೇಳಿ ಕೆಲವು ಸೂಚನೆಗಳನ್ನು ನೀಡಿದ. ಸ್ವರೂಪ್ ತಲೆ ಆಡಿಸಿದ.

ಮಿತ್ರಜೀತ್ ಕೆಲವು ಶೀರ್ಷಿಕೆಗಳನ್ನು ತಾನು ಸಿದ್ಧಪಡಿಸಿದ ಲೇಖನ ಗುಚ್ಛಕ್ಕೆ ಇರಿಸಿದ. ಇನ್ನು ನಿರೀಕ್ಷೆ ಒಂದೇ ಉಳಿದುಕೊಂಡಿರುವುದು.

ತನ್ನ ಕಾಂಟ್ಯಾಕ್ಟ್‌ಗಳ ಬಗ್ಗೆ ಆಲೋಚಿಸಿ ಕೊನೆಗೆ ಮುಖ್ಯ ಮಂತ್ರಿಗಳ ಕಛೇರಿಗೆ ಫೋನ್ ಮಾಡಿದ.

ಅಲ್ಲಿದ್ದ ಅವನ ಕಾಂಟ್ಯಾಕ್ಟ್ ಮುಖ್ಯಮಂತ್ರಿಗಳ ಈ ತಿಂಗಳ ಕಾರ್ಯಕ್ರಮಗಳ ಪಟ್ಟಿ ನೀಡಿದಳು. ಅವಳಿಗೆ ಧನ್ಯವಾದ ಹೇಳಿ ಫೋನಿಟ್ಟ.

ನಂತರ ತನ್ನ ಮತ್ತೊಂದು ಕಾಂಟ್ಯಾಕ್ಟ್‌ಗೆ ಫೋನ್ ಮಾಡಿದ. ಆತ ಒಂದು ರೀತಿಯಲ್ಲಿ ಸುದ್ದಿ ಸಂಗ್ರಾಹಕ. ಅವನನ್ನು ಎಲ್ಲರೂ ಸಂಗ್ರಹಸಿಂಹ ಎನ್ನುತ್ತಿದ್ದರು. ಅವನ ನಿಜವಾದ ಹೆಸರು ಯಾರಿಗೂ ತಿಳಿಯದು.

ಸಂಗ್ರಹಸಿಂಹನಿಗೆ ಮಿತ್ರಜೀತ್ ಎಂದರೆ ಮಹಾ ಅಭಿಮಾನ. ನಿಯತ್ತಿನಿಂದ ತನ್ನ ಕೆಲಸ ಮಾಡುವ ಪತ್ರಕರ್ತ ಮಿತ್ರಜೀತ್‌ನನ್ನು ಸಿಂಹದ ಮರಿ ಎನ್ನುತ್ತಿದ್ದ.

"ನೀವು ಸಂಗ್ರಹಸಿಂಹ, ಅದಕ್ಕೇ ನಾನು ಸಿಂಹದ ಮರಿ. ಅಲ್ಲವೇ ತಂದೆಯವರೇ?" ಎನ್ನುತ್ತಿದ್ದ ಮಿತ್ರಜೀತ್ ನಗುತ್ತಾ.

ಸಂಗ್ರಹಸಿಂಹನ ಕಿವಿ ಭೂಮಿಗೆ ತಾಕಿರುತ್ತದಂತೆ. ಅವನಿಗೆ ರಾಜ್ಯದ ಮಂತ್ರಿ, ಶಾಸಕ, ಪೊಲೀಸ್, ಕಾವಿಧಾರಿ, ಭೂಗತ ಜನ ಎಲ್ಲರ ಬಗ್ಗೆಯೂ ವಿಷಯ ತಿಳಿದಿದ್ದವು. ಅದು ಹೇಗೆ ವಿಷಯ ತಿಳಿಯುತ್ತದೆ ಎಂದು ಪ್ರಶ್ನಿಸಿದರೆ "ನಾನು ನನ್ನ ಕಣ್ಣು, ಕಿವಿಗಳನ್ನು ತೆರೆದೇ ಇಟ್ಟುಕೊಂಡಿರುತ್ತೇನೆ. ವಿಷಯಗಳು ತಂತಾನೇ ನನ್ನ ಹತ್ತಿರ ಬರುತ್ತವೆ" ಎನ್ನುತ್ತಿದ್ದ.

ನಿಜವಾಗಿಯೂ ಅದೊಂದು ವಿಶಿಷ್ಟ ವಿದ್ಯೆ. ಅವನು ಎಲ್ಲರಿಗೂ ತನ್ನ ಸಂಗ್ರಹದ ಸಂಗತಿಗಳನ್ನು ಹೊರಬಿಡುತ್ತಿರಲಿಲ್ಲ.

ಮಿತ್ರಜೀತ್‌ನಂತಹ ನಿಯತ್ತಿನ ಪ್ರಾಮಾಣಿಕ ಮನುಷ್ಯನಿಗೆ ಮಾತ್ರವೇ ಅವನು ವಿವರ ನೀಡುತ್ತಿದ್ದ.

ಈಗ ಮಿತ್ರಜೀತ್‌ನ ದೂರವಾಣಿ ಕರೆ ಬಂದೊಡನೆ "ಭಾಳ ದಿವ್ಸ ಆದ್ಮೇಲೆ ನನ್ನ ಜ್ಞಾಪ್ಕ ಬಂದಿದೆಯಾ? ಬಾ ಮಾತಾಡೋಣ' ಎಂದ.

ಸ್ವರೂಪ್‌ಗೆ ಹೇಳಿ, ಸ್ವಲ್ಪವೇ ವೇಷ ಬದಲಾವಣೆ ಮಾಡಿಕೊಂಡು ಸಂಗ್ರಹಸಿಂಹನ ಬಳಿಗೆ ಹೊರಟ.

ಏನೇ ಆಗಲಿ, ತನ್ನ ಕೆಲಸ ಮುಗಿಯುವವರೆಗೂ ಯಾವುದೇ ವ್ಯವಸ್ಥಿತ ಅಪರಾಧದ ಬಲಿಪಶು ತಾನಾಗಕೂಡದು. ತನ್ನನ್ನು ತಾನು ಸುರಕ್ಷಿತವಾಗಿಟ್ಟುಕೊಳ್ಳಬೇಕು. ಪಾಲ್, ಅಮರೇಶ್, ಫಜಲ್‌ರು ಆರಂಭಿಸಿದ ಯಜ್ಞವನ್ನು ತಾನು ಸ್ವರೂಪ್ ಮತ್ತು ಇತರರ ಸಹಾಯದೊಂದಿಗೆ ಪೂರ್ಣಗೊಳಿಸಬೇಕು.

ಯಾರೂ ತನ್ನನ್ನು ಹಿಂಬಾಲಿಸಿದಂತೆ ಕಾಣಿಸಿರಲಿಲ್ಲ.

ಸಂಗ್ರಹಸಿಂಹ ತನ್ನ ಮನೆಯ ಹಿತ್ತಲಿನಲ್ಲಿ ಬೇವಿನ ಮರದಡಿ ಕುಳಿತು ಅಂದಿನ ವೃತ್ತಪತ್ರಿಕೆಗಳನ್ನು ಓದುತ್ತಿದ್ದ. ಗುಂಗುರು ಕೂದಲು, ಅಲ್ಲಲ್ಲಿ ನೆರೆತಿತ್ತು. ದಟ್ಟ ಕರಿಹುಬ್ಬು, ಅಗಲ ಹಣೆ, ನೀಳ ಬಿಳಿ ಮೀಸೆ, ಫ್ರೆಂಚ್ ಗಡ್ಡ, ತೆಳ್ಳಗಿನ ಕೆನ್ನೆಗಳು, ನೀಳಕಾಯ, ಉದ್ದುದ್ದದ ಬೆರಳುಗಳು.

"ಬಾರಯ್ಯಾ. ಬಾ. ಹೇಗಿದ್ದೀ?" ಆಹ್ವಾನಿಸಿದ ಸಂಗ್ರಹಸಿಂಹ.

"ನಮಸ್ಕಾರ ತಂದೆಯವರಿಗೆ" ಎಂದ ಮಿತ್ರಜೀತ್. ಸಂಗ್ರಹಸಿಂಹನನ್ನು ಕಂಡರೆ ಸಂತಸ ಉಕ್ಕಿ ಬರುತ್ತಿತ್ತು ಮಿತ್ರಜೀತ್‌ಗೆ.

"ಏನು? ಕಪ್ಪು ಬಟ್ಟೆ ಹಾಕಿದ್ದೀ? ಮೂರು ಜನ ಮಿತ್ರರನ್ನು ಕಳಕೊಂಡ ದುಃಖದ ಸೂಚನೆಯೇ?"

"ಓ ನಿಮಗೆ ಸುದ್ದಿ ಮುಟ್ಟಿರೋದ್ರಲ್ಲಿ ಏನಾಶ್ಚರ್ಯ?" ನಕ್ಕವನು "ಆದರೆ, ಅವ್ರು ಮೂರು ಜನ ಅನ್ಯಾಯವಾಗಿ ಪ್ರಾಣ ಕಳೆದುಕೊಂಡರು" ಎಂದ ಮ್ಲಾನವದನನಾಗಿ. ಸಂಗ್ರಹಸಿಂಹ ಎದ್ದು ಇವನ ಬೆನ್ನು ಸವರಿ, ಸಾಂತ್ವನ ಹೇಳುವಂತೆ "ಇವರ ಬುಡಕ್ಕೆ ಕೊಡಲಿ ಪೆಟ್ಟು ಹಾಕು. ಆಗ ನಿನ್ನ ಗೆಳೆಯರು ಮೂವರ ಆತ್ಮಕ್ಕೆ ಶಾಂತಿ ಸಿಗುತ್ತದೆ" ಎಂದ.

“ಹೇಗೆ?”

“ನಾನು ನಿನಗೆ ಸಹಾಯ ಮಾಡ್ತೀನಿ” ಎಂದ ಸಂಗ್ರಹಸಿಂಹ.

ಸುಮಾರು ನಾಲ್ಕು ಗಂಟೆಗಳ ಚರ್ಚೆಯ ನಂತರ ಯೋಜನೆಯೊಂದು ಸಿದ್ಧವಾಯಿತು.

“ನಿಮಗೆ ಈ ಪ್ಲಾನ್ ಹಿಡಿಸ್ತಾ?” ಎಂದ ಮಿತ್ರಜೀತ್.

“ತುಂಬಾ ಚೆನ್ನಾಗಿದೆ. ಆದರೆ ನಾನು ಭಾಗವಹಿಸೋಲ್ಲ. ನನಗಿಷ್ಟ ಇಲ್ಲ. ನನಗೆ ಹೇಗೂ ನೀನು ವಿವರ ಕೊಡ್ತೀಯಲ್ಲಾ?” ಎಂದು ಮಿತ್ರಜೀತ್‌ನ ಬೆನ್ನುತಟ್ಟಿದ ಸಂಗ್ರಹಸಿಂಹ.

“ನಿಮ್ಮ ಕಿವಿ, ಕಣ್ಣು ಚುರುಕು ಗುರುಗಳೇ. ಎಲ್ಲಾ ವಿಷಯ ನೀವು ಮುಂಚೇನೇ ತಿಳಕೊಂಡು ಬಿಡ್ತೀರಿ” ಎಂದು ಹೇಳಿ ಅವರಿಂದ ಬೀಳ್ಕೊಂಡ.

ಮನೆಗೆ ಹೋಗುತ್ತಾ ಆಲೋಚಿಸಿದ. ತನ್ನ ಯೋಜನೆ ಸಫಲವಾಗುವುದೇ? ಎಂದು ಅನೇಕ ಬಾರಿ ಯೋಚಿಸಿದ. ಬೇರೆ ದಾರಿ ಯಾವುದಾದರೂ ಇದೆಯೇ? ಎಂಬ ಪ್ರಶ್ನೆಗೆ ‘ಇಲ್ಲ’ ಎನ್ನುವ ಉತ್ತರ ಅವನ ಮೆದುಳು ನೀಡಿತ್ತು.

ತನ್ನ ಯೋಜನೆಯ ದಿನ ಹತ್ತಿರವಾಗುತ್ತಿದ್ದಂತೆ ಉದ್ವೇಗ ಹೆಚ್ಚುತ್ತಾ ಹೋಯಿತು.

# 23

ಮುಖ್ಯಮಂತ್ರಿ ಪರಶಿವಮೂರ್ತಿ ಶಿಸ್ತಿಗೆ ಹೆಸರಾದ ವ್ಯಕ್ತಿ. ಆತನಿಗೆ ಸಾಹಿತ್ಯದಲ್ಲಿ ಇದ್ದಷ್ಟೇ ಆಸಕ್ತಿ ಕಂಪ್ಯೂಟರ್ ವಿಜ್ಞಾನದಲ್ಲಿಯೂ ಇತ್ತು. ಆತ ಯಾವ ಸಭೆಗೆ ಬಂದರೂ, ವಿಷಯಕ್ಕೆ ತಕ್ಕ ಮಾತುಗಳನ್ನು ನೀಟಾಗಿ, ಚೊಕ್ಕವಾಗಿ ಆಡುತ್ತಿದ್ದರು.

ಬೆಳಿಗ್ಗೆ ಎಲ್ಲಾ ಪೇಪರ್ ಓದುವುದರೊಂದಿಗೆ ಕಂಪ್ಯೂಟರ್‌ನಲ್ಲಿ ಇಂಟರ್ನೆಟ್‌ಗೆ ಹೋಗಿ ದೇಶವಿದೇಶದ ಸುದ್ದಿಗಳನ್ನು ಓದುತ್ತಿದ್ದರು. ಇತ್ತೀಚೆಗೆ ನಡೆದ ಮೂವರು ಪತ್ರಕರ್ತರ ಸಾವು ಅವರನ್ನು ವಿಚಲಿತರನ್ನಾಗಿ ಮಾಡಿತ್ತು.

ತಮ್ಮ ಪರ್ಸನಲ್ ಸೆಕ್ರೆಟರಿ ಸುಮುಖನನ್ನು ಕರೆದು ವಿಚಾರಿಸಿದ್ದರು. “ಓ ಅದಾ ಸಾರ್! ಆ ಪಾಲ್ ಅನ್ನೋವ್ನಿಗೆ ಲೊರೆಟ್ಟಾ ಅನ್ನೋ ಹುಡುಗಿ ತುಂಬಾ ಬೇಕಾದವಳು. ಲೊರೆಟ್ಟಾ ಗಂಡನಿಗೆ ಈ ಸ್ನೇಹ ಹಿಡಿಸಲಿಲ್ಲ. ಅದಕ್ಕೇ ಕೊಂದುಬಿಟ್ಟ” ಎಂದಿದ್ದ ಅವನು.

ಪರವಾಗಿಲ್ವೇ! ಸಾಕಷ್ಟು ವಿಷಯ ತಿಳಿದುಕೊಂಡಿದ್ದಾನೆ ಎಂದುಕೊಂಡರು ಸಿ.ಎಂ.

“ಆಮೇಲೆ ಇನ್ನಿಬ್ರು?” ಎಂದರು.

“ಆ ಅಮರೇಶ್ ಟ್ರಕ್ ಅವಾಯ್ಡ್ ಮಾಡೋಕ್ಕೆ ಹೋಗಿ ಸತ್ತ. ಆ ಫಜಲ್ ಕೂಡಾ ಟ್ರಾಫಿಕ್ ಆಕ್ಸಿಡೆಂಟ್‌ನಲ್ಲಿ ಸತ್ತ”

“ಛೇ ಛೇ! ಟೂ ಬ್ಯಾಡ್. ಒಂದ್ಸಲ ಆ ನಾಗಸಿಂಹನ್ನ ಕರೆಸಿ. ಮಾತಾಡ್ತೀನಿ” ಎಂದವರು “ಈಗಲೇ ಫೋನ್ನಲ್ಲಿ ಕನೆಕ್ಟ್ ಮಾಡಿ” ಎಂದು ಮನಸ್ಸು ಬದಲಿಸಿದರು.

ಸುಮುಖ ಹಿಂದೇಟು ಹಾಕುತ್ತಲೇ “ಅವರು ಈಗ ಸಿಗೋಲ್ಲ ಸಾರ್! ಊರಾಚೆ ಹೋಗಿದ್ದಾರೆ” ಎಂದ.

ಸಿ.ಎಂ. ನಿಜಕ್ಕೂ ಕಿರಿಕಿರಿಗೊಂಡು “ರೀ ಸುಮುಖ, ಅವರ ಹತ್ತಿರ ಇರೋದು ರೋಮಿಂಗ್ ಫೆಸಿಲಿಟಿ ಇರೋ ಮೊಬೈಲ್. ನಾನೇ ಮಾಡ್ಕೋತೀನಿ ಬಿಡಿ”

ಎಂದು ಗದರಿ, "ಭಾನುವಾರ ಬೆಳಿಗ್ಗೆ ಇರೋ ಫಂಕ್ಷನ್‌ಗೆ ಎಲ್ಲಾ ಸಿದ್ಧತೆ ನಡೆದಿದೆ ತಾನೇ? ಸ್ವಲ್ಪ ಡೀಟ್ಯೈಲ್ಸ್ ಕೊಡಿ" ಎಂದರು.

ಸುಮುಖ ಹೊರಹೊರಟ. ಸಿ.ಎಂ. ಪರಶಿವಮೂರ್ತಿ ನಾಗಸಿಂಹನ ಮೊಬೈಲ್ ನಂಬರನ್ನು ಡಯಲ್ ಮಾಡಿದರು.

"ಹಲೋ... ಓ ಸಾರ್ ನೀವು? ಏನ್ಸಮಾಚಾರ ಸಾರ್? ನೀವ್ಯಾಕೆ ತೊಂದರೆ ತಗೊಂಡ್ರಿ? ನಾನೇ ಬರ್ತಿದ್ದೆ ನೀವು ಹೇಳಿ ಕಳ್ಸಿದ್ರೆ" ಎಂದ ವಿನಯದಿಂದ ಗೃಹಮಂತ್ರಿ ನಾಗಸಿಂಹ.

ಅದೇಕೋ ಸಿ.ಎಂ.ಗೆ ಅವನ ವಿನಯ ಅತಿವಿನಯ ಅನ್ನಿಸಿತು ಆ ಕ್ಷಣದಲ್ಲಿ. ತಕ್ಷಣವೇ 'ಅತಿವಿನಯಂ ಧೂರ್ತಲಕ್ಷಣಂ' ಎನ್ನುವ ಸಂಸ್ಕೃತದ ಉಕ್ತಿ ನೆನಪಾಯಿತು.

"ರೀ ನಾಗಸಿಂಹ, ತೀರಾ ಕಡಿಮೆ ಸಮಯದಲ್ಲಿ ಮೂವರು ಪತ್ರಕರ್ತರು ಸಾವಿಗೀಡಾಗಿದ್ದಾರೆ. ಸ್ವಲ್ಪ ತನಿಖೆಗೆ ಆದೇಶ ನೀಡಿ" ಎಂದರು ಸಿ.ಎಂ.

"ಆ ಆಕ್ಸಿಡೆಂಟ್ ಕೇಸುಗಳಿಗೆ ಯಾಕೆ ತಲೆ ಕೆಡಿಸಿಕೋಬೇಕು ಸಾರ್. ಕುಡಿದು ಗಾಡಿ ಓಡಿಸಿದ್ರೆ ಇನ್ನೇನಾಗುತ್ತೆ? ಲವ್ವು ಲಸ್ಟು ಅಂತ ಸಿಕ್ಕೊಂಡ್ರೆ ಇದೇ ಗತಿ" ಎಂದ ತೀರಾ ನಿಕೃಷ್ಟವಾಗಿ.

ಸಿ.ಎಂ. ಬೆಚ್ಚಿದರು.

ನಾನು ಹೇಳಿದ್ದು ಮೂವರು ಪತ್ರಕರ್ತರು ಅಂತ ಮಾತ್ರ. ಅವರ ಸಾವಿನ ಬಗ್ಗೆ ಇವನೆಷ್ಟು ಕರಾರುವಾಕ್ಕಾಗಿ ಹೇಳ್ತಿದ್ದಾನೆ ಅಂದರೆ... ಒಂದು – ಇವನು ನಿಜವಾಗಿಯೂ ತನ್ನ ಕೆಲಸದಲ್ಲಿ ತನ್ನನ್ನು ತೊಡಗಿಸಿಕೊಂಡಿದ್ದಾನೆ. ಎರಡು – ಇವನಿಗೆ ಈ ಮೂರು ಸಾವುಗಳ ಬಗ್ಗೆ ಇನ್ನೂ ಹೆಚ್ಚಿನ ವಿವರ ತಿಳಿದಿದೆ.

"ಸರಿ ಸರಿ! ಭಾನುವಾರ ಬೆಳಿಗ್ಗೆ ಫಂಕ್ಷನ್ನಿಗೆ ನೀವೂ ಬರಬೇಕು" ಎಂದರು ಸಿ.ಎಂ.

"ಖಂಡಿತ ಸಾರ್. ನೀವು ಕರೀತಿರೋವಾಗ ನಾನು ಬರದೇ ಇರ್ತೀನ್ಯೇ?" ಮತ್ತೆ ಅದೇ ಅತಿವಿನಯ! ಮತ ಯಾಚಿಸುವ ಸಮಯದಲ್ಲಿ ರಾಜಕಾರಣಿ ಮತದಾರನ ಹತ್ತಿರ ತೋರಿಸುವ ಅತಿವಿನಯ. ನನ್ನ ಹತ್ತಿರ ಏಕೆ ತೋರುತ್ತಿದ್ದಾನೆ?

ಸಿ.ಎಂ.ಗೆ ಈ ವಿಷಯ ತಲೆಯಲ್ಲಿಯೇ ಸುಳಿ ಸುತ್ತುತ್ತಿದ್ದುದರಿಂದ ತನ್ನ ಗೆಳೆಯ ರಾಮರಾವ್‌ಗೆ ಫೋನ್ ಮಾಡಿದರು.

ರಾಮರಾವ್ ಅತ್ಯಂತ ಹಿರಿಯ ಪತ್ರಿಕೋದ್ಯಮಿ. ಸಿ.ಎಂ. ಪರಶಿವಮೂರ್ತಿಯನ್ನು ನಿರ್ಭಯವಾಗಿ ವಿಮರ್ಶೆ ಮಾಡುತ್ತಿದ್ದರು. ಕೆಲಸದಲ್ಲಿ ಪ್ರಾಮಾಣಿಕತೆಯನ್ನು ಒಂದು ಭಾಗ ಮಾಡಿಕೊಂಡಿದ್ದ ಸಿ.ಎಂ.ಗೆ ಎಂಬತ್ತರ ವಯಸ್ಸಿನ ರಾಮರಾವ್ ಮಾತೆಂದರೆ ವೇದವಾಕ್ಯ.

“ಹಲೋ! ಏನೂ? ಮೂರ್ತಿಗಳು? ಹೇಗಿದ್ದೀರಿ?” ಆತ್ಮೀಯತೆಯಿಂದ ವಿಚಾರಿಸಿದರು ರಾಮರಾವ್.

“ನಿಮ್ಮಲ್ಲಿ ಫಜಲ್ ಅಂತ...” ಎಂದು ಪ್ರಾರಂಭಿಸಿದಾಗ “ಪೂರ್ ಫೆಲೋ. ಆಕ್ಸಿಡೆಂಟ್ ಆಗಿ ತೀರಿಕೊಂಡ. ಹಾಗಾಗಬಾರದಿತ್ತು. ತುಂಬಾ ಡೀಸೆಂಟ್ ಮನುಷ್ಯ” ಎಂದರು ರಾಮರಾವ್.

“ಅಪಘಾತವಾಗೋಕ್ಕೆ ಕುಡಿತ ಕಾರಣ ಆಗತ್ತೆ ಅಲ್ವಾ?” ಎಂದಾರಂಭಿಸಿದ ಸಿ.ಎಂ. ಮಾತುಗಳನ್ನು ಕತ್ತರಿಸಿ, “ಫಜಲ್? ಕುಡಿಯೋದು? ನೆವರ್! ನೀವು ಕೆಲವು ವಾರಗಳಿಂದ ಪ್ರಚಲಿತ ವಿದ್ಯಮಾನಗಳಲ್ಲಿ ಆಸಕ್ತಿ ತೋರುತ್ತಿಲ್ಲ. ಕಂಪ್ಯೂಟರ್ ಸೈನ್ಸ್, ಎಂಎನ್‌ಸಿ ಅಂತ ಬಿಜಿ ಆಗಿದ್ದೀರಿ. ಪತ್ರಕರ್ತರೆಲ್ಲಾ ಏನು ಮಾತಾಡಿಕೊಳ್ತಿದ್ದಾರೆ ಗೊತ್ತಾ?” ಎಂದರು.

“ಏನು ರಾಯರೇ?”

“ಸಿ.ಎಂ. ಪರಶಿವಮೂರ್ತಿ ಅಂದರೆ ಕೆಸರಿನಲ್ಲಿರೋ ಕಮಲ ಅಂತ”

“ಅಂದರೆ?”

“ಯೋಚಿಸಿ ನೋಡಿ ತಿಳಿಯುತ್ತೆ. ನನ್ನ ವಾಕಿಂಗ್ ಸಮಯ ಆಯ್ತು. ಮತ್ತೆ ಮಾತಾಡೋಣ” ಫೋನ್ ಡಿಸ್ಕನೆಕ್ಟ್ ಆಯಿತು.

ಸಿ.ಎಂ.ಗೆ ದಿಗ್ಭ್ರಮೆ ಆಯಿತು. ಎಲ್ಲೋ ಏನೋ ತಪ್ಪಾಗಿದೆ! ತಾನು ಪ್ರಜಾಸೇವೆಯೇ ಗುರಿ ಎಂದುಕೊಂಡು ಕೆಲಸ ಮಾಡುವಾತ.

ಕೆಸರಿನ ಕಮಲ? ಅಂದರೆ?

ಈಚೆಗೆ ಎಂಎನ್‌ಸಿಗಳಿಂದ ರಾಜ್ಯದ ಉದ್ಧಾರಕ್ಕೆ ಹಣ ವಸೂಲಿ, ಅವರ ಮೂಲಕ ರಾಜ್ಯದಲ್ಲಿ ಆಫೀಸು, ಕಾರ್ಖಾನೆಗಳ ಸ್ಥಾಪನೆ, ಇಂತಹ ಕೆಲಸಗಳಲ್ಲಿ ಮಗ್ನರಾಗಿದ್ದರು ಅವರು.

ಅದೂ ಅಲ್ಲದೇ ಕರಕುಶಲ ಸಂಸ್ಥೆಗೆ ಅಧ್ಯಕ್ಷಳಾಗಿರುವ ತಮ್ಮ ಮಗಳು ದೇವನಾಯಕಿ ಇತ್ತೀಚೆಗೆ ರಾಜಕೀಯದಲ್ಲಿ ಹೆಚ್ಚು ಆಸ್ಥೆ ವಹಿಸುತ್ತಿರುವುದರಿಂದ ಕೆಲವೊಂದು ಕೆಲಸಗಳಿಗೆ ತಮ್ಮದು ಕೇವಲ 'ಅಸ್ತು' ಮಾತ್ರವೇ. ಅವಳ ಮಾತಿಗೆ ಮನ್ನಣೆ ನೀಡಿಯೇ ನಾಗಸಿಂಹನಿಗೆ ಗೃಹಖಾತೆ ವಹಿಸಿಕೊಟ್ಟಿರುವುದು.

ತಮ್ಮ ಪಿ.ಎ. ಸುಧಾಮಣಿಯನ್ನು ಕರೆದು, "ಇತ್ತೀಚಿನ ಪೇಪರುಗಳೆಲ್ಲಾ ಬೇಕು" ಎಂದರು.

ಪೇಪರುಗಳು ಟೇಬಲ್ಲಿಗೆ ಬಂದಾಗ "ನನ್ನನ್ನು ಇನ್ನೊಂದು ಗಂಟೆ ಕಾಲ ಡಿಸ್ಟರ್ಬ್ ಮಾಡಬೇಡಿ" ಎಂದರು.

ತಾನು ಇತ್ತೀಚೆಗೆ ರಾಜ್ಯದ ಹೊರಗಿನ ರಾಜಕೀಯ, ಹಣಕಾಸಿನ ಬಗ್ಗೆ ಹೆಚ್ಚು ಆಸಕ್ತಿ ವಹಿಸಿ ಒಳಗಿನ ವ್ಯವಹಾರವನ್ನು ನಿರ್ಲಕ್ಷ್ಯ ಮಾಡಿರುವೆ! ಕಪ್ಪು ಗಾಜುಳ್ಳ ಸಾಮಾನ್ಯ ಕಾರಿನಲ್ಲಿ ರಾತ್ರಿ ಸುತ್ತಾಡಿ ಪ್ರಜೆಗಳ ಯೋಗಕ್ಷೇಮ ನೋಡಿಕೊಳ್ಳುವ ಪ್ರಥಮ ಮುಖ್ಯಮಂತ್ರಿ ಎನ್ನುವ ಹೆಸರು ಗಳಿಸಿದವನು ತಾನು!

ಪೇಪರುಗಳನ್ನು ಓದಲಾರಂಭಿಸಿದರು ಸಿ.ಎಂ. ಆಗ ನೆನಪಿಗೆ ಬಂದು ಯುಎಸ್‌ಎ ಅಧ್ಯಕ್ಷರ ಸೆಕ್ರೆಟರಿ ಹೊಸ ಪ್ರಪೋಜಲ್ ಒಂದನ್ನು ತಮ್ಮ ಈ-ಮೆಯಿಲ್ ಐಡಿಗೆ ಕಳಿಸುವ ವಿಷಯ.

ತಕ್ಷಣವೇ ತಮ್ಮ ಲ್ಯಾಪ್‌ಟಾಪ್ ಆನ್ ಮಾಡಿದರು.

ಆ ಘಳಿಗೆಯ ಪ್ರತೀಕ್ಷೆ ಮಾಡುತ್ತಿದ್ದ ವ್ಯಕ್ತಿ ಮೆಲ್ಲಗೆ ಒಳಗೆ ಬಂದಿತು. ಆ ವ್ಯಕ್ತಿಗೆ ಆ ಕೊಠಡಿಯಲ್ಲಿ ಓಡಾಡುವ ಸ್ವಾತಂತ್ರ್ಯವಿತ್ತು.

ಸಿಎಂ ತಮ್ಮ ಅಕೌಂಟ್ ಓಪನ್ ಮಾಡಿ ಲಾಗ್ ಆನ್ ಆದರು. ಪರದೆಯ ಮೇಲೆ ಅವರ ವಿದ್ಯುನ್ಮಾನ ಅಂಚೆಪೆಟ್ಟಿಗೆ ತೆರೆದುಕೊಂಡಿತು. ಅನೇಕ ಹೊಸ ಮೆಯಿಲ್‌ಗಳಿದ್ದವು.

ಪೇಪರುಗಳಲ್ಲಿ ಈ ಪತ್ರಕರ್ತರ ಸಾವಿನ ಬಗ್ಗೆ ಮೊದಲು ನೋಡೋಣ ಎಂದು ಪುಟ ತಿರುಗಿಸಲಾರಂಭಿಸಿದರು.

ಒಳಗೆ ಬಂದ ವ್ಯಕ್ತಿ ಲ್ಯಾಪ್‌ಟಾಪ್‌ನ ಪರದೆಯನ್ನು ತೀಕ್ಷ್ಣವಾಗಿ ಗಮನಿಸಿ ಹೊರಬಂತು. ನಂತರ ಮೊಬೈಲ್ ನಂಬರ್ ಒಂದಕ್ಕೆ ಡಯಲ್ ಮಾಡಿತು.

ಸಿ.ಎಂ. ಕಣ್ಣು ಹಠಾತ್ತನೆ ಬಡವರ ಊಟದೊಂದಿಗೆ ಅವರನ್ನೂ ತಿನ್ನುವ ರಕ್ಕಸರು ಎಂಬ ಶೀರ್ಷಿಕೆ – ವರದಿಗಾರ ಪಾಲ್ ಎಂಬ ಹೆಸರನ್ನು ನೋಡಿತು. ಮುಂದಿನ ಪೇಪರ್‌ನಲ್ಲಿ ಪಾಲ್‌ನ ಸಾವಿನ ಸುದ್ದಿ ಇತ್ತು.

ಮೂರನೆಯ ಪೇಪರ್‌ನಲ್ಲಿ ಅಮರೇಶ - ಹಳ್ಳಿ ಉದ್ಧಾರದ ಹಣ ತಿನ್ನುವ ಸರ್ಕಾರಿ ನೌಕರರು, ಅದರ ಮುಂದಿನದು ಅಮರೇಶನ ಸಾವು.

ಐದನೆಯದರಲ್ಲಿ ಫಜಲ್ ಬರೆದ ಮರಗಳ ಕಳ್ಳಸಾಗಾಣಿಕೆ. ಕೊನೆಯದರಲ್ಲಿ ಫಜಲ್‌ನ ಸಾವು.

ಬಹಳವೇ ಕಾಕತಾಳೀಯ ಎನ್ನಿಸಿದ್ದರಿಂದ ಪೇಪರುಗಳ ತಾರೀಕುಗಳನ್ನು ಗಮನಿಸಿದರು.

ವಿಸ್ಫೋಟಕಾರಿ ಲೇಖನಗಳನ್ನು ಪ್ರಕಟಿಸಿದ ಒಂದೆರಡು ದಿನಗಳಲ್ಲಿಯೇ ಅವರುಗಳು ಸತ್ತಿದ್ದಾರೆ! ಛೇ ಇದು ಅನ್ಯಾಯ!

ಏನಾದರೂ ಕೈವಾಡ? ಯಾರದಾದರೂ ಷಡ್ಯಂತ್ರ? ಸಿ.ಎಂ. ಚಿಂತಿಸಲಾರಂಭಿಸಿದರು.

ತನ್ನ ಪಿ.ಎಸ್. ಸುಮುಖನ ಅಸಡ್ಡೆಯ ಉತ್ತರ. ಗೃಹಮಂತ್ರಿ ನಾಗಸಿಂಹ ಹಾರಿಕೆಯ ಜವಾಬು. ಪತ್ರಿಕೋದ್ಯಮಿ ರಾಮರಾವ್ ನೀಡಿದ ಹೇಳಿಕೆ- ಕೆಸರಿನ ಕಮಲ. ಫಜಲ್ ಕುಡಿತದಿಂದ ಸತ್ತ. ಫಜಲ್? ಕುಡಿತ? ನೆವರ್! ಈಗ ಜೋಡಿಸಲ್ಪಟ್ಟ ಪೇಪರ್‌ಗಳು – ಎಲ್ಲವೂ ಅವರ ಮೆದುಳಿನಲ್ಲಿ ಗಿರಗಿರನೆ ತಿರುಗಲಾರಂಭಿಸಿದವು.

ಇತ್ತ ಅವರ ಪರ್ಸನಲ್ ಅಸಿಸ್ಟೆಂಟ್ ಸುಧಾಮಣಿ ಮೊಬೈಲ್‌ನಲ್ಲಿ ಮಾತು ಮುಗಿಸಿ ಮತ್ತ ಒಳಬಂದಳು.

ಡಿಸ್ಟರ್ಬ್ ಮಾಡಬೇಡವೆಂದು ಹೇಳಿದ್ದರಿಂದ ಸದ್ದಿಲ್ಲದೇ ಹೊರಬಂದು ಮತ್ತೆ ಮೊಬೈಲ್‌ಗೆ ಫೋನ್ ಮಾಡಿದ್ದಳು.

ಈ ಪತ್ರಕರ್ತರ ಸಾವಿನಲ್ಲಿ ಏನು ಕುತಂತ್ರವಿದೆ? ಸಿ.ಎಂ.ಗೆ ನಗು ಬಂದಿತು. ಸಾಹಿತ್ಯಪ್ರೇಮಿಯಾದ ಆತ ಜಗತ್ತಿನ ಉತ್ತಮ ಹಾಗೂ ರೋಚಕ ಪುಸ್ತಕಗಳನ್ನು

ಬಿಡುವು ಸಿಕ್ಕಿದಾಗಲೆಲ್ಲಾ ಓದುತ್ತಿದ್ದರು. ಅದರಿಂದ ತನಗೆ ಈ ರೀತಿ ವಿಚಿತ್ರ ಅನುಮಾನಗಳು ಬರುತ್ತಿವೆಯೇ? ನಿಡುಸುಯ್ದು ಕಂಪ್ಯೂಟರ್ ಕಡೆಗೆ ತಿರುಗಿದರು. ಹೊಸ ಸಂದೇಶ ಬಂದಿದೆ ಎಂಬ ಸೂಚನೆ ತೋರಿಸಿತ್ತು ಅವರ ವಿದ್ಯುನ್ಮಾನ ಅಂಚೆಪೆಟ್ಟಿಗೆ.

ಅವರ ಹುಬ್ಬುಗಳು ಗಂಟಿಕ್ಕಿದ್ದವು. ಕಣ್ಣುಗಳು ಸಂಕುಚಿತಗೊಂಡವು. ಈ ವಿಶೇಷ ಈ ಮೆಯಿಲ್ ಕೇವಲ ಕೆಲವರಿಗೆ ಮಾತ್ರ ತಿಳಿದಿದೆ. ಈ ಹೊಸ ಮೆಯಿಲ್ ಕಳಿಸಿದವರು ಯಾರು? ಈ ಹೆಸರು ಎಲ್ಲಿಯೋ ಓದಿದಂತಿದೆ.

ಆಗರ್ಥವಾಯಿತು ಅದನ್ನು ಎಲ್ಲಿ ನೋಡಿರುವರೆಂದು. ತಕ್ಷಣವೇ ಈ ಮೆಯಿಲ್ ಓಪನ್ ಮಾಡಿದರು.

ಅದರಲ್ಲಿದ್ದುದು ಕೇವಲ ಕೆಲವು ವಾಕ್ಯಗಳು. ಎರಡು ಚಿತ್ರಗಳು. ಅವನ್ನೆಲ್ಲಾ ವೀಕ್ಷಿಸುತ್ತಿದ್ದಂತೆ ಅವರ ಮೈ ಬಿಸಿಯಾಯಿತು. ಒಂದು ರೀತಿಯ ಸಿಟ್ಟು ಅವರ ಮೈಯನ್ನು ಹೊಕ್ಕಿತು.

ತಮ್ಮ ಪಿ.ಎಸ್. ಸುಮುಖನನ್ನು ಕರೆಯಲು ಹೋದವರು ಅದೇಕೋ ಮನಸ್ಸು ಬದಲಾಯಿಸಿ ಪಿ.ಎ. ಸುಧಾಮಣಿಯನ್ನೇ ಇಂಟರ್ಕಾಂ ಮಾಡಿ ಕರೆದರು. ಸುಧಾಮಣಿ ಓಡಿಬಂದಳೆಂದೇ ಹೇಳಬೇಕು!

ಇವಳಿಗೆ ತಾನು ಕರೆಯುವೆನೆಂಬ ಕನಸೇನಾದರೂ ಬಿದ್ದಿತ್ತೇ? ಎಂದುಕೊಳ್ಳುತ್ತಾ "ನನಗೆ ಈ ಮನುಷ್ಯನ ಫೋನ್ ನಂಬರ್ ಬೇಕು" ಎಂದರು.

ಆ ಹೆಸರು ನೋಡಿ ಸುಧಾಮಣಿಯ ಮುಖ ಅರಳಿತು. "ಈಗ್ಲೇ ತರ್ತೀನಿ ಸಾರ್" ಎಂದು ಜಿಂಕೆಯಂತೆ ಓಡಿ ಮರುಕ್ಷಣವೇ ಬಂದಿದ್ದಳು. ನಂಬರ್ ಬರೆದಿದ್ದ ಚೀಟಿ ನೀಡಿ ಅಲ್ಲಿಯೇ ನಿಂತಳು.

"ನಾನು ಆಮೇಲೆ ಬೇಕಾದ್ರೆ ಕರೀತೀನಿ" ಎಂದರು ಸಿ.ಎಂ. ಅವಳನ್ನು ಹೋಗೆನ್ನುವಂತೆ. ತನ್ನ ಸೀಟ್‌ಗೆ ಹಿಂದಿರುಗಿದ ಸುಧಾಮಣಿಗೆ ಬೇಸರವಾಗಲಿಲ್ಲ. ಸಂತೋಷವೇ ಆಗಿತ್ತು.

ಸಿ.ಎಂ. ಈಗ ಸೀರಿಯಸ್ಸಾಗಿ ಸುಧಾಮಣಿ ನೀಡಿದ ನಂಬರ್ಗೆ ಡಯಲ್ ಮಾಡಿದರು.ಆ ಕಡೆಯ ವ್ಯಕ್ತಿ ಲೈನ್‌ಗೆ ಬಂದಾಗ ಆತ ಏನು ಮಾಡಬೇಕೆಂದು ಹೇಳಿದರು.

ಮರುದಿನ ಸಂಜೆ ಕಪ್ಪುಗಾಜಿನ ಬಸ್ಸಿನಲ್ಲಿ ಸಿ.ಎಂ. ಬಂದು ಹಿಂದಿನ ದಿನ ಫೋನ್ ಮಾಡಿದಾತನನ್ನು ಹತ್ತಿಸಿಕೊಂಡರು.

ಬಸ್ಸು ರಸ್ತೆಗಳ ಸರ್ವೇ ಮಾಡುತ್ತಿತ್ತು. ಇದು ಮುಖ್ಯಮಂತ್ರಿಗಳ ಎರಡು – ಮೂರು ವಾರಕ್ಕೊಮ್ಮೆ ಮಾಡುವ ಕರ್ತವ್ಯ. ಇಂದು ಅವರಿಗೆ ರಸ್ತೆಯ ಕಡೆ ಗಮನವಿರಲಿಲ್ಲ. ತನ್ನನ್ನು ನಂಬಿ ಮತ ಹಾಕಿರುವ ಜನರಲ್ಲಿ ಮನಸ್ಸಿನಲ್ಲೇ ಕ್ಷಮೆ ಕೋರಿದರು.

ಬಂದಿದ್ದ ವ್ಯಕ್ತಿ ತಂದಿದ್ದ ದಾಖಲೆಗಳನ್ನು ಗಂಭೀರವಾಗಿ ಪರಿಶೀಲಿಸಿದರು. ಅವರ ಮುಖ ಮತ್ತಷ್ಟು ಸೀರಿಯಸ್ ಆಯಿತು. ಸುಮಾರು ಒಂದು ಗಂಟೆಯ ಕಾಲ ಮಾತುಕತೆ ನಡೆಯಿತು.

"ಈ ವಿಷ್ಯವಿನ್ನು ನಮ್ಮಲ್ಲೇ ಇರಲಿ. ಭಾನುವಾರ ನಾನೊಂದು ಖಾಸಗಿ ಸಮಾರಂಭ ಏರ್ಪಡಿಸ್ತಿದ್ದೀನಿ. ಆಗ..." ಏನು ಮಾಡಬೇಕೆಂದು ವಿವರಿಸಿದರು.

ಬಸ್ಸಿನಿಂದಿಳಿಯುತ್ತಾ ಆ ವ್ಯಕ್ತಿ ಸಿ.ಎಂ.ಗೆ ನಮಸ್ಕರಿಸಿ ನಿರ್ಗಮಿಸಿದ. ಸಿ.ಎಂ. ಪರಶಿವಮೂರ್ತಿಯವರ ಮುಖ ಕೆಂಡಾಮಂಡಲವಾಯಿತು.

ಭಾನುವಾರದ ಕಾರ್ಯಕ್ರಮದಲ್ಲಿ ಏನು ಮಾಡಬೇಕೆಂದು ಚಿಂತಿಸುತ್ತಾ ಹಿಂದಿರುಗಿದರು.

ಮಿತ್ರಜೀತ್‌ಗೆ ಏನೋ ತಳಮಳ ಶುರುವಾಗಿತ್ತು. ತನ್ನ ಆಲೋಚನೆ ಸರಿಯಾದುದೇ? ಈ ಟೈಂಬಾಂಬ್ ಸರಿಯಾದ ಜಾಗದಲ್ಲಿ ಸಿಡಿಯುವುದೇ? ಫಜಲ್, ಪಾಲ್, ಅಮರೇಶ್ ಶೇಖರಿಸಿಟ್ಟಿರುವ ಪುರಾವೆಗಳು ನಿಜಕ್ಕೂ ಟೈಂಬಾಂಬ್.

ಲೊರೆಟ್ಟಾ, ಸಿಲ್ವೆಸ್ಟರ್, ಸುನೀತಿ, ಸ್ವರೂಪ್ ಎಲ್ಲರಿಗೂ ಏನು ಮಾಡಬೇಕೆಂದು ಸೂಚನೆ ನೀಡಿದ. ಎಲ್ಲರಲ್ಲೂ ಉದ್ವೇಗ ಮನೆ ಮಾಡಿಕೊಂಡಿತು.

ಇತ್ತ ಸಿ.ಎಂ. ಮಗಳನ್ನು ಸಂಪರ್ಕಿಸಿದರು.

"ಓ ಅಪ್ಪಾ! ಇದೇನು ಮನೆಯಲ್ಲಿದ್ದೀರಿ? ಇಷ್ಟು ಹೊತ್ತಿಗೆ ನೀವು ಪಕ್ಕದ ರಾಜ್ಯದ ಸಿ.ಎಂ. ಜೊತೆ ಡೆಲ್ಲೀಲಿ ಇರಬೇಕಿತ್ತಲ್ವಾ?" ಎಂದಳು ದೇವನಾಯಕಿ.

"ಅರ್ಜೆಂಟು ಕೆಲಸ ಬಂತಮ್ಮಾ. ಅದಿರಲೀ, ಯಾವಾಗ ನಿನ್ನ ತಂದೇನ ನೋಡೋಕ್ಕೆ ಬರೋದು?" ಕೇಳಿದರು.

ತಾಯಿಯಿಲ್ಲದ ಮಗಳನ್ನು ಬಹಳವೇ ಮುಚ್ಚಟೆಯಿಂದ ಬೆಳೆಸಿದ್ದರು. ಅವಳು ಕೇಳಿದ ಕಾಲೇಜಿಗೆ ಕಳಿಸಿದ್ದರು. ಅವಳು ಕೇಳಿದಾಗಲೆಲ್ಲಾ ಫಾರಿನ್‌ಗೆ ಕಳಿಸಿದರು. ಅವರ ಜೀವನದ ಒಂದು ಬಲಹೀನತೆ ಅವರ ಮಗಳು ದೇವನಾಯಕಿ. ಎಲ್ಲ ರಾಜಕಾರಣಿಗಳಿಗೂ ಈ ರಕ್ತ ಸಂಬಂಧಿಗಳದ್ದೇ ತಾಪತ್ರಯ!

ಮಗ, ಮಗಳು, ಅಳಿಯ, ತಮ್ಮ, ಅಣ್ಣ ಕೊನೆಗೆ ಸಾಕು ಮಗಳ ಗಂಡ ಯಾರೋ ಒಬ್ಬರಿದ್ದರೂ ಸಾಕು. ಸಂತೋಷ, ನೆಮ್ಮದಿ ಓಡಿ ಹೋಗುವಷ್ಟು ತೊಂದರೆ ನೀಡುತ್ತಾರೆ. ದೇಶ ಸೇವೆಯೊಂದಿಗೆ ಈ ಬಂಧು ಸೇವೆಯೂ ನಡೆಯುತ್ತದೆ. ಎಂತೆಂತಹ ದೊಡ್ಡ ರಾಜಕಾರಣಿಗಳನ್ನೇ ಬಿಡಲಿಲ್ಲ ಇಂತಹ ಬಂಧ, ಸಂಬಂಧ!

ಕರಕುಶಲ ಸಂಸ್ಥೆಯ ಅಧ್ಯಕ್ಷಪಟ್ಟ ಬೇಕೆಂದಳು. ಕೊಡಿಸಿದ್ದಾಯಿತು. ಕೇಂದ್ರದಲ್ಲಿ ತಮ್ಮ ಪಕ್ಷದ ಸರ್ಕಾರವಿರುವುದರಿಂದಲೂ, ತಮ್ಮ ಸರ್ಕಾರವೊಂದೇ ಮೆಜಾರಿಟಿ ಹೊಂದಿರುವುದರಿಂದಲೂ ತಾವು ಮಾಡಿದ್ದು ಒಪ್ಪಲ್ಪಡುತ್ತದೆ. ಬೇರೆ ಎಲ್ಲ ವಿಷಯಗಳಲ್ಲೂ ತಾನು ಕಟ್ಟುನಿಟ್ಟು.

ಮಗಳು ದೇವನಾಯಕಿ ವಿಷಯದಲ್ಲಿ ಮಾತ್ರ...

“ಬೇಗ ಬರ್ತಿನಪ್ಪಾ. ಸ್ವಲ್ಪ ಬಿಜಿಯಾಗಿದ್ದೀನಿ. ಫ್ರೀ ಆದ ಕೂಡ್ಲೇ ಬಂದು ನೋಡ್ತೀನಿ” ಎಂದಳು ಮಗಳು.

“ಯಾರಿದ್ದಾರೆ ಜೊತೆಯಲ್ಲಿ? ಯಾರಾದ್ರೂ ಗೆಸ್ಟ್?” ಕೇಳಿದರು.

“ಯಾ.. ಯಾ..ರೂ ಇಲ್ಲಪ್ಪಾ” ಎಂದಳು ಗಲಿಬಿಲಿಯಿಂದ. “ಭಾನ್ವಾರ ನಾನು ಕೊಡೈಕೆನಾಲ್‌ಗೆ ಹೋಗೋ ಪ್ಲಾನ್ ಮಾಡಿದ್ದೆ” ಎಂದಳು ದೇವನಾಯಕಿ.

# 24

“ನೋ ನೋ! ಕ್ಯಾನ್ಸಲ್ ಮಾಡು. ಇಟ್ ಈಸ್ ಆನ್ ಆರ್ಡರ್!” ಎಂದರು ಸ್ವಲ್ಪ ಕಾಠಿಣ್ಯದೊಂದಿಗೆ.

“ಸರಿಯಪ್ಪಾ” ಎಂದಳು ಬೆದರಿ. ಅವಳು ತಂದೆಯ ಈ ರೂಪವನ್ನು ಹೆಚ್ಚು ತಿಳಿದಿರಲಿಲ್ಲ.

ತಂದೆ ಫೋನಿಟ್ಟೊಡನೆ “ಅಬ್ಬಾ!” ಎಂದು ತನ್ನೆದೆಯ ಮೇಲೆ ಕೈಯಿಟ್ಟುಕೊಂಡಳು.

“ಅದೆಷ್ಟು ಸೆಕ್ಸಿಯಾಗಿದ್ದೀ ದೇವೀ!” ಎಂದು ಅವಳ ಸೆರಗನ್ನು ಹಿಂದಿನಿಂದ ಎಳೆದ ನಾಗಸಿಂಹ.

ಅವರಿಬ್ಬರೂ ಬಹಳ ದಿನಗಳಿಂದ ಪ್ರೇಮಿಗಳು. ದೇವನಾಯಕಿಯ ಪ್ರೇಮ ಬಹಳವೇ ಕುರುಡು. ನಾಗಸಿಂಹ ಮದುವೆ ಆದವನೆಂದು ತಿಳಿದಿದ್ದರೂ ಅವನನ್ನು ಹುಚ್ಚಿಯಂತೆ ಪ್ರೇಮಿಸುತ್ತಿದ್ದಳು.

ಅವನಿಗೆ ವಾರ್ತಾ ಇಲಾಖೆ ಸಿಕ್ಕಲು ಕಾರಣ ದೇವನಾಯಕಿಯೇ. ನಾಗಸಿಂಹ ದಡ್ಡನೆಂದಲ್ಲ. ಅವನು ಬಹಳವೇ ಚುರುಕು ಮನುಷ್ಯ. ಆದರೆ ಮಹಾ ಆಶೆಬುರುಕ. ಜೊತೆಗೆ ಅವನಲ್ಲಿ ಒಂದು ಕ್ರೌರ್ಯದ ತಂತು ಇತ್ತು. ಹಣ, ಪದವಿ, ಅಧಿಕಾರ ಸಂಪಾದನೆಗಾಗಿ ಯಾವ ಮಟ್ಟಕ್ಕಾದರೂ ಇಳಿಯಬಲ್ಲವನಾಗಿದ್ದ. ಈ ಕ್ರೌರ್ಯವನ್ನು ನೋಡಿಯೂ ನೋಡದಂತಿದ್ದಳು ದೇವನಾಯಕಿ.

ಪ್ರೇಮವೆಂದರೆ ಎದುರಿನವರ ಬಲಹೀನತೆಯನ್ನೂ ಒಪ್ಪಿಕೊಳ್ಳುವುದು ಎನ್ನುವುದನ್ನು ಅವಳು ಅಕ್ಷರಶಃ ಪಾಲಿಸುತ್ತಿದ್ದಳು. ದೇವನಾಯಕಿಯ ಈ ಶಕ್ತಿಹೀನತೆಯನ್ನು ಚೆನ್ನಾಗಿಯೇ ಬಳಸಿಕೊಂಡಿದ್ದ ನಾಗಸಿಂಹ.

ಅವಳನ್ನು ಈಗ ಬಳಸುತ್ತಿದ್ದಂತೆ ನಾಗಸಿಂಹನ ಮೊಬೈಲ್ ಹೊಡೆದುಕೊಂಡಿತು. ಸಿ.ಎಂ. ಮಾತಾಡುತ್ತಿದ್ದರು.

“ಎಲ್ಲಿದ್ದೀರಿ?” ಕೇಳಿದರು ಸಿ.ಎಂ.

“ನನ್ನ ಕ್ಷೇತ್ರದಲ್ಲಿ ಮಳೆ ಬೆಳೆ ಸರಿಯಾಗಿ ಆಗ್ತಿದೆಯಾ ಅಂತ ಪರೀಕ್ಷೆ ಮಾಡೋಕ್ಕೆ ಹೋಗ್ತಿದ್ದೀನಿ ಸಾರ್” ಎಂದ ಎಂದಿನ ವಿನಯದಿಂದ.

ಸಿ.ಎಂ. ಪರಶಿವಮೂರ್ತಿಯವರಿಗೆ ಮತ್ತೆ ‘ಅತಿವಿನಯಂ ಧೂರ್ತ ಲಕ್ಷಣಂ’ ಉಕ್ತಿಯ ನೆನಪಾಯಿತು.

ಪಕ್ಕದಲ್ಲಿದ್ದ ದೇವನಾಯಕಿ ಅವನ ಪಕ್ಕೆಗೆ ತಿವಿದಳು. ಮಾತಾಡುತ್ತಿದ್ದವನು ‘ಉಶ್’ ಎಂದು ಬೆಚ್ಚಿದ.

“ಏನಾಯ್ತು?” ಎಂದರು ಸಿ.ಎಂ.

“ಏನಿಲ್ಲ ಸಾರ್. ಕಾರು ಯಾವುದೋ ಹಳ್ಳದಲ್ಲಿಳೀತು” ಅದೇ ವಿನಯದ ವಾಕ್ಯ. ನಾಗಸಿಂಹ ಮನ್ಮಥಬಾಣವನ್ನು ಪ್ರಯೋಗಿಸಿ ದೇವನಾಯಕಿಯನ್ನು ವಶಪಡಿಸಿಕೊಂಡಿದ್ದ.

ಅವಳನ್ನು ಪಟಾಯಿಸಿ, ಮನಾಯಿಸಿ ಗೃಹಮಂತ್ರಿಯ ಪದವಿ ಗಿಟ್ಟಿಸಿದ್ದ.

“ನೀನು ಯಾವ ಉಪಾಯ ಮಾಡ್ತೀಯೋ ನನಗೆ ಗೊತ್ತಿಲ್ಲ. ನನಗೆ ನಿನ್ನ ತಂದೆಯ ಬಳಿ ಇರೋ ಗೃಹಖಾತೆ ಬೇಕೇ ಬೇಕು” ಎಂದು ಹಠ ಹಿಡಿದ.

ದೇವನಾಯಕಿ ತನ್ನೆಲ್ಲಾ ಬುದ್ಧಿವಂತಿಕೆ ಪ್ರದರ್ಶಿಸಿ ಗೃಹಖಾತೆಯನ್ನು ನಾಗಸಿಂಹನಿಗೆ ಕೊಡಿಸಿದ್ದಳು.

“ಭಾನ್ವಾರ ಬೆಳಿಗ್ಗೆ ಎಂಟ್ಗಂಟೇಗೆ ನಮ್ಮನೇಗೆ ಬಂದ್ಬಿಡಿ” ಎಂದರು. ಅವನು ಮುಂದಿನ ಮಾತು ಆಡದಂತೆ ಫೋನ್ ಡಿಸ್ಕನೆಕ್ಟ್ ಮಾಡಿದರು.

ಹೀಗೇ ಇನ್ನೂ ಕೆಲವು ಮುಖ್ಯ ಖಾತೆಗಳ ಮಂತ್ರಿಗಳಿಗೆ, ವರಿಷ್ಠ ಪೊಲೀಸ್ ಅಧಿಕಾರಿಗಳಿಗೆ ಫೋನ್ ಕರೆ ಹೋಗಿತ್ತು.

ಮುಖ್ಯಮಂತ್ರಿ ಏಕೆ ಕರೆದಿರಬಹುದು?

ಭಾನುವಾರ ಬೆಳಗ್ಗೆ ಆರು ಗಂಟೆ.

ಸಿ.ಎಂ. ತಮ್ಮ ಕಛೇರಿ-ಕಂ-ಮನೆಯಲ್ಲಿ ಶತಪಥ ತಿರುಗುತ್ತಿದ್ದರು. ಅವರು ಯಾರಿಗೋ ಕಾಯುತ್ತಿದ್ದರು. ಆ ಮನುಷ್ಯ ಒಂದು ಸೈಕಲ್ ಮೇಲೆ ಬಂದ. ಹಾಲಿನವನಂತಿದ್ದ.

ಗೇಟಿನಲ್ಲಿದ್ದ ಕಾವಲುಗಾರ ಅಡ್ಡಹಾಕಿದ. ತಾವು ನಿಂತಿದ್ದ ಗಾರ್ಡನ್‌ನಿಂದ ಚಪ್ಪಾಳೆ ತಟ್ಟಿ ಅವನನ್ನು ಒಳಗೆ ಕಳುಹಿಸುವಂತೆ ಹೇಳಿದರು.

ಆ ಮನುಷ್ಯ ತನ್ನ ತಲೆಗೆ ಸುತ್ತಿದ್ದ ಟವೆಲನ್ನು ತೆಗೆದು ನಮಸ್ಕಾರ ಮಾಡಿದ.

"ಏನೂ ತೊಂದರೆ ಆಗಲಿಲ್ಲ ತಾನೇ?" ಕೇಳಿದರು ಸಿ.ಎಂ.

"ಏನಿಲ್ಲ. ಈ ವೇಷದಲ್ಲಿ ನನ್ನ ಗುರುತು ಯಾರಿಗೂ ಸಿಗಲಿಲ್ಲ!" ಎಂದು ನಕ್ಕು ಸಿ.ಎಂ.ರನ್ನು ಹಿಂಬಾಲಿಸಿದ.

"ಎಲ್ಲಾ ರೆಡೀನಾ?" ಕೇಳಿದರು ಸಿ.ಎಂ.

"ಓಹೋ! ಲ್ಯಾಪ್‌ಟಾಪ್‌ನಲ್ಲಿ ಎಲ್ಲಾ ಇದೆ. ಆ ಮೂಲೇಲಿ ಒಂದು ದೊಡ್ಡ ಸ್ಕ್ರೀನ್ ಬೇಕು..." ಅಲ್ಲಿ ಜಾಗವನ್ನು ಪರಿಶೀಲಿಸಿ, "ಬೇಡ! ಈ ದೊಡ್ಡ ಗೋಡೇ ಮೇಲೆ ಪ್ರೊಜೆಕ್ಟ್ ಮಾಡ್ತೀನಿ" ಎಂದ 'ಹಾಲಿನವ'.

ಏಳು ಗಂಟೆಯ ಒಳಗೇ ಎಲ್ಲಾ ಸಿದ್ಧವಾದವು.

ದೇವನಾಯಕಿ ತನ್ನ ಕಾರಿನಲ್ಲಿ ಭರ್ರೆಂದು ಬಂದಳು. ತಂದೆಗೆ ವಿಷ್ ಮಾಡಿದಳು. ನಾಗಸಿಂಹ ಬಂದಿಳಿದ. ಪಿ.ಎಸ್. ಸುಮುಖ, ಪಿ.ಎ. ಸುಧಾಮಣಿ ಇಬ್ಬರೂ ಹೊರಗೆ ನಿಂತು ಪ್ರತಿಯೊಬ್ಬರನ್ನೂ ಆಹ್ವಾನಿಸಿದರು.

ಒಳಗೆ ಬಂದ ಅನೇಕರು ಲ್ಯಾಪ್‌ಟಾಪ್ ಬಳಿ ಕುಳಿತಿದ್ದಾತನನ್ನು ಗುರುತಿಸಿದರು. ನಾಗಸಿಂಹ ಹಲ್ಲುಕಡಿದ. "ಹಲೋ ಎವ್ರಿಬಡಿ! ನಮಸ್ಕಾರ. ಎಲ್ಲರೂ ಬಂದಿದ್ದೀರಿ. ನನ್ನ ಮಾತಿಗೆ ಮನ್ನಣೆ ಕೊಟ್ಟು ನಿಮ್ಮ ಭಾನುವಾರದ ಬೆಳಿಗ್ಗೆಯ ಸಿಹಿನಿದ್ದೆ ಬಿಟ್ಟು ಬಂದಿದ್ದೀರಿ. ಧನ್ಯವಾದಗಳು!" ಎಂದು ಆರಂಭಿಸಿದ ಮುಖ್ಯಮಂತ್ರಿ ಎಲ್ಲರನ್ನೂ ನೋಡಿದರು.

"ನಿಮಗೆ ಈವತ್ತು ವಿಶಿಷ್ಟವಾದ ನಾಟಕ ತೋರಿಸುತ್ತೇನೆ. ಅದಕ್ಕೆ ಮುಂದೆ ಒಂದು ಚಿಕ್ಕ ಸಮಾರಂಭ ಇದೆ. ಇದು ಕೂಡಾ ವಿಶೇಷವೇ" ಎನ್ನುತ್ತಾ ಪ್ರೊಜೆಕ್ಟರ್ ಬಳಿ ಕುಳಿತಿದ್ದ ವ್ಯಕ್ತಿಯನ್ನು ಪರಿಚಯಿಸಿದರು.

"ಇವರು ಮಿತ್ರಜೀತ್"

ಅಲ್ಲಿ ನಿಶ್ಶಬ್ದ ಆವರಿಸಿತು.

"ನಿಯತ್ತುಳ್ಳ ಪತ್ರಕರ್ತ. ತನಗೆ ಬಂದ ವಿಪತ್ತುಗಳನ್ನು ನಿವಾರಿಸಿಕೊಂಡು ಒಬ್ಬ ಪತ್ತೇದಾರನ ಕೆಲಸ ಮಾಡಿದ್ದಾರೆ. ಅವರು ಕಷ್ಟ ಪಟ್ಟಿದ್ದಕ್ಕೆ ಕಾರಣ ಅವರ ಮೂವರು ಸ್ನೇಹಿತರು ಜೀವದ ಹಂಗು ತೊರೆದು ಜನಸೇವೆ ಮಾಡಿದ್ದಾರೆ. ಅವರು ಮಾಡಿದ ತಪ್ಪೇನು ಗೊತ್ತೇ? ಜನಹಿತ, ಜನಪರ ಕೆಲಸಗಳಲ್ಲಿ ಹಸ್ತಕ್ಷೇಪ ಮಾಡಿದವರನ್ನು ತಡೆಯಲು ನೋಡಿದ್ದು. ಅವರ ಬಗ್ಗೆ ಸತ್ಯವನ್ನು ಬರೆದಿದ್ದು" ಅಲ್ಲಿ ಒಂದು ರೀತಿಯ ಚಡಪಡಿಕೆ ಶುರುವಿಟ್ಟುಕೊಂಡಿತು. ಹೆಚ್ಚು ಕಮ್ಮಿ ಪ್ರತಿಯೊಬ್ಬನಿಗೂ ತನ್ನ ಹೆಗಲನ್ನು ಮುಟ್ಟಿ ನೋಡಿಕೊಳ್ಳುವ ಚಪಲ! ಮುಟ್ಟಿಕೊಂಡರೆ ಉಳಿದವರು ನೋಡಿಯಾರೆಂಬ ಭಯ!!

ಯಾರಿಗೂ ಅಲ್ಲಿಂದ ಎದ್ದು ಹೋಗಲು ಹೆದರಿಕೆ.

ಮಿತ್ರಜೀತ್‌ನ ಕಣ್ಣು ಮೀಟಿದರು ಸಿ.ಎಂ.

ಅವನು ಎದ್ದು ಬಂದ. ಅವನ ಕೈಯಲ್ಲಿ ಒಂದು 'ಕಾಣಿಕೆ ಕಾಗದ' ಸುತ್ತಿದ್ದ ಪೊಟ್ಟಣ ಇತ್ತು. ಅದನ್ನು ಮುಖ್ಯಮಂತ್ರಿಯವರಿಗೆ ನೀಡಿದ. ಅವರು ಆ ಕಾಣಿಕೆ ಕಾಗದದ ಮೇಲೆ ಕಟ್ಟಿದ್ದ ರಿಬ್ಬನ್‌ನ ಗಂಟು ಬಿಚ್ಚಿದರು. ಬಿಳಿ ವರ್ಣದ ರಕ್ಷಾಪುಟ. ರಕ್ತವರ್ಣದ ಅಕ್ಷರಗಳಲ್ಲಿ - ಸತ್ಯವಿನ್ನೂ ಸತ್ತಿಲ್ಲ - ಲೇಖಕ ಪಾಲ್ ಎಂದಿತ್ತು!

"ಈ ಪುಸ್ತಕ ಬಂದಿದ್ದೇ ಒಂದು ವಿಶೇಷ. ಹಸ್ತಪ್ರತಿಯನ್ನೇ ಮಾಯ ಮಾಡಿದ್ದರು ಕೆಲವು ಭೂಪರು. ಅದು ಹೇಗೋ ಮತ್ತೆ ಕೈಗೆ ಸಿಕ್ಕಿದ ಕೂಡಲೇ ಅದಕ್ಕೆ ಪುಸ್ತಕ ರೂಪ ಕೊಟ್ಟಿದ್ದಾರೆ ಮಿತ್ರಜೀತ್. ಈ ಕಥೆಗಳನ್ನು ಓದಿದೆ. ನೀವೂ ಓದಿ. ರಾಜಕೀಯ, ಪೊಲೀಸ್ ಇಲಾಖೆಗಳಲ್ಲಿ ನಡೆಯುವ ಅಕ್ರಮಗಳ ನಗ್ನ ಚಿತ್ರಣ ಇದೆ. ಹೆಸರುಗಳು ಬೇರೆ. ಒಂದಿಷ್ಟು ಕಲ್ಪನೆ ಬೆರೆತಿದೆ. ಆದರೆ ಓದಿದಾಗ ನನ್ನ ಬಗ್ಗೆ ನನಗೇ ನಾಚಿಕೆ ಆಯಿತು. ನನ್ನನ್ನು ಹಿರಿಯ ಪತ್ರಕರ್ತರು ಕೆಸರಿನ ಕಮಲ ಎಂದರು. ನಾನು ಕಮಲ ಎಂದಲ್ಲ ನನಗೆ ಖುಷಿ. ನನ್ನ ಸುತ್ತಲೂ ಕೆಸರಿದೆಯಲ್ಲಾ ಎಂಬ ವ್ಯಥೆ!" ಎಂದರು.

ಪ್ರಾಮಾಣಿಕರಾದ ಅವರಿಗೆ ಮುಂದೆ ಮಾತಾಡಲಾಗದೇ ಗಂಟಲು ಗದ್ಗದವಾಯಿತು.

ಮಿತ್ರಜೀತ್ ಲ್ಯಾಪ್‌ಟಾಪ್ ಬಳಿ ಬಂದು ಕುಳಿತ.

"ನಾನು ಈಗ ಕೆಲವು ಸತ್ಯ ಸಂಗತಿಗಳನ್ನು ತೋರಿಸುತ್ತೇನೆ. ಇದರಲ್ಲಿ ಯಾರ ತಪ್ಪು ಯಾವುದು? ಎಷ್ಟು ಎಂದು ವಿಮರ್ಶಿಸೋ ಹಕ್ಕು ನನಗಿಲ್ಲ. ನನ್ನ

ಕೆಲಸವೆಲ್ಲಾ ಸತ್ಯದರ್ಶನ ಅಷ್ಟೇ. ನಮ್ಮ ಸಿ.ಎಂ. ಸಾಹೇಬರಿಗೇ ಆ ಕೆಲಸವನ್ನು ಮಾಡಲು ಪ್ರಾರ್ಥಿಸುತ್ತೇನೆ" ಎಂದು ಹೇಳೀ ಲ್ಯಾಪ್‌ಟಾಪ್ ಆನ್ ಮಾಡಿದ. ಪರದೆಯ ಮೇಲೆ ಕೆಲವು ಹೆಸರುಗಳು ಮೂಡಿದವು.

ಅಮರೇಶ್, ಫಜಲ್, ಪಾಲ್.

"ನನ್ನ ಮನೆಯಲ್ಲಿ ನನಗೆ ಕೆಲವು ಕಾಗದಗಳು ಸಿಕ್ಕವು. ಯಾರೋ ಅವುಗಳನ್ನು ನನ್ನ ಮನೆಯೊಳಗೆ ಹಾಕಿದ್ದರು. ಅದು ಪಾಲ್‌ನ ಹಸ್ತಪ್ರತಿ ಈಗ ಬಿಡುಗಡೆಯಾದ 'ಸತ್ಯವಿನ್ನೂ ಸತ್ತಿಲ್ಲ'ದ ಹಸ್ತಪ್ರತಿ. ಬೆಳಗ್ಗೆ ಅದು ಕದಿಯಲ್ಪಟ್ಟಿತೆಂದು ಹೇಳಲು ನಾಚಿಕೆ ಆಗ್ತಿದೆ. ತಪ್ಪು ನನ್ನದು. ಭದ್ರ ಮಾಡಬೇಕಿತ್ತು. ಬೆಳಿಗ್ಗೆ ಅವು ಇರಲಿಲ್ಲ. ಆದರೆ ಮೂರು ಚೀಟಿಗಳು ಸಿಕ್ಕವು. ಅವುಗಳಲ್ಲಿದ್ದ ಹೆಸರುಗಳಲ್ಲಿ ಲೊರೆಟ್ಟಾ ಎನ್ನುವ ಹೆಸರಿದ್ದಿದ್ದರಿಂದ ಆಕೆಯ ಮನೆಗೆ ಹೋದೆ. ಆಕೆ ಪಾಲ್ ಸಾಯುವಾಗ ಅವನ ಜೊತೆಗಿದ್ದಳು. ಅವಳು ಅವನ ಗೆಳತಿ. ಆಸ್ಪತ್ರೆಯಲ್ಲಿ ಪಾಲ್‌ನ ಸಾವು ಅವನ ಗೆಳತಿ ಲೊರೆಟ್ಟಾಳ ಪತಿ ಸಿಲ್ವೆಸ್ಟರ್‌ನಿಂದ ಆಗಿದೆ ಎಂದು ಹೇಳಿ ಅವನನ್ನು ಜೈಲಿಗೆ ಹಾಕಿದರು."

ಮಿತ್ರಜೀತ್ ಮಾತು ನಿಲ್ಲಿಸಿ ಟೇಬಲ್ ಮೇಲಿದ್ದ ಗಾಜಿನ ಲೋಟಾದಿಂದ ನೀರು ಕುಡಿದ. ಪೊಲೀಸ್ ಅಧಿಕಾರಿಗಳು, ಆರೋಗ್ಯ ಮಂತ್ರಿ, ಕಾರಾಗೃಹ ಮಂತ್ರಿಯ ಕಸಿವಿಸಿ ತಿಳಿಯುತ್ತಲೇ ಇತ್ತು. ಸಿ.ಎಂ. ಕಡೆ ಅವರು ನೋಡಿದರೆ, ಅವರು ಶಿಲೆಯಂತೆ ಕುಳಿತಿದ್ದರು.

"ನಾವು ಲೊರೆಟ್ಟಾಳನ್ನು ಹುಡುಕಿಕೊಂಡು ಹೋದಾಗ ಆಕೆ ಅಲ್ಲಿರಲಿಲ್ಲ. ಆಕೆಯನ್ನು ಅಪಹರಿಸಲಾಗಿತ್ತು. ನಾವು ಹುಡುಕಲು ಯತ್ನಿಸಿದರೂ ಮೊದಲು ಸಿಗಲಿಲ್ಲ. ನಂತರ ಆಕೆಯನ್ನು ಬಂಧಿಸಿಟ್ಟಿದ್ದ ಸ್ಥಳದಿಂದ ಬಿಡುಗಡೆ ಮಾಡಿದೆವು"

ಅವಳ ಹೆಸರನ್ನು ಹೇಳುತ್ತಿದ್ದಂತೆ ಅವಳು ಅಲ್ಲಿ ಬಂದು ನಿಂತಳು. ಅಲ್ಲೆಲ್ಲಾ ಗುಸಗುಸ ಪಿಸಪಿಸ ಶುರುವಾಯಿತು.

"ಪಾಲ್‌ನ ಸ್ಕ್ರಿಪ್ಟ್‌ನ ಕದ್ದಿದ್ದ ಯುವಕ ಪ್ರೇಂನಾಥ್ ನನ್ನನ್ನು ಭೇಟಿ ಆದ. ಅವನ ಹತ್ತಿರದಿಂದ ನಾನು ಸ್ಕ್ರಿಪ್ಟ್ ತಗೊಂಡ ಮೇಲೆ ಅವನನ್ನು ಸಾಯಿಸಿದರು. ಅವನ ಗೆಳತಿಯನ್ನು ಇಷ್ಟಪಟ್ಟಿದ್ದ ಸರ್ವೇಶ್ವರ್ ಡ್ರಗ್ಸ್ ಮಾರುವಾಗ ಸಿಕ್ಕಿಕೊಂಡು, ಸಯನೈಡ್ ತಿಂದು ಆತ್ಮಹತ್ಯೆ ಮಾಡಿಕೊಂಡ"

ಈಗ ಯಾರಿಗೂ ಯಾರ ಮುಖವನ್ನು ನೋಡಲೂ ಧೈರ್ಯ ಬರಲಿಲ್ಲ.

"ಈ ನಡುವೆ ಪತ್ರಕರ್ತ ಅಮರೇಶ್ ಒಂದು ದೊಡ್ಡ ಜಾಲವನ್ನು ಬಯಲಿಗೆಳೆಯುವ ಲೇಖನ ಬರೆದರು. ಅದರಲ್ಲಿ ಹೆಸರುಗಳಿಲ್ಲದಿದ್ದರೂ ಆ ಕೆಲಸವನ್ನು ಮುಂದೆಂದಾದರೂ ಅಮರೇಶ್ ಮಾಡಿಯಾರೆಂದು ಅವರನ್ನು ಕಬ್ಬಿನಗದ್ದೆ ನಡುವೆ ಅಮಾನುಷವಾಗಿ ಬಡಿದು ಕೊಂದು, ನಂತರ ಅದಕ್ಕೆ ಅಪಘಾತ ಎಂಬ ಹೆಸರು ಕೊಟ್ಟರು.

ಅವರ ಹತ್ತಿರ ಇರಬಹುದಾದ ಸಾಕ್ಷ್ಯಾಧಾರಗಳನ್ನು ವಶ ಪಡಿಸಿಕೊಳ್ಳೋಕ್ಕೆ ಪ್ರಾಯಶಃ ಅವರ ಪತ್ನಿ ಸುನೀತಿಯವರನ್ನು ಹಿಡಿದು ಹಿಂಸಿಸೋಕ್ಕೆ ಯತ್ನ ಮಾಡಿದರು. ಪುಣ್ಯವಶಾತ್ ಸುನೀತಿ ಸುರಕ್ಷಿತವಾಗಿದ್ದಾರೆ" ಮಿತ್ರಜೀತ್‌ನ ಮಾತು ನಿಲ್ಲುತ್ತಿದ್ದಂತೆ ಅಲ್ಲಿಗೆ ಅಮರೇಶನ ಪತ್ನಿ ಸುನೀತಿ ಬಂದು ನಿಂತಳು.

ಅಲ್ಲೆಲ್ಲಾ ಏನೋ ಒಂದು ರೀತಿಯ ಸುಪ್ತ ಕಲರವ ಇತ್ತು. ಆದರೆ ಮಿತ್ರಜೀತ್, ಸಿ.ಎಂ. ಇಬ್ಬರೂ ನಿರ್ವಿಕಾರವಾಗಿದ್ದರು.

"ಫಜಲ್ ಫ್ಯೆರ್ ಬ್ರ್ಯಾಂಡ್ ಎಂದೇ ಹೆಸರಾದ ಪತ್ರಕರ್ತ. ಕಳ್ಳಸಾಗಾಣಿಕೆ ವಿಷಯದಲ್ಲಿ ಸ್ವಲ್ಪ ಸೀರಿಯಸ್ಸಾಗಿ ಬರೆದಿದ್ದಕ್ಕೆ ಏನು ಶಿಕ್ಷೆ ಗೊತ್ತೇ?" ಮಾತು ನಿಲ್ಲಿಸಿ ನಿಟ್ಟುಸಿರಿಟ್ಟು, "ರೌಡಿ ಜಗತ್ತಿನಲ್ಲಿ ಇರುವ ಎಲ್ಲಾ ರೀತಿಯ ಕತ್ತಿ, ಚಾಕುಗಳಿಂದ ತಿವಿದಿದ್ದಾರೆ. ಇವರನ್ನು ರಾಕ್ಷಸರೆನ್ನಬೇಕಾ? ಸೈತಾನರೆನ್ನಬೇಕಾ? ಕುತ್ತಿಗೆ, ಹಣೆ, ಎದೆ, ಮಣಿಕಟ್ಟು ಎಲ್ಲಕ್ಕೂ ತಿವಿದಿದ್ದಾರೆ. ಒಂದು ಕ್ಷಣ ಯೋಚಿಸಲಿ, ಈ ಕೆಲಸ ಮಾಡಿಸಿದವರು. ಅವರಿಗೋ, ಅವರ ಮನೆಯವರಿಗೋ, ಅವರ ಪ್ರೀತಿಪಾತ್ರರಿಗೋ ಈ ರೀತಿ ಆದರೆ ಅವರು ತಡೆದುಕೊಳ್ಳುತ್ತಾರಾ? ಈಗ ಸತ್ತವರಿಗೆ ಯಾರೂ ಇಲ್ಲವೇ? ಅಲ್ಲಿ ನಿಂತಿರುವ ಸುನೀತಿ ವಿಧವೆ ಆಗಲು ಮಾಡಿರುವ ತಪ್ಪೇನು?" ಸ್ವಲ್ಪ ಗಟ್ಟಿಯಾಗಿಯೇ ಹೇಳಿದ.

ನಾಗಸಿಂಹನಿಗೆ ಒಳಗೊಳಗೇ ಅಳುಕು. ಮೈಮೇಲಿನ ಬಟ್ಟೆಗಳೆಲ್ಲಾ ಒಂದೊಂದೇ ಮಾಯವಾಗುತ್ತಾ ಬೆತ್ತಲೆ ಆಗುತ್ತಾ ಹೋಗುತ್ತಿರುವ ಅನುಭವ.

"ಹರ ಕೊಲ್ಲಲ್ ಪರ ಕಾಯ್ವನೆ? ರಕ್ಷಣೆಗಾಗಿ ಪೊಲೀಸರ ಮೊರೆ ಹೊಕ್ಕರೆ ಅದು ಸಾವಿನ ಹೊಸ್ತಿಲಾದರೆ ಜನಸಾಮಾನ್ಯರ ಗತಿ ಏನು?" ಮಿತ್ರಜೀತ್ ಮುಖ ಈಗ ಕೆಂಪಗಾಗಿತ್ತು.

"ಯಾವಾಗ ಲೊರೆಟ್ಟಾ ಕಾಣೆಯಾದಳೋ, ಆಗ ಅವಳನ್ನು ಹುಡುಕಿಸುವ ಕೆಲಸಕ್ಕೆ ಯಾರನ್ನು ನೇಮಿಸಿದರು ಗೊತ್ತೇ? ಯಾರನ್ನು ಕೊಲ್ಲುವೆನೆಂದು ಹೆದರಿಸಿದರೋ, ಬಾಯಿ ಮುಚ್ಚಿಕೊಂಡು ಜೈಲಲ್ಲಿ ಇಲ್ಲದಿದ್ದರೆ ನಿನ್ನ

ಹೆಂಡತಿಯನ್ನು ಕೊಲ್ಲುವೆನೆಂದು ಬೆದರಿಸಿದರೋ ಆ ಸಿಲ್ವೆಸ್ಟರ್ - ಲೊರೆಟ್ಟಾಳ ಪತಿ!" ಸಿಲ್ವೆಸ್ಟರ್ ಬಂದು ನಿಂತಾಗ ಕಾರಾಗೃಹ ಮಂತ್ರಿಯ ಮುಖ ಕಪ್ಪಾಗಿತ್ತು.

"ಫಜಲ್‌ಗೆ ತನ್ನ ಕಷ್ಟಫಲಿತ ಒಂದು ಒಳ್ಳೆಯ ಗುರಿ ಕಾಣಲೆಂಬ ಆಸೆ ಇತ್ತು" ಎಂದು ಮಿತ್ರಜೀತ್ ಮಾತಾಡದೇ ಕುಸಿದು ಕುಳಿತ.

ಅವನ ಕಣ್ಣಳಿಂದ ನೀರು ಧಾರೆಧಾರೆಯಾಗಿ ಸುರಿದು ಹೋಗಿತ್ತು. ಸ್ವರೂಪ್ ಅವನ ಬೆನ್ನು ತಟ್ಟಿ ಸಾಂತ್ವನಗೊಳಿಸಲೆತ್ನಿಸಿದ. ಸಿ.ಎಂ. ಪರಶಿವಮೂರ್ತಿ ಈಗ ಮಾತಾಡಲಾರಂಭಿಸಿದರು.

"ಕೈಯಲ್ಲಿ ದುಷ್ಟರ ವಿರುದ್ಧ ಸಾಕ್ಷ್ಯಾಧಾರ ಸುತ್ತಲೂ ದುಷ್ಟರ ಜಾಲ ಇದ್ದಾಗ ಮಿತ್ರಜೀತ್ ಬಹಳವೇ ಆಲೋಚಿಸಿ ನನ್ನನ್ನೇ ಭೇಟಿ ಆಗಲು ನಿರ್ಧರಿಸಿದ. ನೀನು ನನಗಿಂತ ಚಿಕ್ಕವನು. ಏಕವಚನ ಉಪಯೋಗಿಸಬಹುದು ತಾನೇ?" ಎಂದರು ಸಿ.ಎಂ. ಅವನತ್ತ ನೋಡಿ ಕಿರುನಗೆ ಬೀರಿ.

"ಸರಿ ಸಾರ್" ಎಂದ ಮಿತ್ರಜೀತ್, ತನ್ನ ದುಃಖದಿಂದ ಚೇತರಿಸಿಕೊಂಡು.

"ನನ್ನನ್ನು ಭೇಟಿ ಆಗೋದು ಬಹಳ ಕಷ್ಟ ಎಂದು ನನಗೇ ತಿಳಿದಿರಲಿಲ್ಲ! ಟೆಲಿಫೋನ್ ಮಾಡಿದರೆ ಬೇರೆ ಯಾರೋ ತೆಗೆದುಕೊಂಡು ಇಲ್ಲ ಎಂದುಬಿಡ್ತಾರೆ. ಬಾಗಿಲಿಗೆ ಬಂದರೆ ಮತ್ಯಾರೋ ಮಾತಾಡಿಸಿ ಕಳಿಸಿಬಿಡ್ತಾರೆ. ಛೇ! ನಿಜವಾದ ಕಷ್ಟದೊಂದಿಗೆ ಬಂದವರಿಗೂ ಇದೇ ಗತಿ! ನಾನೇನಾದರೂ ವ್ಯವಸ್ಥೆ ಮಾಡಬೇಕು ಈ ನ್ಯೂನತೆ ಹೋಗಲಾಡಿಸೋಕ್ಕೆ" ಮಾತು ನಿಲ್ಲಿಸಿ ಎಲ್ಲರನ್ನೂ ನೋಡುತ್ತಾ "ನಿಮಗೆಲ್ಲಾ ತಿಳಿದಿದೆಯೋ ಇಲ್ಲವೋ, ಈ ಊರಲ್ಲಿ ಭೂಮಿಗೆ ಕಿವಿ ಇಟ್ಟಿರೋ ಮನುಷ್ಯ ಇದ್ದಾನೆ ಅಂತ!" ಎಂದರು.

ಕೆಲವರಿಗೆ ಮಾತ್ರವೇ ಸಂಗ್ರಹಸಿಂಹನ ವಿಷಯ ತಿಳಿದಿತ್ತು. ಉಳಿದವರು ಪರಸ್ಪರ ಮುಖ ನೋಡಿಕೊಂಡು ಹುಬ್ಬೇರಿಸಿದರು.

ಸಿ.ಎಂ. ಸಂಗ್ರಹಸಿಂಹನ ಹೆಸರೆತ್ತಲಿಲ್ಲ.

ಮಾತನ್ನು ಮುಂದುವರಿಸುತ್ತಾ "ಆ ಮನುಷ್ಯನಿಗೆ ಗೊತ್ತು ನನ್ನ ಸರ್ಕಾರದ ಜನರ ಸ್ವಭಾವ, ಗುಣ ವರ್ತನೆಗಳು ಅಂದರೆ ನಂಬುತ್ತೀರಾ?" ವಿಷಾದದ ನಗೆ ಬೀರಿ "ಇದು ವಿಚಿತ್ರ ಆದರೂ ಸತ್ಯ! ಆ ಮನುಷ್ಯ ಕಾವಿ, ಖಾಕಿ, ಖಾದಿ ಧರಿಸಿರೋ ಎಲ್ಲಾ ದೊಡ್ಡ ಮನುಷ್ಯರೊಂದಿಗೆ ಸೂಟ್ ಹಾಕೋ

ಮಹಾನುಭಾವರ ಬಗ್ಗೆಯೂ ಲಾಗ್‌ಬುಕ್ ಇಟ್ಟಿದ್ದಾನೆ!" ಎಂದವರು ಮತ್ತೆ ಮಾತನ್ನಾಡಲಾರಂಭಿಸಿದರು.

"ಯಾರು ಯಾರು ನನ್ನ ಪ್ರಾಮಾಣಿಕ ಸಹೋದ್ಯೋಗಿಗಳು, ಯಾರ್ಯಾರಿಲ್ಲ ಎಂದು ಅರಿತು ನನ್ನನ್ನು ಸಂಪರ್ಕಿಸೋಕ್ಕೆ ಒಂದು ಇಂಜೀನಿಯಸ್ ವಿಧಾನ ಉಪಯೋಗಿಸಿದ. ನನ್ನ ಅತ್ಯಂತ ರಹಸ್ಯವಾದ ಈ - ಮೆಯಿಲ್ ಐಡಿ ತಿಳಿದುಕೊಂಡ. ಹೇಗೆ ಅಂತೀರಾ? ನನ್ನ ಪಿಏ ಸುಧಾಮಣಿಯಿಂದ" ಅವಳ ಕಡೆ ನೋಡುತ್ತಾ ಅಂದರು.

"ಆಲ್ ಈಸ್  ವೆಲ್ ದಟ್ ಎಂಡ್ಸ್ ವೆಲ್ – ಒಳ್ಳೆಯ ಅಂತ್ಯ ಪಡೆಯೋ ಎಲ್ಲವೂ ಒಳ್ಳೆಯವೇ! ನೀನು ಮಾಡಿದ ಕೆಲಸಕ್ಕೆ ನಿನಗೆ ಶಿಕ್ಷೆ ಆಗಬೇಕು!" ಎಂದು ನಕ್ಕು ಗಾಬರಿಗೊಂಡ ಅವಳ ಮುಖವನ್ನು ಗಮನಿಸಿ, ಮತ್ತೆ ಹಸನ್ಮುಖ ತೋರಿ, "ನಿನಗೆ ನ್ಯಾಯವಾಗಿ ಪ್ರಮೋಷನ್ ಸಿಗಬೇಕು" ಎಂದರು.

ಸುಧಾಮಣಿ ನಾಚಿ ನೀರಾದಳು.

"ಆ ಸಂದೇಶ ನನಗೆ ಸಿಕ್ಕಿದ್ದು ನಾಲ್ಕು ವಾಕ್ಯ, ಎರಡು ಚಿತ್ರಗಳು, ಅಷ್ಟು ಸಾಕಿತ್ತು ನನ್ನ ಕಣ್ತೆರೆಸಲು" ಎಂದರು.

ಕನ್ನಡಕ ಕೈಗೆ ತೆಗೆದುಕೊಂಡು, ಜುಬ್ಬಾ ಜೇಬಿನಿಂದ ಕರವಸ್ತ್ರ ತೆಗೆದು, ಗಾಜನ್ನು ಒರೆಸಿ, ಮತ್ತೆ ಧರಿಸಿ, "ನಾನು ಪ್ರಜಾವೀಕ್ಷಣ ಬಸ್‌ನಲ್ಲಿ ಹೋಗುವಾಗ ಮಿತ್ರಜೀತ್ ಫೋನ್ ಮಾಡಿ ಕರೆದ. ಮಿತ್ರಜೀತ್ ಮೊಬೈಲ್ ನಂಬರ್ ಕೂಡಾ ನಮ್ಮ ಸುಧಾಮಣಿ ಹತ್ತಿರ ಇತ್ತು. ಏನಮ್ಮಾ ನಿನಗೆ ಮಿತ್ರಜೀತ್ ತುಂಬಾ ಪರಿಚಯಾನಾ?" ಹಾಸ್ಯ ಮಾಡಿದರು.

ಅದನ್ನು ಕೇಳಿ ಹರ್ಷಿಸಿದವಳು ಸುಧಾಮಣಿ ಒಬ್ಬಳೇ. ಬಂದ ಅತಿಥಿಗಳೆಲ್ಲಾ ಕೂತಲ್ಲೇ ಕಸಿವಿಸಿಗೊಂಡರು. ಅವರಿಗ್ಯಾಕೋ ಈ ಮಾತುಕತೆ ದೊಡ್ಡ ಪ್ರದರ್ಶನಕ್ಕೆ ನಾಂದಿಯಂತಿದೆ ಎನ್ನಿಸಿತು.

"ಬಸ್‌ನಲ್ಲಿ ಲ್ಯಾಪ್‌ಟಾಪ್‌ನಲ್ಲಿ ಎಲ್ಲವನ್ನೂ ನೋಡಿದಾಗ ನಿಮ್ಮೆಲ್ಲರನ್ನೂ ಕರೆದು ವಿಷಯವನ್ನು ಹಂಚಿಕೊಳ್ಳೋಣ ಅನ್ನಿಸ್ತು. ಅದಕ್ಕೇ ಈ ಭೇಟಿ" ಎಂದು ಹೇಳಿ ಮಿತ್ರಜೀತ್‌ಗೆ ಸನ್ನೆ ಮಾಡಿದರು.

"ಮಾನ್ಯರೇ, ನನ್ನ ಈ ಕೆಲಸಕ್ಕೆ ನನಗೆ ಸಂಪೂರ್ಣ ಸಹಾಯ ಮಾಡಿದ ಸ್ವರೂಪ್ ಮತ್ತು ಪೊಲೀಸ್ ಇಲಾಖೆಯ ಉಮಾಶಂಕರ್‌ರನ್ನು ಅಭಿನಂದಿಸಲು

ಇಚ್ಛಿಸುತ್ತೇನೆ” ಎಂದು ಅವರಿಬ್ಬರಿಗೂ ಧನ್ಯವಾದ ಅರ್ಪಿಸಿ ಲ್ಯಾಪ್‌ಟಾಪ್ ಮೌಸ್ ಮೇಲೆ ಬೆರಳಿಟ್ಟ.

ಎಲ್ಲರ ಕಂಗಳೂ ಗೋಡೆಯ ಮೇಲೆ ಬಿದ್ದ ಪ್ರತಿಫಲನದತ್ತಲೇ ತಿರುಗಿದವು. ಮಿತ್ರಜೀತ್ ಮಾತಾಡುತ್ತಲೇ ಪರದೆ ಮೇಲಿನ ದೃಶ್ಯ ಬದಲಾಯಿಸುತ್ತಿದ್ದ.

“ಇದು ಪಾಲ್ ಸಂಗ್ರಹಿಸಿರುವ ಸಾಕ್ಷ್ಯಾಧಾರಗಳು. ಬಡವರಿಗೆ ಆಹಾರ ನೀಡಲು ಸರ್ಕಾರ ಹಣ ನೀಡಿದರೆ ಅದನ್ನು ಗುಳುಂ ಮಾಡಿದ ಮಾನ್ಯ ಸರ್ಕಾರೀ ಶಾಸಕರು, ಅಧಿಕಾರಿಗಳು, ಮಂತ್ರಿಗಳು”

ಒಂದೊಂದೇ ಹೆಸರು ಪರದೆಯ ಮೇಲೆ ಮೂಡುತ್ತಿದ್ದರೆ ಆ ‘ಎಂಜಲು’ ತಿಂದ ಅನೇಕರು ತಲೆ ತಗ್ಗಿಸಿದರು, ಅಪಮಾನದಿಂದಲ್ಲ, ಸಿಕ್ಕಿಕೊಂಡಿದ್ದಕ್ಕೆ.

# 25

"ಈ ವೀಡಿಯೋ ನೋಡಿ" ಎಂದು ಪಕ್ಕದಲ್ಲಿಯೇ ಇದ್ದ ಯಂತ್ರವನ್ನು ಆನ್ ಮಾಡಿದ. ಕತ್ತಲು ಕತ್ತಲು. ಮಸುಕು ಮಸುಕು ಚಿತ್ರಣ. ಯಾರೋ ಕದ್ದು ಕ್ಯಾಮೆರಾ ಇಟ್ಟಿದ್ದರು. ಒಂದು ಸ್ಪಾಟ್ ಲೈಟ್, ಜನ ಅದರಡಿಯಲ್ಲಿದ್ದ ಸೋಫಾದ ಮೇಲೆ ಕೂರಬೇಕು. ಅದು ಯಾವ ಸ್ಥಳವೆಂದು ತಿಳಿಯಲಿಲ್ಲ. ಆದರೆ ಹಠಾತ್ತನೆ ಅಲ್ಲಿ ಇಬ್ಬರು ಬಂದು ಕುಳಿತರು. ಹೆಗಲ ಮೇಲೆ ಕೈ ಹಾಕಿ ಕುಳಿತ ಅವರಿಬ್ಬರ ಮೈತ್ರಿ ಬಹಳವೇ ಗಾಢವೆಂದು ತಿಳಿಯುತ್ತಿತ್ತು.

"ಸಾಕಲ್ಲ ಇಷ್ಟು ಸಾಕ್ಷ್ಯ?" ಎಂದರು ಸಿ.ಎಂ. ಆ ಕತ್ತಲಲ್ಲಿ. ಆ ಚಿತ್ರದಲ್ಲಿದ್ದ ಒಬ್ಬ ದೇಶದ್ರೋಹಿ ಎಂದೇ ಹೆಸರಾದ ನರಹಂತಕ, ಭೂಗತ ಪ್ರಪಂಚದ ಅನಭಿಷಿಕ್ತ ದೊರೆ!

ಮತ್ತೊಬ್ಬ ಆ ಗುಂಪಿನಲ್ಲಿದ್ದ. ಅವನ ಮನಸ್ಸಿನಲ್ಲಿ ಬಿರುಗಾಳಿ ಎದ್ದಿತ್ತು. ಪಾಲ್‌ಗೆ ಇಷ್ಟು ಧೈರ್ಯವಿತ್ತಾ? ಎಲ್ಲಿ ಬಚ್ಚಿಟ್ಟಿದ್ದ? ನಮ್ಮವರೇನು ಮಾಡುತ್ತಿದ್ದರು? ಮಣ್ಣು ತಿನ್ನುತ್ತಿದ್ದರಾ? ಅವನೂ ಬಹಳವೇ ಗಟ್ಟಿಕುಳ. ಅಷ್ಟು ಹಿಂಸೆ ಅನುಭವಿಸಿದರೂ ಬಾಯಿ ಬಿಡದೇ ಸತ್ತಿದ್ದೂ ಅಲ್ಲದೇ ಆ ಇನ್‌ಕ್ರಿಮಿನೇಟಿಂಗ್ ಸಾಕ್ಷ್ಯವು ಅವನ ಗೆಳೆಯರನ್ನು ತಲುಪುವಂತೆ ಮಾಡಿದ್ದಾನೆ!

"ಇದು ಅಮರೇಶನ ಸಂಗ್ರಹ!" ಮಿತ್ರಜೀತ್‌ನ ಮಾತಿನಿಂದ ಎಚ್ಚೆತ್ತು ಆ ಕಡೆ ನೋಡಿದ. ಮತ್ತೆ ಲ್ಯಾಪ್‌ಟಾಪ್‌ನಲ್ಲಿ ಮುಂದಿನ ದೃಶ್ಯ ಮೂಡಿತ್ತು. "ಹಳ್ಳಿಗಳ ಉದ್ಧಾರಕ್ಕೆ ಬಿಡುಗಡೆಯಾದ ಹಣ. ಇದರಲ್ಲಿ ವಿವರ ಇದೆ ನೋಡಿ. ಇದು ಒಟ್ಟು ಬಿಡುಗಡೆ ಆಗಿರುವ ಮೊತ್ತ. ಈ ಲಿಸ್ಟ್‌ನಲ್ಲಿ ಯಾವ ಯಾವ ಸರ್ಕಾರಿ ಅಧಿಕಾರಿ ಎಷ್ಟೆಷ್ಟು ತಿಂದಿದ್ದಾರೆ ನೋಡಿ!"

ಆ ಪಟ್ಟಿ ನೋಡಿ ಸುಮಾರು ಜನ ನಿಶ್ಚೇಷ್ಟಿತರಾದರು. ಸರ್ಕಾರದ ಬೊಕ್ಕಸದಿಂದ - ಸರ್ಕಾರಿ ಅಧಿಕಾರಿಗಳ ಮೂಲಕ - ಹಳ್ಳಿಗಳಿಗೆ ಹಾದು ಹೋದ ಹಣ - ನಿಜವಾಗಿಯೂ ಶೋಚನೀಯ ಮೊತ್ತ!

“ಇವರಿಗೆ ಸಂಬಳ ಸರ್ಕಾರ ಕೊಡುತ್ತೆ. ಜೊತೆಗೆ ದೊಡ್ಡ ಶ್ರೀಮಂತರಿಂದ ಕೂಡಾ ‘ಗಿಂಬಳ’ ಪಡೀತಾರೆ. ಆದರೂ ಇಂತಹ ‘ಸುಲಭ ಹಣ’ಕ್ಕೆಬಾಯಿ ಬಿಡ್ತಾರೆ!” ಚಾಟಿ ಏಟಿನಂತೆ ಬಂದಿತ್ತು ಮಿತ್ರಜೀತ್‌ನ ಮಾತು.

“ಈಗ ನೋಡಿ ಫಜಲ್‌ನ ಕೇಸು. ಕಾಡಿನ ನಡುವೆ ಶ್ರೀಗಂಧದ ಮರ, ತೇಗದ ಮರದ ಚೋರ. ಅವನ ಎರಡು ಫೋಟೋ ನೋಡಿ. ಒಂದು- ಕಾಡಿನಲ್ಲಿ ಮಿಲಿಟರಿ ದಿರಿಸಿನಲ್ಲಿದ್ದಾನೆ. ಇದೂ ಇವನದೇ. ಯಾವುದಾದರೂ ಪಾರ್ಟಿಗೆ ಸೂಟು, ಬೂಟು ಧರಿಸಿಕೊಂಡು ಹೋಗಿ ಬಿಜಿನೆಸ್ ಟೈಕೂನ್ ಎಂದು ಪರಿಚಯಿಸಿಕೊಂಡರೆ ಯಾರು ಬೇಕಾದರೂ ನಂಬ್ತಾರೆ. ಇವನ ಗೆಳೆಯನ ಫೋಟೋ ನೋಡಿ” ಎಂದು ಮತ್ತೊಂದು ಚಿತ್ರ ತೋರಿಸಿದ. ಭೂಗತ ಜಗನ ರಾಜನ ಖಾಸಾ ಸ್ನೇಹಿತನೇ!

ಅಲ್ಲಿದ್ದ ಮುಕ್ಕಾಲು ಪಾಲು ಜನರ ಮೈಯಲ್ಲಿ ಬೆವರಿಳಿಯಿತು.

ಸಿ.ಎಂ. ಏನಾದರೂ ಕಠಿಣ ಚರ್ಯೆ ತೆಗೆದುಕೊಂಡರೆ ತಮ್ಮೆಲ್ಲರ ಗತಿ ಅಧೋಗತಿ ಎಂದುಕೊಂಡರು.

“ನಮ್ಮ ರಾಜ್ಯದ ಸಂಪತ್ತು ಹೀಗೆ ಕದ್ದ ಮಾಲಾಗುತ್ತಿದ್ದರೆ ಒಂದು ದಿನ ನಮ್ಮ ಕಾಡು ಬೋಳಾಗುತ್ತದೆ. ಜೊತೆಯಲ್ಲಿಯೇ ಪ್ರಾಣಿ, ಪಕ್ಷಿಗಳೂ ನಷ್ಟವಾಗುತ್ತವೆ. ಮಳೆ ಬರದಿರೋಕ್ಕೆ ಇದೂ ಒಂದು ನೆಪವಾಗುತ್ತೆ”

ಮಿತ್ರಜೀತ್ ಅಲ್ಲಿನ ದೀಪಗಳನ್ನು ಆನ್ ಮಾಡಿದ. ಸಿ.ಎಂ. ಮ್ಲಾನವದನರಾಗಿ ನಾಗಸಿಂಹನ ಮುಖ ನೋಡಿದರು.

“ಹೇಳಿ ನಾಗಸಿಂಹ, ವಿಚಿತ್ರವೆಂದರೆ ಮೂರೂ ಕೇಸ್‌ಗಳಲ್ಲಿ ನಿಮ್ಮ ಕೈವಾಡ ಇದೆ. ಗೃಹಮಂತ್ರಿ ಎಂದರೆ ಇವುಗಳನ್ನು ತಡೆಯುವವನಾಗಿರಬೇಕು. ಇಲ್ಲಿ ಅದು ತಲೆಕೆಳಗಾಗಿದೆ. ಹೇಳಿ! ಏನುತ್ತರ ನೀಡುತ್ತೀರಿ?”

ನಾಗಸಿಂಹನತ್ತ ಎಲ್ಲರೂ ನೋಡಿದರು.

ಮುಂದಿನ ಸಾಲಿನಲ್ಲಿ ಕುಳಿತಿದ್ದ ನಾಗಸಿಂಹ ಯಾರೂ ಊಹಿಸದ ರೀತಿಯಲ್ಲಿ ಸಿ.ಎಂ. ಹತ್ತಿರಕ್ಕೆ ಹಾರಿದ್ದ.

ಮುಂದಿನ ಕ್ಷಣ ಅವನ ಪಿಸ್ತೂಲು ಸಿ.ಎಂ. ಹಣೆಯ ಪಕ್ಕಕ್ಕೆ ಚುಚ್ಚಲ್ಪಟ್ಟಿತ್ತು.

ಈ ಹಠಾತ್ ಘಟನೆಯಿಂದ ಅಲ್ಲಿದ್ದ ಎಲ್ಲರೂ ತಬ್ಬಿಬ್ಬಾದರು. ನಾಗಸಿಂಹ ಗಹಗಹಿಸಿದ. "ಹಹ್ಹಾ! ಖಡ್ಗ ಮೇಲೋ? ಪೆನ್ನು ಮೇಲೋ ಎನ್ನಲಾ? ಅಥವಾ ಕಂಪ್ಯೂಟರ್ ಹೆಚ್ಚೋ? ಪಿಸ್ತೂಲು ಹೆಚ್ಚೋ ಎನ್ನಲೋ? ಯಾವ ಯಾವ ಪತ್ರಕರ್ತ ಏನೇನು ಸಾಕ್ಷ್ಯಾಧಾರ ಸಂಗ್ರಹ ಮಾಡಿದ್ದರೇನು? ಈ ಪಿಸ್ತೂಲಿನ ಒಂದು ಗುಂಡು ಸಿ.ಎಂ. ತಲೇನ ಛಿದ್ರ ಮಾಡುತ್ತೆ. ಇಲ್ಲೇ ಇದ್ದಾನಲ್ಲಾ ಪತ್ರಕರ್ತ... ಯಾರವನು ... ಮಿತ್ರಜೀತ್! ಅವನೊಬ್ಬ ನನ್ನ ಜಾಲದಿಂದ ತಪ್ಪಿಸಿಕೊಂಡಿದ್ದ. ಈಗ ಅವನ ಕಥೆಯೂ ಸಫಾ...!" ಕೆಟ್ಟದಾಗಿ ನಗುತ್ತಲೇ ಇದ್ದ.

ಮುಂದೆ ಯಾರೋ ಚಲಿಸಿದರು. ಸರಕ್ಕನೆ ಪಿಸ್ತೂಲನ್ನು ಅತ್ತ ತಿರುಗಿಸಿದ. ಮೇಲೆದ್ದವಳು ಸಿ.ಎಂ. ಮಗಳು ದೇವನಾಯಕಿ, ತನ್ನ ಪ್ರೇಮಿ.

"ಬಾ ಬಾ ದೇವೀ! ಈಗ ನೋಡು. ಈ ರಾಜ್ಯಕ್ಕೆ ನಾನೇ ರಾಜ, ನಾನೇ ರಾಣಿ" ಗಹಗಹಿಸಿ ಹುಚ್ಚನಂತೆ ನಕ್ಕ.

ದೇವನಾಯಕಿ ನಗುತ್ತಾ ಹತ್ತಿರ ಬಂದಳು. ತನ್ನ ತಂದೆಯನ್ನೊಮ್ಮೆ ಪ್ರದಕ್ಷಿಣೆ ಮಾಡಿದಳು. ಕಿಲಕಿಲನೆ ನಕ್ಕಳು.

"ಹಾಕು ಪ್ರದಕ್ಷಿಣೆ! ಸತ್ತ ಮೇಲೆ ಹೇಗೂ ಹಾಕಬೇಕು. ಈಗ್ಲೇ ಹಾಕು" ಎಂದ ಕರ್ಕಶವಾಗಿ. ಎರಡನೇ ಸುತ್ತು ಬರುತ್ತಿದ್ದವಳು ಇದ್ದಕ್ಕಿದ್ದಂತೆ ತನ್ನ ರವಿಕೆಯೊಳಗಿನಿಂದ ಚಿಕ್ಕ ಪಿಸ್ತೂಲನ್ನು ತೆಗೆದಳು.

ಅಲ್ಲಿದ್ದವರೆಲ್ಲಾ ಚಿತ್ರಪ್ರತಿಮೆಗಳಾಗಿ ಈ ಕ್ಷುದ್ರ ನಾಟಕ ನೋಡುತ್ತಿದ್ದರು. ಚಲಿಸಲು ಎಲ್ಲರಿಗೂ ಭಯ!

ಸಿ.ಎಂ. ಪ್ರಾಣದೊಂದಿಗೆ ತಮ್ಮ ಪ್ರಾಣಕ್ಕೂ ಸಂಚಕಾರ ಬಂದರೆ..!

ಆ ಪಿಸ್ತೂಲಿನೊಂದಿಗೆ ಮೂರನೆಯ ಸುತ್ತು ಬಂದವಳು ತಂದೆಯ ಹಣೆಗೆ ಇನ್ನೊಂದೆಡೆ ಪಿಸ್ತೂಲ್ ಒತ್ತಿದಳು.

ನಾಗಸಿಂಹನಿಗಂತೂ ಅತ್ಯಾನಂದ!

ದೇವನಾಯಕಿ ಎಂದಿದ್ದರೂ ತನ್ನವಳು! ತಂದೆಗೆ ತಿಳಿಯದಂತೆ ಕದ್ದು ತನ್ನೊಂದಿಗೆ ಕೂಡುತ್ತಿದ್ದವಳು! ಅವಳೊಂದಿಗೆ ತಾನೂ...

ಅವನ ಆಲೋಚನೆ ಪೂರ್ತಿಯಾಗಲೇ ಇಲ್ಲ...

ಗುಂಡೊಂದು ಅವನ ಹಣೆಯ ಮಧ್ಯಕ್ಕೆ ಬಡಿದು ಅವನ ತಲೆಯನ್ನು ಛಿದ್ರಗೊಳಿಸಿತ್ತು. ನಾಗಸಿಂಹನ ಹೆಣ ಧರೆಗುರುಳುತ್ತಿದ್ದಂತೆ ಕೈಲಿದ್ದ ಪಿಸ್ತೂಲನ್ನು ನೆಲದ ಮೇಲೆ ಬಿಸಾಡಿ, ತಂದೆಯನ್ನಪ್ಪಿಕೊಂಡಳು ದೇವನಾಯಕಿ.

ಗಳಗಳನೆ ಅಳತೊಡಗಿದಳು.

“ಅಪ್ಪಾ ಅಪ್ಪಾ!” ಎಂದು ಕೂಗತೊಡಗಿದಳು. ಸಿ.ಎಂ. ಪರಶಿವಮೂರ್ತಿ ಶಾಂತಚಿತ್ತರಾಗಿಯೇ ಇದ್ದರು. ಮಗಳನ್ನು ತಬ್ಬಿ ಹಿಡಿದು “ಇದೇನು ಮಾಡಿಬಿಟ್ಟೆ ಮಗೂ?” ಎಂದರು. ಅವರ ಮಾತಿನಲ್ಲಿ ಭತ್ರ್ಸನೆ ಇರಲಿಲ್ಲ. ನೋವಿತ್ತು.

“ಇನ್ನೇನು ಮಾಡಲಪ್ಪಾ? ಚಿಕ್ಕ ವಯಸ್ಸಿನಿಂದ ತಂದೆ, ತಾಯಿ ಎರಡೂ ಆಗಿ ನನ್ನನ್ನು ಬೆಳೆಸಿದ್ದೀರಿ. ಆ ಮನುಷ್ಯ ಹಾಗೆ ನಿಮ್ಮನ್ನು ಗನ್ ಪಾಯಿಂಟ್‌ನಲ್ಲಿ ಹಿಡಿದಿಟ್ಟಿದ್ದು ತುಂಬಾ ಕಷ್ಟವಾಯಿತಪ್ಪಾ” ಎಂದವಳು ನಂತರ ಹಲ್ಲು ಕಡಿದು, “ಅವನು ನನ್ನ ಪ್ರೇಮಿಯೇ ಇರಬಹುದು. ಆದರೆ ದೇಶದ್ರೋಹಿಗಲ ಸಖ್ಯ ಬೆಳೆಸಿ, ಕಳ್ಳರ ಜೊತೆ ಓಡಾಡಿದ್ದೂ ಅಲ್ಲದೇ ನನ್ನ ತಂದೆ ಬಹಳ ಪ್ರೀತಿಯಿಂದ ಕಟ್ಟಿರೋ ಸರ್ಕಾರಕ್ಕೆ ಹೀಗೆ ಮಸಿ ಬಳೀತಿದ್ದುದನ್ನು ನೋಡಿ ಕೂಡಾ ಹೇಗೆ ಸುಮ್ಮನಿರಲಪ್ಪಾ?” ಎಂದು ಅಳುತ್ತಾ ಕುಸಿದು ಕುಳಿತಳು.

ಸಿ.ಎಂ. ನಿಟ್ಟುಸಿರಿಟ್ಟು, ಸಭಿಕರನ್ನುದ್ದೇಶಿಸಿ, “ನೋಡಿದಿರಾ? ಪಾಲ್ ಬರೆದ ಹಾಗೆ ಸತ್ಯವಿನ್ನೂ ಸತ್ತಿಲ್ಲ! ಪತ್ರಿಕೆಗಳ ಕೆಲಸವಾದರೂ ಏನು? ಸುದ್ದಿ ಕೊಡೋದರೊಂದಿಗೆ ಯಾರಾದ್ರೂ ಜವಾಬ್ದಾರಿ ಹೊತ್ತಾಗ, ಅವರು ನ್ಯಾಯ, ನೀತಿ, ಧರ್ಮದ ಹಾದಿ ಬಿಟ್ಟು ಹೋದಾಗ ಅವರನ್ನು ಎಚ್ಚರಿಸೋದು. ನನ್ನ ಕಳಕಳಿಯ ವಿನಂತಿ ಇಷ್ಟೇ.

ಪತ್ರಿಕೆಯಾಗಲೀ, ಬೇರೊಂದು ಮಾಧ್ಯಮವಾಗಲೀ ಯಾವುದೇ ಸರ್ಕಾರದ ಮೌತ್ ಪೀಸ್ ಆಗದೇ ಸತ್ಯವನ್ನು ಯಾವುದೇ ಮುಚ್ಚುಮರೆ ಇಲ್ಲದೇ ಹೇಳುತ್ತಾ ಹೋದಲ್ಲಿ ಕಸ ಸೇರುವುದಿಲ್ಲ. ಸರ್ಕಾರ ಸ್ವಚ್ಛವಾಗಿರತ್ತೆ” ಎಂದು ಹೇಳಿ ಅಲ್ಲಿಂದ ಮೆಲ್ಲನೆ ಹೊರಟುಹೋದರು.

ನಿಯತ್ತನ್ನು ಉಳಿಸಿಕೊಂಡಿದ್ದ ಪೊಲೀಸರು ದೇವನಾಯಕಿಯನ್ನು ಅಲ್ಲಿಂದ ಕರೆದೊಯ್ದರು.

"ಅಂತೂ ಮೂರು ಬಲಿ ಆದ ಮೇಲೆಯೇ ಸರ್ಕಾರದ ಗೆದ್ದಲು ಹುಳುಗಳು ಸಿಕ್ಕಿಕೊಂಡವು" ಎಂದಳು ಸುನೀತಿ.

ಮಿತ್ರಜೀತ್, ಲೊರೆಟ್ಟಾ, ಸುನೀತಿ, ಸಿಲ್ವೆಸ್ಟರ್, ಸ್ವರೂಪ್ ಐವರೂ ಸ್ವರೂಪನ ಫಾರಂಹೌಸ್‌ನಲ್ಲಿ ಚಹಾ ಕುಡಿಯುತ್ತಾ ಕುಳಿತಿದ್ದರು.

"ನಿಜ ಸುನೀತಿ, ಕಳೆಗಳು ಹೆಚ್ಚಾದಾಗ ಆ ಸ್ಥಳಕ್ಕೆ ಬೆಂಕಿ ಹಚ್ಚುವ ಪದ್ಧತಿ ಇದೆ. ಆ ಬೆಂಕಿಯಲ್ಲಿ ಕೆಲವು ಉಪಯೋಗೀ ಸಸ್ಯಗಳೂ ಬೆಂದುಹೋಗುತ್ತವೆ" ಎಂದ ಮಿತ್ರಜೀತ್.

"ಅಂತೂ ಪತ್ರಕರ್ತರು ಪರಿಶೋಧಕ್ಕೆ ಹೊರಟರೆ ಅಪಾಯ ತಪ್ಪಿದ್ದಲ್ಲ. ಏನಂತೀ ಸುನೀತಿ?" ಎಂದಳು ಲೊರೆಟ್ಟಾ.

ಅವಳಿಗೆ ಪಾಲ್ ಸತ್ತಿದ್ದು ದುಃಖ ತಂದಿದ್ದರೂ ಸಿಲ್ವೆಸ್ಟರ್ ಸಂಪೂರ್ಣವಾಗಿ ತನ್ನವನಾದ್ದರಿಂದ ಜೀವನದಲ್ಲಿ ತೃಪ್ತಿ ಸಿಕ್ಕಿತ್ತು. "ಅಪಾಯ ಯಾವ ಕೆಲಸದಲ್ಲಿಲ್ಲ ಲೊರೆಟ್ಟಾ? ನಾನಂತೂ ನನ್ನ ಮಗುವಿಗೆ ಪತ್ರಿಕೆಯಲ್ಲಿ ಕೆಲಸ ಮಾಡೋಕ್ಕೆ ಪ್ರೇರೇಪಣೆ ಕೊಡ್ತೀನಿ. ನನ್ನ ಅಮರ್ ಆತ್ಮಕ್ಕೆ ಆ ಕೆಲಸ ತೃಪ್ತಿ ತರುತ್ತೆ ಅನ್ನೋ ನಂಬಿಕೆ ನನಗಿದೆ" ಎಂದಳು ಸುನೀತಿ ಹೆಮ್ಮೆಯಿಂದ.

ಮಿತ್ರಜೀತ್ ಆ ಭಾವೀ ತಾಯಿಯ ಭವ್ಯ ಆಸೆ ಕಂಡು, ಆಕೆಗೆ ಮನದಲ್ಲೇ ವಂದಿಸಿ, ಆಕೆಯ ಅಭಿಲಾಷೆ ಸಫಲವಾಗಲೆಂದು ಮನಸಾರೆ ಹಾರೈಸಿದ.

(ಮುಕ್ತಾಯ)

## ಹಸ್ತಕ್ಷೇಪದ ನೇಪಥ್ಯ:

ಹೊಸ ವಿಷಯಕ್ಕಾಗಿ ನಾನು ಹೆಚ್ಚಾಗಿ ಹುಡುಕುವುದು ವೃತ್ತಪತ್ರಿಕೆಗಳನ್ನು ಮತ್ತು ಮ್ಯಾಗಝೀನ್‌ಗಳನ್ನು.

ನನ್ನ ಪರಿಶೋಧ, ಜೀವನ್ಮುಖಿ, ಪಂಚಾನನ ಕಾದಂಬರಿಗಳ ಮೂಲ ಕೂಡ ಪತ್ರಿಕೆಗಳಲ್ಲಿ ಬಂದ ಪುಟ್ಟ ಸುದ್ದಿಗಳು.

ಏಷಿಯಾವೀಕ್ ಎನ್ನುವ ವಾರಪತ್ರಿಕೆಯಲ್ಲಿ ದಕ್ಷಿಣ-ಪೂರ್ವ ದೇಶವೊಂದರಲ್ಲಿ ನಡೆದ ಆಘಾತಕಾರೀ ಘಟನೆಗಳ ಬಗೆಗೆ ಒಂದು ಪುಟದ ವರದಿ ಪ್ರಕಟಿಸಿತ್ತು. ಆ ದೇಶದಲ್ಲಿ ಮೂವರು ಪತ್ರಕರ್ತರು ಸತ್ತಾಗ ಅದು ಆಕಸ್ಮಿಕ ಎಂದು ಕೇಸುಗಳನ್ನು ಮುಚ್ಚಿಬಿಟ್ಟರು ಪೊಲೀಸರು.

ವಿಚಿತ್ರವೆಂದರೆ ಆ ಮೂವರು ಪತ್ರಕರ್ತರೂ ಸರ್ಕಾರದ ಯಂತ್ರದ ಕೆಟ್ಟ ಭಾಗಗಳನ್ನು ಬಯಲಿಗೆಳೆಯುವ ಕೆಲಸ ಮಾಡುತ್ತಿದ್ದರು.

ಈ ಐಟಂ ಅನ್ನು ಆಧಾರವಾಗಿಟ್ಟುಕೊಂಡು ಬರೆದ ಕಾದಂಬರಿ ಹಸ್ತಕ್ಷೇಪ.

ಕನ್ನಡಪ್ರಭದಲ್ಲಿ ದೈನಿಕ ಧಾರಾವಾಹಿ ಆಗಿತ್ತು. ಒಳ್ಳೆಯ ವಿಮರ್ಶೆಗಳನ್ನು ಪಡೆದಿತ್ತು.

ಪುಸ್ತಕಕ್ಕೆ ಮುಖಚಿತ್ರ ಬರೆಸುವಾಗ ಪ್ರಸಿದ್ಧ ಕಲಾವಿದ ಶ್ರೀ ಮೋನಪ್ಪ ಅವರಿಗೆ ನಾನು ಕಥೆಯ ಕೆಲವು ಘಟನೆಗಳ ಬಗೆಗೆ ಹೇಳಿ, ಹೀಗಿದ್ದರೆ ಚೆನ್ನ ಎಂದು ಒಂದು ಅಮೂರ್ತ ಚಿತ್ರ ನೀಡಿದ್ದೆ. ಅದನ್ನು ಹಾಗೆಯೇ ಮೂರ್ತಿವೆತ್ತಂತೆ ಚಿತ್ರಿಸಿದ್ದಾರೆ ಮೋನಪ್ಪ.

ಎಲ್ಲರಿಗೂ ಕೃತಜ್ಞತೆಗಳು.

# ಹಸ್ತಕ್ಷೇಪ

ಯತಿರಾಜ್ ವೀರಾಂಬುಧಿ

ಸರ್ಕಾರಕ್ಕೂ ಸಾಮಾನ್ಯ ಜನರಿಗೂ
ಸೇತುವೆಯಾಗುವವರು
ಪತ್ರಕರ್ತರು.
ಅವರು ಹೇಳುವ
ಕಹಿಸತ್ಯವನ್ನು
ನುಂಗಲಾರದ
ಭ್ರಷ್ಟ ಅಧಿಕಾರಿಗಳು
ಆ ಪತ್ರಕರ್ತರನ್ನೇ ಗಂಡಾಂತರಕ್ಕೆ
ಒಳಪಡಿಸಿದರೆ
ಜನಸಾಮಾನ್ಯರ ಗತಿಯೇನು?
ನಾಲ್ವರು ನಿರ್ಭೀತ ಪತ್ರಕರ್ತರು
ಅನ್ಯಾಯದ ವಿರುದ್ಧ ಹೋರಾಡಿದ
ಚಿತ್ರಣ

**ಯತಿರಾಜ್ ವೀರಾಂಬುಧಿ**

ಬರೆದ ಕಾದಂಬರಿ

# ಹಸ್ತಕ್ಷೇಪ



ಪ್ರಕಾಶಕರು :
ರಾಜೀವ್
ನಂ.4, ಸೆಕ್ರೆಟರಿಯೇಟ್ ಕಾಲೋನಿ,
ವಿಜಯನಗರ, ಬೆಂಗಳೂರು - 560040